ಶುಕ್ರವಾರ, ಫೆಬ್ರುವರಿ 24, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 55 | ಪುಟ 18
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಹಳ್ಳಿಗಾಡಿನ 'ಗೌಳಿ'ಯಾಗಿ ತೆರೆಯ ಮೇಲೆ ಮೆರೆಯಲಿದ್ದಾರೆ ಕಿಟ್ಟಿ

ಆಳ-ಅಗಲ
ಎಲ್ಲೆ ಮೀರಿದ ಮಾತು...

ವಿಶ್ವ ಬ್ಯಾಂಕ್ ಅಧ್ಯಕ್ಷ: ಅಜಯ್ ಬಾಂಗಾ ನಾಮನಿರ್ದೇಶನ 12
ಕೆಆರ್‌ಐಡಿಎಲ್ ಬಳಿ ₹ 17 ಸಾವಿರ ಕೋಟಿ! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,605	17,511	₹57,950 (ಬೆಂಗಳೂರು)	₹67,300 (ಬೆಂಗಳೂರು)	82.73

ಸಂಡೂರಿನಲ್ಲಿ ನಡೆದ ವಿಜಯ ಸಂಕಲ್ಪ ಯಾತ್ರೆಯಲ್ಲಿ ಅಮಿತ್ ಶಾ ಭರವಸೆ

'ಭ್ರಷ್ಟಾಚಾರ ಮುಕ್ತ ಆಡಳಿತ'

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ): 'ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮೇಲೆ ಒಂದು ಸಲ ವಿಶ್ವಾಸವಿಟ್ಟು ಬಿಜೆಪಿಗೆ ಬಹುಮತ ಕೊಡಿ, ಕರ್ನಾಟಕದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ಕೊಡುತ್ತೇವೆ' ಎಂದು ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದರು.

ಇಲ್ಲಿನ ಎಸ್ ಆರ್ ಎಸ್ ಮೈದಾನದಲ್ಲಿ ಗುರುವಾರ ನಡೆದ 'ಬಿಜೆಪಿ ವಿಜಯ ಸಂಕಲ್ಪ ಯಾತ್ರೆ' ಯಲ್ಲಿ ಮಾತನಾಡಿದ ಅಮಿತ್ ಶಾ, 'ರಾಜ್ಯದಲ್ಲಿ ಬಿಜೆಪಿ ಸರ್ಕಾರ ತರುವ ಸಂಕಲ್ಪ ಮಾಡಿ, ನಾವು ಬಹುಮತದೊಂದಿಗೆ ಅಧಿಕಾರಕ್ಕೆ ಬಂದರೆ ಕರ್ನಾಟಕವನ್ನು ದಕ್ಷಿಣದ ನಂಬರ್ ಒನ್ ರಾಜ್ಯ ಮಾಡುತ್ತೇವೆ' ಎಂದು ಆಶ್ವಾಸನೆ ನೀಡಿದರು.

'2018ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ರಚಿಸಲು ಕೆಲವು ಸ್ಥಾನಗಳು ಕಡಿಮೆ ಬಿದ್ದವು. ರಾಜಕೀಯ ಚದುರಂಗದಾಟದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಹೊಂದಾಣಿಕೆ ಏರ್ಪಟ್ಟು, ವ್ಯಾಪಕ ಭ್ರಷ್ಟಾಚಾರ ನಡೆಯಿತು' ಎಂದು ಶಾ ಆರೋಪಿಸಿದರು.

ವಿಜಯ ಸಂಕಲ್ಪ ಯಾತ್ರೆಯಲ್ಲಿ ಗೃಹ ಸಚಿವ ಅಮಿತ್ ಶಾ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದ ವೈ.ದೇವೇಂದ್ರಪ್ಪ, ಶಾಸಕ ಬಿ.ಎಸ್. ಯಡಿಯೂರಪ್ಪ, ಸಚಿವ ಬಿ. ಶ್ರೀರಾಮುಲು ಇದ್ದಾರೆ

'ಜೆಡಿಎಸ್ ಗೆ ನೀವು ಕೊಡುವ ಒಂದೊಂದು ಮತವೂ ಕಾಂಗ್ರೆಸ್‌ಗೆ ಹೋಗಲಿದೆ. ಕಾಂಗ್ರೆಸ್‌ಗೆ ಕೊಡುವ ಪ್ರತಿ ಮತ ಸಿದ್ದರಾಮಯ್ಯನವರ ಎಟಿಎಂ ಸರ್ಕಾರಕ್ಕೆ ಹೋಗಲಿದೆ. ದೆಹಲಿಗೆ (ಸೋನಿಯಾ, ರಾಹುಲ್‌ಗೆ) ಇದು ಎಟಿಎಂ' ಎಂದು ಗೃಹ ಸಚಿವರು ದೂರಿದರು.

ಮೋದಿ ದೇಶದ ರಕ್ಷಕ: 'ನರೇಂದ್ರ ಮೋದಿ ದೇಶದ ರಕ್ಷಣೆ ಮಾಡುತ್ತಿದ್ದಾರೆ. ಕೇಂದ್ರದಲ್ಲಿ ಹತ್ತು ವರ್ಷ ಅಧಿಕಾರ

> **ಕಳೆದ 70 ವರ್ಷದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಆಗಲಿಲ್ಲ. ನಮ್ಮ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿ ಕಾಣುತ್ತಿದೆ**
> **ಬಿ.ಎಸ್.ಯಡಿಯೂರಪ್ಪ,** ಶಾಸಕ

ನಡೆಸಿದ ಯುಪಿಎ ಅವಧಿಯಲ್ಲಿ ಗಡಿಯಲ್ಲಿ ನಮ್ಮ ಮೇಲೆ ಅನೇಕ ದಾಳಿ ನಡೆದರೂ ಪಾಕಿಸ್ತಾನಕ್ಕೆ ಬುದ್ಧಿಕಲಿಸಲು ಆಗಲಿಲ್ಲ. ನಮ್ಮ ಸರ್ಕಾರ ಬಂದ ಬಳಿಕ ಉರಿ ಮತ್ತು ಪುಲ್ವಾಮದ ಮೇಲೆ ದಾಳಿ ನಡೆದ ಹತ್ತೇ ದಿನದಲ್ಲಿ ಸರ್ಜಿಕಲ್ ಸ್ಟ್ರೈಕ್ ಮಾಡಿ ನೆರೆಯ ಶತ್ರು ರಾಷ್ಟ್ರಕ್ಕೆ ತಕ್ಕ ಪಾಠ ಕಲಿಸಲಾಯಿತು' ಎಂದು ಅಮಿತ್ ಶಾ ಹೇಳಿದರು.

'ಕಾಶ್ಮೀರದಲ್ಲಿ 370ನೇ ವಿಧಿ ರದ್ದುಪಡಿಸುವುದಕ್ಕೆ ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದವು. ಮೋದಿಜೀ 370ನೇ ವಿಧಿ ರದ್ದುಪಡಿಸಿ ಕಾಶ್ಮೀರವನ್ನು ಭಾರತದಲ್ಲಿ ಜೋಡಿಸುವ ಕೆಲಸ ಮಾಡಿದರು. ಆದರೆ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ತುಕಡೆ ತುಕಡೆ ಗ್ಯಾಂಗ್ ಕಟ್ಟಿಕೊಂಡು ದೇಶ ಒಡೆಯುತ್ತಿದ್ದಾರೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಇನ್ನೊಂದು ಸುದ್ದಿ 9

'ಬಿಎಸ್‌ವೈ ಜನ್ಮದಿನದಂದೇ ಕಿಸಾನ್ ಸಮ್ಮಾನ್ ನಿಧಿ ವರ್ಗಾವಣೆ'

ಬೆಳಗಾವಿ: 'ದೇಶದ ರೈತರ ಖಾತೆಗೆ ಈ ಬಾರಿಯ ಕಿಸಾನ್ ಸಮ್ಮಾನ್ ನಿಧಿಯ ಕಂತನ್ನು, ಪ್ರಧಾನಿ ನರೇಂದ್ರ ಮೋದಿ ಅವರು ಫೆ. 27ರಂದು ಬೆಳಗಾವಿಯಿಂದಲೇ ವರ್ಗಾಯಿಸಲಿದ್ದಾರೆ. ಬಿಜೆಪಿಯ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಜನ್ಮದಿನದಂದೇ ರೈತರಿಗೆ ಈ ಹಣ ಮುಟ್ಟಿಸುತ್ತಿರುವುದು ಖುಷಿ ತಂದಿದೆ' ಎಂದು ಕೃಷಿ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಮಾಲಿನಿಸಿಟಿಯಲ್ಲಿ ನಡೆಯಲಿರುವ ಪ್ರಧಾನಿ ಕಾರ್ಯಕ್ರಮದ ಸಿದ್ಧತೆಗಳನ್ನು ಗುರುವಾರ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಇಲ್ಲಿನ ನವೀಕರಿಸಿದ ಹೈಟೆಕ್ ರೈಲು ನಿಲ್ದಾಣ ಲೋಕಾರ್ಪಣೆ ಮಾಡುವ ಪ್ರಧಾನಿ, ನಂತರ ರೈತರ ಖಾತೆಗೆ ಕಂತು ವರ್ಗಾಯಿಸುವರು. ಕಳೆದ ಬಾರಿ ದೆಹಲಿ ಗ್ರಾಮೀಣ ಕ್ಷೇತ್ರದಿಂದ ರೈತರ ಖಾತೆಗೆ ₹22 ಸಾವಿರ ಕೋಟಿ ನಿಧಿ ವರ್ಗಾಯಿಸಿದ್ದರು. ಈವರೆಗೆ 14 ಕೋಟಿ ರೈತರ ಖಾತೆಗೆ ₹2.70 ಲಕ್ಷ ಕೋಟಿ ವರ್ಗಾಯಿಸಲಾಗಿದೆ' ಎಂದರು.

ವೈದೇಹಿಗೆ 'ನೃಪತುಂಗ ಸಾಹಿತ್ಯ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸಹಯೋಗದಲ್ಲಿ ನೀಡುವ ಪ್ರತಿಷ್ಠಿತ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಗೆ ಲೇಖಕಿ ವೈದೇಹಿ ಅವರನ್ನು ಆಯ್ಕೆ ಮಾಡಲಾಗಿದೆ.

₹7 ಲಕ್ಷ ನಗದು ಮತ್ತು ಪ್ರಮಾಣಪತ್ರವನ್ನು ಈ ಪ್ರಶಸ್ತಿ ಒಳಗೊಂಡಿದೆ. ವೈದೇಹಿ ಎಂಬ ಕಾವ್ಯನಾಮದಿಂದ ಖ್ಯಾತರಾಗಿರುವ ಜಾನಕಿ ಶ್ರೀನಿವಾಸಮೂರ್ತಿ, ಕನ್ನಡದ ಪ್ರಮುಖ ಲೇಖಕಿಯರಲ್ಲಿ ಒಬ್ಬರು. ಸಣ್ಣಕತೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ, ಅನುವಾದ ಸಾಹಿತ್ಯ, ಪ್ರಬಂಧ–ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಅವರು ಬರೆದಿದ್ದಾರೆ. ಇವರ ಜೀವಮಾನದ ಸಾಧನೆ ಪರಿಗಣಿಸಿ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

5ನೇ ಪುಟ ನೋಡಿ

ಸಿದ್ದರಾಮಯ್ಯ ವಿರುದ್ಧ ಮುಖ್ಯಮಂತ್ರಿ ರೋಷಾವೇಶ

ಅರ್ಕಾವತಿ ರೀಡೂ: ತಪ್ಪಿತಸ್ಥರನ್ನು ಜೈಲಿಗೆ ಅಟ್ಟುತ್ತೇವೆ – ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರ್ಕಾವತಿ ರೀಡೂ ಸುಮಾರು ₹8,000 ಕೋಟಿ ಹಗರಣವಾಗಿದ್ದು, ಇದರ ತನಿಖೆ ನಡೆಯುತ್ತಿದ್ದು, ತಪ್ಪಿತಸ್ಥರು ಯಾರಿದ್ದಾರೋ ಅವರೆಲ್ಲರನ್ನೂ ಜೈಲಿಗೆ ಅಟ್ಟುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಬ್ಬರಿಸಿದರು.

ವಿಧಾನಸಭೆಯಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲಿ ಅರ್ಕಾವತಿ ಹಗರಣದ ತನಿಖೆಗೆ ರಚಿಸಿದ್ದ ನ್ಯಾಯಮೂರ್ತಿ ಕೆಂಪಣ್ಣ ಆಯೋಗದ ವರದಿಯನ್ನು ಉಲ್ಲೇಖಿಸಿ ರೋಶಾವೇಶದಿಂದ ಮಾತನಾಡಿದ ಬೊಮ್ಮಾಯಿ ಅವರು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ಇವರಿಗೆ ಸಚಿವರಾದ ಜೆ.ಸಿ.ಮಾಧುಸ್ವಾಮಿ, ಆರ್.ಅಶೋಕ, ಸುನಿಲ್‌ಕುಮಾರ್, ಮತ್ತಿತರರು ಸಾಥ್ ನೀಡಿದರು. ಈ ವೇಳೆ ಸದನದಲ್ಲಿ ಸಿದ್ದರಾಮಯ್ಯ ಇರಲಿಲ್ಲ.

'ಸಿದ್ದರಾಮಯ್ಯ ಮೊನ್ನೆ ಮಾತನಾಡುವ ಸಂದರ್ಭದಲ್ಲಿ ತಾವು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅರ್ಕಾವತಿ ಬಡಾವಣೆಯಲ್ಲಿ ಒಂದು ಗುಂಟೆಯಷ್ಟು ಜಮೀನು ಡೀನೋಟಿಫೈ ಮಾಡಿಲ್ಲ ಎಂದು ಜಾಣ್ಮೆಯಿಂದ ಹೇಳಿದರು. ಇವರು ಡಿನೋಟಿಫಿಕೇಷನ್‌ಗೆ 'ರೀಡೂ' ಎಂಬ ಹೊಸ ಹೆಸರು ಇಟ್ಟು ಸುಮಾರು 868 ಎಕರೆ ಭೂಮಿಯನ್ನು ಡೀನೋಟಿಫೈ ಮಾಡಿದರು. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಆದೇಶಗಳನ್ನು ಉಲ್ಲಂಘಿಸಲಾಗಿದೆ ಎಂದು ಕೆಂಪಣ್ಣ ವರದಿ ಸ್ಪಷ್ಟವಾಗಿ ಹೇಳಿದೆ. ಸಿದ್ದರಾಮಯ್ಯ ಅವಧಿಯಲ್ಲೇ ಕೆಂಪಣ್ಣ ವರದಿಯನ್ನು ಸಚಿವ ಸಂಪುಟ ಸಭೆಯ ಮುಂದೆ ಇಡಲಾಯಿತು. ಅದರಲ್ಲಿನ ಕಹಿ ಸತ್ಯವನ್ನು ತಿಳಿದು, ಮುಚ್ಚಿ ಹಾಕುವ ಉದ್ದೇಶದಿಂದ ಆ ಬಳಿಕ ತಮ್ಮಿಂದ ಯಾವುದೇ ತಪ್ಪು ಆಗಿಲ್ಲ, ರೈತರಿಗೆ ಅನ್ಯಾಯವಾಗಿಲ್ಲ ಎಂದು ತೇಪೆ ಹಚ್ಚಿ ಮೂಲೆಗೆ ಸರಿಸಿದರು' ಎಂದು ಹರಿಹಾಯ್ದರು.

9ನೇ ಪುಟ ನೋಡಿ

'ಗೃಹಿಣಿ ಶಕ್ತಿ ₹1,000 ಕ್ಕೆ ಏರಿಕೆ

'ಗೃಹಿಣಿ ಶಕ್ತಿ' ಯೋಜನೆಯಡಿ ಮಹಿಳೆಯರಿಗೆ ₹500 ನೀಡುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಅದನ್ನು ₹1,000 ಕ್ಕೆ ಹೆಚ್ಚಿಸುವುದಾಗಿ ಮುಖ್ಯಮಂತ್ರಿ ಬೊಮ್ಮಾಯಿ ಪ್ರಕಟಿಸಿದರು.

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಘೋಷಿಸಲಾಗಿದ್ದ 1,000 ಬಸ್‌ಗಳ ಷೆಡ್ಯೂಲ್‌ಗಳನ್ನು 2,000 ಕ್ಕೆ ಹೆಚ್ಚಳ ಮಾಡುವುದಾಗಿಯೂ ಘೋಷಿಸಿದರು.

7ನೇ ವೇತನ ಆಯೋಗ ಮಧ್ಯಂತರ ವರದಿ ಜಾರಿ

ರಾಜ್ಯ ಸರ್ಕಾರಿ ನೌಕರರ 7ನೇ ವೇತನ ಆಯೋಗಕ್ಕೆ ಮಾರ್ಚ್‌ನಲ್ಲಿ ಮಧ್ಯಂತರ ವರದಿಯನ್ನು ಸಲ್ಲಿಸಲು ಸೂಚಿಸಿದ್ದು, ಆಯೋಗ ವರದಿ ಸಲ್ಲಿಸಿದ ಬಳಿಕ ಪರಿಶೀಲನೆ ನಡೆಸಿ ಅನುಷ್ಠಾನಗೊಳಿಸಲಾಗುವುದು ಎಂದು ಬೊಮ್ಮಾಯಿ ಭರವಸೆ ನೀಡಿದರು.

ಸಹಕಾರಿ ಬ್ಯಾಂಕ್ ಹಗರಣ: ರಾಜೇಶ್ ಬಂಧಿಸಿದ ಇ.ಡಿ

ಬೆಂಗಳೂರು: ನಗರದ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್‌ನಿಂದ ಸಾಲ ಪಡೆದು ವಂಚಿಸಿದ್ದ ಆರೋಪದ ಮೇಲೆ ರಾಜರಾಜೇಶ್ವರಿನಗರ ನಿವಾಸಿ ರಾಜೇಶ್ ವಿ.ಆರ್ ಎಂಬುವವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ.

ರಾಜೇಶ್

ಬ್ಯಾಂಕ್‌ನಲ್ಲಿ ಠೇವಣಿದಾರರು ಇರಿಸಿದ್ದ ₹ 1,000 ಕೋಟಿಗೂ ಹೆಚ್ಚು ಮೊತ್ತವನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪವಿದೆ. ಬ್ಯಾಂಕ್‌ನಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು, ತನಿಖೆ ನಡೆಸಿದ್ದರು. ಪೊಲೀಸ್ ತನಿಖಾ ವರದಿ ಆಧರಿಸಿ ರಾಜೇಶ್ ಮತ್ತು ಇತರರ ವಿರುದ್ಧ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ತನಿಖೆ ನಡೆಸುತ್ತಿದೆ.

6ನೇ ಪುಟ ನೋಡಿ

ಪ್ರಧಾನಿ ನರೇಂದ್ರ ಮೋದಿಗೆ ಅವಹೇಳನ ಮಾಡಿದ ಆರೋಪ

ಪವನ್ ಖೇರಾ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ತಂದೆಯ ಹೆಸರನ್ನು ತಪ್ಪಾಗಿ ಹೇಳಿ ಅವಹೇಳನ ಮಾಡಿದ್ದಾರೆ ಎಂಬ ಆರೋಪದಲ್ಲಿ ಬಂಧಿತರಾಗಿದ್ದ ಕಾಂಗ್ರೆಸ್ ಮುಖಂಡ ಪವನ್ ಖೇರಾ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಪಿ.ಎಸ್. ನರಸಿಂಹ ಅವರಿದ್ದ ಪೀಠವು ಖೇರಾ ಅವರಿಗೆ ಇದೇ 28ರವರೆಗೆ ಬಂಧನದಿಂದ ರಕ್ಷಣೆ ಕೊಟ್ಟಿದೆ.

ಪವನ್ ಖೇರಾ ಅವರು ನೀಡಿದ್ದ ಹೇಳಿಕೆಯ ವಿಡಿಯೊ ದೃಶ್ಯಗಳನ್ನು ಪೀಠವು ನೋಡಿದೆ. ಬಳಿಕ, 'ಬಂಧನದಿಂದ ರಕ್ಷಣೆ ನೀಡಿದ್ದೇವೆ. ಆದರೆ, ಮಾತಿನಲ್ಲಿ ಒಂದು ಮಟ್ಟದ ಘನತೆ ಇರಬೇಕು' ಎಂದಿತು.

ಖೇರಾ

ದೆಹಲಿಯಿಂದ ರಾಯಪುರಕ್ಕೆ ಹೋಗಬೇಕಿದ್ದ ವಿಮಾನ ವೇರಿದ್ದ ಖೇರಾ ಅವರನ್ನು ಅಸ್ಸಾಂ ಪೊಲೀಸರು ಗುರುವಾರ ಬಂಧಿಸಿದರು. ರಾಯಪುರದಲ್ಲಿ ಶುಕ್ರವಾರ ಆರಂಭವಾಗಲಿರುವ ಕಾಂಗ್ರೆಸ್ ಪಕ್ಷದ ಮಹಾಧಿವೇಶನದಲ್ಲಿ ಭಾಗವಹಿಸಲು ಅವರು ಹೊರಟಿದ್ದರು.

ಖೇರಾ ಅವರು ನೀಡಿದ್ದ ಹೇಳಿಕೆಗೆ ಈಗಾಗಲೇ ಕ್ಷಮೆ ಕೇಳಿದ್ದಾರೆ. ಒಂದೇ ಹೇಳಿಕೆಗೆ ಹಲವೆಡೆ ಎಫ್‌ಐಆರ್ ದಾಖಲಿಸುವುದಕ್ಕೆ ಯಾವುದೇ ಸಮರ್ಥನೆ ಇಲ್ಲ ಎಂದು ಖೇರಾ ಪರವಾಗಿ ವಾದಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಹೇಳಿದರು.

ಇದು ಅಲಕ್ಷ್ಯದ ಮಾತೇ ಹೊರತು ಅಸಮರ್ಪಕ ಅಲ್ಲ. ಅದಲ್ಲದೆ, ಈ ರೀತಿ ಮಾತನಾಡಿದ್ದನ್ನು ಅವರು ಸಮರ್ಥಿಸಿಕೊಳ್ಳುತ್ತಲೂ ಇಲ್ಲ. ಖೇರಾ ಅವರು ಬೇಷರತ್ ಕ್ಷಮೆಯನ್ನೂ ಕೇಳುತ್ತಾರೆ. ಅವರ ಮೇಲೆ ಲಖನೌ, ವಾರಾಣಸಿ ಮತ್ತು ಅಸ್ಸಾಂನಲ್ಲಿ ಮೂರು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಸಿಂಘ್ವಿ ಹೇಳಿದರು.

6ನೇ ಪುಟ ನೋಡಿ

ಚಿತ್ರನಟ ಡಾಲಿ ಧನಂಜಯ ಅವರಿಂದ ಚಾಲನೆ

'ವಧು ಭಾಗ್ಯ' ಕರುಣಿಸುವಂತೆ ಪ್ರಾರ್ಥಿಸಿ ಪಾದಯಾತ್ರೆ!

ಪ್ರಜಾವಾಣಿ ವಾರ್ತೆ

ಭಾರತೀನಗರ (ಮಂಡ್ಯ ಜಿಲ್ಲೆ): ಮದುವೆಯಾಗಲು ವಧುಗಳನ್ನು ಕರುಣಿಸುವಂತೆ ಮಲೆಮಹದೇಶ್ವರನಲ್ಲಿ ಪ್ರಾರ್ಥಿಸಿ, ಜಿಲ್ಲೆಯ ವಿವಿಧೆಡೆಯ ಅವಿವಾಹಿತ ಯುವಕರು, 'ಬ್ರಹ್ಮಚಾರಿಗಳ ನಡೆ ಮಲೆ ಮಾದಪ್ಪನೆಡೆಗೆ' ಘೋಷಣೆಯೊಂದಿಗೆ ಗುರುವಾರ ಇಲ್ಲಿನ ವೆಂಕಟೇಶ್ವರ ಸ್ವಾಮಿ ದೇವಾಲಯದಿಂದ ಮಲೆ ಮಹದೇಶ್ವರ ಬೆಟ್ಟದವರೆಗೆ ಪಾದಯಾತ್ರೆ ಆರಂಭಿಸಿದರು.

ಚಿತ್ರನಟ ಡಾಲಿ ಧನಂಜಯ ನಸುಕಿನ 5 ಗಂಟೆಗೆ ಯಾತ್ರೆಗೆ ಚಾಲನೆ ನೀಡಿ, 'ದೇಶದ ಅನ್ನದಾತರಾದ ರೈತರ ಮಕ್ಕಳಿಗೆ ಪ್ರೀತಿಯಿಂದ ಹೆಣ್ಣು ಕೊಟ್ಟು ಮದುವೆ ಮಾಡಬೇಕೇ ಹೊರತು ಹಿಂದು–ಮುಂದು ನೋಡಬಾರದು. ಬಡವರ ಮಕ್ಕಳಿಗೆ ಹೆಣ್ಣು ಕೊಡ್ರಪ್ಪ' ಎಂದು ಕೋರಿದರು. ಮಳವಳ್ಳಿ ಮುಖ್ಯ-ರಸ್ತೆವರೆಗೂ ತೆರಳಿ ಯಾತ್ರಿಗಳನ್ನು ಬೀಳ್ಕೊಟ್ಟರು.

ಅವಿವಾಹಿತ ಯುವಕರು ಭಾರತೀನಗರದಿಂದ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆಯಲ್ಲಿ ತೆರಳಿದರು

ರೈತರು ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ 100ಕ್ಕೂ ಹೆಚ್ಚು ಯುವಕರು ಕೇಸರಿ ಬಣ್ಣದ ಪತಾಕೆ ಹಿಡಿದು ಮುಂದುವರಿದರು. ದಾರಿಯುದ್ದಕ್ಕೂ 'ಮಹದೇಶ್ವರ ಸ್ವಾಮಿಗೆ ಜೈ', 'ಉಘೇ ಮಹದೇವ' ಎನ್ನುವ ಘೋಷಣೆಗಳನ್ನು ಮೊಳಗಿಸಿದರು.

'ಹೆಣ್ಣು ಹೆತ್ತವರು ಸರ್ಕಾರಿ ನೌಕರಿಯಲ್ಲಿರುವ ಯುವಕರೇ ಬೇಕೆನ್ನುತ್ತಿದ್ದಾರೆ. ಹೀಗಾಗಿ ಜಿಲ್ಲೆಯಾದ್ಯಂತ ಸಾವಿರಾರು ಯುವಕರು ಅವಿವಾಹಿತರಾಗಿಯೇ ಉಳಿದಿದ್ದಾರೆ. ಅವಿವಾಹಿತರೆಂಬ ಪಟ್ಟ ತೆಗೆದು ವಧುಭಾಗ್ಯ ಕರುಣಿಸುವಂತೆ ಕೋರಿ ಪಾದಯಾತ್ರೆ ಮಾಡುತ್ತಿದ್ದೇವೆ' ಎಂದು ಪಾದಯಾತ್ರಿಯೊಬ್ಬರು ತಿಳಿಸಿದರು.

ಕೆಲವು ತಿಂಗಳ ಹಿಂದೆ ಆದಿ ಚುಂಚನಗಿರಿ ಮಠ ಏರ್ಪಡಿಸಿದ್ದ ಒಕ್ಕಲಿಗ ವಧು-ವರರ ಸಮಾವೇಶದಲ್ಲಿ 700–800 ವಧುಗಳಿಗೆ 25 ಸಾವಿರಕ್ಕೂ ಅಧಿಕ ವರಗಳು ಬಂದಿದ್ದರಿಂದ ಸಮಾವೇಶದಲ್ಲಿ ಗೊಂದಲ ಉಂಟಾಗಿತ್ತು.

ಈ ಬೆಳವಣಿಗೆಯಿಂದ ಬೇಸತ್ತ ಅವಿವಾಹಿತರು, 'ದೇವರ ಕೃಪೆಯಿಂದಾದರೂ ಹೆಣ್ಣು ದೊರೆಯಲಿ' ಎಂಬ ಪ್ರಾರ್ಥನೆಯೊಂದಿಗೆ ಪಾದಯಾತ್ರೆ ಆರಂಭಿಸಿದ್ದಾರೆ. ಮಳವಳ್ಳಿ, ಕೊಳ್ಳೇಗಾಲ, ಹನೂರು, ಕೌದಳ್ಳಿ, ತಾಳುಬೆಟ್ಟದ ಮಾರ್ಗವಾಗಿ ಯಾತ್ರೆ ಫೆ.25 ರಂದು ಮಹದೇಶ್ವರ ಬೆಟ್ಟ ತಲುಪಲಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಿನಕುರಳಿ

ಪ್ರಕಾಶ್ ಶೆಟ್ಟಿ

47 ಫರ್ನಿಚರ್ ಕಂಪನಿಗಳು ಒಂದೇ ಸೂರಿನ ಅಡಿಯಲ್ಲಿ! ಇಂದಿನಿಂದ ಆರಂಭ

FURNITURE FAIR™

HOME DECOR & LIFESTYLE

THE BIGGEST SAVING SALE UPTO 70% OFF

ದಿನಾಂಕ & ಸ್ಥಳ

24 25 26 27 ಫೆಬ್ರವರಿ 2023

ಬೆಳಗ್ಗೆ 10.00 ರಿಂದ 8.30 ಗಂಟೆ

ತ್ರಿಪುರವಾಸಿನಿ ಅರಮನೆ ಮೈದಾನ

ಗೇಟ್ ನಂ. 2, ಮೇಕ್ರಿ ಸರ್ಕಲ್ ಹತ್ತಿರ, ಬೆಂಗಳೂರು

ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಹೋಮ್ ಡೆಕೋರ್ • ಲೆದರ್ ಸೋಫಾ • ಬ್ರಾಸ್ & ಆರ್ಟ್‌ಕ್ರಾಫ್ಟ್ • ಪಾಟರಿ
ರಿಕ್ಲೈನರ್ ಸೋಫಾ ಸೆಟ್ಸ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸಸ್ • ಕರ್ಟನ್ಸ್ • ವಾಟರ್ ಫೌಂಟೇನ್ಸ್ ಮತ್ತು ಇನ್ನೂ ಅನೇಕ...

ಫರ್ನೀಚರ್ ಎಕ್ಸ್‌ಚೇಂಜ್ ಮೇಳ

ಬೆಸ್ಟ್ ಡೀಲ್‌ಗಳು! ಬೃಹತ್ ಉಳಿತಾಯ!

ಕನಿಷ್ಠ ಶುಲ್ಕ ಇಎಂಐ — HDFC BANK We understand your world | BAJAJ FINSERV EMI FINANCE

AN EVENT BY iads & events COMPLETE BUSINESS SOLUTIONS

exhibitions_iadsnevents | iadsnevents | ಪ್ರವೇಶ ಉಚಿತ | +91 9342577908

ಬೆಳ್ಳಂದೂರು ಕೆರೆ ಮೀಸಲು ಪ್ರದೇಶ ಒತ್ತುವರಿ • ಪಾಲನೆಯಾಗದ ಆದೇಶ

ಬಿಡಿಎ, ಮಾಲಿನ್ಯ ನಿಯಂತ್ರಣ ಮಂಡಳಿಗೆ ಎನ್‌ಜಿಟಿ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಬೆಳ್ಳಂದೂರು ಮತ್ತು ಅಗರ ಕೆರೆಗಳ ಮೀಸಲು ಪ್ರದೇಶದಲ್ಲಿ ವಸತಿ ಸಮುಚ್ಚಯ ನಿರ್ಮಾಣ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) 2016ರ ಆದೇಶವನ್ನು ಜಾರಿಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಜ್ಯ ಪರಿಸರ ಪರಿಣಾಮ ಅಧ್ಯಯನ ಪ್ರಾಧಿಕಾರ ನಿರಾಸಕ್ತಿ ತಾಳಿವೆ ಎಂದು ಎನ್‌ಜಿಟಿಯ ಪ್ರಧಾನ ಪೀಠ ತರಾಟೆಗೆ ತೆಗೆದುಕೊಂಡಿದೆ.

2016ರ ಆದೇಶದ ಅನುಷ್ಠಾನ ಆಗಿಲ್ಲ ಎಂದು ಆರೋಪಿಸಿ ಬೆಂಗಳೂರಿನ ಫಾರ್ವರ್ಡ್ ಫೌಂಡೇಷನ್, ಸಿಟಿಜನ್ ಆ್ಯಕ್ಷನ್ ಫೋರಂ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುಧೀರ್ ಅಗರವಾಲ್, ಎ.ಸೆಂಥಿಲ್ ವೇಲ್ ಹಾಗೂ ಅಫ್ರೋಜ್ ಅಹ್ಮದ್ ಅವರನ್ನು ಒಳಗೊಂಡ ಪೀಠ, ಬಿಡಿಎ, ಕೆಎಸ್‌ಪಿಸಿಬಿ ಹಾಗೂ ಪರಿಸರ ಪರಿಣಾಮ ಅಧ್ಯಯನ ಪ್ರಾಧಿಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಕೆರೆಯಂಗಳದ ಅಕ್ರಮ ಕಟ್ಟಡಗಳ ತೆರವಿಗೆ ಈ ಹಿಂದೆ ಆದೇಶ ನೀಡಲಾಗಿತ್ತು. ಆ ಆದೇಶ ಇಲ್ಲಿಯವರೆಗೆ ಪಾಲನೆ ಆಗಿಲ್ಲ ಎಂದು ಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಕಟ್ಟಡ ನಿರ್ಮಾಣದಲ್ಲಿ ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಎರಡು ಕಂಪನಿಗಳಿಗೆ ದಂಡ ವಿಧಿಸಲಾಗಿತ್ತು. ಈ ದಂಡ ಇನ್ನೂ ಪಾವತಿ ಆಗಿಲ್ಲ ಎಂದೂ ಪೀಠ ಅತೃಪ್ತಿ ವ್ಯಕ್ತಪಡಿಸಿತು. ಬಳಿಕ ವಿಚಾರಣೆಯನ್ನು ಏಪ್ರಿಲ್ 3ಕ್ಕೆ ಮುಂದೂಡಿತು.

ಬೆಳ್ಳಂದೂರು ಮತ್ತು ಅಗರ ಕೆರೆಗಳ ಸಂರಕ್ಷಿತ ವಲಯದಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್, ಹೋಟೆಲ್, ಬಹುಮಹಡಿ ಕಾರು ನಿಲುಗಡೆ ಸಂಕೀರ್ಣ, ವಾಣಿಜ್ಯ ಮತ್ತು ವಸತಿ ಸಮುಚ್ಚಯ ನಿರ್ಮಿಸಿದಲ್ಲಿ ಪರಿಸರದ ಮೇಲೆ ಭಾರಿ ಪರಿಣಾಮ ಉಂಟಾಗಲಿದೆ ಎಂದು ಎನ್‌ಜಿಟಿ 2016ರ ಮೇ 4ರ ಆದೇಶದಲ್ಲಿ ತಿಳಿಸಿತ್ತು. ಕೆರೆಗಳ ಮೀಸಲು ಪ್ರದೇಶವನ್ನು 75 ಮೀಟರ್‌ಗೆ, ಪ್ರಾಥಮಿಕ ರಾಜಕಾಲುವೆಗಳ ಮೀಸಲು ಪ್ರದೇಶವನ್ನು 50 ಮೀಟರ್, ಎರಡನೇ ಹಂತದ ರಾಜಕಾಲುವೆಗಳ ಮೀಸಲು ಪ್ರದೇಶವನ್ನು 35 ಮೀಟರ್ ಹಾಗೂ ಮೂರನೇ ಹಂತದ ರಾಜಕಾಲುವೆಗಳ ಮೀಸಲು ಪ್ರದೇಶವನ್ನು 25 ಮೀಟರ್‌ಗೆ ಏರಿಸಿತ್ತು. ಜತೆಗೆ, ಕೆರೆ ಒತ್ತುವರಿ ಮಾಡಿದ್ದಕ್ಕೆ ಮಂತ್ರಿ ಟೆಕ್‌ಜೋನ್ ಕಂಪನಿಗೆ ₹117 ಕೋಟಿ ದಂಡ, ಕೋರ್ ಮೈಂಡ್ ಸಾಫ್ಟ್‌ವೇರ್ ಮತ್ತು ಸರ್ವೀಸಸ್ ಪ್ರೈ.ಲಿ.ಗೆ ₹13.5 ಕೋಟಿ ದಂಡ ವಿಧಿಸಿತ್ತು.

ಎನ್‌ಜಿಟಿ ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ ಹಾಗೂ ರಿಯಲ್ ಎಸ್ಟೇಟ್ ಕಂಪನಿಗಳು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದವು. ಬೆಂಗಳೂರಿನ ಕೆರೆಗಳು ಮತ್ತು ರಾಜಕಾಲುವೆಗಳ ಮೀಸಲು ಪ್ರದೇಶದ ಮಿತಿ ಹೆಚ್ಚಿಸಿ ಎನ್‌ಜಿಟಿ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2019ರ ಮಾರ್ಚ್ 5ರಂದು ರದ್ದುಗೊಳಿಸಿತ್ತು. ಜತೆಗೆ, ಕೆರೆ ಒತ್ತುವರಿ ವಿಚಾರವಾಗಿ ಮಂತ್ರಿ ಟೆಕ್‌ಜೋನ್ ಪ್ರೈ.ಲಿ. ಹಾಗೂ ಕೋರ್ ಮೈಂಡ್ ಸಾಫ್ಟ್‌ವೇರ್ ಮತ್ತು ಸರ್ವೀಸಸ್ ಪ್ರೈ.ಲಿ.ನ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

ಬೆಳ್ಳಂದೂರು ಮತ್ತು ಅಗರ ಕೆರೆಗಳ ಸಂರಕ್ಷಿತ ವಲಯದಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್, ಹೋಟೆಲ್, ಕಾರ್ ಪಾರ್ಕಿಂಗ್ ಸಂಕಿರಣ, ವಾಣಿಜ್ಯ ಸಂಬಂಧಿ ಮತ್ತು ವಸತಿ ಸಮುಚ್ಚಯ ನಿರ್ಮಿಸಿದಲ್ಲಿ ಪರಿಸರದ ಮೇಲೆ ಭಾರಿ ಹೊಡೆತ ಉಂಟಾಗಲಿದೆ ಎಂಬ ಎನ್‌ಜಿಟಿಯ ಅಭಿಪ್ರಾಯಕ್ಕೆ ನ್ಯಾಯಪೀಠವೂ ತನ್ನ ಸಮ್ಮತಿ ಸೂಚಿಸಿತ್ತು.

₹117 ಕೋಟಿ ದಂಡದ ಆದೇಶವನ್ನು ಎತ್ತಿಹಿಡಿದಿದ್ದ 2019ರ ತೀರ್ಪಿನ ವಿರುದ್ಧ ಮಂತ್ರಿ ಟೆಕ್‌ಜೋನ್ ಸಂಸ್ಥೆ ಕ್ಯುರೇಟಿವ್ ಅರ್ಜಿಯನ್ನು ಸಲ್ಲಿಸಿತ್ತು. ಅದನ್ನು ಸುಪ್ರೀಂ ಕೋರ್ಟ್ 2020ರಲ್ಲಿ ವಜಾಗೊಳಿಸಿತ್ತು.

ಈ ನಡುವೆ, ಬೆಂಗಳೂರಿನ ಬೆಳ್ಳಂದೂರು ಮತ್ತು ಅಗರ ಕೆರೆಗಳ ಬಫರ್ ವಲಯದಲ್ಲಿ ವಸತಿ ಸಮುಚ್ಚಯ ನಿರ್ಮಾಣ ಮಾಡಲು ಹೊಸದಾಗಿ ಪರಿಸರ ಇಲಾಖೆಯಿಂದ ಅನುಮತಿ ಪಡೆಯುವಂತೆ ಮಂತ್ರಿ ಟೆಕ್ ಜೋನ್ ಸಂಸ್ಥೆಗೆ ಎನ್‌ಜಿಟಿ ಸೂಚಿಸಿತ್ತು.

ಅರ್ಜಿದಾರರ ಆರೋಪವೇನು?

‘ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್), ಹೋಟೆಲ್‌ಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳು ಹಾಗೂ ಮಾಲ್ ಸೇರಿದಂತೆ 80 ಎಕರೆ ಜಾಗದಲ್ಲಿ ಕಂಪನಿಗಳು ಕಟ್ಟಡ ನಿರ್ಮಾಣ ಮಾಡುತ್ತಿವೆ. ಈ ಜಾಗವು ಬೆಳ್ಳಂದೂರು ಹಾಗೂ ಅಗರ ಕೆರೆಯ ಮಧ್ಯ ಇದೆ. ಅಲ್ಲದೆ, ಈ ಪ್ರದೇಶದ ರಾಜಕಾಲುವೆಯ 2.61 ಎಕರೆಯನ್ನು ಒತ್ತುವರಿ ಮಾಡಿಕೊಂಡಿವೆ’ ಎಂದು ಅರ್ಜಿದಾರರು ಎನ್‌ಜಿಟಿಗೆ ದೂರು ಸಲ್ಲಿಸಿದ್ದರು.

ಏಳು ಕಡೆ ಅಂಬಾರಿ ಉತ್ಸವ ಬಸ್

ಬೆಂಗಳೂರು: ಕೆಎಸ್‌ಆರ್‌ಟಿಸಿ ಮಂಗಳವಾರ ಚಾಲನೆ ನೀಡಿದ ಅಂಬಾರಿ ಉತ್ಸವ ವೋಲ್ವೊ ಸ್ಲೀಪರ್ ಬಸ್‌ಗಳು ಶುಕ್ರವಾರದಿಂದ ಅಂತರರಾಜ್ಯ ಕಾರ್ಯಾಚರಣೆ ಮಾಡಲಿವೆ. ಬೆಂಗಳೂರಿನಿಂದ ಹೈದರಾಬಾದ್, ಹೈಟೆಕ್ ಸಿಟಿ, ಸಿಕಂದರಾಬಾದ್, ಪಣಜಿ, ತ್ರಿಶೂರು, ಎರ್ನಾಕುಲಂ, ತಿರುವನಂತಪುರಕ್ಕೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಆಸನಗಳನ್ನು ಆನ್‌ಲೈನ್‌ನಲ್ಲಿ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಬ್ಯಾಂಕ್: ನಿವೃತ್ತರ ಸಮ್ಮೇಳನ ನಾಳೆ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಫೆ.25ರಿಂದ 27ರವರೆಗೆ ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟದ (ಎಐಬಿಒಎ) 6ನೇ ತ್ರೈವಾರ್ಷಿಕ ಸಮ್ಮೇಳನ ಆಯೋಜಿಸಲಾಗಿದೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಜೈನ್ ತಿಳಿಸಿದರು.

‘ಪಿಂಚಣಿ ಪರಿಷ್ಕರಣೆ ವಿಷಯವಾಗಿ 30 ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕೇಂದ್ರ ಸರ್ಕಾರವು ನಿವೃತ್ತ ಸೇವಾ ನೌಕರರಿಗಾಗಿ ಜಾರಿಗೊಳಿಸಿರುವ ಒನ್ ರ್‍ಯಾಂಕ್ ಒನ್ ಪೆನ್ಶನ್ ಮಾದರಿಯಲ್ಲಿ ಬ್ಯಾಂಕ್ ನಿವೃತ್ತರಿಗೂ ಪಿಂಚಣಿ ಪರಿಷ್ಕರಣೆ ಮಾಡುವುದರ ಕುರಿತು ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳಬೇಕು. ಬ್ಯಾಂಕ್ ನಿವೃತ್ತರ ಆರೋಗ್ಯ ವಿಮೆಯ ಮೇಲಿನ ಜಿಎಸ್‌ಟಿ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ನೀಡಬೇಕು’ ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಈ ಸಮ್ಮೇಳನವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಉದ್ಘಾಟನೆ ಮಾಡಲಿದ್ದು, ಎಐಬಿಒಎ ಪ್ರಧಾನ ಕಾರ್ಯದರ್ಶಿಗಳಾದ ಸಿ.ಎಚ್. ವೆಂಕಟಾಚಲಂ, ಎಸ್. ನಾಗರಾಜನ್ ಭಾಗವಹಿಸಲಿದ್ದಾರೆ ಎಂದರು.

ರಾಜಕಾಲುವೆ ಒತ್ತುವರಿ: ಒಂದು ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕಾಲುವೆ ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿದ್ದ ಅಪರಾಧಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ಸಿಎಂಎಂ ನ್ಯಾಯಾಲಯ ಆದೇಶಿಸಿದೆ’ ಎಂದು ಬಿಎಂಟಿಎಫ್ ಡಿವೈಎಸ್ಪಿ ಶ್ರೀಧರ್ ಪೂಜಾರಿ ತಿಳಿಸಿದ್ದಾರೆ.

ಬಿಬಿಎಂಪಿ ವಾರ್ಡ್ ನಂ.96 ಓಕಳಿಪುರಂ, 1ನೇ ಮುಖ್ಯರಸ್ತೆ, ಬಿಡಿಎ ನಿವೇಶನ ಸಂಖ್ಯೆ: 25 ರ ಮಾಲೀಕ ಮುದ್ದುಕೃಷ್ಣ ಟಿ.ಎಲ್. ಎಂಬುವವರು ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡಿದ್ದರು. ಬಿಎಂಟಿಎಫ್ ಪೊಲೀಸ್ ಠಾಣೆಯಲ್ಲಿ 2014ರ ಮೇ 30ರಂದು ಈ ಪ್ರಕರಣ ದಾಖಲಿಸಲಾಗಿತ್ತು.

ಸಾಕ್ಷ್ಯಾಧಾರ ಮತ್ತು ದಾಖಲಾತಿಗಳನ್ನು ಸಂಗ್ರಹಿಸಿ ಆರೋಪಿಯ ವಿರುದ್ಧ ಸಿ.ಎಂ.ಎಂ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿತ್ತು. ವಿಚಾರಣಾ ಕಾಲದಲ್ಲಿ ಆರೋಪಿಯು ರಾಜಕಾಲುವೆಯನ್ನು ಅಕ್ರಮವಾಗಿ ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುವುದು ದೃಢಪಟ್ಟಿತು. ಹೀಗಾಗಿ, 72 ವರ್ಷದ ಮುದ್ದುಕೃಷ್ಣ ಅವರಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ಹಾಗೂ ₹5 ಸಾವಿರ ದಂಡ ವಿಧಿಸಿ ಫೆ.20ರಂದು ನ್ಯಾಯಾಲಯ ಆದೇಶ ನೀಡಿದೆ ಎಂದು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ತನಿಖಾಧಿಕಾರಿಯಾಗಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಸವಿತ ಹಾಗೂ ಸಿಬ್ಬಂದಿಯನ್ನು ಬಿಎಂಟಿಎಫ್ ಎಡಿಜಿಪಿ ಡಾ.ಕೆ.ರಾಮಚಂದ್ರ ರಾವ್ ಅಭಿನಂದಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ಶ್ರೀಧರ ಪೂಜಾರಿ ಮಾಹಿತಿ ನೀಡಿದ್ದಾರೆ.

ULB Code : 803162

ಸ್ವಾತಂತ್ರ್ಯದ ಅಮೃತಮಹೋತ್ಸವ | ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯೆಡೆಗೆ | ಕರ್ನಾಟಕ ಸರ್ಕಾರ | ಬಿಬಿಎಂಪಿ | BSWML ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಸ್ವಚ್ಛ ಸರ್ವೇಕ್ಷಣ್-2023 - ನಮ್ಮ ನಗರ ನಮ್ಮ ಹೆಮ್ಮೆ

ನಿಮ್ಮ ನಗರಕ್ಕೆ ಮತ ನೀಡಿ

ನಿರ್ಮಾಣ ಮತ್ತು ನೆಲಸಮ ತ್ಯಾಜ್ಯಗಳು :

ಕಟ್ಟಡ ತ್ಯಾಜ್ಯಗಳನ್ನು ರಸ್ತೆಗಳಲ್ಲಿ ಎಸೆಯಬೇಡಿ, ಬಿಬಿಎಂಪಿ ಮಾರ್ಗಸೂಚಿಗಳನ್ನು ಹಾಗೂ ನಿರ್ಮಾಣ ಮತ್ತು ನೆಲಸಮ ತ್ಯಾಜ್ಯ ನಿಯಮ 2016ರನ್ನು ಅನುಸರಿಸಿ.

"ಕಟ್ಟಡ ಭಗ್ನಾವಶೇಷ ತ್ಯಾಜ್ಯ" ಎಂದರೆ ಯಾವುದೇ ನಾಗರಿಕ ಕಟ್ಟಡಗಳ ನಿರ್ಮಾಣ, ನವೀಕರಣ, ದುರಸ್ತಿ ಮತ್ತು ನೆಲಸಮದಿಂದ ಉಂಟಾಗುವ ಕಟ್ಟಡ ಸಾಮಗ್ರಿಗಳು, ಅವಶೇಷಗಳು ಮತ್ತು ಅವಶೇಷಗಳನ್ನು ಒಳಗೊಂಡಿರುವ ತ್ಯಾಜ್ಯವಾಗಿದೆ.

ನಿರ್ಮಾಣ, ನೆಲಸಮ ಅಥವಾ ನವೀಕರಣ ಚಟುವಟಿಕೆಗಳ ಸಮಯದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಗ್ರಹಿಸಲು ಮತ್ತು ವಿಲೇವಾರಿ ಮಾಡಲು ಬಿಬಿಎಂಪಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ರಸ್ತೆಗಳಲ್ಲಿ ಕಟ್ಟಡಗಳ ಭಗ್ನಾವಶೇಷಗಳನ್ನು ಎಸೆಯುವುದು ಶಿಕ್ಷಾರ್ಹ ಅಪರಾಧವಾಗಿರುವುದರಿಂದ, ನಿಯಮಗಳನ್ನು ಉಲ್ಲಂಘಿಸುವವರಿಗೆ ಭಾರಿ ದಂಡವನ್ನು ವಿಧಿಸಲಾಗುತ್ತದೆ.

ನಿರ್ಮಾಣ ಮತ್ತು ನೆಲಸಮ ತ್ಯಾಜ್ಯವನ್ನು ಸಂಗ್ರಹಿಸುವ ಸಲುವಾಗಿ ತ್ಯಾಜ್ಯ ಉತ್ಪಾದಕರು ಸಂಬಂಧಪಟ್ಟ ಅಧಿಸೂಚಿತ ಸೇವಾ ಪೂರೈಕೆದಾರರು ಅಥವಾ ಬಿಬಿಎಂಪಿ ಅಧಿಕಾರಿಗಳನ್ನು ಸಂಪರ್ಕಿಸಬೇಕು ಮತ್ತು ಬಿಬಿಎಂಪಿ ಸೂಚಿಸಿದ ನಿಗದಿತ ಮೊತ್ತವನ್ನು ಪಾವತಿಸಬೇಕು. ನಂತರ ಸಂಗ್ರಹಿಸಿದ ನಿರ್ಮಾಣ ಮತ್ತು ನೆಲಸಮ ತ್ಯಾಜ್ಯವನ್ನು ಅಧಿಕೃತ ಸಂಸ್ಕರಣಾ ಕೇಂದ್ರ ಅಥವಾ ಬಿಬಿಎಂಪಿ ಸೂಚಿಸಿದ ಸಿ&ಡಿ ನಿಯಮಗಳಿಗೆ ಅನುಗುಣವಾಗಿ ನಿರ್ದಿಷ್ಟ ಗೊತ್ತುಪಡಿಸಿದ ಪ್ರದೇಶಗಳಿಗೆ ವರ್ಗಾಯಿಸಲಾಗುತ್ತದೆ. ಇದನ್ನು ಕಾಂಕ್ರೀಟ್, ಮಣ್ಣು, ಉಕ್ಕು, ಮರ, ಪ್ಲಾಸ್ಟಿಕ್, ಇಟ್ಟಿಗೆಗಳು ಮತ್ತು ಗಾರೆಗಳಂತಹ ವಿಧವಾಗಿ ವಿಂಗಡಿಸಬೇಕು.

ಬಿಬಿಎಂಪಿಯು ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಕಟ್ಟಡ ಅವಶೇಷಗಳನ್ನು ರಸ್ತೆಗಳಲ್ಲಿ ಎಸೆಯಬೇಡಿ ಮತ್ತು ನಿರ್ದಿಷ್ಟ ರೀತಿಯಲ್ಲಿ ವಿಲೇವಾರಿ ಮಾಡುವಂತೆ ಬಿಬಿಎಂಪಿಯು ಬೆಂಗಳೂರು ನಗರದ ಸಂಬಂಧಪಟ್ಟ ಎಲ್ಲರಿಗೂ ವಿನಂತಿಸುತ್ತದೆ.

ಸುಂದರ ನಗರ ನಿರ್ಮಿಸೋಣ

ಭವಿಷ್ಯದ ಜನಾಂಗಕ್ಕೆ ಮಾದರಿಯಾಗೋಣ

ಕಟ್ಟಡ ಭಗ್ನಾವಶೇಷ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಿ

ಕಟ್ಟಡ ಭಗ್ನಾವಶೇಷ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುವುದು ಶಿಕ್ಷಾರ್ಹ ಅಪರಾಧ

myGov App | 1969 Helpline | Swachhata App | 55-2023 Portal

ಬೆಂಗಳೂರು ನಗರವನ್ನು ಸ್ವಚ್ಛ ಮತ್ತು ಅಚ್ಚುಕಟ್ಟಾಗಿಡಲು ದಯವಿಟ್ಟು ಬಿಬಿಎಂಪಿಯೊಂದಿಗೆ ಸಹಕರಿಸಿ.

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಆಡಳಿತಗಾರರು ಬಿಬಿಎಂಪಿ | ಮುಖ್ಯ ಆಯುಕ್ತರು ಬಿಬಿಎಂಪಿ

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕಲಾಸಿಪಾಳ್ಯ: ನೂತನ ಬಸ್ ನಿಲ್ದಾಣ ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ಕಲಾಸಿಪಾಳ್ಯ ಬಸ್ ನಿಲ್ದಾಣ

ಬೆಂಗಳೂರು: ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಲಾಸಿಪಾಳ್ಯ ಬಸ್ ನಿಲ್ದಾಣ ಕೊನೆಗೂ ಉದ್ಘಾಟನೆಯಾಗುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಈ ನಿಲ್ದಾಣಕ್ಕೆ ಚಾಲನೆ ನೀಡುವರು.

ಸುಸಜ್ಜಿತ ಟಿಟಿಎಂಸಿ ನಿರ್ಮಾಣಕ್ಕೆ 2016ರ ಆಗಸ್ಟ್‌ನಲ್ಲಿ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದ್ದರು. 4.13 ಎಕರೆ ವಿಸ್ತೀರ್ಣದಲ್ಲಿ ₹63.17 ಕೋಟಿ ವೆಚ್ಚದಲ್ಲಿ ನಿಲ್ದಾಣ ನಿರ್ಮಾಣವಾಗಿದೆ.

ಕಾಮಗಾರಿ ಪೂರ್ಣಗೊಳಿಸಲು 24 ತಿಂಗಳ ಕಾಲಮಿತಿ ನೀಡಲಾಗಿತ್ತು. ಅದರಂತೆ 2018ರ ಆಗಸ್ಟ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಅನುದಾನ ಬಿಡುಗಡೆ ವಿಳಂಬದಿಂದ ಕಾಮಗಾರಿ ವಿಳಂಬವಾಯಿತು ಬಳಿಕ 2019ರ ಡಿಸೆಂಬರ್‌ಗೆ ಎರಡನೇ ಕಾಲಮಿತಿ ನೀಡಲಾಗಿತ್ತು. ಅನುದಾನ ಬಿಡುಗಡೆಯಾಗುವಷ್ಟರಲ್ಲಿ ಕೋವಿಡ್ ಲಾಕ್‌ಡೌನ್ ಜಾರಿಯಾಯಿತು. ಬಳಿಕ ಕಾರ್ಮಿಕರ ಕೊರತೆಯಿಂದಾಗಿ ಈ ಕಾಮಗಾರಿಯೂ ಸ್ಥಗಿತಗೊಂಡಿತ್ತು. ಜನ ಜೀವನ ಸಹಜ ಸ್ಥಿತಿಗೆ ಬಂದ ಬಳಿಕ ಕಾಮಗಾರಿ ಆರಂಭವಾಗಿತ್ತು.

ಈಗ ಕಾಮಗಾರಿ ಪೂರ್ಣಗೊಂಡು ಹಲವು ತಿಂಗಳುಗಳೇ ಕಳೆದಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದಲೇ ಉದ್ಘಾಟನೆ ಮಾಡಿಸಲು ಅಧಿಕಾರಿಗಳು ಕಾದಿದ್ದರು.

ಈ ಬಸ್ ನಿಲ್ದಾಣದಿಂದ ಬಿಎಂಟಿಸಿ ಬಸ್‌ಗಳು ಮಾತ್ರವಲ್ಲ, ಕೆಎಸ್‌ಆರ್‌ಟಿಸಿ ಬಸ್‌ಗಳೂ ಕಾರ್ಯಾಚರಣೆ ಮಾಡಲಿವೆ. ನಿರ್ಮಾಣವಾಗಿರುವ ಕಟ್ಟಡದ ಒಳಗೆ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲ್ಲಲಿದ್ದು, ಆವರಣದೊಳಗಿನ ಹೊರಾಂಗಣದಲ್ಲಿ ಬಿಎಂಟಿಸಿ ಬಸ್‌ಗಳಿಗೆ ಸ್ಥಳಾವಕಾಶ ಕಲ್ಪಿಸಲಾಗುತ್ತದೆ. ಬಸ್‌ಗಳು, ಪ್ರಯಾಣಿಕರ ನಿಲುಗಡೆಗೆ ಪ್ರತ್ಯೇಕ ತಾಣಗಳನ್ನು ನಿರ್ಮಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗ ಆಯೋಜಿಸಿದ್ದ ನೂತನ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಕಲಾವಿದ ಶಿಡ್ಲಘಟ್ಟ ಮುನಿವೆಂಕಟಪ್ಪ ಉದ್ಘಾಟಿಸಿದರು. ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಬಿ.ಸಿ. ಮೈಲಾರಪ್ಪ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಸಿ. ಸೋಮಶೇಖರ್, ಪ್ರಾಧ್ಯಾಪಕರಾದ ಪ್ರೊ. ರಾಜೇಶ್ ಆರ್, ಮತ್ತು ಸಂಶೋಧಕ ಎಸ್. ಅಂಬರೀಶ್ ಇದ್ದರು.

ರಸ್ತೆ ಅಪಘಾತ: ಐವರ ಸಾವು

ಧಾರವಾಡ: ಕೋಟೂರು ಬಳಿಯ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಗುರುವಾರ ಸಂಜೆ ನಿಂತಿದ್ದ ಟ್ರಕ್‌ಗೆ ಕಾರು ಡಿಕ್ಕಿ ಹೊಡೆದು ಮಗು ಸೇರಿದಂತೆ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹುಬ್ಬಳ್ಳಿಯತ್ತ ಹೊರಟಿದ್ದ ಫಿಯೆಟ್ ಪುಂಟೊ ಕಾರು ತೇಗೂರು ಬಳಿ ರಸ್ತೆ ದಾಟುತ್ತಿದ್ದ ವ್ಯಕ್ತಿಯನ್ನು ತಪ್ಪಿಸಲು ಹೋಗಿ ಮುಂದಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ರಭಸಕ್ಕೆ ಪಾದಚಾರಿ ಸೇರಿ ಕಾರಿನಲ್ಲಿದ್ದ ಅವರಾದಿ ಗ್ರಾಮದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ವಿಜಯಪುರದಿಂದ ಮಂಗಳೂರಿಗೆ ಹೊರಟಿದ್ದ ಬಸ್‌ನಿಂದ ಇಳಿಸಿದ ಸಿಬ್ಬಂದಿ

ಸೀಟ್ ಮೇಲೆ ಮೂತ್ರ ಮಾಡಿದ ಪ್ರಯಾಣಿಕ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಜಯಪುರದಿಂದ ಮಂಗಳೂರಿಗೆ ಹೊರಟ್ಟಿದ್ದ ಕೆಎಸ್ ಆರ್‌ಟಿಸಿ ರಾತ್ರಿ ಬಸ್‌ನಲ್ಲಿ ಮಹಿಳಾ ಪ್ರಯಾಣಿಕರೊಬ್ಬರ ಸೀಟ್ ಮೇಲೆ ಮೂತ್ರ ಮಾಡಿದ ಪ್ರಯಾಣಿಕನನ್ನು ಅಲ್ಲೇ ಇಳಿಸಲಾಗಿದೆ. ಈ ಬಗ್ಗೆ ದೂರು ದಾಖಲಾಗಿಲ್ಲ.

‘ಈ ಪ್ರಯಾಣಿಕ ಮಹಿಳಾ ಪ್ರಯಾಣಿಕರ ಮೇಲೆ ಮೂತ್ರ ವಿಸರ್ಜನೆ ಮಾಡಿಲ್ಲ’ ಎಂದು ಕೆಎಸ್‌ಆರ್‌ಟಿಸಿ ಮಂಗಳೂರು ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ ಹೇಳಿದರು.

ಫೆ.21ರಂದು ವಿಜಯಪುರದಿಂದ ಹೊರಟಿದ್ದ ಮಂಗಳೂರು ಡಿಪೊ–2ಕ್ಕೆ ಸೇರಿದ ಎಸಿರಹಿತ ಸ್ಲೀಪರ್ ಬಸ್‌ನಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸದೆ, ಹತ್ತಿದ್ದ ಪ್ರಯಾಣಿಕನೊಬ್ಬ ಮಂಗಳೂರು ಟಿಕೆಟ್ ಪಡೆದು, ಸೀಟ್ ನಂಬರ್ 29ರಲ್ಲಿ ಕುಳಿತಿದ್ದ. ಎಂದಿನಂತೆ ಬಸ್ ಅನ್ನು ರಾತ್ರಿ 10.30ರ ಸುಮಾರಿಗೆ ಕಿರೇಸೂರು ಡಾಬಾವೊಂದರ ಬಳಿ ಊಟಕ್ಕೆ ನಿಲ್ಲಿಸಲಾಗಿತ್ತು. ಎಲ್ಲ ಪ್ರಯಾಣಿಕರು ಊಟಕ್ಕೆ ಇಳಿದಾಗ, ಸೀಟ್ ನಂಬರ್ 29ರಲ್ಲಿ ಕುಳಿತಿದ್ದ ವ್ಯಕ್ತಿ ಹಿಂದಿನಿಂದ ಎದ್ದು ಬಂದು, ಸೀಟ್ ನಂಬರ್ 3ರ ಮೇಲೆ ಮೂತ್ರ ಮಾಡಿದ್ದಾನೆ. ಈ ವೇಳೆ ಬಸ್‌ನಲ್ಲಿ ಯಾರೂ ಇರಲಿಲ್ಲ. ಊಟ ಮುಗಿಸಿಕೊಂಡು ಬಂದ ಮಹಿಳಾ ಪ್ರಯಾಣಿಕರೊಬ್ಬರು (ಸೀಟ್ ನಂ.3ರಲ್ಲಿ ಪ್ರಯಾಣಿಸುತ್ತಿದ್ದವರು) ಇದನ್ನು ಗಮನಿಸಿ, ಚಾಲಕನಿಗೆ ಮಾಹಿತಿ ನೀಡಿದ್ದಾರೆ’ ಎಂದು ರಾಜೇಶ್ ಶೆಟ್ಟಿ ತಿಳಿಸಿದರು.

‘ಮೂತ್ರ ಮಾಡಿರುವ ವ್ಯಕ್ತಿ ಮದ್ಯಸೇವನೆ ಮಾಡಿರುವುದು ಚಾಲಕ–ನಿರ್ವಾಹಕರು, ಪ್ರಯಾಣಿಕರ ಗಮನಕ್ಕೆ ಬಂದಿದೆ. ಆತ ಸ್ವಯಂ ನಿಯಂತ್ರಣ ಕಳೆದುಕೊಂಡು, ಸೀಟ್ ಮೇಲೆ ಮೂತ್ರ ಮಾಡಿರುವ ಸಾಧ್ಯತೆ ಇದೆ ಅಥವಾ ಕೆಳಗೆ ಇಳಿದಿದ್ದೇನೆ ಎಂಬ ಭ್ರಮೆಯಲ್ಲೂ ಈ ಕೃತ್ಯ ಮಾಡಿರಬಹುದು. ಊಟ ಮುಗಿಸಿ ಬಂದ ಮೇಲೆ ಎಲ್ಲರೂ ಸೇರಿ ಆತನನ್ನು ಅಲ್ಲಿಯೇ ಇಳಿಸಿದ್ದಾರೆ. ಬಸ್ ಚಾಲಕ ಸಂತೋಷ ಮಠಪತಿ ಮತ್ತು ನಿರ್ವಾಹಕ ಉಮೇಶ ಕರಡಿ ಅದನ್ನು ಸ್ವಚ್ಛಗೊಳಿಸಿಕೊಂಡು, ಮುಂದೆ ಪ್ರಯಾಣ ಬೆಳೆಸಿದ್ದಾರೆ. ಸೀಟ್ ನಂಬರ್ 3ರಲ್ಲಿ ಹುಬ್ಬಳ್ಳಿಗೆ ಹೊರಟಿದ್ದ ಮಹಿಳೆಯೊಬ್ಬರು ಕುಳಿತಿದ್ದರು. ಡಾಬಾದ ಬಳಿ ಬಸ್ ನಿಂತಾಗ ಅವರು ಕೂಡ ಕೆಳಗೆ ಇಳಿದಿದ್ದರು. ಈ ಮಹಿಳೆ ಕೂಡ ಮುಂಗಡ ಸೀಟ್ ಕಾಯ್ದಿರಿಸದೆ, ಟಿಕೆಟ್ ಪಡೆದು, ಪ್ರಯಾಣಿಸಿದವರು. ನಂತರ ಅವರಿಗೆ ಬಸ್‌ನಲ್ಲಿ ಬೇರೆ ಸೀಟ್ ಒದಗಿಸಲಾಗಿದ್ದು, ಅವರು ಹುಬ್ಬಳ್ಳಿಯವರೆಗೆ ಇದೇ ಬಸ್‌ನಲ್ಲಿ ಪ್ರಯಾಣಿಸಿದ್ದಾರೆ’ ಎಂದು ಅವರು ‘ಪ್ರಜಾವಾಣಿ’ಗೆ ವಿವರ ನೀಡಿದರು.

‘ಮೂತ್ರ ಮಾಡಿರುವ ವ್ಯಕ್ತಿಗೆ ಆ ಸೀಟ್‌ನಲ್ಲಿ ಮಹಿಳೆ ಪ್ರಯಾಣಿಸುವ ವಿಷಯ ಗೊತ್ತಿರುವ ಸಾಧ್ಯತೆ ಇಲ್ಲ. ಆದರೆ, ಮಹಿಳೆಯ ಮೇಲೆ ಆತ ಮೂತ್ರ ಮಾಡಿದ್ದಾನೆ ಎಂಬುದು ಸುಳ್ಳು ಸುದ್ದಿ. ಟಿಕೆಟ್ ಪಡೆದು ಪ್ರಯಾಣಿಸಿದ ವ್ಯಕ್ತಿಯನ್ನು ಡಾಬಾ ಬಳಿಯೇ ಇಳಿಸಿದ್ದರಿಂದ ಆತ ಯಾರೆಂಬ ಮಾಹಿತಿ ಕೂಡ ಲಭ್ಯವಾಗಿಲ್ಲ. ಬಸ್ ಹುಬ್ಬಳ್ಳಿ ತಲುಪುವಾಗ ಅರ್ಧ ಗಂಟೆ ತಡವಾದ್ದರಿಂದ, ಬಸ್ ನಿಲ್ದಾಣದ ಅಧಿಕಾರಿ ವಿಚಾರಿಸಿದಾಗ, ಚಾಲಕ–ನಿರ್ವಾಹಕರು ನಡೆದ ಘಟನೆಯನ್ನು ವಿವರಿಸಿದ್ದಾರೆ’ ಎಂದು ಹೇಳಿದರು.

ನ್ಯೂಯಾರ್ಕ್–ದೆಹಲಿ ಮಾರ್ಗದ ಏರ್ ಇಂಡಿಯಾ ವಿಮಾನದಲ್ಲಿ ಪಾನಮತ್ತ ವ್ಯಕ್ತಿಯೊಬ್ಬ ಮಹಿಳೆ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣ ನಡೆದಿತ್ತು.

ಮಾರ್ಚ್ 12ರಿಂದ ಬೊಂಬೆ ಹಬ್ಬ

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನದ ಸಹಯೋಗದಲ್ಲಿ ಭಾರತೀಯ ವಿದ್ಯಾಭವನವು ಮಾರ್ಚ್ 12ರಿಂದ ಮಾರ್ಚ್ 18ರವರೆಗೆ ‘ನವರಸಗಳು’ ಶೀರ್ಷಿಕೆಯಡಿ ಬೊಂಬೆ ಹಬ್ಬ ಹಮ್ಮಿಕೊಂಡಿದೆ.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಇ.ಎಸ್.ವಿ. ಸಭಾಂಗಣದಲ್ಲಿ ಏಳು ದಿನಗಳ ಬೊಂಬೆ ಹಬ್ಬ ನಡೆಯಲಿದೆ. ಬೊಂಬೆ ಉತ್ಸವವನ್ನು ವಿದ್ವಾಂಸ ಶತಾವಧಾನಿ ಆರ್. ಗಣೇಶ್ ಉದ್ಘಾಟಿಸಲಿದ್ದಾರೆ.

ಪ್ರತಿದಿನ ಎಂ.ಆರ್. ಶ್ರೀನಿವಾಸ್, ರಂಗಪುತ್ಥಳಿ ಕಲಾವಿದರಿಂದ ಬೆಳಿಗ್ಗೆ 11ರಿಂದ ಸಂಜೆ 5 ಗಂಟೆಯವರೆಗೆ ಬೊಂಬೆ ಪ್ರದರ್ಶನ, ಕಲಾವಿದ ಜಿ.ಎಸ್.ಬಿ. ಅಗ್ನಿಹೋತ್ರಿ ಅವರಿಂದ ‘ಕಲಾಶಿಬಿರ’ ಹಾಗೂ ಎನ್. ಶ್ರೀದೇವಿ ಅವರಿಂದ ಬೊಂಬೆ ಅಂಚೆಚೀಟಿಗಳ ಪ್ರದರ್ಶನ ನಡೆಯಲಿದೆ.

ಬೆಳಿಗ್ಗೆ 11ರಿಂದ ಸಂಜೆ 6 ಗಂಟೆಯವರೆಗೆ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಇರಲಿದೆ.

ಮಾರ್ಚ್ 12ರಂದು ಬೆಳಿಗ್ಗೆ 11.30ಕ್ಕೆ ಧಾತು ಪಪೆಟ್ ಥಿಯೇಟರ್ ‘ಬೊಂಬೆಗಳ ಕಾವ್ಯಾಭಿವ್ಯಕ್ತಿ’ಯನ್ನು ಪ್ರಸ್ತುತಪಡಿಸಲಿದೆ. ಸಂಜೆ 5ಕ್ಕೆ ಸುಚಿತ್ರ ಫಿಲ್ಮ್ ಸೊಸೈಟಿ ಬೊಂಬೆಗಳನ್ನು ಕುರಿತ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಿದೆ. 13ರಂದು ಸಂಜೆ 5.30ಕ್ಕೆ ಚೂಡಾಮಣಿ ನಂದಗೋಪಾಲ್ ಅವರಿಂದ ‘ಚಿತ್ರಕಲೆ ಮತ್ತು ಶಿಲ್ಪಗಳಲ್ಲಿ ನವರಸಗಳ ಅಭಿವ್ಯಕ್ತಿ’ ವಿಷಯದ ಮೇಲೆ ಉಪನ್ಯಾಸ, ಸಂಜೆ 6ಕ್ಕೆ ‘ಲಂಕಾ ದಹನ’ ಬೊಂಬೆಯಾಟ ನಡೆಯಲಿದೆ. 14ರಂದು ಸಂಜೆ 5.30ಕ್ಕೆ ಲಲಿತಾ ಶ್ರೀನಿವಾಸನ್ ಅವರಿಂದ ‘ಸಾಂಪ್ರದಾಯಿಕ ನೃತ್ಯಗಳಲ್ಲಿ ನವರಸಗಳ ಅಭಿವ್ಯಕ್ತಿ’ ವಿಷಯದ ಮೆಲೆ ಉಪನ್ಯಾಸ, ಸಂಜೆ 6ಕ್ಕೆ ವೀರಾಭಿಮನ್ಯು ಸೂತ್ರದಬೊಂಬೆ ರಂಗಪ್ರಸ್ತುತಿ ನಡೆಯಲಿವೆ.

15ರಂದು ಸಂಜೆ 5.30ಕ್ಕೆ ಎಚ್.ಎಸ್. ವೆಂಕಟೇಶಮೂರ್ತಿ ಅವರಿಂದ ‘ಸಾಹಿತ್ಯದಲ್ಲಿ ನವರಸಗಳ ಅಭಿವ್ಯಕ್ತಿ’ ವಿಷಯದ ಮೇಲೆ ಉಪನ್ಯಾಸ, ಸಂಜೆ 6ಕ್ಕೆ ‘ಇಂದ್ರಜಿತು ಕಾಳಗ’ ತೊಗಲು ಬೊಂಬೆಯಾಟ, 16ರಂದು ಸಂಜೆ 5.30ಕ್ಕೆ ಟಿ.ಎಸ್. ಸತ್ಯವತಿ ಅವರಿಂದ ‘ಶಾಸ್ತ್ರೀಯ ಸಂಗೀತದಲ್ಲಿ ನವರಸಗಳ ಅಭಿವ್ಯಕ್ತಿ’ ಎಂಬ ವಿಷಯದ ಮೇಲೆ ಉಪನ್ಯಾಸ, ಸಂಜೆ 6ಕ್ಕೆ ‘ಗಿರಿಜಾ ಕಲ್ಯಾಣ’ ಸೂತ್ರದ ಬೊಂಬೆಯಾಟ ನಡೆಯಲಿದೆ.

17ರಂದು ಸಂಜೆ 5.30ಕ್ಕೆ ಬಿ.ವಿ. ರಾಜಾರಾಂ ಅವರಿಂದ ‘ರಂಗ ಪ್ರಯೋಗಗಳಲ್ಲಿ ನವರಸಗಳ ಅಭಿವ್ಯಕ್ತಿ’ ವಿಷಯದ ಮೇಲೆ ಉಪನ್ಯಾಸ, ಸಂಜೆ 6ಕ್ಕೆ ‘ಬೊಂಬೆ ವಿಭಾವ’ ಬೊಂಬೆ ರಂಗ ಪ್ರಸ್ತುತಿ, 18ರಂದು ಸಂಜೆ 5.30ಕ್ಕೆ ಟಿ.ಎಸ್. ನಾಗಾಭರಣ ಅವರು ‘ಸಿನಿಮಾಗಳಲ್ಲಿ ನವರಸಗಳ ಅಭಿವ್ಯಕ್ತಿ’ ವಿಷಯದ ಮೇಲೆ ಉಪನ್ಯಾಸ ಹಾಗೂ ಸಂಜೆ 6ಕ್ಕೆ ‘ದೇವಿ ಮಹಾತ್ಮೆ’ ಯಕ್ಷಬೊಂಬೆಯಾಟ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಯೂರ ಓದಿರಿ

ಕಾಣೆಯಾಗಿದ್ದಾರೆ

ಗೋವಿಂದಪ್ಪ. ಎಂ.

73 ವರ್ಷಗಳು

ಇವರು ದಿ: 11.02.2023ರಂದು ಬೆಳಿಗ್ಗೆ 11.00 ಗಂಟೆಯಿಂದ ಶಾಂತಿನಗರ, ಬೆಂಗಳೂರು–27 ಇಲ್ಲಿಂದ ಕಾಣೆಯಾಗಿರುತ್ತಾರೆ. ಇವರನ್ನು ಕಂಡವರು ಹತ್ತಿರದ ಪೊಲೀಸ್ ಠಾಣೆ ಅಥವಾ ಕೆಳಗಿನ ನಂಬರಿಗೆ ಕರೆಮಾಡಿ

ಫೋ: 7337736320 / 8971077835

ಜನತಾ ಶಿಕ್ಷಣ ಸಮಿತಿಯ (ಜೆ.ಎಸ್.ಎಸ್.)

ಸಕ್ರಿ ಕಾನೂನು ಮಹಾವಿದ್ಯಾಲಯ,

ಹೆಗ್ಗೇರಿ, ಹುಬ್ಬಳ್ಳಿ ಫೋನ್ : 0836 2461184, 2208884

ಡಾ. ಡಿ. ವೀರೇಂದ್ರ ಹೆಗ್ಗಡೆ – ಕಾರ್ಯಾಧ್ಯಕ್ಷರು

ಉಪನ್ಯಾಸಕರ ಹುದ್ದೆ ನೇಮಕಾತಿ ಪ್ರಕಟಣೆ

ಮಾನ್ಯ ಕಾಲೇಜು ಶಿಕ್ಷಣ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಇವರ ಆದೇಶ ಸಂಖ್ಯೆ ಕಾ.ಶಿ.ಇ/320/.ಖಾ.ಹು.ಭ/17–18/ಧಾ.ವಿ/ನೇವಿ–2, ದಿ.30–08–2022, ಕಾ.ಶಿ.ಇ/320/.ಖಾ.ಹು.ಭ/17–18/ಧಾ.ವಿ/ನೇವಿ–2,ದಿ.08–02–2023, ಕಾಶಿಇ/ಪ್ರಾಕಧಾ/129/ಖಾಹುಭ/ ಜಿಇಎಸ್–1/17–18 ದಿನಾಂಕ 20/02/2023, ಕಾಶಿಇ/ಪ್ರಾಕಧಾ/129/ಖಾಹುಭ/ಜಿಇಎಸ್–01/2017–18 ದಿ.01.02.2018 ಕಾಶಿಇ/ಪ್ರಾಕಧಾ/129/ಖಾಹುಭ/ಜಿಇಎಸ್–01/2017–18 ದಿ.29.10.2022, ಸರ್ಕಾರದ ಪತ್ರ ಸಂ.ಲಾ/181/ಕೆ.ಎಲ್.ಎಮ್./2016, ದಿ.23.10.2018 ಹಾಗೂ ಸರ್ಕಾರದ ಪತ್ರ ಸಂ.ಲಾ/ಕೆ.ಎಲ್.ಎಮ್.6/2022, ದಿ.24.06.2022, ಯುಜಿಸಿ ಅಧಿಸೂಚನೆ ದಿ.18.07.2018ರ ಸಂ.ಎಫ್.1.2/2017/(ಇಸಿ/ಪಿಎಸ್), ಸರ್ಕಾರದ ಆದೇಶ ಸಂ.ಲಾ/ಕೆ.ಎಲ್.ಎಮ್/6/2022, ದಿ.02.02.2023, ಆರ್ಥಿಕ ಇಲಾಖೆ ಟಿಪ್ಪಣಿ ಸಂ.ಆಇ/267/ವೆಚ್ಚ–10/2022(ಇ), ದಿ.07.02.2023, ಯುಜಿಸಿ ಅಧಿಸೂಚನೆ ಸಂ.:ಎಫ್.1–2/2017 (ಇಸಿ/ಪಿಎಸ್), ದಿ:18.07.2018, ಸರ್ಕಾರದ ಆದೇಶ ಸಂಖ್ಯೆ : ಇಡಿ/483/ಯುಎನ್‌ಇ/2017 ದಿನಾಂಕ: 16.03.2019, ರನ್ವಯ ಅನುದಾನಿತ ಜೆ.ಎಸ್.ಎಸ್. ಸಕ್ರಿ ಕಾನೂನು ಮಹಾವಿದ್ಯಾಲಯ, ಹೆಗ್ಗೇರಿ, ಹುಬ್ಬಳ್ಳಿಯಲ್ಲಿ ಈ ಕೆಳಗೆ ಕಾಣಿಸಿರುವ ಖಾಲಿ ಇರುವ ಅನುದಾನಿತ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದ ಹಿನ್ನೆಲೆಯಲ್ಲಿ ಅಗತ್ಯ ಪ್ರಮಾಣ ಪತ್ರಗಳ ಪ್ರತಿಗಳೊಂದಿಗೆ ದ್ವಿಪ್ರತಿಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಬೋಧನಾ ವಿಷಯ	ಖಾಲಿ ಹುದ್ದೆಗಳ ಸಂಖ್ಯೆ	ಮೀಸಲಾತಿ
1	ಕಾನೂನು	03	ಪ.ಜಾ–1, ಪ.ಪಂ.–1, ಸಾ.ಅ.–(ಮ)–1,

ವಿದ್ಯಾರ್ಹತೆ: ಅಭ್ಯರ್ಥಿಗಳು ಎಲ್.ಎಲ್.ಎಮ್. ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು. (ಪ.ಜಾ, ಪ.ಪಂ. ಅಭ್ಯರ್ಥಿಗಳಿಗೆ ಶೇ.50% ಅಂಕಗಳು) ಮತ್ತು ಎನ್.ಇ.ಟಿ/ಎಸ್.ಎಲ್.ಇ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸು ವರ್ಕಗಳೊಂದಿಗೆ ಕಾನೂನು ವಿಷಯದಲ್ಲಿ ಪಿ.ಎಚ್.ಡಿ ಪದವಿ ಪಡೆದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ/ಎಸ್.ಎಲ್.ಇ.ಟಿ. ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. **ಒಂದು ವೇಳೆ ದಿ.11.07.2009ರ ಪೂರ್ವದಲ್ಲಿ ಕಾನೂನು ವಿಷಯದಲ್ಲಿ ಪಿ.ಹೆಚ್.ಡಿ ಪದವಿಯನ್ನು ಪಡೆದಿದ್ದಲ್ಲಿ, ಪಿ.ಹೆಚ್.ಡಿ ಗೆ ನೋಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿ.04/05/2016ರ ಯು.ಜಿ.ಸಿ ಅಧಿಸೂಚನೆಯ ನಿಯಮಾವಳಿಗಳನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತಾರೆ. ಎಂ.ಫಿಲ್. ಪದವಿಯನ್ನು ವಿದ್ಯಾರ್ಹತೆ ಎಂದು ಪರಿಗಣಿಸಲಾಗುವುದಿಲ್ಲ.**

ವಯೋಮಿತಿ: ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯೊಳಗೆ ಇರಬೇಕು, ಪ.ಜಾತಿ ಮತ್ತು ಪ.ಪಂಗಡ ಅಭ್ಯರ್ಥಿಗಳಿಗೆ ಗರಿಷ್ಠ 45 ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳು. ದಿ:13.12.2018 ರ ಆದೇಶ ಸಂಖ್ಯೆ: ಇಡಿ/87/ಯುಪಿಸಿ 2016 ರ ಸರ್ಕಾರದ ಸೇರ್ಪಡೆ ಆದೇಶದನ್ವಯ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಸೇವಾವಧಿ ,ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಗೆ ವಯೋಮಿತಿಯಲ್ಲಿ ವಿನಾಯಿತಿ ಇರುತ್ತದೆ.

* ವೇತನ, ಭತ್ಯೆಗಳು ಹಾಗೂ ಇತರ ನಿಬಂಧನೆಗಳು, ಯು.ಜಿ.ಸಿ, ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನಿಯಮಾವಳಿಗಳನ್ವಯ ಇರುತ್ತದೆ.
* ಅಪೂರ್ಣ ಮಾಹಿತಿಗಳನ್ನೊಳಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸಂದರ್ಶನಕ್ಕೆ ಕರೆ ಬಂದ ಅಭ್ಯರ್ಥಿಗಳು ಸ್ವಂತ ಖರ್ಚಿನಿಂದ ಸಂದರ್ಶನಕ್ಕೆ ಹಾಜರಾಗುವುದು.

ಬಿಳಿ ಹಾಳೆಯಲ್ಲಿ ಬರೆದ ಅರ್ಜಿಯ ಜೊತೆಗೆ ಅವಶ್ಯ ದೃಢೀಕೃತ ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ದ್ವಿ–ಪ್ರತಿಗಳಲ್ಲಿ **ಈ ಪ್ರಕಟಣೆಯ ದಿನಾಂಕದಿಂದ 21 ನೇ ದಿನದ ಸಾಯಂಕಾಲ 5–00 ಘಂಟೆಯೊಳಗಾಗಿ ಮಾನ್ಯ ಕಾರ್ಯದರ್ಶಿಗಳು, ಜನತಾ ಶಿಕ್ಷಣ ಸಮಿತಿ, ವಿದ್ಯಾಗಿರಿ, ಧಾರವಾಡ ಇವರಿಗೆ ಸಲ್ಲಿಸಬೇಕು ಹಾಗೂ ಅರ್ಜಿಯ ಇನ್ನೊಂದು ಪ್ರತಿಯನ್ನು ಅಗತ್ಯ ಪ್ರಮಾಣ ಪತ್ರಗಳ ಪ್ರತಿಗಳೊಂದಿಗೆ ಕಡ್ಡಾಯವಾಗಿ ಮೇಲೆ ಸೂಚಿಸಿದ ಕೊನೆ ದಿನಾಂಕದೊಳಗಾಗಿ ಮಾನ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಿನಿ ವಿಧಾನಸೌಧ, ಧಾರವಾಡ ಇವರಿಗೆ ಸಲ್ಲಿಸಬೇಕು.**

ಸ್ಥಳ : ಧಾರವಾಡ
ದಿನಾಂಕ : 24.02.2023

ಡಾ. ಅಜಿತ ಪ್ರಸಾದ
ಕಾರ್ಯದರ್ಶಿಗಳು,
ಜನತಾ ಶಿಕ್ಷಣ ಸಮಿತಿ, ಧಾರವಾಡ



G20 | Azadi Ka Amrit Mahotsav

ರಾಷ್ಟ್ರೀಯ ಆವಿಷ್ಕಾರ ಪ್ರತಿಷ್ಠಾನ – ಭಾರತ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯುತ್ತ ಅಂಗ

ಪರಿಸರಕ್ಕೆ ಬೇರುಮಟ್ಟದಿಂದ ಅನುಕೂಲಕರವಾದ ಸಹಾಯರಹಿತ ತಾಂತ್ರಿಕ ಆವಿಷ್ಕಾರಗಳು ಮತ್ತು ಪಾರಂಪರಿಕ ಜ್ಞಾನದ 13ನೇ ರಾಷ್ಟ್ರೀಯ ದ್ವೈವಾರ್ಷಿಕ ಸ್ಪರ್ಧೆ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಒಂದು ಅಂಗವಾದ ರಾಷ್ಟ್ರೀಯ ಆವಿಷ್ಕಾರ ಪ್ರತಿಷ್ಠಾನ – ಭಾರತ ಇವರು ತಮ್ಮ 13ನೇ ರಾಷ್ಟ್ರೀಯ ದ್ವೈವಾರ್ಷಿಕ ಸ್ಪರ್ಧೆಗಾಗಿ ಬೇರುಮಟ್ಟದ ಆವಿಷ್ಕಾರಕರಿಗೆ, ಶಾಲಾ ವಿದ್ಯಾರ್ಥಿಗಳಿಗೆ, ಶಾಲೆ ಬಿಟ್ಟವರಿಗೆ, ಉದ್ಯೋಗಸ್ಥ ಜನರಿಗೆ ಅಥವಾ ಸ್ವಯಂ ಉದ್ಯೋಗಿಗಳಿಗೆ, ತಮ್ಮ–ತಮ್ಮ ಮೂಲ ತಾಂತ್ರಿಕ ಆವಿಷ್ಕಾರಗಳನ್ನು, ಸೃಜನಾತ್ಮಕ ಆಲೋಚನೆಗಳನ್ನು ಅಥವಾ ಪಾರಂಪರಿಕ ಜ್ಞಾನವನ್ನು, ಮಾರ್ಚ್ 31, 2023 ರೊಳಗೆ ಸದರಿ ಸ್ಪರ್ಧೆಗೆ ಸಲ್ಲಿಸಬೇಕೆಂದು ಆಹ್ವಾನ ನೀಡಿದ್ದಾರೆ.

ನಿಮ್ಮ ಆವಿಷ್ಕಾರಗಳು ಕೃಷಿ, ಇಂಜಿನಿಯರಿಂಗ್, ಆರೋಗ್ಯ, ಇಂಧನ, ಕುಟುಂಬ ಅಥವಾ ಗೃಹಬಳಕೆ ಸಾಧನ, ಸಾರಿಗೆ, ಜಾನುವಾರು ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ್ದಾದರೂ, ಅದರಿಂದಾಗಿ ಶ್ರಮ ಕಡಿತಗೊಳ್ಳಬೇಕು, ಜೀವನೋಪಾಯ ಹೆಚ್ಚಬೇಕು, ಸಸ್ಯ ತಳಿಗಳ ಹೆಚ್ಚಳವಾಗಬೇಕು ಅಥವಾ ಮನುಷ್ಯ/ಪ್ರಾಣಿ/ಕೃಷಿ ಸಮಸ್ಯೆಗಳಿಗೆ ವನಸ್ಪತಿ ಪರಿಹಾರ ಲಭಿಸುವಂತಿರಬೇಕು ಅಥವಾ ಕಡಿಮೆ ಖರ್ಚಿನಲ್ಲಿ ಸುಸ್ಥಿರ ಹಸಿರು ತಂತ್ರಜ್ಞಾನಗಳು ದೊರೆಯುವಂತಿರಬೇಕು. ಅರ್ಜಿದಾರರು ರೂ. 10,000 ದಿಂದ ರೂ. 7,50,000 ವರೆಗೆ ಬಹುಮಾನ ಗೆಲ್ಲಬಹುದಾಗಿರುತ್ತದೆ ಹಾಗೂ ತಮ್ಮ ಸಹಾಯರಹಿತ, ವೈಜ್ಞಾನಿಕ, ಉತ್ಕೃಷ್ಟ ಮತ್ತು ಪ್ರಯೋಜನಕಾರಿ ಆವಿಷ್ಕಾರಗಳಿಗೆ ಮತ್ತು ಅತ್ಯುತ್ತಮ ಪಾರಂಪರಿಕ ಜ್ಞಾನಕ್ಕೆ ಪೋಷಣಾತ್ಮಕ ಬೆಂಬಲ ದೊರೆಯುತ್ತದೆ.

ನಿಮ್ಮ ಶೈಕ್ಷಣಿಕ ಹಾಗೂ ವೃತ್ತಿಪರ ವಿವರಗಳೊಂದಿಗೆ ಪ್ರವೇಶ ಅರ್ಜಿಗಳನ್ನು ಕೆಳಗಿನ ವಿಳಾಸಕ್ಕೆ ಇಮೇಲ್ ಅಥವಾ ಅಂಚೆ ಮುಖಾಂತರ ಸಲ್ಲಿಸಬಹುದು:

ರಾಷ್ಟ್ರೀಯ ಆವಿಷ್ಕಾರ ಪ್ರತಿಷ್ಠಾನ – ಭಾರತ
ಅಮರಾಪುರ, ಗಾಂಧಿನಗರ–ಮಹೂಡಿ ರೋಡ್, ಗಾಂಧಿನಗರ, ಗುಜರಾತ್ 382650
ಫೋನ್: 02764–261134/35/36/37/38 ಇ–ಮೇಲ್: campaign@nifindia.org

ಸೂಚನೆ: ವೃತ್ತಿಪರ ಹಿನ್ನಲೆಯುಳ್ಳ/ಅನುಭವವುಳ್ಳ ಜನರು ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ತೊಡಗಿಕೊಂಡಿರುವ ವಿದ್ಯಾರ್ಥಿಗಳು ಯಾವುದೇ ಬೆಂಬಲ/ಗುರುತಿಸುವಿಕೆ ಅರ್ಹರಾಗಿರುವುದಿಲ್ಲ. ವಿವರವಾದ ಅರ್ಹತಾ ಮಾನದಂಡ ಮತ್ತು ಸ್ಪರ್ಧೆಯ ಮಾರ್ಗಸೂಚಿಗಳಿಗಾಗಿ, ದಯವಿಟ್ಟು www.nif.org.in ವೆಬ್‌ಸೈಟ್‌ಗೆ ಭೇಟಿ ಕೊಡಿ.

CBC 36118/12/0007/2223

ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ನಡೆದ ಘಟನೆ • ಆರೋಪಿಯನ್ನು ಬಂಧಿಸಿದ ಪೊಲೀಸರು

₹ 1 ಲಕ್ಷ ವಾಪಸ್ ಕೇಳಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಎ. ದಿನೇಶ್‌ಕುಮಾರ್ (46) ಎಂಬುವವರನ್ನು ಮಾರಕಾಸ್ತ್ರದಿಂದ ಕೊಚ್ಚಿ ಕೊಲೆ ಮಾಡಲಾಗಿದ್ದು, ಆರೋಪಿ ಕೆ. ಅರುಣ್ (33) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ವೀರಭದ್ರೇಶ್ವರ ಬಡಾವಣೆ ಮಂಗಮ್ಮನಹಳ್ಳಿಯ ದಿನೇಶ್ ಕುಮಾರ್, ಕಾರ್ಪೆಂಟರ್ ಆಗಿದ್ದರು. ಮನೆ ಸಮೀಪದ ದೊಡ್ಡ ಬಸ್ತಿ ಬಳಿ ದಿನೇಶ್ ಅವರನ್ನು ಕೊಲೆ ಮಾಡಲಾಗಿತ್ತು. ಪ್ರಕರಣ ದಾಖಲಾದ ಕೆಲವೇ ಗಂಟೆಗಳಲ್ಲಿ ಆರೋಪಿ ಅರುಣ್‌ನನ್ನು ಬಂಧಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

'ಬಾಪೂಜಿನಗರ ಚೋಳಪ್ಪ ಬಡಾವಣೆ ನಿವಾಸಿ ಅರುಣ್, ದಿನೇಶ್ ಬಳಿ ₹ 1 ಲಕ್ಷ ಸಾಲ ಪಡೆದಿದ್ದ. ಬಡ್ಡಿ ಸಮೇತ ಸಾಲ ವಾಪಸು ನೀಡುವಂತೆ ದಿನೇಶ್ ಪಟ್ಟು ಹಿಡಿದಿದ್ದರು. ತನ್ನ ಬಳಿ ಹಣವಿಲ್ಲವೆಂದು ಹೇಳಿ ಆರೋಪಿ ದಿನ ಕಳೆಯುತ್ತಿದ್ದ' ಎಂದು ಡಿಸಿಪಿ ಹೇಳಿದರು.

'ಹಣದ ವಿಚಾರವಾಗಿ ಇಬ್ಬರ ನಡುವೆ ಇತ್ತೀಚೆಗೆ ಗಲಾಟೆ ಆಗಿತ್ತು. ಪತ್ನಿಯನ್ನು ಬೇರೊಬ್ಬರ ಜೊತೆ ಮಲಗಿಸಿ ಹಣ ತಂದುಕೊಡುವಂತೆ ದಿನೇಶ್ ಹೀಯಾಳಿಸಿ ಮಾತನಾಡಿದ್ದ. ಕೋಪಗೊಂಡಿದ್ದ ಅರುಣ್, ಕೊಲೆ ಮಾಡಲು ಸಂಚು ರೂಪಿಸಿದ್ದ' ಎಂದರು.

ಹಣ ನೀಡುವುದಾಗಿ ಕರೆಸಿ ಕೊಲೆ: 'ಕೆಲಸ ಮುಗಿಸಿ ಬುಧವಾರ ರಾತ್ರಿ ದಿನೇಶ್ ಮನೆಗೆ ಬಂದಿದ್ದರು. ಅವರಿಗೆ ಕರೆ ಮಾಡಿದ್ದ ಆರೋಪಿ, ಹಣ ನೀಡುವುದಾಗಿ ಹೇಳಿ ದೊಡ್ಡ ಬಸ್ತಿ ಬಳಿ ಕರೆಸಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಪುನಃ ಸಾಲದ ವಿಚಾರವಾಗಿ ಜಗಳ ತೆಗೆದಿದ್ದ ಆರೋಪಿ ಅರುಣ್, ದಿನೇಶ್ ಮೇಲೆ ಹಲ್ಲೆ ಮಾಡಿದ್ದ. ಮಾರಕಾಸ್ತ್ರದಿಂದ ಕೊಚ್ಚಿ ಕೊಂದಿದ್ದ. ಸಮೀಪದಲ್ಲೇ ಮಾರಕಾಸ್ತ್ರ ಎಸೆದು ಸ್ಥಳದಿಂದ ಪರಾರಿಯಾಗಿದ್ದ. ಕೊಲೆ ಬಗ್ಗೆ ದಿನೇಶ್ ಪತ್ನಿ ಲಕ್ಷ್ಮಿ ದೂರು ನೀಡಿದ್ದರು. ತನಿಖೆ ಕೈಗೊಂಡಿದ್ದ ವಿಶೇಷ ತಂಡ ಆರೋಪಿಯನ್ನು ಬಂಧಿಸಿದೆ' ಎಂದರು.

ಮಸಾಜ್ ಪಾರ್ಲರ್ ಯುವತಿ ಮೇಲೆ ಅತ್ಯಾಚಾರ

ಬೆಂಗಳೂರು: ಮಸಾಜ್ ಪಾರ್ಲರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಅತ್ಯಾಚಾರ ನಡೆದಿದ್ದು, ಈ ಸಂಬಂಧ ಆರೋಪಿ ರವೀಂದ್ರ ಶೆಟ್ಟಿ (42) ಎಂಬುವರನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಯಾದ 21 ವರ್ಷದ ಯುವತಿ ದೂರು ನೀಡಿದ್ದಾರೆ. ಆರೋಪಿ ರವೀಂದ್ರ ಶೆಟ್ಟಿಯನ್ನು ಬಂಧಿಸಲಾಗಿದೆ. ಮಸಾಜ್ ಪಾರ್ಲರ್ ಮಾಲೀಕರಾದ ಮಹಿಳೆಯನ್ನೂ ಆರೋಪಿಯನ್ನಾಗಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ರವೀಂದ್ರ, ಪಾರ್ಲರ್ ಮಾಲೀಕರಿಗೆ ಪರಿಚಯ. ಆಗಾಗ, ಪಾರ್ಲರ್‌ಗೆ ಬಂದು ಹೋಗುತ್ತಿದ್ದ. ಇದೇ ಸಂದರ್ಭದಲ್ಲಿ ಯುವತಿಯನ್ನು ಪರಿಚಯ ಮಾಡಿಕೊಂಡಿದ್ದ. ಫೆ. 14ರಂದು ಪಾರ್ಲರ್‌ನಲ್ಲಿ ಯುವತಿ ಮೇಲೆ ಆರೋಪಿ ಅತ್ಯಾಚಾರ ಎಸಗಿದ್ದ. ಕೃತ್ಯದ ಬಗ್ಗೆ ಕುಟುಂಬದವರಿಗೆ ಮಾಹಿತಿ ನೀಡಿದ್ದ ಯುವತಿ, ಠಾಣೆಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾದ ಮರುದಿನವೇ ಆರೋಪಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಕಳ್ಳತನವೇ ವೃತ್ತಿ: ಇಬ್ಬರು ಆರೋಪಿಗಳ ಸೆರೆ

ಬೆಂಗಳೂರು: ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ನಗರದ ಪಿ. ಶರತ್‌ಕುಮಾರ್ (30) ಹಾಗೂ ಆಂಧ್ರಪ್ರದೇಶದ ವಿನೋದ್ ಕುಮಾರ್ (27) ಬಂಧಿತರು. ಇವರಿಂದ ₹ 6.23 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ₹ 1.20 ಲಕ್ಷ ಮೌಲ್ಯದ ಪಲ್ಸರ್ ಎನ್‌ಎಸ್ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿರುವ ಮನೆಯೊಂದರಲ್ಲಿ 2022ರ ಆಗಸ್ಟ್ 26ರಂದು ಕಳ್ಳತನ ನಡೆದಿತ್ತು. ಈ ಸಂಬಂಧ ದಾಖಲಾದ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಬ್ಬರು ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದರು. ಕರ್ನಾಟಕ ಹಾಗೂ ಆಂಧ್ರಪ್ರದೇಶದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದರು. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು' ಎಂದರು.

ಡ್ರ್ಯಾಗರ್‌ನಿಂದ ಇರಿದು ಸುಲಿಗೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸುಂಕದಕಟ್ಟೆಯ ವಿಶ್ವೇಶ್ವರನಗರದಲ್ಲಿ ವ್ಯಕ್ತಿಯೊಬ್ಬರನ್ನು ಅಡ್ಡಗಟ್ಟಿ ಡ್ರ್ಯಾಗರ್‌ನಿಂದ ಇರಿದು ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕುಣಿಗಲ್ ತಾಲ್ಲೂಕಿನ ಎಚ್.ಎನ್. ಕೃಷ್ಣ (26) ಹಾಗೂ ಆರ್. ನಿರಂಜನ್ (25) ಬಂಧಿತರು. ಕೆಲ ವರ್ಷಗಳ ಹಿಂದೆ ಇವರಿಬ್ಬರೂ ನಗರಕ್ಕೆ ಬಂದು ನೆಲೆಸಿದ್ದರು. ಇವರಿಂದ ₹ 1.50 ಲಕ್ಷ ಮೌಲ್ಯದ 3 ದ್ವಿಚಕ್ರ ವಾಹನ, ಡ್ರ್ಯಾಗರ್ ಹಾಗೂ ₹ 200 ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಶಿವಣ್ಣ ಅವರು ಫೆ. 12ರಂದು ರಾತ್ರಿ 11.30ರ ಸುಮಾರಿಗೆ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಅವರನ್ನು ಹಿಂಬಾಲಿಸಿದ್ದ ಆರೋಪಿಗಳು, ಡ್ರ್ಯಾಗರ್‌ನಿಂದ ಇರಿದು ₹ 1,000 ಕಿತ್ತುಕೊಂಡು ಪರಾರಿಯಾಗಿದ್ದರು. ಗಾಯಗೊಂಡಿದ್ದ ಶಿವಣ್ಣ, ಚಿಕಿತ್ಸೆ ಪಡೆದುಕೊಂಡು ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

'ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಕದ್ದಿದ್ದ ಆರೋಪಿಗಳು, ಅದರಲ್ಲೇ ಸುತ್ತಾಡಿ ಸುಲಿಗೆ ಮಾಡುತ್ತಿದ್ದರು. ಮತ್ತಷ್ಟು ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

ಪ್ರತಿಭಟನೆ: ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಂಚಣಿ ಸೌಲಭ್ಯ ಕಲ್ಪಿಸಬೇಕು' ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಇಬ್ಬರು ನಿವೃತ್ತ ಶಿಕ್ಷಕರು ಆತ್ಮಹತ್ಯೆಗೆ ಯತ್ನಿಸಿದ್ದು, ಅಸ್ವಸ್ಥಗೊಂಡಿರುವ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ನೇತೃತ್ವದಲ್ಲಿ 140 ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ.

ಪ್ರತಿಭಟನೆ ಸ್ಥಳದಲ್ಲಿ ಗುರುವಾರ ಹಾಜರಿದ್ದ ನಿವೃತ್ತ ಶಿಕ್ಷಕರಾದ ಸಿದ್ದಯ್ಯ ಹಿರೇಮಠ ಹಾಗೂ ವೆಂಕಟರಾಜು, 'ಸರ್ಕಾರ ನಮ್ಮ ಬೇಡಿಕೆ ಈಡೇರಿಸುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದರು. ಅವರಿಬ್ಬರನ್ನು ರಕ್ಷಿಸಿರುವ ಪೊಲೀಸರು, ಆಸ್ಪತ್ರೆಗೆ ದಾಖಲಿಸಿದ್ದಾರೆ. ಇಬ್ಬರ ಆರೋಗ್ಯ ಸ್ಥಿತಿ ಸುಧಾರಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

EXCLUSIVELY FOR Retired, Sr.Citizens, VRS, Pensioner's, Entrepreneurs, Homemaker's. Opportunity to Earn Income upto 1.5 Lac p.m. Contact:- 8277943838/ 7795797983

Teachers/ Professors

WANTED IMMEDIATELY Helpers for loading and unloading nearBagaluru. Contact: 9448488536/ 9844083318

ಪಾಂಚಜನ್ಯ ವಿದ್ಯಾಪೀಠ ವೆಲ್ ಫೇರ್ ಟ್ರಸ್ಟ್
1ನೇ 'ಎನ್' ಬ್ಲಾಕ್ ರಾಜಾಜಿನಗರ, ಬೆಂಗಳೂರು–560 010
ಆಡಳಿತ ಕಛೇರಿ ಪಿವಿಪಿ ಕಲ್ಯಾಣ ದತ್ತಿ
ಡಾ: ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ಮಲ್ಲತ್ತಹಳ್ಳಿ,
ಬೆಂಗಳೂರು–560 056 ದೂರವಾಣಿ ಸಂಖ್ಯೆ: 9741940511

ಪಿ.ವಿ.ಪಿ. ಮಹಿಳಾ ಪದವಿಪೂರ್ವ ಕಾಲೇಜು, 1ನೇ 'ಎನ್' ಬ್ಲಾಕ್ ರಾಜಾಜಿನಗರ, ಬೆಂಗಳೂರು–560 010, ಪಿ.ವಿ.ಪಿ. ಪದವಿಪೂರ್ವ ಕಾಲೇಜು, ಮಲ್ಲತ್ತಹಳ್ಳಿ, ಬೆಂಗಳೂರು–560 056 ಈ ಎರಡು ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಮೀಸಲಾತಿ	ವೇತನ
1	ದೈಹಿಕ ಶಿಕ್ಷಣ ಉಪನ್ಯಾಸಕರು	02	ಎಂ.ಪಿ. ಇ.ಡಿ	ಪ.ಜಾತಿ (ಏಕ)–01 1) ಪಿ.ವಿ.ಪಿ.ಪದವಿಪೂರ್ವ ಕಾಲೇಜು, ರಾಜಾಜಿನಗರ; ಸಾಮಾನ್ಯ ವರ್ಗ –01 2) ಪಿ.ವಿ.ಪಿ.ಪದವಿಪೂರ್ವ ಕಾಲೇಜು, ಮಲ್ಲತ್ತಹಳ್ಳಿ	ಪದವಿಪೂರ್ವ ಶಿಕ್ಷಣ ಇಲಾಖೆಯ ನಿಯಮಾನುಸಾರ

ಈ ಮೇಲಿನ ಹುದ್ದೆಗಳನ್ನು ಪತ್ರಿಕೆ ಪ್ರಕಟಣೆಗೊಂಡು 21 ದಿನಗಳ ಒಳಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಒಂದು ಜೆರಾಕ್ಸ್ ಪ್ರತಿಯನ್ನು ಸಂಸ್ಥೆಯ ಕಾರ್ಯದರ್ಶಿಯವರಿಗೆ ಸಲ್ಲಿಸಬೇಕು. ಹಾಗೂ ಇನ್ನೊಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬಸವನಗುಡಿ, ಬಿ.ಪಿ. ವಾಡಿಯಾ ರಸ್ತೆ, ಬೆಂಗಳೂರು ದಕ್ಷಿಣ ಜಿಲ್ಲೆ ಹಾಗೂ ಮಾನ್ಯ ಉಪ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡ ರಸ್ತೆ, ಬೆಂಗಳೂರು ಉತ್ತರ ಜಿಲ್ಲೆ ಇವರಿಗೆ ಸಲ್ಲಿಸಬೇಕು. ಸೇವಾ ಅನುಭವ ಹೊಂದಿರುವವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಸ್ಥಳ: ಬೆಂಗಳೂರು
ದಿನಾಂಕ 24–02–2023
ಸಹಿ/–
ಕಾರ್ಯದರ್ಶಿಗಳು
ಪಾಂಚಜನ್ಯ ವಿದ್ಯಾಪೀಠ ವೆಲ್ ಫೇರ್ ಟ್ರಸ್ಟ್

Engg/ Production Technical

STAR INFRATECH Civil leading company required a post for AGM & Senior Engineer (BE/ M.Tech) with good knowledge in Government Civil works like Layout, Roads & Bridges with 15- 20 year's experience in handling major projects of Rs. 1000 Cr & projects will be throughout Karnataka. Visit Interview on 01.03.2023. Contact no: 080- 23412304/ 05. Submit Resume to: hr.starinfratech09@gmail.com

General

WANTED EXPERIENCED Receptionist & House Keeping Supervisor for the Hospital Contact:Chaitanya Hospital No.80/11, P&T Colony R.T.Nagar, Bangalore Call:9900520357

REAL ESTATE BUYING

General

General

WE DO DC Conversions, Change of Land use,Phodi Works, Boundaries Survey, Approvals, Property Buying and Selling. Property related all services in and around Bangalore. Call VERNA DEVELOPERS, MG-Road, Bangalore. 9916310226/ 9353128035. www.vernadevelopers.com

Sites

Kumaraswamy Layout

WANTED SITE:60*40 or 30*40 in Kumaraswamy Layout or ISRO Layout immediately. No Brokers Please. 9620245557.

REAL ESTATE SELLING

Flat

Mysore Road

SALE: FURNISHED 3BR Sunworth Provident Purvankara Apartment, Behind Rajarajeshwari Medical College, Near Metro Station, Mysore Road. 59 Lakhs. Call: 9900001954/ 9900054462

Residential/ Commercial

Sadashiva Nagar

PREMIUM LOCATION, SOUTH FACING VACANT PLOT 60x45, OPPOSITE PARK, ACROSS SADASHIVANAGAR SWIMMING POOL, CONTACT OWNER 9844018823

Sites

Tumkur

CORNER 1.1/2 Site for-Sale at Antharasanahally, Tumkur adjoining National Highway Bypass/ Industrial Area, suitable for investment. Contact: 9591535167.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

RENTAL PROPERTIES

Accommodation Available

Flats

J.P.NAGAR 5TH Phase 2-BHK East Facing Apartment Semi-furnished Rent 22K. Deposit 2Lacs Call:9845656673

PUBLIC NOTICE

TENDER NOTIFICATION
Quotations are invited from the experienced CONTRACTORS for the following contract works in Kendriya Vihar Apartment Complex, Yelahanka, Bangalore.
1. Electrical & STP Operations
2. House Keeping & Arboriculture
3. Security Services
The tender will be on sale from 17.02.2023 to 27.02.2023.
For more details contact KV office.
Mob. No: 76766 00737

PERSONAL

Change of Name

I, PRAKASHA. V residing at No. 39, Kalparuksha, KK Pura Main Road, Annapoorneshwari Nagar, Lakshmipura, Kaggalipura, Bangalore- 560082, have changed my name to PRAKASH. V vide affidavit dated 22.02.2023, before notary Mohammed Hussain K, Bangalore.

CONNECT

avishya.com
NAMASKARA BENGALURU!
Exhibition of Finely Curated Heritage Handlooms
24th 25th FEBRUARY 10am-8pm
RAINTREE Sankey Road Opp. Windsor Manor Bangalore
Sarees • Salwars • Kurtas • Apparel
Kanjivarams • Banarasis • Gadwals
Maheshwaris • Bengal Weaves
Chanderis • Bandhanis • Jamdanis
For details Call 98405 60853.
Shop Online at avishya.com

CHANGE OF NAME
I, **LILLY A.P.** Wife of Late A.P. John **Reg. No. 54823-JC Rank Nb/Sub,** declare that my name is misspelt in the Army Records as only **Lilly.** My correct name is **LILLY A.P.** and my D.O.B is wrongly mentioned as 14th October 1940 instead of 1st August 1938, vide affidavit dated 22.02.2023 before Notary Hairsha G., Bangalore.

CHANGE OF NAME
I, **NIRMALA NAMBOODRI** W/o. Sarathy Seshadri R/a #A1, First Floor, Arrcons Swadhistana, 6th D Cross, Kaggadasapura, C.V. Raman Nagar, Bengaluru- 560093 Declare that **NEELAMANA NIRMALA NAMBOODRI** and **NIRMALA NAMBOODRI,** above both names are one and the same person, i.e. my self only. Henceforth, my name is **NIRMALA NAMBOODRI** only. Vide affidavit dated: 22.02.2023 Sworn before Notary Sreedharan Nair P.N. Bangalore.

I, SHIVANNA R/o. No. 1102, 2nd Cross, NGO's Colony, Kamalanagar, Bengaluru-79, have changed my minor daughter's name from YUKTHA SHREE K.S. to BRUNDA K.S. vide affidavit dated 23.02.2023, before notary Ravi, Bengaluru

I, NO. 14425463K, GNR (DMT), Basavanna R/o. No. 27/2C, 4th Cross, H.Gollahalli, Chudenapura Post, Bengaluru-60, have changed my minor son's name from YASHASH to YASHASH. B vide affidavit dated 21.02.2023 before notary N. Tulasi Bengaluru.

NAME CHANGE
I **Adithya Narayanan Venkatesh** S/o R.Venkatesh and Vidhya Venkatesh Date of Birth: 26.04.1999, residing at Door No.312 Ranka Heights Apartments, 4th Main, 7th Cross, Near Shanthi Sagar Hotel, Domlur, Bangalore - 560071 hence forth be known as **Adithya Venkatesh.**

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

DH DECCAN HERALD | ಪ್ರಜಾವಾಣಿ
REAL ESTATE
BOOK YOUR REAL ESTATE AD IN DECCAN HERALD ALL KARNATAKA PRAJAVANI ALL KARNATAKA
@750/-* Per Sqcm
Single Column
conditions apply*
For More Details Contact:
9731810277 | 9901641752
9845114560 | 9886213331
080- 45557163 | 45557164

ಇಸ್ರೋ | ISRO
ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (LEOS) ಪೀಣ್ಯ, ಬೆಂಗಳೂರು-560058
ಲಿಯೋಸ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು (LCMG)
[ಫೋನ್: (080) - 22685088, 5193, 5093, 5086- Fax- (080) - 28392310]

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ (ಎನ್‌ಐಇಟಿ)
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರಮ ಸಂಖ್ಯೆ	ಕೆಲಸದ ಹೆಸರು;. ಎನ್‌ಐಇಟಿ ಸಂಖ್ಯೆ ಮತ್ತು ದಿನಾಂಕ	ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ ರೂ.	ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ	ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು: ಪ್ರಾರಂಭದ ದಿನಾಂಕ	ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು: ಮುಕ್ತಾಯದ ದಿನಾಂಕ
1.	ಲಿಯೋಸ್, ಆರ್ಯಭಟ, ಇಸ್ರಾಡ್ ಕಟ್ಟಡ ಮತ್ತು ಅತಿಥಿ ಗೃಹ, ಪೀಣ್ಯ, ಬೆಂಗಳೂರು-560058 ರಲ್ಲಿ ಆಂತರಿಕ ಮತ್ತು ಬಾಹ್ಯ ಪಿಎಚ್ ವ್ಯವಸ್ಥೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ; ಒಳಚರಂಡಿ ಸಂಸ್ಕರಣಾ ಘಟಕ; ಮರಗೆಲಸ ಮತ್ತು ಸಿ&ಎಂಜಿ ಕೆಲಸ, ಎನ್‌ಐಇಟಿ ಸಂಖ್ಯೆ: ಸಿ&ಎಂಜಿ/ಲಿಯೋಸ್/2023-24/ಎಲ್‌ಎಮ್-22 ದಿನಾಂಕ: 22.02.2023	ರೂ. 132.30 ಲಕ್ಷ ಇಎಂಡಿ ರೂ: 2,64,609/-	12 ತಿಂಗಳು	24.02.2023	06.03.2023

ಆಸಕ್ತ ಟೆಂಡರುದಾರರು ಇ-ಟೆಂಡರ್(ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಬಹುದು. -ಸಹಿ/-
ಸಮೂಹ ನಿರ್ದೇಶಕ [ನಿರ್ಮಾಣ ಮತ್ತು ನಿರ್ವಹಣಾ ಸಮೂಹ]
ಯುಆರ್ ಎಸ್ ಸಿ, ಬೆಂಗಳೂರು

KENDRIYA VIDYALAYA
NAL CAMPUS BANGALORE – 560017
ADVERTISEMENT FOR REGISTRATION OF FIRMS / AGENCIES 2023-24

Applications are invited from eligible firms/agencies for / Supply of Stationary / Printing of Question papers & study materials / Conservancy materials / Sports Materials & Uniform / Track Suit / Catering / Shamiyana & other accessories / Inverter / Battery for UPS etc., Annual maintenance of Computer & Peripherals / LCD Projector / Xerox Machine / Water Purifier / EPABX / Copy Printer / at the office of Kendriya Vidyalaya NAL Campus, Bangalore. Interested parties / firms / agencies may apply in the format for registration before 15.03.2023, which is available in our website: www.kvnal.edu.in.

Firm / Agencies are required to submit the profile of the company and proof of registration of Income Tax / GST / GEM Registration / Pan Card Copy / Form-16 along with each form of registration.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ
ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–01
PH: 080-22867369 / FAX: 080 -22863962 e-mail: cgmksamb@gmail.com
ಸಂಖ್ಯೆ: APMC/2022-23/AUCTION185 ದಿನಾಂಕ : 23.02.2023

ಇ–ಟೆಂಡರ್ – ಇ–ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ₹200.00 ಕೋಟಿಗಳನ್ನು (ರೂಪಾಯಿ ಎರಡು ನೂರು ಕೋಟಿಗಳು ಮಾತ್ರ) **e-procurement** ಮೂಲಕ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ (**RRBs**) ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು **www.eproc.karnataka.gov.in** ವೆಬ್‌ಸೈಟ್‌ನ ಇಂಡೆಂಟ್ ಸಂಖ್ಯೆ: **APMC/2022-23/AUCTION185** ರಲ್ಲಿ ದಿ: **07.02.2023** ರೊಳಗೆ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು
ಕ.ರಾ.ಕೃ.ಮಾ.ಮಂ., ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/4916/ಶಿರಡಿಸಾಯಿ/2022–23

ಸಾರ್ವಜನಿಕ ಆಸ್ಪತ್ರೆ & ತಾಯಿ ಮತ್ತು ಮಕ್ಕಳ ಆಸ್ಪತ್ರೆ
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಟಿ.ಬಿ. ಸರ್ಕಲ್ ಹತ್ತಿರ,
ಚಿಕ್ಕಬಳ್ಳಾಪುರ ರಸ್ತೆ, ದೂ.: 27622141, ಇಮೇಲ್: amodbpura02@gmail.com
ಸಂ.: ಸಾ.ಅ.ಡಿಬಿಪಿ/ಹೊ.ಗು./ಟೆಂಡರ್/01/2022–23 ದಿನಾಂಕ : 22–02–2023

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿಗೆ 2023–24 ನೇ ಸಾಲಿಗೆ **ಗ್ರೂಪ್ "ಡಿ" – 25 ಹುದ್ದೆಗಳು, ನಾನ್ ಕ್ಲಿನಿಕಲ್ / ಸ್ಕ್ಯಾವೆಂಜರ್ – 09 ಹುದ್ದೆಗಳು ಮತ್ತು ಸ್ವೀಪರ್ / ಗಾರ್ಡ್ – 04 ಹುದ್ದೆಗಳು ಮತ್ತು 01 ಹುದ್ದೆ ಡಾಟಾ ಎಂಟ್ರಿ ಆಪರೇಟರ್.** ಈ ಹುದ್ದೆಗಳನ್ನು ಮತ್ತು ಸ್ವಚ್ಛತಾ ಸಾಮಗ್ರಿಗಳು ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯ ಸೇವೆಯನ್ನು ಪಡೆಯುವ ಸಂಬಂಧ ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ–ಲಕೋಟೆ ಪದ್ಧತಿ ಅನ್ವಯ ಕರ್ನಾಟಕ ಪಾರದರ್ಶಕ ನಿಯಮ 1999–2000 ರಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಅರ್ಹ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ : 22–02–2023 ರ ಬೆಳಿಗ್ಗೆ 11.00 ಗಂಟೆಯಿಂದ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 22–03–2023 ರ ಸಂಜೆ 4.00 ಗಂಟೆಗೆ, ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 24–03–2023 ರ ಬೆಳಿಗ್ಗೆ 11.00 ಗಂಟೆಗೆ ಮತ್ತು ಆರ್ಥಿಕ ಲಕೋಟೆ ತೆರೆಯುವ ದಿನಾಂಕ : 27–03–2023 ರ ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ : **www.eproc.karnataka.gov.in** ರ ಮೂಲಕ ಅಥವಾ ಆಸ್ಪತ್ರೆಯ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆ,
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ..
ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/4901/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಸಂಚಾರ ಶಾಖೆ, ತುಮಕೂರು ವಿಭಾಗ, ತುಮಕೂರು
ಸಂ: ಕರಾಸಾ/ತುವಿ/ಸಂ/ವಾ/ಇ–ಟೆಂ/4195/2022–23 ದಿನಾಂಕ: 22.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತುಮಕೂರು ವಿಭಾಗದ ವ್ಯಾಪ್ತಿಗೆ ಬರುವ **ಗುಬ್ಬಿ ಬಸ್ ನಿಲ್ದಾಣದಲ್ಲಿರುವ ದ್ವಿಚಕ್ರ ವಾಹನ ನಿಲ್ದಾಣ ಸಂಖ್ಯೆ–11ಕ್ಕೆ** ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ "ಇ–ಟೆಂಡರ್" ಪ್ರಕಟಣೆಯನ್ನು ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು **ದಿನಾಂಕ: 02.03.2023ರ 17.00 ಗಂಟೆಯೊಳಗಾಗಿ** ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ತುಮಕೂರು ವಿಭಾಗ, ಮಧುಗಿರಿ ಮುಖ್ಯ ರಸ್ತೆ, ಎ.ಪಿ.ಎಂ.ಸಿ ಮಾರ್ಕೆಟ್ ಹತ್ತಿರ, ಅಂತರಸನ ಹಳ್ಳಿ, ತುಮಕೂರು–572106, ಇಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ: 7760990902 (ವಿಭಾಗೀಯ ಸಂಚಲನಾಧಿಕಾರಿಗಳು).

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ತುಮಕೂರು ವಿಭಾಗ, ತುಮಕೂರು
ವಾಸಾಸಂಇ/ಬೆಂ.ನಗರ/4910/ಆಕಾರ್/2022–23

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024,
ಮೊಬೈಲ್ ನಂ. ಜಿಎಂ: 7353723666, ಎಜಿಎಂ: 8431235867
ಇ–ಮೇಲ್ : ifablimited@gmail.com, Website :-www.ifabindia.org
IFAB

1. IFAB/MD/Admin/Rental Shop No.1/2022-23
2. IFAB/MD/Admin/RWH/2022-23
Date:15.02.2023

ಪುಷ್ಪ ಸ್ಟುಡಿಯೋದಲ್ಲಿರುವ ಅಂಗಡಿ ನಂ.1 ನ್ನು ಬಾಡಿಗೆಗೆ ನೀಡಲು ಮತ್ತು ಮಳೆ ನೀರು ಸಂಗ್ರಹಣಾ ಸ್ಟೀಲ್ ಟ್ಯಾಂಕ್ ನಿರ್ಮಿಸಲು ಟೆಂಡರ್ ಪ್ರಕಟಣೆ ಆಹ್ವಾನಿಸಿರುವ ಬಗ್ಗೆ

ಅಂತರ್ರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ ಬೆಂಗಳೂರು ಸಂಸ್ಥೆಯಲ್ಲಿ ನಿರ್ಮಿಸಿರುವ ಪುಷ್ಪ ಸ್ಟುಡಿಯೋದಲ್ಲಿರುವ ಅಂಗಡಿ ನಂ.1 ನ್ನು ಬಾಡಿಗೆಗೆ ನೀಡಲು, ಆಸಕ್ತಿಯುಳ್ಳ ಮತ್ತು ಪುಷ್ಪೋದ್ಯಮಕ್ಕೆ ಸಂಬಂಧಪಟ್ಟ ವಹಿವಾಟುದಾರರಿಂದ ಮತ್ತು ಮಳೆ ನೀರು ಸಂಗ್ರಹಣಾ ಸ್ಟೀಲ್‌ಟ್ಯಾಂಕ್ ನಿರ್ಮಿಸಲು ಸಂಬಂಧಪಟ್ಟ ಪೂರೈಕೆದಾರರಿಂದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಟೆಂಡರ್‌ಗಳ ವಿವರ ಮತ್ತು ದಾಖಲೆಗಳು ದಿನಾಂಕ: **15.02.2023ರಿಂದ** ಲಭ್ಯವಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15.03.2023 ರ ಸಂಜೆ 5.00 ಗಂಟೆ** ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/4899/ಶಿರಡಿಸಾಯಿ/2022–23

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂ: ಬೆಂಅಪ್ರಾ/ಕಾನಿಅ–ಪಶ್ಚಿಮ/ಕಾಮಗಾರಿ–ಟೆಂ–09/2022–23 ದಿ: 21.02.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ

(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://eproc.karnataka.gov.in ಮೂಲಕ)

ಆಯುಕ್ತರು, ಬೆಂಅಪ್ರಾ, ಬೆಂಗಳೂರು ಇವರ ಪರವಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಬೆಂ.ಅ.ಪ್ರಾ . ಇವರು ಕೆಳಕಂಡ ಕಾಮಗಾರಿಗಾಗಿ ನೋಂದಾಯಿತ 1ನೇ ದರ್ಜೆ ಗುತ್ತಿಗೆದಾರರುಗಳಿಂದ ಅಥವಾ ತತ್ಸಮಾನ ಬೆಂಅಪ್ರಾ/ರಾಹೆ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್ ನಡಿ ನೋಂದಣಿಯಾಗಿರುವ ಗುತ್ತಿಗೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಪದ್ಧತಿ ಮೂಲಕ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು: ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ, 3ನೇ ಬ್ಲಾಕ್‌ನ ಸಿಎ–3ರಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಬಿಡಿಎ ಸಮುದಾಯ ಭವನ ನಿರ್ಮಾಣ.

ಟೆಂಡರಿಗಿಟ್ಟಿರುವ ಅಂದಾಜು ವೆಚ್ಚ: **ರೂ. 799.00 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ).**

ಇಎಂಡಿ: **ರೂ. 7.99 ಲಕ್ಷಗಳು.** (ರೂ.1.00 ಲಕ್ಷವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ವಯ ಮತ್ತು ಉಳಿಕೆ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ರೂಪದಲ್ಲಿ ಸಂದಾಯ ಮಾಡಬೇಕು.)

ಹೆಚ್ಚಿನ ವಿವರಗಳಿಗಾಗಿ **http://eproc.karnataka.gov.in** ಗೆ ಲಾಗ್‌ಆನ್ ಗಿ ಅಥವಾ 080–22371090/22340060 ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಗೆ ಕರೆ ಮಾಡಿ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಶ್ಚಿಮ ವಿಭಾಗ, ಬೆಂಅಪ್ರಾ, ಬೆಂಗಳೂರು
BDA/PRO/TN/43/2022-23

ನಗರದ ಟೌನ್‌ಹಾಲ್‌ನಲ್ಲಿ ಶುಕ್ರವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಂಗಕರ್ಮಿ ಪ್ರಕಾಶ್ ಬೆಳವಾಡಿ ಭಾಗವಹಿಸಿದ್ದರು

ಬಿಜೆಪಿ: ನಗರದಲ್ಲಿ 20ಕ್ಕೂ ಹೆಚ್ಚು ಸ್ಥಾನ ಗೆಲ್ಲಲು ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 20ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲ್ಲಲು ಬಿಜೆಪಿ ವರಿಷ್ಠರು ಗುರಿ ನಿಗದಿ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅನುಪಸ್ಥಿತಿಯಲ್ಲಿ ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಅವರ ಅಧ್ಯಕ್ಷತೆಯಲ್ಲಿ ನಗರದಲ್ಲಿ ಗುರುವಾರ ರಾತ್ರಿ ಸಭೆ ನಡೆಯಿತು. ಅಮಿತ್ ಶಾ ಇಡೀ ದಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬಳಲಿದ್ದರಿಂದ ಸಭೆಗೆ ಹಾಜರಾಗಲಿಲ್ಲ ಎಂದು ಮೂಲಗಳು ಹೇಳಿವೆ.

ಬೆಂಗಳೂರಿನಲ್ಲಿ ಪಕ್ಷಕ್ಕೆ ನೆಲೆ ಇದೆ, ಹಿಂದೆ ಗರಿಷ್ಠ 17 ಸ್ಥಾನಗಳಲ್ಲಿ ಗೆಲುವು ಸಾಧಿಸಲಾಗಿತ್ತು. ಈಗ ಶಕ್ತಿ ಇನ್ನಷ್ಟು ವೃದ್ಧಿಸಿದೆ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಬಹುದಾಗಿದೆ ಎಂದು ಸಹ ಉಸ್ತುವಾರಿ ಮನ್ ಸುಖ್ ಮಾಂಡವೀಯಾ ಹೇಳಿದರು. ಸಭೆಯಲ್ಲಿ ಸಹ ಉಸ್ತುವಾರಿ ಅಣ್ಣಾಮಲೈ ಇದ್ದರು. ನಗರದ ಬಿಜೆಪಿ ಸಚಿವರು, ಶಾಸಕರು, ಪ್ರಮುಖ ನಾಯಕರು ಭಾಗವಹಿಸಿದ್ದರು.

ಅಧಿಕಾರಿ, ಸಿಬ್ಬಂದಿ ಮೇಲೆ ಕಲ್ಲು ತೂರಾಟ– ವಾಹನಗಳಿಗೆ ಹಾನಿ

ಉಪ್ಪಿನಂಗಡಿ: ಕಡಬ ತಾಲ್ಲೂಕಿನ ರೆಂಜಿಲಾಡಿ ಗ್ರಾಮದಲ್ಲಿ ಕಾಡಾನೆಯನ್ನು ಸೆರೆ ಹಿಡಿದು ಮರಳುತ್ತಿದ್ದ ಅರಣ್ಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆ ಕೊಂಬಾರು, ಮಂಡೇಕರದ ಬಳಿ ಸಾರ್ವಜನಿಕರು ಗುರುವಾರ ರಾತ್ರಿ ಹಲ್ಲೆ ನಡೆಸಿದರು. ಇಲಾಖಾ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದರು.

ಸೆರೆ ಹಿಡಿದ ಕಾಡಾನೆಯನ್ನು ಸಾಕಾನೆಗಳ ನೆರವಿನಿಂದ ರಸ್ತೆ ಬದಿಗೆ ತಂದಿದ್ದರು. ಈ ವೇಳೆ ಅಲ್ಲಿ ಸೇರಿದ್ದ ಸಾರ್ವಜನಿಕರು 'ಆನೆಗಳನ್ನು ಹಿಡಿಯುವ ಕಾರ್ಯಾಚರಣೆ ಪೂರ್ಣಗೊಳಿಸಿಲ್ಲ. ಕೇವಲ ಒಂದು ಆನೆಯನ್ನು ಮಾತ್ರ ಹಿಡಿದಿದ್ದೀರಿ' ಎಂದು ಆರೋಪಿಸಿ ಅಧಿಕಾರಿಗಳ ಮೇಲೆ ಮುಗಿಬಿದ್ದರು.

'ಕಾರ್ಯಾಚರಣೆಯನ್ನು ನಿಲ್ಲಿಸಿಲ್ಲ. ನಾಳೆ ಮತ್ತೆ ಬರುತ್ತೇವೆ' ಎಂದು ಅಧಿಕಾರಿಗಳು ಹೇಳಿದರೂ ಕೇಳದೇ ಸಾರ್ವಜನಿಕರು ಕಲ್ಲು ತೂರಾಟ ಮುಂದುವರಿಸಿದರು. ಇದರಿಂದ ಎರಡು ಪೊಲೀಸ್ ಇಲಾಖೆಯ ಜೀಪ್, ಅರಣ್ಯ ಇಲಾಖೆಯ ಒಂದು ಜೀಪ್, ವಲಯ ಅರಣ್ಯಾಧಿಕಾರಿಯೊಬ್ಬರ ಬ್ರೀಝಾ ಕಾರುಗಳಿಗೆ ಹಾನಿ ಉಂಟಾಗಿದೆ. ಡಿವೈಎಸ್ಪಿ ಒಬ್ಬರ ಮೇಲೂ ಕಲ್ಲು ತೂರಲಾಗಿದೆ' ಎಂದು ಗೊತ್ತಾಗಿದೆ.

ರೆಂಜಿಲಾಡಿ ಗ್ರಾಮದ ನೈಲಾದಲ್ಲಿ ಸ್ಥಳೀಯ ನಿವಾಸಿಗಳಾದ ರಂಜಿತಾ ರೈ ಹಾಗೂ ರಮೇಶ್ ರೈ ಆನೆ ದಾಳಿಯಿಂದ ಸೋಮವಾರ ಅಸುನೀಗಿದ್ದರು. ಇದಾಗಿ ಮೂರು ದಿನಗಳಲ್ಲಿ ಇದೇ ಪರಿಸರದಲ್ಲಿ ಕಾಡಾನೆಯೊಂದನ್ನು ಅರಣ್ಯ ಇಲಾಖೆ ಗುರುವಾರ ಸೆರೆ ಹಿಡಿದಿತ್ತು.

ಇ–ಟೆಂಡರ್ ಇಲ್ಲದೇ ಹಂಪಿ ಕನ್ನಡ ವಿ.ವಿ.ಯಲ್ಲಿ ₹ 50.86 ಕೋಟಿ ಕಾಮಗಾರಿ

ವಿಶ್ರಾಂತ ಕುಲಪತಿ ಬಂಧನಕ್ಕೆ ಕಾನೂನು ತಜ್ಞರ ಸಲಹೆ

ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ₹50.86 ಕೋಟಿ ಮೊತ್ತದ ಕಾಮಗಾರಿಗಳನ್ನು ಇ-ಟೆಂಡರ್ ಇಲ್ಲದೇ ಕೈಗೊಂಡಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆಟಿಪಿಪಿ) ಕಾಯ್ದೆ ಉಲ್ಲಂಘಿಸಲಾಗಿದೆ. ಇದಕ್ಕೆ ಕಾರಣರಾದ ವಿಶ್ರಾಂತ ಕುಲಪತಿ ಮಲ್ಲಿಕಾ ಎಸ್. ಘಂಟಿ, ವಿಶ್ರಾಂತ ಕುಲಸಚಿವ ಪ್ರೊ.ಡಿ. ಪಾಂಡುರಂಗಬಾಬು ಹಾಗೂ ಇತರ ಎಂಟು ಜನರನ್ನು ಬಂಧಿಸಬೇಕೆಂದು ವಿ.ವಿ. ನೇಮಿಸಿದ್ದ ವಕೀಲರು ವಿ.ವಿ. ಆಡಳಿತಕ್ಕೆ ನೀಡಿರುವ ಕಾನೂನು ಅಭಿಪ್ರಾಯದಲ್ಲಿ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು 15 ದಿನಗಳ ಒಳಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು. ಇದರಲ್ಲಿ ಶಾಮಿಲಾದವರನ್ನು ಇನ್ನೂ ತಡಮಾಡದೆ ಬಂಧಿಸಬೇಕೆಂದೂ ಸಲಹೆ ಮಾಡಿದ್ದಾರೆ. ಈ ಪತ್ರ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

> **ವಿಶ್ವವಿದ್ಯಾಲಯ ನೇಮಿಸಿದ್ದ ವಕೀಲರು ಕಾನೂನು ಸಲಹೆ ಕೊಟ್ಟಿದ್ದಾರೆ. ಕುಲಪತಿಯವರೊಂದಿಗೆ ಚರ್ಚಿಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು**
> **ಪ್ರೊ.ಎ. ಸುಬ್ಬಣ್ಣ ರೈ,** ಕುಲಸಚಿವ, ಹಂಪಿ ಕನ್ನಡ ವಿ.ವಿ.

> **ಎಲ್ಲ ಕಾಮಗಾರಿಗಳನ್ನು ಸರ್ಕಾರಿ ಸಂಸ್ಥೆ ಕೆಆರ್‌ಐಡಿಎಲ್‌ನಿಂದ ಮಾಡಿಸಲಾಗಿದೆ. ಟೆಂಡರ್ ಕರೆಯುವ ಪ್ರಶ್ನೆಯೇ ಇಲ್ಲ. ವಿ.ವಿ. ಪರಿನಿಯಮದ ಪ್ರಕಾರ ಕೆಲಸ ಮಾಡಿರುವೆ**
> **ಮಲ್ಲಿಕಾ ಎಸ್. ಘಂಟಿ** ವಿಶ್ರಾಂತ ಕುಲಪತಿ, ಹಂಪಿ ಕನ್ನಡ ವಿ.ವಿ.

ಪ್ರಜಾವಾಣಿ ವಿಶೇಷ

2015ರಿಂದ 2019ರ ಅವಧಿಯಲ್ಲಿ ನಡೆದ ₹50.86 ಕೋಟಿಯ ವಿವಿಧ ಕಾಮಗಾರಿಗಳನ್ನು ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಮಾಡಲಾಗಿದೆ ಎಂದು ವಿಶ್ವವಿದ್ಯಾಲಯದ ಅಂದಿನ ಕಾನೂನು ಘಟಕದ ಸೂಪರಿಂಟೆಂಡೆಂಟ್ ಎಚ್.ಎಂ. ಸೋಮನಾಥ ಅವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಲೋಕಾಯುಕ್ತ ತನಿಖೆ ನಡೆಸಿ, 2021ರಲ್ಲಿ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿತ್ತು. ಕೆಟಿಪಿಪಿ ಕಾಯ್ದೆ ಉಲ್ಲಂಘಿಸಲಾಗಿದೆ ಎಂದು ವರದಿಯಲ್ಲಿ ತಿಳಿಸಿತ್ತು.

ಬಳಿಕ ಲೋಕಾಯುಕ್ತ ವರದಿ ಆಧರಿಸಿ ಸೋಮನಾಥ ರಾಜ್ಯಪಾಲರಿಗೂ ದೂರು ಕೊಟ್ಟಿದ್ದರು. ಪ್ರಕರಣದಲ್ಲಿ ಶಾಮಿಲಾದವರ ವಿರುದ್ಧ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕೆಂದು ಉನ್ನತ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯಕ್ಕೆ ಸೂಚಿಸಿತ್ತು. ಈ ಬಗ್ಗೆ 2022ರ ಆಗಸ್ಟ್ 4ರಂದು ನಡೆದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ, ಕಾನೂನು ಅಭಿಪ್ರಾಯ ಪಡೆದು ಮುಂದುವರೆಯಲು ನಿರ್ಣಯ ಕೈಗೊಳ್ಳಲಾಗಿತ್ತು.

ನಿರ್ಣಯದ ಪ್ರಕಾರ, ವಕೀಲ ಎಂ. ಅಶ್ವತ್ಥನಾರಾಯಣ ರೆಡ್ಡಿ ಅವರಿಗೆ ವಿ.ವಿ. ಪತ್ರ ಬರೆದು ಇಡೀ ಪ್ರಕರಣದ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ಕಾನೂನು ಅಭಿಪ್ರಾಯ ತಿಳಿಸುವಂತೆ ಕೋರಿತ್ತು. ಅದರ ಪ್ರಕಾರ, ರೆಡ್ಡಿ ಅವರು ವಿ.ವಿ. ಕುಲಸಚಿವರಿಗೆ ಕಾನೂನು ಅಭಿಪ್ರಾಯ ತಿಳಿಸಿದ್ದಾರೆ. ಅದರಲ್ಲಿ ಮಲ್ಲಿಕಾ ಘಂಟಿ, ಡಿ. ಪಾಂಡುರಂಗಬಾಬು ಹಾಗೂ ಇತರರನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸುವಂತೆ ಸಲಹೆ ಮಾಡಿದ್ದಾರೆ.

ಕಾಮಗಾರಿ ನಡೆದ ಅವಧಿಯಲ್ಲಿ ಮಂಜುನಾಥ ಬೇವಿನಕಟ್ಟಿ, ಅಶೋಕಕುಮಾರ ರಂಜೇರೆ–ಕುಲಸಚಿವರು, ಪಿ. ಮಹದೇವಯ್ಯ, ಸಿದ್ದಗಂಗಮ್ಮ–ಹಣಕಾಸು ಅಧಿಕಾರಿಗಳು, ಜೆ.ಎಸ್. ನಂಜಯ್ಯನವರ್–ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ, ಎಚ್. ಶ್ರೀನಿವಾಸ್–ಸಹಾಯಕ ಕುಲಸಚಿವ, ಈಟಿ ನಾಗರಾಜ–ಯೋಜನಾ ಅಧಿಕಾರಿ, ಹಾಗೂ ಜಿ. ಶಿವಕುಮಾರ ಸೂಪರಿಟೆಂಡೆಂಟ್ ಆಗಿದ್ದರು. ಇವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಶೆಹ್ಲಾ ಅರ್ಜಿ ವಿಚಾರಣೆ: ಹಿಂದೆ ಸರಿದ ನ್ಯಾಯಮೂರ್ತಿ

ನವದೆಹಲಿ (ಪಿಟಿಐ): 'ತಂದೆ ಮಾಡಿರುವ ಆರೋಪಗಳಿಗೆ ಸಂಬಂಧಿಸಿ ನನ್ನ ಅಭಿಪ್ರಾಯ ಪಡೆದುಕೊಳ್ಳದೆ ವರದಿ ಪ್ರಸಾರ ಮಾಡಿದ ಸುದ್ದಿ ವಾಹಿನಿಗಳು, ಟಿ.ವಿ ಪತ್ರಕರ್ತರು ಕ್ಷಮೆಯಾಚಿಸಬೇಕು' ಎಂದು ಕೋರಿ ಸಾಮಾಜಿಕ ಹೋರಾಟಗಾರ್ತಿ ಶೆಹ್ಲಾ ರಷೀದ್ ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆಯಿಂದ ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್ ಹಿಂದೆ ಸರಿದಿದ್ದಾರೆ.

ಬೌದ್ಧ ಮಹಾ ಸಮ್ಮೇಳನ 26ರಂದು

ಪ್ರಜಾವಾಣಿ ವಾರ್ತೆ

ಮೈಸೂರು: ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಶಾಖೆಯಿಂದ ರಾಜ್ಯಮಟ್ಟದ ಬೌದ್ಧ ಮಹಾ ಸಮ್ಮೇಳನವನ್ನು ಫೆ.26ರಂದು ನಗರದ ಲಲಿತಮಹಲ್ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದೆ.

'ಪುರಭವನ ಸಮೀಪ ಅಂಬೇಡ್ಕರ್ ಪ್ರತಿಮೆಗೆ ಭಾರತೀಯ ಬೌದ್ಧ ಮಹಾಸಭಾದ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ.ಭೀಮರಾವ್ ಯಶವಂತರಾವ್ ಅಂಬೇಡ್ಕರ್ ಮಾಲಾರ್ಪಣೆ ಮಾಡುವರು. ಲಲಿತ ಮಹಲ್ ಅರಮನೆ ಮೈದಾನ ದವರೆಗೆ ಬಿಕ್ಕು ಸಂಘದ ನೇತೃತ್ವದಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಸಮತಾ ಸೈನಿಕ ದಳದ 350 ಜನರಿಂದ ವಿಶೇಷ ಪಥಸಂಚಲನ 'ಧಮ್ಮ ನಡಿಗೆ' ನಡೆಯಲಿದೆ' ಎಂದು ಚಾಮರಾಜನಗರದ ನಳಂದಾ ವಿಶ್ವವಿದ್ಯಾಲಯದ ಬೋಧಿದತ್ತ ಭಂತೇಜಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಭಗವಾನ್ ಬುದ್ಧನ ಪ್ರಜ್ಞೆ, ಕರುಣೆ, ಮೈತ್ರಿ, ಶೀಲ, ಸಮಾಧಿ ಮತ್ತು ಸಹೋದರತೆಗೆ ಸಾಕ್ಷಿಯಾಗಲಿರುವ ಈ ಸಮ್ಮೇಳನದಲ್ಲಿ ಬೆಳಿಗ್ಗೆ 11.30ಕ್ಕೆ 'ಬುದ್ಧ ವಂದನಾ– ತಿಸರಣ– ಪಂಚಶೀಲ' ಹಾಗೂ 'ಮೈತ್ರಿ ಧ್ಯಾನ' ಧಮ್ಮ ಪ್ರವಚನವು ಆರಂಭಗೊಳ್ಳಲಿದೆ. ಮಧ್ಯಾಹ್ನ 3.30ಕ್ಕೆ ಬೌದ್ಧ ಸಾಹಿತ್ಯ ಗೋಷ್ಠಿ, ಸಂಜೆ 6ಕ್ಕೆ 'ದೇವನಾಂಪ್ರಿಯ ಅಶೋಕ' ನಾಟಕ ಪ್ರದರ್ಶನ ಇರಲಿದೆ' ಎಂದರು.

ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, 'ಭಾರತದ ಇತಿಹಾಸದಲ್ಲಿ ಕ್ರೂರತೆಯೇ ಇಲ್ಲದ ಯುಗವೇನಾದರೂ ಇದ್ದರೆ ಅದು ಬುದ್ಧನ ಯುಗವಾಗಿತ್ತು. ಇಂದು ಸಮಾಜದಲ್ಲಿ ಕ್ರೌರ್ಯ ಹೆಚ್ಚುತ್ತಿದ್ದು, ಬುದ್ಧನ ತತ್ವವನ್ನು ಭರವಸೆಯಾಗಿ ನೋಡಬೇಕಿದೆ. ಈ ಸಮ್ಮೇಳನವೂ ನಮ್ಮಲ್ಲಿ ಜಾಗೃತಿ ಹಾಗೂ ಮೈತ್ರಿ ಮೂಡಿಸಲಿದೆ. ರಾಜ್ಯದ ವಿವಿಧೆಡೆಗಳಿಂದ ಬೌದ್ಧ ಬಿಕ್ಕುಗಳು ಆಗಮಿಸುವ ಈ ಸಮ್ಮೇಳನ ಹೊಸ ಸಾಧ್ಯತೆಗೆ ದಾರಿಯಾಗಲಿದೆ' ಎಂದು ಹೇಳಿದರು.

ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವರಾಜ್, ಜಿಲ್ಲಾ ಘಟಕದ ಅಧ್ಯಕ್ಷ ಡಾ.ಜಗನ್ನಾಥ್, ಸದಸ್ಯ ಗೋಪಾಲ್ ಇದ್ದರು.

> **'ಬೌದ್ಧ ಧರ್ಮದತ್ತ 30 ಕೋಟಿ ಜನ'**
> ದಲಿತ ಮುಖಂಡ ಪುರುಷೋತ್ತಮ್ ಮಾತನಾಡಿ, 'ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮವನ್ನು 30 ವರ್ಷಗಳ ಕಾಲ ಅಧ್ಯಯನ ಮಾಡಿ ನಂತರ ಸ್ವೀಕರಿಸಿದರು. ಬುದ್ಧನಲ್ಲಿ ನಂಬಿಕೆಯನ್ನು ಹೊಂದಿದ್ದರು. ಇಂದು ದೇಶದ 30 ಕೋಟಿ ಜನರು ಬೌದ್ಧ ಧರ್ಮದತ್ತ ಮುಖ ಮಾಡಿದ್ದು, ನಮ್ಮದು ಬೌದ್ಧ ರಾಷ್ಟ್ರವಾದಾಗಲೇ ಶಾಂತಿ, ಮೈತ್ರಿ ಹಾಗೂ ಪ್ರಗತಿ ಸಾಧ್ಯ' ಎಂದು ಪ್ರತಿಪಾದಿಸಿದರು.

ಪ್ರತಿಭಟನೆ ಮುಗಿಸಿ ಹೊರಟಿದ್ದ ಶಿಕ್ಷಕ ಸಾವು

ಬೆಂಗಳೂರು: 'ಪಿಂಚಣಿ ಸೌಲಭ್ಯ ಕಲ್ಪಿಸಬೇಕು' ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಅನುದಾನಿತ ಶಾಲಾ-ಕಾಲೇಜುಗಳ ನೌಕರರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡು ತಮ್ಮೂರಿಗೆ ವಾಪಸು ಹೊರಟಿದ್ದ ವೇಳೆ ರೈಲು ಹರಿದು ಶಿಕ್ಷಕ ಶಂಕರಪ್ಪ (45) ಎಂಬುವವರು ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಶಂಕರಪ್ಪ, ರಾಯಚೂರು ಜಿಲ್ಲೆಯ ಸಿಂಧನೂರಿನ ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು' ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

'ಸಹೋದ್ಯೋಗಿ ಶಿಕ್ಷಕರ ಜೊತೆಯಲ್ಲಿ ನಗರಕ್ಕೆ ಬಂದಿದ್ದ ಶಂಕರಪ್ಪ, ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸಹೋದ್ಯೋಗಿಗಳು ಬಸ್ಸಿನಲ್ಲಿ ವಾಪಸು ಊರಿಗೆ ಹೋಗಿದ್ದರು. ಶಂಕರಪ್ಪ, ರೈಲಿನಲ್ಲಿ ಬರುವುದಾಗಿ ಹೇಳಿದ್ದರು. ಮಂಗಳವಾರ (ಫೆ. 21) ರಾತ್ರಿ ಮೆಜೆಸ್ಟಿಕ್ ರೈಲು ನಿಲ್ದಾಣಕ್ಕೆ ಹೋಗಿದ್ದ ಶಂಕರಪ್ಪ, ಹಳಿ ಮೇಲೆ ಮಲ್ಲೇಶ್ವರ ಕಡೆ ನಡೆದುಕೊಂಡು ಹೊರಟಿದ್ದರು. ಇದೇ ವೇಳೆಯೇ ರೈಲು ಅವರ ಮೈ ಮೇಲೆ ಹರಿದಿತ್ತು. ಸ್ಥಳದಲ್ಲೇ ಅವರು ಮೃತಪಟ್ಟಿದ್ದಾರೆ' ಎಂದಿವೆ.

'ಶಂಕರಪ್ಪ ಅವರ ಜೇಬಿನಲ್ಲಿ ಪತ್ರವೊಂದು ಸಿಕ್ಕಿದ್ದು, ಪರಿಶೀಲನೆ ನಡೆಸಲಾಗುತ್ತಿದೆ. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಪ್ರಕರಣ ದಾಖಲಿಸಿಕೊಂಡು ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಅಕಾಡೆಮಿಗಳಿಗೆ ಈಗ ನೇಮಕಾತಿ ಸೂಕ್ತವಲ್ಲ: ಬರಗೂರು ರಾಮಚಂದ್ರಪ್ಪ

ಬೆಂಗಳೂರು: 'ವಿಧಾನಸಭೆ ಚುನಾವಣೆ ತೀರಾ ಹತ್ತಿರದಲ್ಲಿರುವಾಗ ಸಾಂಸ್ಕೃತಿಕ ಅಕಾಡೆಮಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸುವುದು ಸೂಕ್ತವಲ್ಲ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರತಿಪಾದಿಸಿದ್ದಾರೆ.

'ಅಕಾಡೆಮಿಗಳ ರಚನೆ ಕುರಿತು ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ್ದ ಉನ್ನತ ಶಿಕ್ಷಣ ಸಚಿವರು, 'ಶೀಘ್ರದಲ್ಲೇ ಹೊಸ ಸಮಿತಿ ರಚಿಸಲಾಗುವುದು. ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರ ಕೊಡಿಸಲಾಗುವುದು' ಎಂದು ಹೇಳಿದ್ದಾರೆ.

'ಚುನಾವಣೆ ಬಳಿಕ ಬೇರೆ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಹಾಲಿ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ರಾಜೀನಾಮೆ ಕೇಳಲಾಗುತ್ತದೆ. ಹಾಗಾದಲ್ಲಿ, ಈ ಸರ್ಕಾರದಿಂದ ನೇಮಕಗೊಂಡವರು ಕೆಲವೇ ತಿಂಗಳು ನಾಮಕಾವಸ್ತೆ ಇದ್ದಂತಾಗುತ್ತದೆ. ಸರ್ಕಾರಗಳು ಬದಲಾದ ಕೂಡಲೇ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರಿಂದ ರಾಜೀನಾಮೆ ಪಡೆಯುವ ಪ್ರವೃತ್ತಿ ತಪ್ಪಿಸಬೇಕು. ಈ ಬಗ್ಗೆ ನನ್ನ ನೇತೃತ್ವದ ಸಮಿತಿಯು ಹಿಂದಿನ ಸರ್ಕಾರಕ್ಕೆ ಸಲ್ಲಿಸಿದ 'ಸಾಂಸ್ಕೃತಿಕ ನೀತಿ'ಯ ವರದಿಯಲ್ಲಿ ಒಂದು ಮಾದರಿ ಮಾರ್ಗವನ್ನು ಶಿಫಾರಸು ಮಾಡಿತ್ತು. ಕುಲಪತಿಗಳ ಆಯ್ಕೆಗೆ ಶೋಧನಾ ಸಮಿತಿ ರಚಿಸಿ ಹೆಸರುಗಳನ್ನು ಪಡೆದಂತೆ, ಅಕಾಡೆಮಿಗಳ ನೇಮಕಕ್ಕೂ ಅದನ್ನೇ ಅನ್ವಯಿಸಬೇಕು. ಮುಂದೆ ಬರುವ ಸರ್ಕಾರ ಈ ಶಿಫಾರಸುಗಳ ಬಗ್ಗೆ ಸಾಂಸ್ಕೃತಿಕ ವಲಯದವರ ಜೊತೆಗೆ ಸಮಾಲೋಚಿಸಿ, ಸೂಕ್ತ ನಿರ್ಧಾರ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.



ಜಿ– 20 ಅತಿಥಿಗಳ ಓಡಾಟ: 55 ಭಿಕ್ಷುಕರಿಗೆ ಪುನರ್ವಸತಿ

ಬೆಂಗಳೂರು: ಜಿ– 20 ಶೃಂಗಸಭೆಯ ಅತಿಥಿಗಳ ಓಡಾಟದ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, 55 ಭಿಕ್ಷುಕರನ್ನು ರಕ್ಷಿಸಿ ಪುನರ್ವಸತಿ ಕಲ್ಪಿಸಿದ್ದಾರೆ.

'ನಗರದ ಪ್ರಮುಖ ವೃತ್ತ, ರಸ್ತೆ ಹಾಗೂ ಪ್ರೇಕ್ಷಣೀಯ ಸ್ಥಳಗಳ ಎದುರು ಹಲವರು ಭಿಕ್ಷಾಟನೆಯಲ್ಲಿ ತೊಡಗಿದ್ದರು. ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ವಿಶೇಷ ಕಾರ್ಯಾಚರಣೆ ನಡೆಸಿ, 55 ಜನರನ್ನು ರಕ್ಷಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಮಕ್ಕಳನ್ನು ಕಳ್ಳ ಸಾಗಾಣಿಕೆ ಮೂಲಕ ಕರೆತಂದು ಭಿಕ್ಷಾಟನೆಗೆ ಬಳಸಿಕೊಳ್ಳಲಾಗುತ್ತಿತ್ತು. ಕೆಲ ಮಕ್ಕಳಿಗೆ ನಿದ್ದೆ ಬರುವ ಔಷಧ ಕುಡಿಸಿ ಮಲಗಿಸಲಾಗುತ್ತಿತ್ತು. ಇಂಥ ಭಿಕ್ಷಾಟನೆ ಜಾಲದಿಂದ ಜನರಿಗೂ ತೊಂದರೆ ಉಂಟಾಗಿತ್ತು.'

'ವಿಶೇಷ ಕಾರ್ಯಾಚರಣೆ ವೇಳೆ ಮಕ್ಕಳು ಹಾಗೂ ವೃದ್ಧರನ್ನು ರಕ್ಷಿಸಲಾಗಿದೆ. ಅವರೆಲ್ಲರನ್ನೂ ಪುನರ್ವಸತಿ ಕೇಂದ್ರಗಳ ಸುಪರ್ದಿಗೆ ಒಪ್ಪಿಸಲಾಗಿದೆ' ಎಂದರು.

'ಸ್ವರ ಕಾವೇರಿ' ಭಾರತೀಯ ಶಾಸ್ತ್ರೀಯ ಸಂಗೀತೋತ್ಸವದಲ್ಲಿ ಗುರುವಾರ ಚೆಲ್ಕುಂದ ಸಹೋದರಿಯರು ಗಾಯನ ಪ್ರಸ್ತುತ ಪಡಿಸಿದರು –ಪ್ರಜಾವಾಣಿ ಚಿತ್ರ

ಸ್ವಾತಂತ್ರ್ಯದ ಅಮೃತ ಮಹೋತ್ಸವ
ಬೆಂಮಸಾಸಂ BMTC
ONE EARTH · ONE FAMILY · ONE FUTURE

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಪ್ರಯಾಣಿಕರಿಗೆ ಮೂಲಭೂತ ಸೌಲಭ್ಯ ಒದಗಿಸುವಲ್ಲಿ ಮತ್ತೊಂದು ಮಹತ್ವದ ಹೆಜ್ಜೆ
ಕಲಾಸಿಪಾಳ್ಯ ನೂತನ ಬಸ್ ನಿಲ್ದಾಣ
ಉದ್ಘಾಟನಾ ಸಮಾರಂಭ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಉದ್ಘಾಟನೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ
ಶ್ರೀ ಬಿ. ಶ್ರೀರಾಮುಲು
ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಅಧ್ಯಕ್ಷತೆ
ಶ್ರೀ ಉದಯ ಬಿ. ಗರುಡಾಚಾರ್
ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ದಿನಾಂಕ: 24.02.2023, ಶುಕ್ರವಾರ, ಸಂಜೆ 5.00 ಗಂಟೆಗೆ ಸ್ಥಳ: ಕಲಾಸಿಪಾಳ್ಯ ನೂತನ ಬಸ್ ನಿಲ್ದಾಣದ ಆವರಣ, ಬೆಂಗಳೂರು

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯಸಾಧನೆಗಳು

- ಬೆಂ.ಮ.ಸಾ.ಸಂಸ್ಥೆಯು ಪರಿಸರ ಸ್ನೇಹಿ 390 **ಎಲೆಕ್ಟ್ರಿಕ್ ಬಸ್ಸುಗಳನ್ನು** ಸಂಸ್ಥೆಯ ವಾಹನ ಬಲಕ್ಕೆ ಈಗಾಗಲೇ ಸೇರ್ಪಡೆಗೊಳಿಸಿದ್ದು, ಮುಂಬರುವ ದಿನಗಳಲ್ಲಿ 1051 **ಎಲೆಕ್ಟ್ರಿಕ್ ಬಸ್ಸುಗಳು** ಸೇರಿದಂತೆ **ಒಟ್ಟು** 3445 **ವಾಹನಗಳನ್ನು** ಅಂದರೆ ಹಾಲಿ ವಾಹನ ಬಲದ ಶೇ.50ಕ್ಕೂ ಹೆಚ್ಚು ವಾಹನಗಳನ್ನು ಸೇರ್ಪಡೆಗೊಳಿಸಲು ಯೋಜಿಸಲಾಗಿದೆ.
- ಸಂಸ್ಥೆಯ ಯಲಹಂಕ ಮತ್ತು ಬಿಡದಿ ಘಟಕಗಳನ್ನು ಸಂಪೂರ್ಣ ಎಲೆಕ್ಟ್ರಿಕ್ ಬಸ್ಸುಗಳ ಕಾರ್ಯಾಚರಣೆಯ ಘಟಕಗಳನ್ನಾಗಿ ಪರಿವರ್ತಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಸಂಸ್ಥೆಯು ಕಳೆದ ಮೂರು ವರ್ಷಗಳಿಂದ ವಿದ್ಯಾರ್ಥಿಗಳಿಗೆ Smart Card ಪಾಸುಗಳನ್ನು ನೀಡುತ್ತಿದ್ದು, ಈ ವರ್ಷವು **ಒಟ್ಟು** 348604 **ವಿದ್ಯಾರ್ಥಿಗಳಿಗೆ** ಉಚಿತ/ರಿಯಾಯಿತಿ ಪಾಸುಗಳು ಹಾಗೂ 339547 **ಶ್ರಮಿಕ ಕಟ್ಟಡ ಕಾರ್ಮಿಕರಿಗೆ** ಸಹಾಯಹಸ್ತ ಪಾಸುಗಳನ್ನು ವಿತರಿಸಲಾಗಿದೆ.
- ಮಾನ್ಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಮತ್ತು ನಿರ್ಭಯ ಯೋಜನೆಯಡಿ ಕ್ರಮವಾಗಿ 1199 **ಅಭ್ಯರ್ಥಿಗಳು** & 1068 **ಮಹಿಳೆಯರಿಗೆ** ಉಚಿತ ಲಘು/ಭಾರಿ ವಾಹನ ಚಾಲನಾ ತರಬೇತಿ ನೀಡಲಾಗಿರುತ್ತದೆ.
- ನಿರ್ಭಯ ಯೋಜನೆಯಡಿಯಲ್ಲಿ ಸಂಸ್ಥೆಯ **ಒಟ್ಟು** 2659 **ಮಹಿಳಾ ನೌಕರರಿಗೆ** ಸ್ವರಕ್ಷಣಾ ತರಬೇತಿ ಹಾಗೂ ಲಿಂಗ ಸಂವೇದನೆ ಕುರಿತು ಪರಿಣಾಮಕಾರಿ ತರಬೇತಿಯನ್ನು ನೀಡಲಾಗಿರುತ್ತದೆ.
- ನಿರ್ಭಯ ಯೋಜನೆಯಡಿ ಮಹಿಳೆಯರ ಅನುಕೂಲಕ್ಕಾಗಿ ಸಂಸ್ಥೆಯ ವಿವಿಧ ಸ್ಥಳಗಳಲ್ಲಿ 16 ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.

- ನಿರ್ಭಯ ಯೋಜನೆಯಡಿ, ಮಹಿಳಾ ಸುರಕ್ಷತೆಗಾಗಿ **ಮೊಬೈಲ್ ಆಪ್** ಅಭಿವೃದ್ಧಿ, 5000 **ಬಸ್ಸುಗಳಲ್ಲಿ CCTV/Panic Button** ಹಾಗೂ ಬಸ್ ನಿಲ್ದಾಣಗಳಲ್ಲಿ 500 **Passenger Information System**ನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ.
- ಸಂಸ್ಥೆಯ ನೌಕರರು, ಮುಖ್ಯವಾಗಿ 45 ವರ್ಷಗಳು ಮೇಲ್ಪಟ್ಟ ಸುಮಾರು 10744 **ನೌಕರರ** ಆರೋಗ್ಯ ತಪಾಸಣೆ ಮಾಡಲು ಪ್ರತಿಷ್ಠಿತ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಸುಮಾರು 10 **ವಿವಿಧ ಹೃದ್ರೋಗ ಪರೀಕ್ಷೆಗಳನ್ನು** ಕೈಗೊಳ್ಳಲು ಕ್ರಮ ವಹಿಸುತ್ತಿದೆ. ಇಲ್ಲಿಯವರೆಗೆ **ಒಟ್ಟು** 3,816 **ನೌಕರರಿಗೆ** ಆರೋಗ್ಯ ತಪಾಸಣೆ ಮಾಡಲಾಗಿರುತ್ತದೆ.
- ಸಂಸ್ಥೆಯ ನೌಕರರು ಯಾವುದೇ ಅಪಘಾತದಿಂದ ಮೃತಪಟ್ಟಲ್ಲಿ ಕೆನರಾ ಬ್ಯಾಂಕಿನವರೊಂದಿಗೆ ವಿಶೇಷ ವೇತನ ಪ್ಯಾಕೇಜ್ ಒಡಂಬಡಿಕೆಯನ್ವಯ **"ಅಪಘಾತ ವಿಮಾ ಯೋಜನೆ"** ಯಡಿ ತಕ್ಷಣ ಅವರ ಕುಟುಂಬದವರಿಗೆ **ರೂ.30.00 ಲಕ್ಷ ವಿಮಾ ಪರಿಹಾರ** ದೊರಕುವುದು.
- ಕೋವಿಡ್–19 ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ 2020–21ನೇ ಸಾಲಿನಿಂದ 2022–23ನೇ ಸಾಲಿನವರೆಗೆ ಸರ್ಕಾರವು **ಒಟ್ಟು ರೂ.2915 ಕೋಟಿಗಳ ಹೆಚ್ಚುವರಿ ಅನುದಾನ/ಸಹಾಯಧನವನ್ನು** ನೀಡಿದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ ಹಾಗೂ ಪರಿಸರ ಸ್ನೇಹಿ/ಆಧುನಿಕ ಉಪಕ್ರಮಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ವಿವಿಧ ಪ್ರತಿಷ್ಠಿತ ಸಂಸ್ಥೆಗಳಿಂದ ಇಲ್ಲಿಯವರೆಗೆ **ಒಟ್ಟು** 126 **ಪ್ರಶಸ್ತಿಗಳನ್ನು** ಬೆಂ.ಮ.ಸಾ.ಸಂಸ್ಥೆಯು ತನ್ನದಾಗಿಸಿಕೊಂಡಿರುತ್ತದೆ.

ಶ್ರೀ ಬಿ. ಶ್ರೀರಾಮುಲು, ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಬಸ್ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿರುವುದು

ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಎನ್.ಎಸ್. ನಂದೀಶ್ ರೆಡ್ಡಿ, ಅಧ್ಯಕ್ಷರು, ಬಿಎಂಟಿಸಿ | ಕೆ.ವಿ. ನವೀನ್ ಕಿರಣ್, ಉಪಾಧ್ಯಕ್ಷರು, ಬಿಎಂಟಿಸಿ | ಜಿ. ಸತ್ಯವತಿ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಬಿಎಂಟಿಸಿ

ಮಾಸ್ಕ್ ಧರಿಸಿ | ಸಾಮಾಜಿಕ ಅಂತರ ಕಾಪಾಡಿಕೊಳ್ಳಿ | ಕೈಗಳನ್ನು ಸ್ವಚ್ಛಗೊಳಿಸಿ | ಲಸಿಕೆ ಹಾಕಿಸಿಕೊಳ್ಳಿ

ಶೇ 28ರಷ್ಟು ಕಾಮಗಾರಿಗಳು ಮಾತ್ರ ಪೂರ್ಣ • ಸಿಎಜಿ ವರದಿಯಿಂದ ಬಹಿರಂಗ

ಕೆಆರ್‌ಐಡಿಎಲ್ ಬಳಿ ₹ 17 ಸಾವಿರ ಕೋಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) 2016–17ರಿಂದ 2020–21ರ ಅವಧಿಯಲ್ಲಿ ವಿವಿಧ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿರುವ ಮೊತ್ತದಲ್ಲಿ ₹ 17,320.30 ಕೋಟಿಯನ್ನು ಕೆಲಸ ಮಾಡದೆ ತನ್ನ ಬಳಿಯಲ್ಲೇ ಉಳಿಸಿಕೊಂಡಿದೆ ಎಂಬುದನ್ನು ಮಹಾಲೇಖಪಾಲರ (ಸಿಎಜಿ) ವರದಿ ಬಹಿರಂಗಪಡಿಸಿದೆ.

2016–17ರಿಂದ 2020–21ರ ಅವಧಿಯಲ್ಲಿನ ಕೆಆರ್‌ಐಡಿಎಲ್ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಸಿಎಜಿ ವರದಿಯನ್ನು ವಿಧಾನಮಂಡಲದ ಎರಡೂ ಸದನಗಳಲ್ಲಿ ಗುರುವಾರ ಮಂಡಿಸಲಾಯಿತು. ಸರ್ಕಾರದ ಅನುದಾನ ಬಳಕೆಯಲ್ಲಿ ನಿಗಮವು ನಿಯಮ ಉಲ್ಲಂಘಿಸಿರುವುದು ಮತ್ತು ಹಣಕಾಸು ನಿರ್ವಹಣೆಯಲ್ಲಿ ಲೋಪ ಎಸಗಿರುವುದನ್ನು ಸಿಎಜಿ ಪರಿಶೋಧನಾ ತನಿಖೆಯಲ್ಲಿ ಪತ್ತೆಹಚ್ಚಲಾಗಿದೆ.

ಈ ಅವಧಿಯಲ್ಲಿ ಕೆಆರ್‌ಐಡಿಎಲ್‌ಗೆ ಒಟ್ಟು 84,574 ಕಾಮಗಾರಿಗಳನ್ನು ವಹಿಸಲಾಗಿತ್ತು. ಅವುಗಳಲ್ಲಿ 24,014 ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಲಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಕೇವಲ ಶೇಕಡ 28ರಷ್ಟು ಗುರಿ ಸಾಧನೆಯಾಗಿದೆ. ಈ ಕಾಮಗಾರಿಗಳನ್ನು ಪೂರ್ಣಗೊಳಿಸುವುದರಲ್ಲೂ ಒಂದರಿಂದ 29 ತಿಂಗಳುಗಳವರೆಗೂ ವಿಳಂಬ ಆಗಿತ್ತು ಎಂದು ವರದಿ ಹೇಳಿದೆ.

2016ರ ಏಪ್ರಿಲ್ ಆರಂಭದಲ್ಲಿ ನಿಗಮದ ಖಾತೆಯಲ್ಲಿ ₹ 6,748.10 ಕೋಟಿ ಶಿಲ್ಕು ಇತ್ತು. ನಂತರದ ಐದು ವರ್ಷಗಳಲ್ಲಿ ₹ 17,803.43 ಕೋಟಿ ಅನುದಾನ ಬಿಡುಗಡೆಯಾಗಿದೆ. 2021ರ ಮಾರ್ಚ್ ಅಂತ್ಯಕ್ಕೆ ನಿಗಮದ ಖಾತೆಯಲ್ಲಿ ₹ 17,320.30 ಕೋಟಿ ಸಂಗ್ರಹವಾಗಿದೆ. ಹಣ ಲಭ್ಯವಿದ್ದರೂ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇರುವುದು ಕಂಡುಬಂದಿದೆ ಎಂದು ಸಿಎಜಿ ತಿಳಿಸಿದೆ.

ಅನುದಾನಕ್ಕಿಂತ ಹೆಚ್ಚಿನ ವೆಚ್ಚ: 1,379 ಕಾಮಗಾರಿಗಳ ಕುರಿತು ಪರೀಕ್ಷಾ ತನಿಖೆ ನಡೆಸಲಾಗಿದೆ. ಅವುಗಳಲ್ಲಿ 439 ಕಾಮಗಾರಿಗಳಿಗೆ ವಿವಿಧ ಸಂಸ್ಥೆಗಳಿಂದ 515.16 ಕೋಟಿ ಅನುದಾನವನ್ನು ಕೆಆರ್‌ಐಡಿಎಲ್‌ಗೆ ಬಿಡುಗಡೆ ಮಾಡಲಾಗಿತ್ತು. ನಿಗಮವು ಈ ಕಾಮಗಾರಿಗಳಿಗೆ ₹ 54.39 ಕೋಟಿಯನ್ನು ಹೆಚ್ಚುವರಿಯಾಗಿ ವೆಚ್ಚ ಮಾಡಿದೆ. ಈ ಮೊತ್ತವನ್ನು ಪಡೆಯಲು ಸಂಬಂಧಿಸಿದ ಸಂಸ್ಥೆಗಳಿಗೆ ಬೇಡಿಕೆಯನ್ನೂ ಸಲ್ಲಿಸಿಲ್ಲ ಎಂಬ ಉಲ್ಲೇಖ ವರದಿಯಲ್ಲಿದೆ.

ಟೆಂಡರ್ ಇಲ್ಲದೆ ಖರೀದಿ: ಸಿಎಜಿ ಪರಿಶೋಧನೆಯ ಅವಧಿಯಲ್ಲಿ ನಿಗಮದ ವಿವಿಧ ಉಪ ವಿಭಾಗಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಮತ್ತು ಕೆಆರ್‌ಐಡಿಎಲ್ ಕೇಂದ್ರ ಕಚೇರಿಯ ಸುತ್ತೋಲೆಗಳನ್ನು ಉಲ್ಲಂಘಿಸಿ ₹ 754.32 ಕೋಟಿ ಮೌಲ್ಯದ ಸಿಮೆಂಟ್, ಕಬ್ಬಿಣ, ಡಾಂಬರು ಮತ್ತಿತರ ವಸ್ತುಗಳನ್ನು ಟೆಂಡರ್ ಇಲ್ಲದೇ ಖರೀದಿಸಿತ್ತು. ಈ ಅವಧಿಯಲ್ಲಿ ಜಿಎಸ್‌ಟಿ ಕಾಯ್ದೆಯಡಿ ನೋಂದಣಿಯಾಗದ ಮಾರಾಟಗಾರರಿಂದ ₹ 448.35 ಕೋಟಿ ಮೌಲ್ಯದ ನಿರ್ಮಾಣ ಸಾಮಗ್ರಿ ಖರೀದಿ ನಡೆದಿದೆ ಎಂಬುದು ಪತ್ತೆಯಾಗಿದೆ.

‘ಇದೇ ಅವಧಿಯಲ್ಲಿ ನೋಂದಣಿಯಾಗದ ಗುಂಪು ನಾಯಕರಿಗೆ ₹ 1,066.92 ಕೋಟಿ ಕೂಲಿ ಪಾವತಿಸಲಾಗಿದೆ. ಖರೀದಿ ಮತ್ತು ಕೂಲಿ ಪಾವತಿಯ ಮೊತ್ತದ ಅನುಸಾರ ₹ 214.46 ಕೋಟಿಯಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸಬೇಕಾಗುತ್ತದೆ. ಇಂತಹ ಅಕ್ರಮಗಳು ಮುಂದುವರಿದಿದ್ದರೂ ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿಲ್ಲ. ಇದು ನಿಗಮದ ಕೇಂದ್ರ ಕಚೇರಿಯ ದುರ್ಬಲ ಹಣಕಾಸಿನ ನಿಯಂತ್ರಣವನ್ನು ಸೂಚಿಸುತ್ತದೆ’ ಎಂದು ಸಿಎಜಿ ತಿಳಿಸಿದೆ.

ಕಾರ್ಯಕ್ರಮಗಳ ಆಯೋಜನೆ, ಯುಪಿಎಸ್ ಖರೀದಿ, ಅಧಿಕ ಸಾಮರ್ಥ್ಯದ ವಿದ್ಯುತ್ ಪ್ರಸರಣ ಮಾರ್ಗಗಳ ಬದಲಾವಣೆ ಸೇರಿದಂತೆ ಅನರ್ಹ ಕಾಮಗಾರಿಗಳನ್ನೂ ಕೆಆರ್‌ಐಡಿಎಲ್‌ಗೆ ವಹಿಸಿರುವುದು ಕಂಡುಬಂದಿದೆ. ಈ ರೀತಿ ₹ 16.28 ಕೋಟಿ ವೆಚ್ಚದ 14 ಕಾಮಗಾರಿಗಳನ್ನು ನೀಡಲಾಗಿತ್ತು ಎಂದು ವರದಿ ಹೇಳಿದೆ.

₹ 238.89 ಕೋಟಿ ಬಡ್ಡಿ ಜಮೆಯಾಗಿಲ್ಲ

ಸರ್ಕಾರಿ ನಿಧಿಗಳ ಮೇಲೆ ಗಳಿಸಿದ ಬಡ್ಡಿ ಮೊತ್ತವನ್ನು ಪ್ರತೀ ಹಣಕಾಸು ವರ್ಷದ ಅಂತ್ಯದಲ್ಲಿ ಲೆಕ್ಕ ಶೀರ್ಷಿಕೆ 0049ಕ್ಕೆ ಜಮಾ ಮಾಡುವಂತೆ ಹಣಕಾಸು ಇಲಾಖೆಯು 2018ರ ಮಾರ್ಚ್ 1ರಂದು ಸುತ್ತೋಲೆ ಹೊರಡಿಸಿತ್ತು. ಆದರೆ, ಕೆಆರ್‌ಐಡಿಎಲ್ 2018ರಿಂದ 2021ರ ಅವಧಿಯಲ್ಲಿ ಸರ್ಕಾರಿ ನಿಧಿಗಳ ಮೇಲೆ ಗಳಿಸಿದ ₹ 238.89 ಕೋಟಿ ಬಡ್ಡಿಯನ್ನು ನಿಗದಿತ ಸರ್ಕಾರಿ ಖಾತೆಗೆ ಜಮಾ ಮಾಡಿಲ್ಲ ಎಂಬುದನ್ನು ಸಿಎಜಿ ವರದಿ ಹೊರಗೆಡವಿದೆ.

ಬಂಡೆಕಲ್ಲಿನ ಲೆಕ್ಕವೇ ಇಲ್ಲ

ನಿಗಮದ ಕಾರ್ಮಿಕರು, ದಿನಗೂಲಿ ಕಾರ್ಮಿಕರು ಅಥವಾ ಗುಂಪು ನಾಯಕರನ್ನು ಬಳಸಿಕೊಂಡು ಕೈಗೊಂಡಿರುವ ಬಂಡೆಗಳ ಒಡೆಯುವುದರಿಂದ ಲಭಿಸುವ ಜಲ್ಲಿ ಮತ್ತು ಕಲ್ಲುಗಳ ಪ್ರಮಾಣ ಹಾಗೂ ಅವುಗಳನ್ನು ವಿಲೇವಾರಿ ಮಾಡಿರುವ ಲೆಕ್ಕವೇ ಕೆಆರ್‌ಐಡಿಎಲ್ ಬಳಿ ಇಲ್ಲ.

11 ಕಾಮಗಾರಿಗಳ ದಾಖಲೆಗಳನ್ನು ಈ ಉದ್ದೇಶಕ್ಕಾಗಿ ಸಿಎಜಿ ಪರಿಶೀಲಿಸಿದೆ. ಕಾರ್ಮಿಕರ ವೇತನ ಪಾವತಿ ಮಾಹಿತಿ ಪ್ರಕಾರ, ಈ ಕಾಮಗಾರಿಗಳಲ್ಲಿ 35,961.10 ಚದರ ಮೀಟರ್ ಬಂಡೆ ಒಡೆಯಲಾಗಿದೆ. ಅಲ್ಲಿ ಲಭಿಸಿದ ಕಲ್ಲಿನ ಪ್ರಮಾಣ ಮತ್ತು ಅವುಗಳನ್ನು ವಿಲೇವಾರಿ ಮಾಡಿದ ಲೆಕ್ಕಪತ್ರ ನಿಗಮದ ಬಳಿ ಇಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಡ್ರಗ್ಸ್ ಸೇವನೆ–ಮಾರಾಟ ಪ್ರಕರಣ: 42 ಮಾಹೆ ವಿದ್ಯಾರ್ಥಿಗಳ ಅಮಾನತು

ಪ್ರಜಾವಾಣಿ ವಾರ್ತೆ

ಉಡುಪಿ: ಮಾದಕ ವಸ್ತು ಸೇವನೆ ಪ್ರಕರಣದಲ್ಲಿ ಸಿಲುಕಿರುವ ಆರೋಪ ಎದುರಿಸುತ್ತಿರುವ 42 ವಿದ್ಯಾರ್ಥಿಗಳನ್ನು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಒಂದು ತಿಂಗಳ ಅವಧಿಗೆ ಅಮಾನತುಗೊಳಿಸಿದೆ.

ಮಾಹೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕೆಲವು ವಿದ್ಯಾರ್ಥಿಗಳ ಮೇಲೆ ಡ್ರಗ್ಸ್ ಸೇವನೆ ಪ್ರಕರಣ ದಾಖಲಾಗಿದ್ದು, ಆಂತರಿಕ ತನಿಖೆ ಮುಗಿಯುವವರೆಗೂ ಅಮಾನತಿನಲ್ಲಿ ಇರಿಸಲಾಗಿದೆ. ಆರೋಪಿತ ವಿದ್ಯಾರ್ಥಿಗಳಿಗೆ ಆಪ್ತಸಮಾಲೋಚನೆ ನಡೆಸಲಾಗುವುದು ಎಂದು ಮಾಹೆ ತಿಳಿಸಿದೆ.

ಎಂಜಿನಿಯರಿಂಗ್, ಹೋಟೆಲ್ ಮ್ಯಾನೆಜ್‌ಮೆಂಟ್, ವೈದ್ಯಕೀಯ ಹಾಗೂ ಇತರೆ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವವರು ಇವರಲ್ಲಿ ಸೇರಿದ್ದಾರೆ.

‘ವಿದ್ಯಾರ್ಥಿಗಳೇ ಪೆಡ್ಲರ್‌ಗಳು: ಮಣಿಪಾಲ ಠಾಣಾ ವ್ಯಾಪ್ತಿಯಲ್ಲಿ ಈಚೆಗೆ ನಡೆದ ಕಾರ್ಯಾಚರಣೆಯಲ್ಲಿ ಮಾದಕ ವಸ್ತು ಸೇವನೆ ಹಾಗೂ ಮಾರಾಟದಲ್ಲಿ ತೊಡಗಿಸಿಕೊಂಡಿದ್ದ ಹಲವರು ಸಿಕ್ಕಿಬಿದ್ದಿದ್ದರು. ಆರೋಪಿಗಳಲ್ಲಿ ಮಾಹೆ ವಿವಿ ವಿದ್ಯಾರ್ಥಿಗಳು ಇರುವುದು ತನಿಖೆಯಲ್ಲಿ ದೃಢಪಟ್ಟಿತ್ತು. ಸಿಕ್ಕಿಬಿದ್ದ ವಿದ್ಯಾರ್ಥಿಗಳ ವಿವರವನ್ನು ಮಾಹೆ ಆಡಳಿತ ಮಂಡಳಿಗೆ ನೀಡಲಾಗಿತ್ತು. ಅದರನ್ವಯ ಮಾಹೆ ವಿವಿಯು ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಕೆ ಅಕ್ಷಯ್ ಮಚ್ಚಿಂದ್ರ ತಿಳಿಸಿದರು.

ಇಬ್ಬರ ಸಾವಿಗೆ ಕಾರಣವಾಗಿದ್ದ ಒಂಟಿ ಸಲಗ ಸೆರೆ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ: ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ರೆಂಜಿಲಾಡಿ ಗ್ರಾಮದಲ್ಲಿ ಇಬ್ಬರ ಸಾವಿಗೆ ಕಾರಣವಾದ ಒಂಟಿ ಸಲಗವನ್ನು ಅರಣ್ಯ ಇಲಾಖೆಯವರು ಗುರುವಾರ ಸೆರೆ ಹಿಡಿದಿದ್ದಾರೆ.

ರೆಂಜಿಲಾಡಿ ಗ್ರಾಮದ ನೈಲಾದಲ್ಲಿ ಸೋಮವಾರ ಆನೆ ದಾಳಿಯಿಂದ ಸ್ಥಳೀಯ ರಂಜಿತಾ (22) ಹಾಗೂ ರಮೇಶ್ ರೈ (55) ಮೃತಪಟ್ಟಿದ್ದರು. ಅವರ ಮೇಲೆ ದಾಳಿ ನಡೆಸಿದ ಆನೆ ಸೆರೆ ಹಿಡಿಯಲು ಅರಣ್ಯ ಇಲಾಖೆ ವಿಶೇಷ ಕಾರ್ಯಾಚರಣೆ ಕೈಗೊಂಡಿತ್ತು.

ಮೂರು ದಿನ ಕಾಡಿನಲ್ಲಿ ಆನೆ ಹಿಡಿಯುವ ಕಾರ್ಯಾಚರಣೆ ನಡೆಯಿತು.

‘ದಾಳಿ ನಡೆಸಿದ ಸ್ಥಳದಿಂದ ಸುಮಾರು 5 ಕಿ.ಮೀ ದೂರದಲ್ಲಿ ಆನೆ ಪತ್ತೆಯಾಗಿತ್ತು. ಅರಿವಳಿಕೆ ಮದ್ದು ಹಾರಿಸಿ ಸೆರೆ ಹಿಡಿದಿದ್ದೇವೆ. ಒಟ್ಟು 4 ಆನೆಗಳು ಕಾಣಿಸಿಕೊಂಡಿದ್ದವು. ಆದರೆ, ಈ ಒಂಟಿ ಸಲಗವೇ ಇಬ್ಬರನ್ನು ಬಲಿಪಡೆದಿತ್ತು. ಇದನ್ನು ಖಚಿತಪಡಿಸಿಕೊಂಡು ಒಂಟಿ ಸಲಗವನ್ನು ಮಾತ್ರ ಸೆರೆಹಿಡಿದಿದ್ದು, ದುಬಾರೆ ಆನೆ ಶಿಬಿರಕ್ಕೆ ಸಾಗಿಸಲಾಗುವುದು’ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಉಪಅರಣ್ಯ ಸಂರಕ್ಷಣಾಧಿಕಾರಿ ದಿನೇಶ್ ಕುಮಾರ್ ತಿಳಿಸಿದರು.

ವೈದೇಹಿಗೆ ‘ನೃಪತುಂಗ ಸಾಹಿತ್ಯ ಪ್ರಶಸ್ತಿ’

ಒಂದನೇ ಪುಟದಿಂದ...

ಕರ್ನಾಟಕದಲ್ಲೇ ಅತೀ ಹೆಚ್ಚು ನಗದು ಮೊತ್ತ ಒಳಗೊಂಡ ಪ್ರಶಸ್ತಿ ಇದಾಗಿದೆ. ಈ ಪ್ರಶಸ್ತಿಗೆ ಆಯ್ಕೆಯಾದ ಎರಡನೇ ಲೇಖಕಿ ಇವರು. 2012ರಲ್ಲಿ ಲೇಖಕಿ ಸಾರಾ ಅಬೂಬಕರ್ ಆಯ್ಕೆಯಾಗಿದ್ದರು.

ಮಯೂರ ವರ್ಮ ಪ್ರಶಸ್ತಿ: ಮಯೂರ ವರ್ಮ ಸಾಹಿತ್ಯ ಪ್ರಶಸ್ತಿಗೆ ಗದಗ ಜಿಲ್ಲೆಯ ಗಜೇಂದ್ರಗಡದ ಹನುಮಂತ ಸೋಮನಕಟ್ಟಿ, ವಿಜಯನಗರ ಜಿಲ್ಲೆಯ ಕೊಟ್ಟೂರಿನ ಗುಡ್ಡಪ್ಪ ಬೆಟಗೇರಿ, ತುಮಕೂರು ಜಿಲ್ಲೆಯ ಸತ್ಯಮಂಗಲ ಮಹಾದೇವ, ಕಾಸರಗೋಡಿನ ವಿದ್ಯಾರಶ್ಮಿ ಪೆಲ್ಲತ್ತಡ್ಕ, ಹಾಸನ ಜಿಲ್ಲೆಯ ಬೇಲೂರು ರಘುನಂದನ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಒಳಗೊಂಡಿದೆ. 45 ವರ್ಷದೊಳಗಿನ ಪ್ರತಿಭಾವಂತ ಸಾಧಕರಿಗೆ ಪ್ರತಿವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಮಹೇಶ ಜೋಶಿ ವಿವರಿಸಿದ್ದಾರೆ.

ರೂಪಾಗೆ ನೋಟಿಸ್: ಮಾಧ್ಯಮಗಳಿಗೆ ನಿರ್ಬಂಧ

ಬೆಂಗಳೂರು: ‘ನನ್ನ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡದಂತೆ ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಅವರಿಗೆ ನಿರ್ದೇಶಿಸಬೇಕು’ ಎಂದು ಕೋರಿದ್ದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ಮಧ್ಯಂತರ ಅರ್ಜಿಯನ್ನು ಮಾನ್ಯ ಮಾಡಿರುವ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ರೂಪಾ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಪರಸ್ಪರ ಆಕ್ಷೇಪಾರ್ಹ ಹಾಗೂ ಮಾನಹಾನಿ ಹೇಳಿಕೆ ನೀಡದಂತೆ ಡಿ.ರೂಪಾ ಮೌದ್ಗಿಲ್ ಮತ್ತು ರೋಹಿಣಿ ಸಿಂಧೂರಿ ಅವರಿಗೆ ತಾಕೀತು ಮಾಡಿದೆ.

ಈ ಕುರಿತಂತೆ ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅಸಲು ದಾವೆಯನ್ನು ನಗರದ 74ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎಸ್. ಗಂಗಣ್ಣವರ ಬುಧವಾರವಷ್ಟೇ (ಫೆ.22) ವಿಚಾರಣೆ ನಡೆಸಿ, ಮಧ್ಯಂತರ ಆದೇಶವನ್ನು ಗುರುವಾರಕ್ಕೆ (ಫೆ.23) ಕಾಯ್ದಿರಿಸಿದ್ದರು. ಗುರುವಾರ ಆದೇಶ ಪ್ರಕಟಿಸಲಾಗಿದ್ದು, ರೂಪಾ ಸೇರಿದಂತೆ ಪ್ರತಿವಾದಿಗಳಾದ ಮಾಧ್ಯಮ ಸಂಸ್ಥೆಗಳಿಗೂ ಪ್ರತಿಬಂಧಕ ಆದೇಶ ಹೊರಡಿಸಲಾಗಿದೆ. ರೋಹಿಣಿ ಅವರ ವಿರುದ್ಧ ಯಾವುದೇ ಮಾನಹಾನಿಯಾಗುವಂತಹ ಸುದ್ದಿ ಪ್ರಸಾರ ಮಾಡದಂತೆ ಮತ್ತು ಚಿತ್ರ ಅಥವಾ ದೃಶ್ಯಗಳನ್ನು ಬಿತ್ತರಿಸದಂತೆ ಪ್ರತಿಬಂಧಿಸಲಾಗಿದೆ.

ರೋಹಿಣಿ ಸಿಂಧೂರಿ ಪರ ವಕೀಲ ಚನ್ನಬಸಪ್ಪ ಎಸ್. ನಂದಿಹಾಳ ಮಂಡಿಸಿದ್ದ ವಾದವನ್ನು, ಪ್ರತಿವಾದಿಗಳ ಗೈರು ಹಾಜರಿಯಲ್ಲಿ ಮಾನ್ಯ ಮಾಡಿರುವ ನ್ಯಾಯಾಧೀಶರು, ನೋಟಿಸ್‌ಗೆ ಆಕ್ಷೇಪಣೆ ಸಲ್ಲಿಸುವಂತೆ ರೂಪಾ ಅವರಿಗೆ ಸೂಚಿಸಿದ್ದಾರೆ. ವಿಚಾರಣೆಯನ್ನು ಮಾರ್ಚ್ 17ಕ್ಕೆ ಮುಂದೂಡಲಾಗಿದೆ.

ವ್ಯಕ್ತಿ ದೇಹದ 6 ತುಂಡುಗಳು ಪತ್ತೆ; ತನಿಖೆ ಸವಾಲು

ಮಂಡ್ಯ: ತಾಲ್ಲೂಕಿನ ಕೆರಗೋಡು ಪೊಲೀಸ್ ಠಾಣೆ ವ್ಯಾಪ್ತಿಯ ನಾಲೆಯಲ್ಲಿ ಬುಧವಾರ ಪುರುಷರೊಬ್ಬರ ಮೃತ ದೇಹ 6 ತುಂಡುಗಳಲ್ಲಿ ಪತ್ತೆಯಾಗಿದ್ದು, ಪ್ರಕರಣದ ತನಿಖೆ ಪೊಲೀಸರಿಗೆ ಸವಾಲೆನಿಸಿದೆ.

‘ವ್ಯಕ್ತಿಯನ್ನು ಕೊಲೆ ಮಾಡಿ, ತುಂಡುಗಳಾಗಿ ಕತ್ತರಿಸಿ ನಾಲೆಗೆ ಎಸೆಯಲಾಗಿದೆ’ ಎಂದು ಶಂಕಿಸಿರುವ ಪೊಲೀಸರು ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಕಾಣೆಯಾದ ವ್ಯಕ್ತಿಗಳ ಮಾಹಿತಿ ಪಡೆಯುತ್ತಿದ್ದಾರೆ. ವ್ಯಕ್ತಿಗೆ 30–35 ವರ್ಷ ವಯಸ್ಸಾಗಿದ್ದು ಕೈಗಳು, ಕಾಲುಗಳು, ತಲೆ, ಹೊಟ್ಟೆ, ಸೊಂಟದಿಂದ ಮಂಡಿವರೆಗಿನ ಭಾಗವನ್ನು ಕತ್ತರಿಸಲಾಗಿದೆ.

ಬುಧವಾರ ಮಧ್ಯಾಹ್ನ ತಾಲ್ಲೂಕಿನ ಹೊಡಾಘಟ್ಟ ಗ್ರಾಮದ ಬಳಿಯ ಸೀಳು ನಾಲೆಯಲ್ಲಿ ದೇಹದ ಭಾಗ ಪತ್ತೆಯಾದ ನಂತರ ಪೊಲೀಸರು ನಾಲೆಯ ಮೇಲ್ಭಾಗ ಹಾಗೂ ಕೆಳಭಾಗದಲ್ಲಿ ಹುಡುಕಾಡಿದ್ದರು.

ಡಣಾಯಕನಪುರ ಗ್ರಾಮದ ಬಳಿ ಕೈಗಳು, ಶಿವಾರ ಗ್ರಾಮದ ಬಳಿ ಕಾಲುಗಳು, ಕೊಪ್ಪ ಗ್ರಾಮದ ಬಳಿ ತಲೆ, ಮಂಡಿವರೆಗಿನ ಭಾಗ ಪತ್ತೆಯಾದವು. ಒಂದು ಕೈನಲ್ಲಿ ವಂಜಾಕ್ಷಿ, ಇನ್ನೊಂದು ಕೈಯಲ್ಲಿ ಕಾವ್ಯ ರಘು ಎಂಬ ಹಚ್ಚೆ ಇದೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಭೇಟಿ ನೀಡಿದ್ದು, ‘ಕೊಲೆ ಎಲ್ಲಿ ನಡೆದಿದೆ ಎಂಬುದು ತಿಳಿಯುತ್ತಿಲ್ಲ, ಫೆ.19ರಂದು ನಾಲೆಗೆ ನೀರು ಹರಿಸಿದ್ದು ಮೃತದೇಹದ ತುಂಡುಗಳು ತೇಲಿ ಬಂದಿರಬಹುದು. ತನಿಖೆ ಚುರುಕುಗೊಳಿಸಲಾಗಿದೆ’ ಎಂದರು.

ಕಳೆದ ವರ್ಷ ಪಾಂಡವಪುರ ತಾಲ್ಲೂಕಿನ ಬೇಬಿ ಗ್ರಾಮ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಗ್ರಾಮದ ನಾಲೆಯಲ್ಲಿ ಇಬ್ಬರು ಮಹಿಳೆಯರ ಶವಗಳು ಎರಡು ತುಂಡುಗಳಾಗಿ ಪತ್ತೆಯಾಗಿದ್ದವು. ಇಬ್ಬರನ್ನೂ ಹೊಟ್ಟೆಯಿಂದ ಕೆಳಭಾಗಕ್ಕೆ ಎರಡು ತುಂಡುಗಳಾಗಿ ಕತ್ತರಿಸಿ ಹತ್ಯೆ ಮಾಡಲಾಗಿತ್ತು.

ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ತಾಲ್ಲೂಕಿನ ಸೋಲೂರು ಆರ್ಯ ಈಡಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿನ ಆರ್.ಎಲ್. ಜಾಲಪ್ಪ ಅಕಾಡೆಮಿ ವತಿಯಿಂದ ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ ಪರೀಕ್ಷೆಗೆ ಪದವೀಧರ ಯುವಕ, ಯುವತಿಯರಿಗೆ ಮಾರ್ಚ್‌ನಿಂದ ನಾಲ್ಕು ತಿಂಗಳ ಉಚಿತ ತರಬೇತಿ ಆರಂಭಿಸಲಾಗುತ್ತದೆ.

ಆಸಕ್ತರು www.rljacademy.in ವೆಬ್ ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಆರ್.ಎಲ್. ಜಾಲಪ್ಪ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಮಾಹಿತಿಗಾಗಿ 9900606042 /9731480759/8660495498 ಸಂಪರ್ಕಿಸಬಹುದು.

ಡಿ.ಉಮಾಪತಿಗೆ ಅಂಬೇಡ್ಕರ್ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2022–23ನೇ ಸಾಲಿನ ಬಾಬಾ ಸಾಹೇಬ್ ಅಂಬೇಡ್ಕರ್ ದತ್ತಿ ಪ್ರಶಸ್ತಿಗೆ ಪತ್ರಕರ್ತ ಡಿ. ಉಮಾಪತಿ ಆಯ್ಕೆಯಾಗಿದ್ದಾರೆ.

ಡಿ.ಉಮಾಪತಿ

‘ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. ಬಾಗಲಕೋಟೆಯ ಪತ್ರಕರ್ತ ಸುಭಾಷ್ ಹೊದ್ಲೂರು ಅವರು ಅಂಬೇಡ್ಕರ್ ಹೆಸರಿನಲ್ಲಿ ವಾರ್ಷಿಕ ಪ್ರಶಸ್ತಿಗೆ ದತ್ತಿನಿಧಿ ಸ್ಥಾಪಿಸಿದ್ದು, 2021-22ನೇ ಸಾಲಿನಿಂದ ನೀಡಲಾಗುತ್ತಿದೆ’ ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಏಳು ಐಪಿಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ರಾಜ್ಯ ಸರ್ಕಾರ ಏಳು ಐಪಿಎಸ್ ಅಧಿಕಾರಿಗಳನ್ನು ಗುರುವಾರ ವರ್ಗಾವಣೆ ಮಾಡಿದೆ.

ಎನ್. ಶಶಿಕುಮಾರ್– ಡಿಐಜಿಪಿ, ರೈಲ್ವೆ ಇಲಾಖೆ. ಕುಲದೀಪ್ ಕುಮಾರ್ ಆರ್. ಜೈನ್– ಮಂಗಳೂರು ನಗರ ಪೊಲೀಸ್ ಕಮಿಷನರ್. ಡಿ. ಕಿಶೋರ್ ಬಾಬು– ಎಸ್ಪಿ, ಗುಪ್ತಚರ. ಡಾ. ಕೋನ ವಂಶಿಕೃಷ್ಣ– ಪೊಲೀಸ್ ಸೂಪರಿಂಟೆಂಡೆಂಟ್, ವೈರ್‌ಲೆಸ್, ಬೆಂಗಳೂರು. ಎಂ.ಎಸ್. ಮೊಹಮದ್ ಸುಜೀತ– ಡಿಸಿಪಿ, ಸಂಚಾರ ದಕ್ಷಿಣ, ಬೆಂಗಳೂರು ನಗರ. ಅರುಣಾಂಗ್ಶು ಗಿರಿ– ಡಿಸಿಪಿ, ಸಿಎಆರ್, ಬೆಂಗಳೂರು ನಗರ. ಯಶೋದಾ ವಂಟಗೋಡಿ– ಎಸ್ಪಿ, ಕೊಪ್ಪಳ.

ಇಡ್ಕಿದು ಗ್ರಾಮದ ಮಿತ್ತೂರಿನಲ್ಲಿರುವ ಫ್ರೀಡಂ ಕಮ್ಯುನಿಟಿ ಹಾಲ್

ಮಿತ್ತೂರು ಫ್ರೀಡಂ ಕಮ್ಯುನಿಟಿ ಹಾಲ್ ಎನ್‌ಐಎ ವಶಕ್ಕೆ

ವಿಟ್ಲ: ಬಿಜೆಪಿ ಯುವಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಇಡ್ಕಿದು ಗ್ರಾಮದ ಮಿತ್ತೂರಿನ ಫ್ರೀಡಂ ಕಮ್ಯುನಿಟಿ ಹಾಲ್ ಅನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಗುರುವಾರ ವಶಕ್ಕೆ ಪಡೆದಿದೆ.

ಫ್ರೀಡಂ ಎಜುಕೇಷನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್ ಒಡೆತನಕ್ಕೆ ಸೇರಿದ ಈ ಸಭಾಂಗಣವು 20 ಸೆಂಟ್ಸ್ ಜಾಗದಲ್ಲಿದೆ.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಪ್ರಮುಖ ಆರೋಪಿಗಳಿಗೆ ಶಸ್ತ್ರಾಸ್ತ್ರ ತರಬೇತಿ ನೀಡಲು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆ ಈ ಸಭಾಂಗಣವನ್ನು ಬಳಸಿಕೊಂಡಿತ್ತು ಎಂಬುದು ಎನ್‌ಐಎ ಆರೋಪ.

‘ಭಯೋತ್ಪಾದನಾ ಚಟುವಟಿಕೆ ತರಬೇತಿಗೆ ಬಳಸಿದ ಈ ಸಭಾಂಗಣ ಹಾಗೂ ಜಾಗವನ್ನು ಎನ್‌ಐಎ 1967ರ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ ಸೆಕ್ಷನ್ 25ರ ಅನ್ವಯ ತನ್ನ ಸ್ವಾಧೀನಕ್ಕೆ ಪಡೆದುಕೊಂಡಿದೆ. ಈ ಜಮೀನನ್ನು ಪರಭಾರೆ ಮಾಡುವುದು, ಹಕ್ಕನ್ನು ವರ್ಗಾವಣೆ ಮಾಡುವುದು ಹಾಗೂ ಭೋಗ್ಯಕ್ಕೆ ನೀಡುವುದೂ ಸೇರಿದಂತೆ ಇನ್ನ್ಯಾವುದೇ ರೀತಿಯ ಬದಲಾವಣೆ ಮಾಡುವುದನ್ನು ನಿರ್ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಸಂಬಂಧ ಫ್ರೀಡಂ ಎಜುಕೇಷನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿ ಅಬ್ದುಲ್ ಸಿದ್ದಿಕ್ ಅವರಿಗೆ ಎನ್‌ಐಎ ಮುಖ್ಯ ತನಿಖಾಧಿಕಾರಿ ಷಣ್ಮುಗಂ ಎಂ. ಅವರು ನೋಟಿಸ್ ಜಾರಿಗೊಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು,
ಭಾರತ ಸರ್ಕಾರ

ಸ್ವಾತಂತ್ರ್ಯದ ಅಮೃತಮಹೋತ್ಸವ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ನಿಮಗಿದೊ ‘ಕಲ್ಯಾಣ ಕರ್ನಾಟಕ ಉತ್ಸವ’ಕ್ಕೆ ನಲ್ಮೆಯ ಕರೆಯೋಲೆ!

ಈಶಾನ್ಯ ಕರ್ನಾಟಕ ರಾಜ್ಯದ 7 ಜಿಲ್ಲೆಗಳನ್ನೊಳಗೊಂಡ, ಈ ಕಲ್ಯಾಣ ಕರ್ನಾಟಕದ ಚರಿತ್ರೆ, ಪರಂಪರೆ ಮತ್ತು ಇತಿಹಾಸ ಬಲು ಅಪಾರ ಮತ್ತು ಅನುಪಮ. ಇದನ್ನು ನಿಮಗೆ ತಿಳಿಸಿ, ಬೆಳಸಿ ಮತ್ತು ಉಳಿಸುವ ನಿಟ್ಟಿನಲ್ಲಿ, ‘ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ’ ಕಲಬುರಗಿಯು ಇದೇ ಫೆಬ್ರವರಿ 24, 25 ಮತ್ತು 26ರಂದು ‘ಕಲ್ಯಾಣ ಕರ್ನಾಟಕ ಉತ್ಸವ’ ವನ್ನು ಆಚರಿಸುತ್ತಿದೆ.

ಈ ಉತ್ಸವದಲ್ಲಿ ದೇಶ ಮತ್ತು ರಾಜ್ಯ ಮಟ್ಟದ ವಿವಿಧ ಬಗೆಯ ಪ್ರತಿಭಾನ್ವಿತ ಕಲಾವಿದರು ನಿಮ್ಮನ್ನು ರಂಜಿಸಲಿದ್ದಾರೆ. ಇದೂ ಅಲ್ಲದೇ

- ಕಲ್ಯಾಣ ಕರ್ನಾಟಕದ ಜಾನಪದ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಸಾರುವ ಭವ್ಯ ಮೆರವಣಿಗೆ ಮತ್ತು ಸ್ತಬ್ದ ಚಿತ್ರಗಳು
- ವಸ್ತು ಪ್ರದರ್ಶನ, ಪುಸ್ತಕ ಪ್ರದರ್ಶನ, ಚಿತ್ರಕಲೆ ಮತ್ತು ಶಿಲ್ಪಕಲೆ ಪ್ರದರ್ಶನ
- ಮಹಿಳಾ ಉತ್ಸವ, ಮಕ್ಕಳ ಉತ್ಸವ ಮತ್ತು ಗಾಳಿಪಟ ಉತ್ಸವ
- ಮತ್ಸ್ಯ ಮೇಳ, ಆಹಾರ ಮೇಳ ಮತ್ತು ಸಿರಿಧಾನ್ಯ ಮೇಳ
- ಟಾಂಗಾ ಸವಾರಿ, ಶ್ವಾನ ಪ್ರದರ್ಶನ, ಐತಿಹಾಸಿಕ ಮತ್ತು ಪಾರಂಪರಿಕ ಪ್ರದರ್ಶನ
- ಸಾಹಸ ಪ್ರಿಯರಿಗೆ ಜಲ ಕ್ರೀಡೆ, ಹೆಲಿಕಾಪ್ಟರ್ ರೈಡ್, ಪ್ಯಾರಾ ಗ್ಲೈಡಿಂಗ್ ಮತ್ತು ಹಾಟ್ ಏರ್ ಬಲೂನ್ ರೈಡ್ಸ್ ಹಾಗೂ ಇನ್ನೂ ಹಲವು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

ಬನ್ನಿ, ನಾಡಿನ ಹಿರಿಮೆ ಮತ್ತು ಸೊಗಸನ್ನು ಸವಿಯಿರಿ ಮತ್ತು ಶ್ರೀಮಂತ ಅನುಭವವನ್ನು ಮನೆಗೆ ಕೊಂಡುಹೋಗಿ.

ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಶ್ರೀ ಮುನಿರತ್ನ, ಮಾನ್ಯ ಸಚಿವರು ಹಾಗೂ ಸನ್ಮಾನ್ಯ ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ, ಮಾನ್ಯ ಅಧ್ಯಕ್ಷರು, ಕ.ಕ.ಪ್ರ.ಅ.ಮಂ. ರವರು, ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವ–2022ನ್ನು ಉದ್ಘಾಟಿಸಿದ ಸಾಂದರ್ಭಿಕ ಚಿತ್ರ.

ಸ್ಥಳ: ಗುಲಬರ್ಗಾ ವಿಶ್ವವಿದ್ಯಾಲಯ
ದಿನಾಂಕ: 24, 25 ಮತ್ತು 26ನೇ ಫೆಬ್ರವರಿ

KalyanaKarnatakaUtsava.com

ಸಹಾಯವಾಣಿ: 702 284 3252 / 734 880 5437

ಕಾರ್ಯಕ್ರಮದ ಸಂಪೂರ್ಣ ವೇಳಾಪಟ್ಟಿಯನ್ನು ಡೌನ್‌ಲೋಡ್ ಮಾಡಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಶೇಕಡ 40ರಷ್ಟು ಇಳುವರಿ ತಗ್ಗಿಸುವ ಕೀಟ • ರೈತರ ನಷ್ಟಕ್ಕೆ ವಿಜ್ಞಾನಿಗಳ ಪರಿಹಾರ

ಟೊಮೆಟೊ 'ಟುಟಾ' ಕೊಲ್ಲಲು 'ದೀಪದ ಬಲೆ'

• ಸಂತೋಷ ಜಿಗಳಿಕೊಪ್ಪ

ವಿದ್ಯುತ್ ಚಾಲಿತ ದೀಪದ ಬಲೆ

ಬೆಂಗಳೂರು: ಟೊಮೆಟೊ ಗಿಡ ಹಾಗೂ ಕಾಯಿಯನ್ನು ಭಾಗಶಃ ತಿಂದು ಹಾಕಿ ಶೇ 20ರಿಂದ 40ರಷ್ಟು ಇಳುವರಿ ಕುಂಠಿತಗೊಳಿಸುವ ಟುಟಾ ಅಬ್ಸೊಲುಟಾ (ಊಜಿ) ಕೀಟಬಾಧೆಗೆ ಪರಿಹಾರ ಕಂಡುಕೊಂಡಿರುವ ವಿಜ್ಞಾನಿಗಳು, ವಿದ್ಯುತ್ ಹಾಗೂ ಸೋಲಾರ್ ಚಾಲಿತ 'ದೀಪದ ಬಲೆ' ಉಪಕರಣ ಆವಿಷ್ಕರಿಸಿದ್ದಾರೆ.

'ರಾಷ್ಟ್ರೀಯ ತೋಟಗಾರಿಕೆ ಮೇಳ'ದಲ್ಲಿ ಈ ಉಪಕರಣದ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ. ಯಾವುದೇ ಔಷಧಿ ಸಿಂಪಡಿಸದೇ, ಕೀಟಗಳನ್ನು ಕೊಲ್ಲುವ ಈ ಉಪಕರಣ ರೈತರ ಗಮನ ಸೆಳೆಯುತ್ತಿದೆ.

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಹಾಗೂ ಇತರೆ ರಾಜ್ಯಗಳಲ್ಲಿ ಟೊಮೆಟೊ ಬೆಳೆಯುವ ರೈತರು, ಟುಟಾ ಕೀಟದಿಂದ ನಷ್ಟ ಅನುಭವಿಸುತ್ತಿದ್ದಾರೆ. ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಗಳ ಮೇಲೆ ದಾಳಿ ಮಾಡುವ ಟುಟಾ ಕೀಟಗಳು, ಟೊಮೆಟೊ ಗಿಡ ಹಾಗೂ ಕಾಯಿ ಮೇಲೆ ಕುಳಿತುಕೊಳ್ಳುತ್ತವೆ. ನಂತರ, ಹಂತ ಹಂತವಾಗಿ ಗಿಡ ಹಾಗೂ ಕಾಯಿ ತಿನ್ನುತ್ತವೆ. ಕಾಯಿಯೊಳಗೆ ರಂಧ್ರಗಳು ಬಿದ್ದು, ಕೊಳೆಯುತ್ತವೆ.

'ದಕ್ಷಿಣ ಆಫ್ರಿಕಾದಿಂದ ಲಗ್ಗೆ ಇಟ್ಟಿರುವ ಟುಟಾ ಅಬ್ಸೊಲುಟಾ ಕೀಟಕ್ಕೆ, ಊಜಿ ಅಥವಾ ರಂಗೋಲಿ ಕೀಟವೆಂದೂ ಕರೆಯುತ್ತಾರೆ. ಇದರ ನಿಯಂತ್ರಣಕ್ಕಾಗಿ ಔಷಧ ಸಿಂಪರಣೆ ಮಾಡಲಾಗುತ್ತದೆ. ಆದರೆ, ಔಷಧಿ ಬಳಸದೇ ಕೀಟ ಕೊಲ್ಲಲು ಉಪಕರಣ ಆವಿಷ್ಕರಿಸಲಾಗಿದೆ. ಈಗಾಗಲೇ ರೈತರ ಜಮೀನುಗಳಲ್ಲಿ ಪ್ರಾಯೋಗಿಕವಾಗಿ ಉಪಕರಣ ಇರಿಸಲಾಗಿದ್ದು, ಉತ್ತಮ ಫಲಿತಾಂಶ ಸಿಕ್ಕಿದೆ' ಎಂದು ಸಸ್ಯ ರಕ್ಷಣಾ ವಿಭಾಗದ ಮುಖ್ಯಸ್ಥ ಡಾ. ಪಿ. ವೆಂಕಟರಾಮಿರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಉಪಕರಣ ತಂತ್ರಜ್ಞಾನವನ್ನು ಖಾಸಗಿಯವರಿಗೆ ನೀಡಿ, ಅದನ್ನು ರೈತರಿಗೆ ತಲುಪಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ವಿದ್ಯುತ್ ಹಾಗೂ ಸೋಲಾರ್ ಚಾಲಿತವಿರುವ ಉಪಕರಣದ ಬೆಲೆ ₹ 3,000ರಿಂದ ₹ 4,500 ಆಗಬಹುದು. ಇದಕ್ಕಿಂತಲೂ ಕಡಿಮೆ ಬೆಲೆಗೆ ರೈತರಿಗೆ ತಲುಪಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಹೇಳಿದರು.

ಎಕರೆಗೆ ಎರಡು ಉಪಕರಣ: 'ಬಲ್ಬ್, ಪ್ಲಾಸ್ಟಿಕ್ ತಟ್ಟೆಗಳು, ಚಿಕ್ಕ ಫ್ಯಾನ್ ಹಾಗೂ ಬಲೆ ಬಳಸಿ ಈ ಉಪಕರಣ ಸಿದ್ಧಪಡಿಸಲಾಗುತ್ತದೆ. ಎಕರೆಗೆ ಎರಡು ಕಡೆ ಉಪಕರಣ ಇರಿಸಬಹುದು' ಎಂದು ಪ್ರಧಾನ ವಿಜ್ಞಾನಿ ಡಾ. ವಿ. ಶ್ರೀಧರ್ ಹೇಳಿದರು.

'ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಉಪಕರಣ ಬಳಸಬಹುದು. ಬಲ್ಬ್ ಬೆಳಕಿಗೆ ಆಕರ್ಷಣೆಯಾಗುವ ಕೀಟಗಳನ್ನು ಎಳೆದುಕೊಳ್ಳುವ ಫ್ಯಾನ್, ಬಲೆಗೆ ಬೀಳಿಸುತ್ತದೆ. ಬಲೆಯಲ್ಲಿರುವ ದ್ರಾವಣ, ಕೀಟಗಳನ್ನು ಕೊಲ್ಲುತ್ತದೆ. ಹೆಣ್ಣು ಕೀಟಗಳ ಸಂತಾನೋತ್ಪತ್ತಿಯೂ ಕ್ಷೀಣಿಸುತ್ತದೆ. ಉಪಕರಣವನ್ನು ರಾತ್ರಿ ಮಾತ್ರ ಬಳಸುವುದರಿಂದ, ಜೇನು ನೊಣ ಹಾಗೂ ಇತರೆ ಉಪಯೋಗಕಾರಿ ಕೀಟಗಳಿಗೆ ಯಾವುದೇ ತೊಂದರೆಯಾಗದು' ಎಂದು ತಿಳಿಸಿದರು.

'ಟೊಮೆಟೊ ಗಿಡಗಳು 25 ದಿನವಿದ್ದಾಗಿನಿಂದಲೇ ಈ ಕೀಟ ಆವರಿಸಿಕೊಳ್ಳುತ್ತದೆ. ಸಸಿಯ ಎಳೆ ಕೊಂಬೆಗಳು, ಕಾಯಿ ಹಾಗೂ ಹಣ್ಣು ಎಲ್ಲವನ್ನೂ ಕೀಟ ಆವರಿಸಿಕೊಳ್ಳುತ್ತದೆ. ಸೋಂಕಿತ ಹಣ್ಣುಗಳು ಭಾಗಶಃ ಕೊಳೆಯುತ್ತವೆ. ಬದನೆ ಹಾಗೂ ಇತರೆ ತರಕಾರಿ ಬೆಳೆಯಲ್ಲೂ ಈ ಕೀಟದ ಹಾವಳಿ ಇದ್ದು, ಪ್ರಮಾಣ ಕಡಿಮೆ ಇದೆ' ಎಂದರು.

ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಪ್ರದರ್ಶನ ತಾಕುಗಳಲ್ಲಿ ಹಾಕಲಾಗಿದ್ದ ನೂತನ ತಳಿಗಳ ಬೆಳೆಗಳನ್ನು ವೀಕ್ಷಿಸುತ್ತಿರುವ ಮಹಿಳೆಯರು –ಪ್ರಜಾವಾಣಿ ಚಿತ್ರಗಳು / ಕೃಷ್ಣಕುಮಾರ್ ಪಿ.ಎಸ್.

ಬಹೂಪಯೋಗಿ 'ಫಾರ್ಮ್ ರೋವರ್'

• ಖಲೀಲಅಹ್ಮದ ಶೇಖ

ಬೆಂಗಳೂರು: ಕೃಷಿ ಜಮೀನು ಹದ ಮಾಡಲು, ಬೀಜ ಬಿತ್ತಲು, ಕಳೆ ತೆಗೆಯಲು, ಗೊಬ್ಬರ ಸಾಗಿಸಲು ಟ್ರ್ಯಾಕ್ಟರ್ ಹಾಗೂ ಎತ್ತುಗಳನ್ನು ಬಳಸುವುದು ಸಾಮಾನ್ಯ. ಆದರೆ, ಇದಕ್ಕೆ ಪರ್ಯಾಯವಾಗಿ ವಿದ್ಯುತ್ ಚಾಲಿತ 'ಫಾರ್ಮ್ ರೋವರ್' ಆವಿಷ್ಕರಿಸಲಾಗಿದೆ.

ಎಂಜಿನಿಯರಿಂಗ್ ಪದವೀಧರರಾದ ವಿ. ಕೇಶವ ಪ್ರಕಾಶ್ ಮತ್ತು ವಿನೋದ್ ಅರ್ವಾ ಅವರು 'ಪ್ಲಾಂಟೆಕ್' ನವೋದ್ಯಮ ಹುಟ್ಟುಹಾಕಿದ್ದು, ಫಾರ್ಮ್ ರೋವರ್ ಸಿದ್ಧಪಡಿಸಿದ್ದಾರೆ. ಮೈಸೂರಿನಲ್ಲಿ ಮುಖ್ಯ ಕಚೇರಿ ಹೊಂದಿರುವ ಈ ನವೋದ್ಯಮ, ಕೃಷಿ ಬಳಕೆಗೆ ಅನುಕೂಲವಾಗುವ ರೀತಿಯಲ್ಲಿ ರೋವರ್ ಪ್ರಾಯೋಗಿಕ ಪರೀಕ್ಷೆ ಮಾಡುತ್ತಿದ್ದಾರೆ. ಕೆಲ ತಿಂಗಳಿನಲ್ಲೇ ಮಾರುಕಟ್ಟೆಗೆ ಬಿಡುಗಡೆ ಮಾಡುವ ತಯಾರಿಯಲ್ಲಿದ್ದಾರೆ.

ಹೆಸರಘಟ್ಟದಲ್ಲಿ ನಡೆಯುತ್ತಿರುವ 'ರಾಷ್ಟ್ರೀಯ ತೋಟಗಾರಿಕೆ ಮೇಳ'ದಲ್ಲಿ 'ಫಾರ್ಮ್ ರೋವರ್' ರೈತರಿಗೆ ಹೊಸದೊಂದು ಕಲ್ಪನೆಯ ಪರಿಚಯ ಮಾಡಿಸುತ್ತಿದೆ.

'ಸಣ್ಣ ಮತ್ತು ಅತಿ ಸಣ್ಣ ರೈತರು ಟ್ರ್ಯಾಕ್ಟರ್ ಖರೀದಿ ಮಾಡುವುದು ಕಷ್ಟ. ಅದಕ್ಕೆ ಅವರು ಸಣ್ಣ ಕೃಷಿ ಯಂತ್ರಗಳಾದ ರೋಟಾವೇಟರ್, ಟಿಲ್ಲರ್‌ಗಳನ್ನು ಅವಲಂಬಿಸುತ್ತಾರೆ. ಆದರೆ, ಅವುಗಳ ಬಾಳಿಕೆ ಬಹಳ ಕಡಿಮೆ. ನಮ್ಮ 'ಫಾರ್ಮ್ ರೋವರ್' ಚಿಕ್ಕ ಟ್ರ್ಯಾಕ್ಟರ್ ರೀತಿಯಲ್ಲೇ ಕೆಲಸ ಮಾಡುವ ಸಾಮರ್ಥ್ಯ ಹೊಂದಿದೆ' ಎಂದು ವಿ. ಕೇಶವ ಪ್ರಕಾಶ್ 'ಪ್ರಜಾವಾಣಿ'ಗೆ ಹೇಳಿದರು.

'ಬೀಜ ಬಿತ್ತನೆ, ಔಷಧ ಸಿಂಪಡಣೆ, ಹೊಲ ಊಳುವುದಷ್ಟೇ ಅಲ್ಲದೆ ಎಲ್ಲ ಪ್ರಕಾರದ ಕಳೆ ತೆಗೆಯಲು ಇದು ಸಹಕಾರಿ. ಜೊತೆಗೆ ಮಣ್ಣು ಮತ್ತು ಅದರ ಸೂಕ್ಷ್ಮ ರಚನೆಯ ಸಂರಕ್ಷಣೆ, ರಸಗೊಬ್ಬರ ಮತ್ತು ಧಾನ್ಯಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಎಳೆದೊಯ್ಯುತ್ತದೆ. 250 ಕೆ.ಜಿ. ಭಾರವನ್ನು ಎಳೆಯುವ ಸಾಮರ್ಥ್ಯ ಇದಕ್ಕಿದೆ. ಕಾರ್ಮಿಕರ ಕೊರತೆಗೂ ಇದು ಪರಿಹಾರವಾಗಲಿದೆ' ಎಂದು ಅವರು ತಿಳಿಸಿದರು.

ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಪ್ರದರ್ಶಿಸಲಾದ ಕೃಷಿ ಬಳಕೆಗೆ ನೂತನವಾಗಿ ಆವಿಷ್ಕರಿಸಿರುವ ಫಾರ್ಮ್ ರೋವರ್

ವಿನೋದ್ ಅರ್ವಾ ಮಾತನಾಡಿ, 'ರಿಮೋಟ್ ಮೂಲಕ ಕಾರ್ಯನಿರ್ವಹಿಸುವ ಈ ಯಂತ್ರ, ಟ್ರ್ಯಾಕ್ಟರ್ ಮಾಡುವ ಎಲ್ಲ ಪ್ರಾಥಮಿಕ ಕೆಲಸಗಳನ್ನು ಮಾಡುತ್ತದೆ. ಟ್ರಾಲಿ, ರಂಟೆ, ಕುಂಟೆ, ಸ್ಪಿಂಕ್ಲರ್ಸ್‌ಗಳನ್ನು ಫಾರ್ಮ್ ರೋವರ್‌ಗೆ ಅಳವಡಿಸಬಹುದು' ಎಂದರು.

'ಇದು ಸಂಪೂರ್ಣ ವಿದ್ಯುತ್ ಚಾಲಿತವಾಗಿದ್ದು, ಒಮ್ಮೆ ಚಾರ್ಜ್ ಮಾಡಿದರೆ ನಾಲ್ಕು ಗಂಟೆ ಕಾರ್ಯಾಚರಣೆ ಮಾಡುತ್ತದೆ. ಇದರ ವೇಗದ ಮಿತಿ 10 ಕಿ.ಮೀ. ಮುಂದಿನ ದಿನಗಳಲ್ಲಿ ಸೋಲಾರ್ ಮೂಲಕ ಬ್ಯಾಟರಿ ಚಾರ್ಜ್ ಮಾಡುವ ವ್ಯವಸ್ಥೆ ಅಳವಡಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದರು.

ತೋಟಗಾರಿಕೆ ಮೇಳ: 11 ಸಾವಿರ ಜನ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಐಐಎಚ್‌ಆರ್ ಆವರಣದಲ್ಲಿ ನಡೆಯುತ್ತಿರುವ 'ರಾಷ್ಟ್ರೀಯ ತೋಟಗಾರಿಕೆ ಮೇಳ'ಕ್ಕೆ ಗುರುವಾರ 11 ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿದರು.

ಮೇಳದಲ್ಲಿ ಮೊದಲ ದಿನ (ಬುಧವಾರ) ಹೆಚ್ಚು ಜನ ಇರಲಿಲ್ಲ. ರೈತರೂ ಸಹ ಮೇಳದಲ್ಲಿ ಬೆರಳೆಣಿಕೆ ಎಂಬಂತೆ ಭಾಗವಹಿಸಿದ್ದರು. ಆದರೆ, ಎರಡನೇ ದಿನವಾದ ಗುರುವಾರ ಭೇಟಿ ನೀಡಿದ ರೈತರ ಸಂಖ್ಯೆ ಹೆಚ್ಚಾಗಿತ್ತು. ಸಾರ್ವಜನಿಕರೂ ಕುಟುಂಬ ಸಮೇತರಾಗಿ ಮೇಳ ವೀಕ್ಷಿಸಿದರು.

ಐಐಎಚ್‌ಆರ್ ಆವರಣದಲ್ಲಿ ಬೆಳೆದಿರುವ ಎಲೆ ಸೂರುಗು ರೋಗ ಬಾಧಿಸದ ಬದನೆಕಾಯಿಯ ನೂತನ ತಳಿಗಳಾದ ಅರ್ಕಾ ಹರ್ಷಿತಾ, ಅವಿನಾಶ್ ತಳಿಗಳ ರೈತರನ್ನು ಆಕರ್ಷಣೆಯಾಗಿದ್ದವು. 'ಈ ತಳಿಯ ಬದನೆಕಾಯಿ ಬೆಳೆ ಒಂದು ಹೆಕ್ಟೇರ್‌ನಲ್ಲಿ 35–40 ಟನ್ ಬೆಳೆಯಬಹುದು. ಕೇರಳ, ತಮಿಳುನಾಡು, ಬೆಂಗಳೂರು ಮತ್ತು ಮೈಸೂರು ಭಾಗಗಳಲ್ಲಿ ಈ ತಳಿಯ ಬದನೆಕಾಯಿಗೆ ಹೆಚ್ಚಿನ ಬೇಡಿಕೆ ಇದೆ' ಎಂದು ಪ್ರಧಾನ ವಿಜ್ಞಾನಿ ಟಿ.ಎಚ್ ಸಿಂಗ್ ವಿವರಿಸಿದರು.

ಮೇಳಕ್ಕೆ ವಿವಿಧ ಕಾಲೇಜುಗಳಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ತೋಟಗಳಿಗೆ ತೆರಳಿ ಅಲ್ಲಿದ್ದ ಬಣ್ಣ ಬಣ್ಣದ ಹೂಗಳೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

'ತಮಿಳುನಾಡು, ಆಂಧ್ರಪ್ರದೇಶ, ಕೇರಳ, ತೆಲಂಗಾಣ, ಹರಿಯಾಣ, ಛತ್ತೀಸ್‌ಗಢದಿಂದ ತೋಟಗಾರಿಕೆ ಮೇಳಕ್ಕೆ 2000ಕ್ಕೂ ಹೆಚ್ಚು ರೈತರು ಭೇಟಿ ನೀಡಿದ್ದರು. ಬೀಜ ಮತ್ತು ನಾಟಿ ವಸ್ತುಗಳಿಗೆ ಭಾರಿ ಬೇಡಿಕೆ ಕಂಡು ಬಂದಿತು' ಎಂದು ಆಯೋಜಕರು ಮಾಹಿತಿ ನೀಡಿದರು.

ಒಂದೂವರೆ ವರ್ಷಕ್ಕೆ ಫಸಲು ನೀಡುವ ಹಲಸು: ಆಳೆತ್ತರ ಬೆಳೆಯುವಷ್ಟರಲ್ಲೇ ಫಸಲು ಬಿಡುವ ನಿನ್ನಿಕಲ್ಲು ತಳಿಯ ಹಲಸಿನ ಸಸಿಗಳನ್ನು ರೈತರು ಮತ್ತು ಸಾರ್ವಜನಿಕರು ಖರೀದಿಸಿದರು.

'ಅತ್ಯಂತ ಬೇಗ ಫಸಲು ನೀಡುವ ತಳಿ ಇದಾಗಿದೆ. ನಮ್ಮದೇ ನರ್ಸರಿಯಲ್ಲಿ ಅಭಿವೃದ್ಧಿಪಡಿಸಿ ರೈತರಿಗೆ ಮಾರಲಾಗುತ್ತಿದೆ' ಎಂದು ಜಾಕ್ ಅನಿಲ್ ತಿಳಿಸಿದರು.

ಸುದ್ದಿ 2 ನಿಮಿಷ

2ನೇ ಉಪಲೋಕಾಯುಕ್ತ ಹುದ್ದೆ ಖಾಲಿ: ಹೈಕೋರ್ಟ್ ನೋಟಿಸ್

ಬೆಂಗಳೂರು: ಖಾಲಿಯಿರುವ ಎರಡನೇ ಉಪ ಲೋಕಾಯುಕ್ತ ಹುದ್ದೆಯನ್ನು ಭರ್ತಿ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಸಮಾಜ ಪರಿವರ್ತನಾ ಸಮುದಾಯ'ದ ಸ್ಥಾಪಕ ಅಧ್ಯಕ್ಷ ಎಸ್.ಆರ್.ಹಿರೇಮಠ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಆಕ್ಷೇಪ: 'ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಎರಡನೇ ಉಪ ಲೋಕಾಯುಕ್ತರಾಗಿ 2019ರ ನವೆಂಬರ್ 20ರಂದು ನೇಮಕಗೊಂಡಿದ್ದರು. ನಂತರ 2022ರ ಜೂನ್ 14ರಂದು ಲೋಕಾಯುಕ್ತರಾಗಿ ಪದೋನ್ನತಿ ಹೊಂದಿದರು. ಅಂದಿನಿಂದ ಎರಡನೇ ಉಪ ಲೋಕಾಯುಕ್ತ ಹುದ್ದೆ ಖಾಲಿಯಿದ್ದು, ಈವರೆಗೂ ಭರ್ತಿಯಾಗಿಲ್ಲ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಕೋರಿಕೆ: 'ಈ ಹುದ್ದೆ ಖಾಲಿ ಉಳಿದಿರುವುದರಿಂದ ಲೋಕಾಯುಕ್ತದಲ್ಲಿ ಬಾಕಿಯಿರುವ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. 2020ರ ಡಿಸೆಂಬರ್ ಅಂತ್ಯಕ್ಕೆ ಲೋಕಾಯುಕ್ತದಲ್ಲಿ ಒಟ್ಟು 11,448 ಪ್ರಕರಣ ಇತ್ಯರ್ಥಕ್ಕೆ ಬಾಕಿ ಉಳಿದಿದ್ದವು. ಅದರಲ್ಲಿ ಎರಡನೇ ಉಪ ಲೋಕಾಯುಕ್ತರ ಮುಂದೆಯೇ ಒಟ್ಟು 4,232 ಪ್ರಕರಣಗಳು ಬಾಕಿ ಇವೆ. ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಅನುಸಾರ ಎರಡನೇ ಉಪ ಲೋಕಾಯುಕ್ತ ಹುದ್ದೆ ಭರ್ತಿ ಮಾಡುವುದು ಕಡ್ಡಾಯ.

ಆದ್ದರಿಂದ, ಕೂಡಲೇ ಈ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಕೋ.ಚೆನ್ನಬಸಪ್ಪ ಶತಮಾನೋತ್ಸವ ಸಮಾರೋಪ ಸಮಾರಂಭ 26ಕ್ಕೆ

ಬೆಂಗಳೂರು: 'ಕರ್ನಾಟಕ ಏಕೀಕರಣ ಚಳವಳಿಯ ಹೋರಾಟಗಾರ, ಸಾಹಿತಿ ಹಾಗೂ ನಿವೃತ್ತ ನ್ಯಾಯಾಧೀಶರಾಗಿದ್ದ ಕೋ.ಚೆನ್ನಬಸಪ್ಪ ಅವರ ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭವನ್ನು ಫೆ.26ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಕೋ.ಚೆನ್ನಬಸಪ್ಪ ಜನ್ಮಶತಮಾನೋತ್ಸವ ಸಮಿತಿ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಹೇಳಿದರು.

'ಕೋ.ಚೆನ್ನಬಸಪ್ಪ ಅವರ ನೆನಪುಗಳನ್ನು ಸದಾ ಹಸಿರಾಗಿರುವಂತೆ ಕಾಪಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಸಮಾರಂಭವನ್ನು ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಉದ್ಘಾಟನೆ ಮಾಡಲಿದ್ದು, ಕೋ.ಚೆನ್ನಬಸಪ್ಪ ಅವರ ಕುರಿತು ನಿರ್ಮಿಸಿರುವ ಸಾಕ್ಷ್ಯಚಿತ್ರವನ್ನು ಸಹ ಬಿಡುಗಡೆ ಮಾಡಲಿದ್ದಾರೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಿವೃತ್ತ ನ್ಯಾಯಾಧೀಶರಾದ ಎಸ್. ಸುಜಾತ ಅವರು ಕೋಚೆ ಸಮಗ್ರ ಸಾಹಿತ್ಯದ ಎರಡು ಸಂಪುಟಗಳನ್ನು ಬಿಡುಗಡೆಗೊಳಿಸಲಿದ್ದಾರೆ. ಲಕ್ಷ್ಮಣ ಕೊಡಸೆ ಸಂಪಾದಿಸಿದ, ಕೋಚೆ ಜನ್ಮಶತಮಾನೋತ್ಸವ ಸಮಾರಂಭಗಳಲ್ಲಿ ಮಂಡನೆಯಾದ ಉಪನ್ಯಾಸಗಳು ಮತ್ತು ವರದಿಗಳ 'ಕೋಚೆ ನೂರರ ನೆನಪು' ಸ್ಮರಣ ಗ್ರಂಥವನ್ನು ಪತ್ರಕರ್ತೆ ವಿಜಯಾ ಬಿಡುಗಡೆ ಮಾಡಲಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮಹೇಶ್ ಕರ್ಜಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ' ಎಂದರು.

ಶ್ರವಣ ದೋಷವುಳ್ಳವರ ಕ್ರಿಕೆಟ್ ನಾಳೆಯಿಂದ

ಮೈಸೂರು: ಶ್ರವಣ ದೋಷವುಳ್ಳವರ ರಾಜ್ಯಮಟ್ಟದ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿಯು ಇಲ್ಲಿನ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ಫೆ.25 ಹಾಗೂ 26ರಂದು ನಡೆಯಲಿದೆ.

'ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಕಾಲೇಜು ಹಾಗೂ ಬೆಂಗಳೂರಿನ ಚೆಷೈರ್ ಡಿಸೆಬಿಲಿಟಿ ಟ್ರಸ್ಟ್ ವತಿಯಿಂದ ಲೀಗ್ ಹಾಗೂ ನಾಕ್‌ಔಟ್ ಮಾದರಿಯಲ್ಲಿ ಟೂರ್ನಿ ಆಯೋಜಿಸಲಾಗಿದೆ' ಎಂದು ಕಾಲೇಜಿನ ಪ್ರಾಂಶುಪಾಲ ಬಿ.ಇಳಂಗೋವನ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'25ರಂದು ಬೆಳಿಗ್ಗೆ 11ಕ್ಕೆ ಆರಂಭಗೊಳ್ಳುವ ಟೂರ್ನಿಯಲ್ಲಿ ತುಮಕೂರು, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಬೆಂಗಳೂರು, ಕಲಬುರುಗಿ, ಚಾಮರಾಜನಗರ, ಮಂಡ್ಯ ಹಾಗೂ ಮೈಸೂರು ತಂಡಗಳು ಭಾಗವಹಿಸಲಿವೆ. ವಿಜೇತ ತಂಡಕ್ಕೆ ₹ 10 ಸಾವಿರ, ದ್ವಿತೀಯ ಸ್ಥಾನ ಪಡೆದವರಿಗೆ ₹ 6ಸಾವಿರ ಬಹುಮಾನ, ಪದಕ ಹಾಗೂ ಪ್ರಮಾಣಪತ್ರ ನೀಡಲಾಗುವುದು' ಎಂದರು.

ಕಾಡುಕೋಣ ದಾಳಿಗೆ ಕುರಿಗಾಹಿ ಬಲಿ

ನಾಗನಾಯ್ಕ್

ಕನಕಪುರ: ಇಲ್ಲಿನ ಕಾಡು ಶಿವನಹಳ್ಳಿ-ದೊಡ್ಡಿ ಗ್ರಾಮದ ಬಳಿಯಿರುವ ಕಾಡಿನಲ್ಲಿ ಕುರಿ, ಮೇಕೆ ಮೇಯಿಸುತ್ತಿದ್ದ ವ್ಯಕ್ತಿಯ ಮೇಲೆ ಕಾಡುಕೋಣ ಗುರುವಾರ ದಾಳಿ ನಡೆಸಿದ್ದು, ಕುರಿಗಾಹಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಉಯ್ಯಂಬಳ್ಳಿ ಹೋಬಳಿಯ ಕಾಡು ಶಿವನಹಳ್ಳಿದೊಡ್ಡಿ ಗ್ರಾಮದ ನಾಗನಾಯ್ಕ್ (65) ಮೃತಪಟ್ಟವರು. ಮೃತರ ಜತೆಗಿದ್ದ ಪಾಪಣ್ಣಿ ನಾಯ್ಕ್ ಅವರು ದಾಳಿಯಿಂದ ತಪ್ಪಿಸಿಕೊಂಡು ಪಾರಾಗಿದ್ದಾರೆ.

ಮೃತ ನಾಗನಾಯ್ಕ್ ಮತ್ತು ಪಾಪಣ್ಣಿ ಇಬ್ಬರು ಗುರುವಾರ ಕಾಡು ಶಿವನಹಳ್ಳಿದೊಡ್ಡಿಯ ಕಾಡಂಚಿನ ಜಮೀನಿನಲ್ಲಿ ಕುರಿ ಮೇಯಿಸಲು ಹೋಗಿದ್ದರು. ಈ ವೇಳೆ ಏಕಾಏಕಿ ಬಂದ ಕಾಡುಕೋಣವು ದಾಳಿ ನಡೆಸಿದ್ದು, ಪಾಪಣ್ಣಿ ಮರ ಏರಿ ಕುಳಿತಿದ್ದರಿಂದ ಪ್ರಾಣಾಪಾಯದಿಂದ ಬಚಾವಾಗಿದ್ದಾರೆ. ನಾಗನಾಯ್ಕ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಂತ್ರಸ್ತ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಭರವಸೆ ನೀಡಿದ್ದಾರೆ.

ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅಭಿಮತ

'ಖರ್ಗೆಗೆ ರಾಜ್ಯದಲ್ಲಿ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನಮ್ಮ ರಾಜ್ಯದಲ್ಲಿ ಬಹಳಷ್ಟು ಅನ್ಯಾಯ ಆಗಿದೆ. ಅವರು ಈ ಹಿಂದೆಯೇ ರಾಜ್ಯದ ಮುಖ್ಯಮಂತ್ರಿ ಆಗಬೇಕಿತ್ತು. ಆದರೆ, ಅವರನ್ನು ತುಳಿಯುವ ಕೆಲಸ ವ್ಯವಸ್ಥಿತವಾಗಿ ನಡೆಯಿತು' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಹೇಳಿದರು.

ಕಲಬುರಗಿಯ ಕುಟುಂಬ ಪ್ರಕಾಶನ ಹಾಗೂ ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ಜೀವನಾಧಾರಿತ ಇಂಗ್ಲಿಷ್ ಅನುವಾದ ಕೃತಿ 'ಆನ್ ದಿ ರೋಡ್ ಟ್ರೋಡನ್ ಬೈ ಬಾಬಾಸಾಹೇಬ್' ಬಿಡುಗಡೆ ಮಾಡಿದರು. ಪ್ರೊ.ಎಚ್.ಟಿ. ಪೋತೆ ಅವರು ಕನ್ನಡದಲ್ಲಿ ರಚಿಸಿದ ಕೃತಿಯನ್ನು ಎಚ್. ತಿರುಮಲೇಶ್ವರ ಭಟ್ಟ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

'ಖರ್ಗೆ ಅವರಿಗೆ ತಳ ಸಮುದಾಯದವರ ಮೇಲೆ ವಿಶೇಷ ಕಾಳಜಿಯಿದ್ದು, ಆ ವರ್ಗದವರಿಗೆ ಸಾಮಾಜಿಕ ನ್ಯಾಯ ಒದಗಿಸಲು ಶ್ರಮಿಸುತ್ತಿದ್ದಾರೆ. ಶಾಸಕ, ಸಚಿವರಾಗಿ ಅವರು ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ. ಅಂಬೇಡ್ಕರ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಅವರು ಸಾಗುತ್ತಿದ್ದು, ಅವರ ಜೀವನ ಕುರಿತಾದ ಪುಸ್ತಕವು ಎಲ್ಲ ಗ್ರಂಥಾಲಯಗಳಲ್ಲಿ ದೊರೆಯುವಂತಾಗಬೇಕು' ಎಂದು ಹೇಳಿದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, 'ರಾಜಕಾರಣದಲ್ಲಿ ಹಣ, ಪ್ರಭಾವ ಹಾಗೂ ಜಾತಿ ಬಲದಿಂದ ಗೆಲುವು ಸಾಧ್ಯವೆಂಬ ನಂಬಿಕೆಯಿದೆ. ಖರ್ಗೆ ಇದನ್ನು ಸುಳ್ಳಾಗಿಸಿದ್ದಾರೆ' ಎಂದು ತಿಳಿಸಿದರು.

ಪ್ರೊ.ಎಚ್.ಟಿ. ಪೋತೆ, 'ನಮ್ಮ ದೇಶವು ಅಂಬೇಡ್ಕರ್ ಅವರನ್ನು ಅರ್ಥ ಮಾಡಿಕೊಂಡಿಲ್ಲ. ಅದೇ ರೀತಿ, ಖರ್ಗೆ ಅವರನ್ನು ಕರ್ನಾಟಕ ಅರ್ಥ ಮಾಡಿಕೊಂಡಿಲ್ಲ. ರಾಜಕೀಯಕ್ಕಾಗಿ ಅವರ ಮೇಲೆ ಆರೋಪ ಮಾಡಲಾಗುತ್ತದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 'ಆನ್ ದಿ ರೋಡ್ ಟ್ರೋಡನ್ ಬೈ ಬಾಬಾಸಾಹೇಬ್' ಕೃತಿಯನ್ನು ನ್ಯಾ.ವಿ. ಗೋಪಾಲಗೌಡ (ಎಡದಿಂದ ನಾಲ್ಕನೆಯವರು) ಬಿಡುಗಡೆ ಮಾಡಿದರು. ಕರ್ನಾಟಕ ಪೀಪಲ್ ಎಜುಕೇಶನ್ ಅಧ್ಯಕ್ಷ ರಾಧಾಕೃಷ್ಣ, ಪ್ರೊ.ಎಚ್.ಟಿ. ಪೋತೆ, ತಿರುಮಲೇಶ್ವರ ಭಟ್ಟ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಹಾಗೂ ಅಗ್ರಹಾರ ಕೃಷ್ಣಮೂರ್ತಿ ಇದ್ದಾರೆ –ಪ್ರಜಾವಾಣಿ ಚಿತ್ರ

ಶಿಂಷಾ ನದಿ ದಡದಲ್ಲಿ ವಿಷ್ಣು ವಿಗ್ರಹ ಪತ್ತೆ

ಶಿಂಷಾ ನದಿ ದಡದಲ್ಲಿ ಸಿಕ್ಕಿರುವ ವಿಗ್ರಹ

ತುರುವೇಕೆರೆ: ತಾಲ್ಲೂಕಿನ ಮಾಯಸಂದ್ರ ಹೋಬಳಿಯ ಗುಡ್ಡೇನಹಳ್ಳಿ ಗ್ರಾಮದ ಸಮೀಪದ ಶಿಂಷಾ ನದಿಯ ದಡದಲ್ಲಿ ಬಳಪದ ಕಲ್ಲಿನಲ್ಲಿ ಕೆತ್ತಲಾಗಿರುವ ನಾಲ್ಕು ಅಡಿ ಎತ್ತರದ ವಿಷ್ಣುವಿನ ಪುರಾತನ ವಿಗ್ರಹ ಪತ್ತೆಯಾಗಿದೆ.

ಗುಡ್ಡೇನಹಳ್ಳಿ ಗ್ರಾಮದ ಯೋಗೀಶ್ ಎಂಬುವರ ತೋಟಕ್ಕೆ ಹೊಂದಿಕೊಂಡಂತಿರುವ ತೊರೆಯ ಬಳಿಯ ನೀರಿನಲ್ಲಿ ಈ ವಿಷ್ಣುವಿನ ವಿಗ್ರಹ ಕಂಡುಬಂದಿದೆ. ಗ್ರಾಮಸ್ಥರು ಟ್ರ್ಯಾಕ್ಟರ್‌ನಲ್ಲಿ ಆಂಜನೇಯ ದೇವಾಲಯ ವಿಗ್ರಹವನ್ನು ಸಾಗಿಸಿದ್ದಾರೆ. ಈ ವಿಗ್ರಹ ಯಾವ ಕಾಲದ್ದು, ಎಷ್ಟು ವರ್ಷಗಳ ಹಿಂದಿನದು ಎನ್ನುವ ಮಾಹಿತಿ ಇನ್ನೂ ತಿಳಿದು ಬಂದಿಲ್ಲ.

ಶೆಟ್ಟಿಗೊಂಡನಹಳ್ಳಿಯಲ್ಲಿ ಹೊಸದಾಗಿ ಸ್ಥಾಪಿಸಲಾಗಿರುವ ಹಳ್ಳಿಕಾರ ಮಠಕ್ಕೆ ಈ ವಿಗ್ರಹ ಹಸ್ತಾಂತರಿಸಲು ನಿರ್ಧರಿಸಲಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಜೋಡಿ ಕೊಲೆ: ಕೋರ್ಟ್‌ಗೆ ಆರೋಪಿ ಶರಣು

ದೊಡ್ಡಬಳ್ಳಾಪುರ: ದೊಡ್ಡಬೆಳವಂಗಲದಲ್ಲಿ ಕಳೆದ ವಾರ ಕ್ರಿಕೆಟ್ ಪಂದ್ಯಾವಳಿ ವೇಳೆ ನಡೆದಿದ್ದ ಜೋಡಿ ಕೊಲೆ ಪ್ರಕರಣದ ಎರಡನೇ ಆರೋಪಿ ಹುಲಿಕುಂಟೆ ಗ್ರಾಮದ ಅನಿಲ್ ಬುಧವಾರ ಸಂಜೆ ವಕೀಲರ ಮೂಲಕ ದೊಡ್ಡಬಳ್ಳಾಪುರದ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಶರಣಾಗಿದ್ದಾನೆ.

'ಯುವಕರಿಬ್ಬರಿಗೆ ಚಾಕು ಇರಿದು ಕೊಲೆ ಮಾಡಿ ತಲೆ ಮರೆಸಿಕೊಂಡಿದ್ದ ಈತ ಪೊಲೀಸರ ಗುಂಡೇಟಿಗೆ ಹೆದರಿ ನ್ಯಾಯಾಲಯಕ್ಕೆ ಶರಣಾಗಿದ್ದಾನೆ. ಹತ್ತು ದಿನ ಆತನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಡಿವೈಎಸ್‌ಪಿ ನಾಗರಾಜ್ ತಿಳಿಸಿದ್ದಾರೆ.

ಇದರೊಂದಿಗೆ ಜೋಡಿ ಕೊಲೆ ಪ್ರಕರಣದ ಐವರು ಆರೋಪಿಗಳ ಪೈಕಿ ಮೂವರನ್ನು ಬಂಧಿಸಿದಂತಾಗಿದೆ. ಮತ್ತೊಬ್ಬ ಆರೋಪಿ ಹುಲಿಕುಂಟೆ ವಿನಯ್ ಈತನ ಸಹೋದರ. ಈ ಇಬ್ಬರೂ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರ ಮಕ್ಕಳು.

ನಾಲ್ಕು ದಿನದ ಹಿಂದೆ ಮೊದಲ ಆರೋಪಿ ವಿನಯ್ ಹಾಗೂ ಮೂರನೇ ಆರೋಪಿ ತ್ರಿಮೂರ್ತಿ ಕಾಲಿಗೆ ಪೊಲೀಸರು ಗುಂಡು ಹೊಡೆದು ಬಂಧಿಸಿದ್ದರು. ನಗರದ ಡಿ. ಕ್ರಾಸ್ ಸಮೀಪದ ಫ್ಲೈಓವರ್ ಬಳಿ ಪೊಲೀಸರ ಮೇಲೆ ಈ ಇಬ್ಬರೂ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದರು.

ಪ್ರಕರಣದ ಇನ್ನಿಬ್ಬರು ಆರೋಪಿಗಳಾದ ಕೋರಿ ಹಾಗೂ ದೀಪು ತಲೆಮರೆಸಿಕೊಂಡಿದ್ದಾರೆ. ಈ ದುಷ್ಕೃತ್ಯದಲ್ಲಿ ಇನ್ನೂ ಹೆಚ್ಚಿನ ಆರೋಪಿಗಳು ಭಾಗಿಯಾಗಿರುವ ಶಂಕೆ ಇದೆ. ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ ಎಂದು ಡಿವೈಎಸ್‌ಪಿ ಮಾಹಿತಿ ನೀಡಿದರು. ಫೆ.17 ರಂದು ಕ್ರಿಕೆಟ್ ಮೈದಾನದಲ್ಲಿ ಕಾರು ಪಾರ್ಕಿಂಗ್ ವಿಚಾರದಲ್ಲಿ ಶುರುವಾದ ಜಗಳ ವಿಕೋಪಕ್ಕೆ ತಿರುಗಿ ಭರತ್‌ಕುಮಾರ್ ಹಾಗೂ ಪ್ರತೀಕ್ ಎಂಬ ಯುವಕರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು.

ಶ್ವಾನ ತರಬೇತಿ

ನಗರದ ಕಗ್ಗಲೀಪುರ ರಸ್ತೆಯಲ್ಲಿರುವ ಕೇಂದ್ರೀಯ ಸಶಸ್ತ್ರ ಮೀಸಲು ಪಡೆಯ (ಸಿಆರ್‌ಪಿಎಫ್) ಶ್ವಾನ ತರಬೇತಿ ಶಾಲೆಯಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ 'ರಾಷ್ಟ್ರೀಯ ಪೊಲೀಸ್ ಕೆ9' ಅಂಗವಾಗಿ ಗುರುವಾರ ಶ್ವಾನಗಳ ವಿಶೇಷ ತರಬೇತಿ ನಡೆಯಿತು.

ನಗರದಲ್ಲಿ ಇಂದು

ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ಮಾಲೆ–5: ವಿಷಯ: ಸಾಹಿತ್ಯ ಮತ್ತು ತತ್ವಶಾಸ್ತ್ರ, ಉಪನ್ಯಾಸ: ಸುಂದರ್ ಸರುಕ್ಕೈ, ಆಯೋಜನೆ: ಮತ್ತು ಸ್ಥಳ: ಸಿಂಡಿಕೇಟ್ ರೂಂ, ಆಡಿಟೋರಿಯಂ ಬ್ಲಾಕ್, ಕ್ರೈಸ್ಟ್ ಯೂನಿವರ್ಸಿಟಿ, ಸೆಂಟ್ರಲ್ ಕ್ಯಾಂಪಸ್, ಹೊಸೂರು ರಸ್ತೆ, ಮಧ್ಯಾಹ್ನ 3.30

ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ: ಅತಿಥಿಗಳು: ಎ. ರಾಧಾಕೃಷ್ಣ ರಾಜು, ಪದ್ಮಾವತಿ ಕಲಾನಿಕೇತನ, ಚಿಂತಲಪಲ್ಲಿ ಆರ್. ಮಂಜುನಾಥ್, ಆಯೋಜನೆ: ಪದ್ಮಾವತಿ ಕಲಾನಿಕೇತನ, ಸ್ಥಳ: ಶ್ರೀಕೃಷ್ಣ ದೇವರಾಯ ಕಲಾ ಮಂದಿರ, ತೆಲುಗು ವಿಜ್ಞಾನ ಸಮಿತಿ, ವಯಾಲಿ ಕಾವಲ್, ಸಂಜೆ 5

'ಐಡೆಂಟಿಟಿ (ಅಸ್ಮಿತೆ) ರಾಜಕೀಯ' ಕುರಿತು ಉಪನ್ಯಾಸ ಮತ್ತು ಸಂವಾದ: ಸುಭಾಷಿಣಿ ಅಲಿ, ಆಯೋಜನೆ: ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ಸ್ಥಳ: ವಿಮಾ ನೌಕರರ ಸಂಘ, ಸಿಎಸ್‌ಐ ಕಾಂಪೌಂಡ್, ಮಿಷನ್ ರಸ್ತೆ, ಸಂಜೆ 5

'ಸ್ವರ ಕಾವೇರಿ' ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: ಉತ್ಸವ ಗೀತೆಗಳು: ಅನಹಿತಾ ಅಪೂರ್ವ, ಪಿಟೀಲು: ತ್ರಿವೇಂಡ್ರಂ ಸಂಪತ್, ಮೃದಂಗ: ಪ್ರವೀಣ್ ಸ್ಪರ್ಷ, ಚಿಕಿತ್ಸಾ ಸಂಗೀತ: ಅಮೃತಾ ವೆಂಕಟೇಶ್, ಪಿಟೀಲು: ಎಲ್. ರಾಮಕೃಷ್ಣನ್, ಮೃದಂಗ: ಅರ್ಜುನ್ ಗಣೇಶ್, ಗಾಯನ: ಸಂದೀಪ್ ನಾರಾಯಣ, ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಕೆ.ಯು. ಜಯಚಂದ್ರ ರಾವ್, ಘಟಂ: ಗಿರಿಧರ್ ಉಡುಪ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5ರಿಂದ

ರಾಜು ಟರ್ಡಲ್ ಅವರ ಏಕವ್ಯಕ್ತಿ ಚಿತ್ರಗಳ ಪ್ರದರ್ಶನ: ಅತಿಥಿಗಳು: ಚಿ.ಸು. ಕೃಷ್ಣಸೆಟ್ಟಿ, ಕೆ.ವಿ. ಸುಬ್ರಮಣಿಯಂ, ಆಯೋಜನ ಮತ್ತು ಸ್ಥಳ: ಆರ್ಟ್ ಹೌಸ್, ಆ್ಯಬ್‌ಶಾಟ್ ಬಡಾವಣೆ, ವಸಂತನಗರ, ಸಂಜೆ 6

ಅಖಿಲ ಭಾರತ ಅಣಕು ನ್ಯಾಯಾಲಯ ಸ್ಪರ್ಧೆಯ ಉದ್ಘಾಟನೆ: ಅತಿಥಿಗಳು: ಎಸ್. ರಾಜೇಂದ್ರ ಬಾಬು, ನಿಗಮ್ ನುಗ್ಗೇಹಳ್ಳಿ, ಅಧ್ಯಕ್ಷತೆ: ಎಂ. ಪಿ. ಶ್ಯಾಂ, ಆಯೋಜನೆ ಮತ್ತು ಸ್ಥಳ: ಆರ್. ವಿ. ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಜಯನಗರ, ಸಂಜೆ 5.30

ನಾದಜ್ಯೋತಿ ಸಂಗೀತ ಸಂಭ್ರಮ: ಗಾಯನ: ಆದಿತ್ಯ ಮಾಧವನ್, ಪಿಟೀಲು: ವೈಭವ್ ರಮಣಿ, ಮೃದಂಗ: ಬಿ.ಸಿ. ಮಂಜುನಾಥ್, ಮಾರ್ಸಿಂಗ್: ಭಾರದ್ವಾಜ್ ಆರ್. ಸತವಳ್ಳಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಪ್ರವಚನ ವಾಹಿನಿ ಕಾರ್ಯಕ್ರಮ: 'ಚಿದಾನಂದ ಸವಾಯಿ ವ್ಯಾಖ್ಯಾನ' ಕುರಿತು ಉಪನ್ಯಾಸ: ಲಕ್ಷ್ಮೀಶ್ ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ದೇವಿಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸ್ಥಳ: ಶ್ರೀನಿರ್ವಾಣಿ ಭಗವತಿ ಸೇವಾ ಮಂಡಳಿ, ಕುರುಹಿನಶೆಟ್ಟಿ, ಶ್ರೀರಾಮ ಭಜನಾ ಮಂದಿರ, ಎಂ.ಆರ್. ಲೇನ್, ಮನವರ್ತಿಪೇಟೆ, ಸಂಜೆ 6.30

'ವೆಡ್ಡಿಂಗ್ ರಿಂಗ್' ನಾಟಕದ ದೃಶ್ಯ

'ವೆಡ್ಡಿಂಗ್ ರಿಂಗ್' ನಾಟಕ ಪ್ರದರ್ಶನ: ಅರ್ಚನಾ ಶ್ಯಾಂ, ಆಯೋಜನೆ: ಅಂತರಂಗ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 7.15

ಮರುಳಸಿದ್ದಪ್ಪಗೆ 'ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ' ಪ್ರದಾನ

'ಹತ್ಯೆಯ ಹಿಂದಿನ ಪ್ರಭಾವಿ ಶಕ್ತಿ ಶಿಕ್ಷಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಂದ್ರ ದಾಭೋಲ್ಕರ್, ಪಾನ್ಸರೆ, ಎಂ.ಎಂ. ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಅವರ ಹತ್ಯೆಗೆ ಸಂಬಂಧಿಸಿದಂತೆ ಅಪರಾಧಿಗಳ ಜತೆಗೆ ಕೃತ್ಯದ ಹಿಂದಿನ ಪ್ರಭಾವಿ ಶಕ್ತಿಗಳನ್ನೂ ಶಿಕ್ಷಿಸಿ, ಸಮಾಜದಿಂದ ಪ್ರತ್ಯೇಕಿಸಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಗ್ರಹಿಸಿದರು.

ಲಂಡನ್‌ನ ಬಸವ ಅಂತರಾಷ್ಟ್ರೀಯ ಪ್ರತಿಷ್ಠಾನವು ನಗರದಲ್ಲಿ ಗುರುವಾರ ಆಯೋಜಿಸಿದ ಸಮಾರಂಭದಲ್ಲಿ ಸಾಹಿತಿ ಕೆ. ಮರುಳಸಿದ್ದಪ್ಪ ಅವರಿಗೆ 'ಡಾ. ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. 'ಕಲಬುರ್ಗಿ ಮತ್ತಿತರರ ಹತ್ಯೆಯ ಹಿಂದೆ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಧರ್ಮವಿದೆ. ಇವತ್ತು ಧರ್ಮದ ಜತೆಗೆ ರಾಜಕಾರಣ ಬೆರೆತಿದೆ. ಇದರಿಂದ ಕೋಮುವಾದ ರಾರಾಜಿಸುತ್ತಿದ್ದು, ಪ್ರಜಾಪ್ರಭುತ್ವ ಜಾತ್ಯತೀತತೆ ಹಾಗೂ ಸಮಾನತೆ ಹಿಂದಕ್ಕೆ ಸರಿಯುತ್ತಿದೆ' ಎಂದು ಹೇಳಿದರು.

ಕೆ.ಮರುಳಸಿದ್ದಪ್ಪ, 'ಕಲಬುರ್ಗಿ ಅವರು ಹತ್ಯೆಯಾದ ಬಳಿಕ ಅವರ ವಿಚಾರ ಇಡೀ ಭಾರತಕ್ಕೆ ಹಬ್ಬಿತು. ಕೊಲೆಗಾರರು ಹಿಂಸೆಯ ಮೂಲಕ ಬಾಯಿ ಮುಚ್ಚಿಸಬಹುದು ಎಂದು ತಪ್ಪು ತಿಳಿದುಕೊಂಡಿದ್ದಾರೆ. ಕನ್ನಡ ಮತ್ತು ಲಿಂಗಾಯತವು ಕಲಬುರ್ಗಿ ಅವರ ಅಸ್ಮಿತೆಯಾಗಿತ್ತು. ಹಿಂಸೆಯ ಮೂಲಕ ತತ್ವವನ್ನು ಜನರ ಮತ್ತು ದೇಶದ ಮೇಲೆ ಹೇರುತ್ತೇವೆ ಎನ್ನುವವರ ಮನಃಪರಿವರ್ತನೆ ಮಾಡಬೇಕು' ಎಂದರು.

ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, 'ಇವತ್ತು ತತ್ವ, ವ್ಯಕ್ತಿಗಳಿಗೆ ಬೆಲೆಯಿಲ್ಲವಾಗಿದೆ. ಹೊತ್ತು ಬಂದಾಗ ಯಾರು ಕೊಡೆ ಹಿಡಿಯುತ್ತಾರೆಯೋ, ಅವರಿಗೆ ಬೆಲೆ ಎಂಬಂತಾಗಿದೆ. ಅದೇ ರೀತಿ, ಹೋರಾಟಗಾರರಿಗೆ ಧ್ವನಿ ಇಲ್ಲವಾಗಿದೆ. ಅವರ ಮೇಲೆ ಕಣ್ಣಿಡುವವರ ಸಂಖ್ಯೆ ಹೆಚ್ಚಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹದೇವಯ್ಯ ಅವರು ಕರ್ನಾಟಕ ಲೇಖಕಿಯರ ಸಂಘಕ್ಕೆ ₹ 1 ಲಕ್ಷ ನಗದು ನೀಡಿದರು.

ಕಾರ್ಯಕ್ರಮದಲ್ಲಿ ಕೆ. ಮರುಳಸಿದ್ದಪ್ಪ ಅವರಿಗೆ 'ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ನ್ಯಾ.ಎಚ್.ಎನ್. ನಾಗಮೋಹನ ದಾಸ್, ರಂಗಕರ್ಮಿ ಕೆ.ವಿ. ನಾಗರಾಜಮೂರ್ತಿ, ವಿಮರ್ಶಕಿ ಎಂ.ಎಸ್. ಆಶಾದೇವಿ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಎಸ್. ಮಹದೇವಯ್ಯ ಹಾಗೂ ಬಸವ ಅಂತರಾಷ್ಟ್ರೀಯ ಪ್ರತಿಷ್ಠಾನದ ಬಿ.ಎಲ್. ಪಾಟೀಲ್ ಇದ್ದಾರೆ. –ಪ್ರಜಾವಾಣಿ ಚಿತ್ರ

ಅನುದಾನ ಹಂಚಿಕೆಯ ಮಾನದಂಡದ ಕುರಿತು ಮಹಾಲೇಖಪಾಲರ ವರದಿ

ವಿಳಂಬದಿಂದ ಕೆಕೆಆರ್‌ಡಿಬಿಗೆ ₹387 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) 2016–17ರಿಂದ 2020–21ರ ಅವಧಿಯಲ್ಲಿ ಅನುದಾನ ಬಳಕೆಯಲ್ಲಿ ವಿಳಂಬ ಮಾಡಿರುವುದರಿಂದ ₹ 387.52 ಕೋಟಿ ನಷ್ಟ ಅನುಭವಿಸಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ತಿಳಿಸಿದೆ.

2016–17ರಿಂದ 2020–21ರ ಅವಧಿಯಲ್ಲಿ ಕೆಕೆಆರ್‌ಡಿಬಿ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಸಿಎಜಿ ವರದಿಯನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಗುರುವಾರ ಮಂಡಿಸಲಾಯಿತು. ಮಂಡಳಿಯಲ್ಲಿ ಬಜೆಟ್ ರೂಪಿಸದೇ ಇರುವುದು, ಅನುದಾನ ಹಂಚಿಕೆ ಮತ್ತು ಬಳಕೆಯಲ್ಲಿ ಲೋಪ, ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳುವ ವ್ಯವಸ್ಥೆಯ ಅನುಪಸ್ಥಿತಿ ಇತ್ತು ಎಂಬುದನ್ನು ವರದಿ ಬಹಿರಂಗಪಡಿಸಿದೆ.

ಈ ಅವಧಿಯಲ್ಲಿ ಮಂಡಳಿಗೆ ₹ 5,631.86 ಕೋಟಿ ಅನುದಾನ ನಿಗದಿಯಾಗಿತ್ತು. ₹ 5,244.34 ಕೋಟಿ ಮಾತ್ರ ಬಿಡುಗಡೆಯಾಗಿತ್ತು. ಲಭ್ಯವಿರುವ ಹಣದ ಶೇಕಡ 75ರಷ್ಟನ್ನು ಬಳಕೆ ಮಾಡಿದ ಮೇಲೆ ಮುಂದಿನ ಕಂತನ್ನು ಬಿಡುಗಡೆ ಮಾಡುವ ಷರತ್ತು ಇತ್ತು. ಅದನ್ನು ಪಾಲಿಸದೇ ಇರುವುದರಿಂದ ಮಂಡಳಿಗೆ ನಷ್ಟವಾಯಿತು ಎಂಬ ಉಲ್ಲೇಖ ವರದಿಯಲ್ಲಿದೆ.

ಬಿಡುಗಡೆಯಾದ ಮೊತ್ತದಲ್ಲಿ ಶೇ 20ಕ್ಕಿಂತ ಹೆಚ್ಚು ಮೊತ್ತವನ್ನು ಉಳಿಸಿಕೊಳ್ಳುವಂತಿಲ್ಲ ಎಂಬ ಷರತ್ತು ಇದೆ. ಆದರೆ, 2016–17ನೇ ಹಣಕಾಸು ವರ್ಷ ಹೊರತುಪಡಿಸಿ ಉಳಿದ ಎಲ್ಲ ಅವಧಿಯಲ್ಲೂ ಮಂಡಳಿಯ ಖಾತೆಯಲ್ಲಿ ಉಳಿಸಿಕೊಂಡಿದ್ದ ಮೊತ್ತ ಶೇ 20ರ ಮಿತಿಗಿಂತ ಜಾಸ್ತಿ ಇತ್ತು ಎಂದು ಸಿಎಜಿ ಹೇಳಿದೆ.

2013–14ರಿಂದ 2021–22ರ ಅವಧಿಯಲ್ಲಿ ಮಂಡಳಿಯು ಒಟ್ಟು 28,038 ಕಾಮಗಾರಿಗಳನ್ನು ಕೈಗೆತ್ತಿಕೊಂಡಿತ್ತು. ಅವುಗಳಲ್ಲಿ 3,731 ಕಾಮಗಾರಿಗಳನ್ನು ಕಾರ್ಯ ಯೋಜನೆಯ ಅನುಮೋದನೆ ಬಳಿಕ ರದ್ದುಗೊಳಿಸಲಾಗಿತ್ತು. 19,520 ಕಾಮಗಾರಿಗಳು ಪೂರ್ಣಗೊಂಡಿವೆ. 2,435 ಕಾಮಗಾರಿಗಳು ಪ್ರಗತಿಯಲ್ಲಿದ್ದರೆ, 2,352 ಕಾಮಗಾರಿಗಳು ಇನ್ನೂ ಆರಂಭವಾಗಿಲ್ಲ ಎಂಬುದು ಪತ್ತೆಯಾಗಿದೆ. 2002ರ ಸಂಚಿತ ಅಭಾವ ಸೂಚ್ಯಂಕದ (ಸಿಡಿಐ) ಆಧಾರದಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆ. ಹೊಸದಾಗಿ ರಚನೆಯಾದ ತಾಲ್ಲೂಕುಗಳಿಗೆ ಪ್ರತ್ಯೇಕವಾಗಿ ಅನುದಾನ ಹಂಚಿಕೆ ಮಾಡಿಲ್ಲ. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಮಂಡಳಿಯು ದೀರ್ಘಾವಧಿಯ ಯೋಜನೆ ರೂಪಿಸಿಲ್ಲ ಎಂದು ವರದಿ ತಿಳಿಸಿದೆ.

ಕೆಕೆಆರ್‌ಡಿಬಿ ಗಮನವು ರಸ್ತೆ ಸಂಪರ್ಕ ಒದಗಿಸುವುದಕ್ಕೆ ಕೇಂದ್ರೀಕೃತವಾಗಿತ್ತು. ಶಿಕ್ಷಣ, ಆರೋಗ್ಯ, ಕೌಶಲ ಅಭಿವೃದ್ಧಿ ಮುಂತಾದ ಕ್ಷೇತ್ರಗಳಿಗೆ ಆದ್ಯತೆ ನೀಡಿಲ್ಲ. ಮಂಡಳಿಯು ನಿರ್ಮಿಸಿದ ಆಸ್ತಿಗಳ ಬಳಕೆಯ ಮೇಲ್ವಿಚಾರಣೆಗೆ ಯಾವುದೇ ವ್ಯವಸ್ಥೆ ರೂಪಿಸಿಲ್ಲ. ಹಲವು ಆಸ್ತಿಗಳು ಬಳಕೆಯಾಗದೇ ಇರುವುದು ಪರಿಶೀಲನೆಯಲ್ಲಿ ಕಂಡುಬಂದಿದೆ ಎಂದು ಸಿಎಜಿ ಹೇಳಿದೆ.

ಅಕ್ರಮವಾಗಿ ₹ 6.07 ಕೋಟಿ ಪಾವತಿ: ಮಂಡಳಿಯು 2020ರಲ್ಲಿ ₹ 9.97 ಕೋಟಿ ದರದಲ್ಲಿ ಗುತ್ತಿಗೆ ಆಧಾರದಲ್ಲಿ ಯೋಜನಾ ಬೆಂಬಲ ಕಚೇರಿ (ಪಿಎಸ್‌ಒ) ಸ್ಥಾಪಿಸಿತು. ಒಪ್ಪಂದದಂತೆ ಯಾವುದೇ ಸೇವೆ ಒದಗಿಸದಿದ್ದರೂ ಪಿಎಸ್‌ಒಗೆ 2021ರ ಡಿಸೆಂಬರ್‌ನಿಂದ 2022ರ ಮಾರ್ಚ್ ಅವಧಿಯಲ್ಲಿ ₹ 6.07 ಕೋಟಿಯನ್ನು ಅಕ್ರಮವಾಗಿ ಪಾವತಿಸಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

ವಿವೇಚನಾ ನಿಧಿ ಹಂಚಿಕೆಯಲ್ಲಿ ಅಸಮತೋಲನ

ಕೆಕೆಆರ್‌ಡಿಬಿ ಅಧ್ಯಕ್ಷರ ವಿವೇಚನಾ ನಿಧಿ ಹಂಚಿಕೆಯಲ್ಲಿ ಭಾರಿ ಅಸಮತೋಲನ ಇರುವುದನ್ನು ಮಹಾಲೇಖಪಾಲ (ಸಿಎಜಿ) ಗುರುತಿಸಿದೆ.

ಕಲಬುರಗಿ ಜಿಲ್ಲೆಗೆ ಸಿಂಹಪಾಲು ನೀಡಿರುವ ಅಂಶವು ವರದಿಯಲ್ಲಿದೆ.

ವಿವೇಚನಾ ನಿಧಿಯಲ್ಲಿ ಕಲಬುರಗಿ ಜಿಲ್ಲೆಗೆ ₹ 86.27 ಕೋಟಿ (ಶೇ 73.97), ಬೀದರ್ ಜಿಲ್ಲೆಗೆ ₹ 19.31 ಕೋಟಿ (ಶೇ 16.56), ಕೊಪ್ಪಳ ಜಿಲ್ಲೆಗೆ ₹ 7.20 ಕೋಟಿ (ಶೇ 6.17), ರಾಯಚೂರು ಜಿಲ್ಲೆಗೆ ₹ 1.45 ಕೋಟಿ (ಶೇ 1.25), ಯಾದಗಿರಿ ಜಿಲ್ಲೆಗೆ ₹ 1.42 ಕೋಟಿ (ಶೇ 1.21) ಮತ್ತು ಬಳ್ಳಾರಿ ಜಿಲ್ಲೆಗೆ ₹ 98 ಲಕ್ಷ (ಶೇ 0.84) ಅನುದಾನವನ್ನು ನೀಡಲಾಗಿದೆ.

13ರಿಂದ 5, 8ನೇ ತರಗತಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ಮತ್ತು ಎಂಟನೇ ತರಗತಿ ವಿದ್ಯಾರ್ಥಿಗಳ ಮೌಲ್ಯಾಂಕನ ವೇಳಾಪಟ್ಟಿಯಲ್ಲಿ ಬದಲಾವಣೆಯಾಗಿದ್ದು, ಮಾರ್ಚ್ 13ರಿಂದ 18ರವರೆಗೆ, ಪ್ರತಿದಿನ ಮಧ್ಯಾಹ್ನ 2.30ರಿಂದ 4.30ರವರೆಗೆ ಪರೀಕ್ಷೆಗಳು ನಡೆಯಲಿವೆ.

ಎಂಟನೇ ತರಗತಿಗೆ 13ರಿಂದ ಆರು ದಿನಗಳು, ಐದನೇ ತರಗತಿಗೆ 15ರಿಂದ ನಾಲ್ಕು ದಿನಗಳು ಪರೀಕ್ಷೆಗಳು ನಡೆಯಲಿವೆ.

ಎಂಟನೇ ತರಗತಿಗೆ 13ರಂದು ಪ್ರಥಮ ಭಾಷೆ, 14ರಂದು ದ್ವಿತೀಯ ಭಾಷೆ, 15ರಂದು ತೃತೀಯ ಭಾಷಾ ವಿಷಯಗಳು, 16ರಂದು ಗಣಿತ, 17ರಂದು ವಿಜ್ಞಾನ ಹಾಗೂ 18ರಂದು ಸಮಾಜವಿಜ್ಞಾನ ಪರೀಕ್ಷೆಗಳು ನಡೆಯುತ್ತವೆ.

ಐದನೇ ತರಗತಿಗೆ 15ರಂದು ಪ್ರಥಮ ಭಾಷೆ, 16ರಂದು ಗಣಿತ, 17ರಂದು ಪರಿಸರ ಅಧ್ಯಯನ, 18ರಂದು ದ್ವಿತೀಯ ಭಾಷಾ ಪರೀಕ್ಷೆಗಳು ನಡೆಯುತ್ತವೆ. ಪ್ರತಿ ಪತ್ರಿಕೆಯು ತಲಾ 40 ಅಂಕಗಳ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಒಂದು ಅಂಕದ 20 ಬಹು ಆಯ್ಕೆಯ ಪ್ರಶ್ನೆಗಳು, 20 ಅಂಕಗಳಿಗೆ ವಿವರಣಾತ್ಮಕ ಉತ್ತರ ಬರೆಯುವ ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಎರಡು ಅಂಕದ ಐದು ಪ್ರಶ್ನೆಗಳು, ಮೂರು ಅಂಕದ ಎರಡು ಪ್ರಶ್ನೆಗಳು, ನಾಲ್ಕು ಅಂಕದ ಒಂದು ಪ್ರಶ್ನೆಯನ್ನು ಪತ್ರಿಕೆಗಳು ಒಳಗೊಂಡಿರುತ್ತವೆ. ಉತ್ತರಿಸಲು ಎರಡು ಗಂಟೆ ಸಮಯ ನಿಗದಿ ಮಾಡಲಾಗಿದೆ.

ಮಾರ್ಚ್ 6ರಿಂದ 10ರವರೆಗೆ ಮೌಖಿಕ ಪರೀಕ್ಷೆಗಳನ್ನು ಆಯಾ ಶಾಲೆಗಳಲ್ಲಿ ನಡೆಸಬೇಕು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸೂಚಿಸಿದೆ.

ಬೇಡಿಕೆ ಇಲ್ಲದಿದ್ದರೂ ವಸತಿ ನಿಲಯ: ₹71.72 ಕೋಟಿ ನಷ್ಟ– ಸಿಎಜಿ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಂತ್ರಿಕ ಶಿಕ್ಷಣ ಇಲಾಖೆಯು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ವಸತಿ ನಿಲಯಗಳಿಗೆ ಬೇಡಿಕೆ ಇಲ್ಲದಿದ್ದರೂ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅಡಿ ಆ ಉದ್ದೇಶಕ್ಕೆ ₹ 71.72 ಕೋಟಿಯನ್ನು ಬಳಕೆ ಮಾಡಿದ್ದು, ಅದು ಅನುತ್ಪಾದಕ ವೆಚ್ಚವಾಗಿ ಪರಿಣಮಿಸಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

2021ರ ಮಾರ್ಚ್‌ಗೆ ಕೊನೆಗೊಂಡ ಅವಧಿಯ ಅನುಪಾಲನಾ ಲೆಕ್ಕಪರಿಶೋಧನೆಯ ವರದಿಯನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಗುರುವಾರ ಮಂಡಿಸಲಾಯಿತು. ಈ ರೀತಿ ವಸತಿ ನಿಲಯ ನಿರ್ಮಾಣ ಮಾಡಿರುವುದು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನದ ಮಾರ್ಗಪಲ್ಲಟ ಎಂದಿರುವ ಸಿಎಜಿ, ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಶಿಫಾರಸು ಮಾಡಿದೆ.

ಬೇಡಿಕೆಯೇ ಇಲ್ಲದಿದ್ದರೂ 44 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ವಸತಿ ನಿಲಯ ನಿರ್ಮಾಣಕ್ಕೆ ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರು 2013–14ರಲ್ಲಿ ಸಲ್ಲಿಸಿದ್ದ ಪ್ರಸ್ತಾವಕ್ಕೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ರಾಜ್ಯ ಅಭಿವೃದ್ಧಿ ಮಂಡಳಿ ಅನುಮೋದಿಸಿತು. ಮಾರ್ಚ್ 2021ರ ವೇಳೆಗೆ 31 ವಸತಿ ನಿಲಯಗಳ ಕಾಮಗಾರಿ ಪೂರ್ಣಗೊಂಡಿತ್ತು. ಬೇಡಿಕೆಯೇ ಇಲ್ಲದ ಕಾರಣಕ್ಕೆ ಎರಡು ಕಟ್ಟಡಗಳನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರು ಬಳಸಿಕೊಂಡಿದ್ದರು. 15 ಕಟ್ಟಡಗಳನ್ನು ಇತರೆ ಇಲಾಖೆಗಳಿಗೆ ನೀಡಿದ್ದರೆ, 14 ಕಟ್ಟಡಗಳು ಖಾಲಿಯೇ ಉಳಿದಿದ್ದವು ಎಂದು ವರದಿ ತಿಳಿಸಿದೆ.

ನಿರ್ಮಾಣವಾದ ವಸತಿ ನಿಲಯಗಳು ಖಾಲಿ ಉಳಿದಿದ್ದರೂ, ಪುನಃ 43 ವಸತಿ ನಿಲಯಗಳಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ₹ 27.90 ಕೋಟಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು 2019–20ರಲ್ಲಿ ಒದಗಿಸಲಾಗಿತ್ತು. ಇದು ಮಂಜೂರಾದ ಹಣವನ್ನು ವೆಚ್ಚ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಕೈಗೊಂಡ ಕಾಮಗಾರಿಯಾಗಿತ್ತು ಎಂಬ ಅಭಿಪ್ರಾಯ ವರದಿಯಲ್ಲಿದೆ.

ಇದೇ ಅವಧಿಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ 68 ಅಧಿಕಾರಿಗಳಿಗೆ ಹೆಚ್ಚುವರಿಯಾಗಿ ₹ 2.18 ಕೋಟಿ ಮನೆ ಬಾಡಿಗೆ ಭತ್ಯೆ ವಿತರಿಸಲಾಗಿತ್ತು. 337 ಸಿಬ್ಬಂದಿಗೆ ಈ ಸೌಲಭ್ಯವನ್ನು ನಿರಾಕರಿಸಲಾಗಿತ್ತು ಎಂದು ಸಿಎಜಿ ಹೇಳಿದೆ.

ನೋಂದಣಿ ಶುಲ್ಕದಲ್ಲಿ ನಷ್ಟ: ಎಂಟು ಪ್ರಕರಣಗಳಲ್ಲಿ ದಾಖಲೆಗಳ ತಪ್ಪು ವರ್ಗೀಕರಣದಿಂದ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹದಲ್ಲಿ ₹ 14.71 ಕೋಟಿ ನಷ್ಟವಾಗಿತ್ತು. ಜಿಲ್ಲಾ ನೋಂದಣಿ ಅಧಿಕಾರಿಗಳು ಎಂಟು ಪ್ರಕರಣಗಳಲ್ಲಿ ಆಸ್ತಿಗಳ ಮೌಲ್ಯವನ್ನು ಕಡಿಮೆ ನಿರ್ಧರಿಸಿದ್ದರಿಂದ ₹ 15.09 ಕೋಟಿ ನಷ್ಟವಾಗಿದೆ. 70 ಪ್ರಕರಣಗಳಲ್ಲಿ ತಪ್ಪಾಗಿ ದರ ನಿರ್ಧರಿಸಿದ್ದರಿಂದ ₹ 8.09 ಕೋಟಿ ನಷ್ಟವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ತಪ್ಪು ಲೆಕ್ಕದಿಂದ ₹ 7.66 ಕೋಟಿ ನಷ್ಟ

ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಲಸಿಕೆಯ ವೈಲ್‌ಗಳ ಬದಲಿಗೆ ಡೋಸ್ ಆಧಾರದಲ್ಲಿ ಲೆಕ್ಕ ಹಾಕಲಾಗಿತ್ತು. ಇದರಿಂದ ₹ 7.66 ಕೋಟಿ ನಷ್ಟವಾಗಿದೆ ಎಂಬುದನ್ನು ಸಿಎಜಿ ವರದಿ ಬಹಿರಂಗಪಡಿಸಿದೆ.

ಮಂಡ್ಯ ವಕೀಲರ ಸಂಘದ ನಡವಳಿಕೆಗೆ ಹೈಕೋರ್ಟ್ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷ ಆಗಸ್ಟ್‌ನಲ್ಲಿ ನಡೆದಿದ್ದ ಲೋಕ ಅದಾಲತ್‌ನಲ್ಲಿ ಪಾಲ್ಗೊಳ್ಳಲು ಸಾರ್ವಜನಿಕರಿಗೆ ಅಡ್ಡಿಪಡಿಸಿದ್ದ ಮತ್ತು ಮಂಡ್ಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಕ್ರಮದಲ್ಲಿ ಭಾಗವಹಿಸದಂತೆ ಸದಸ್ಯರನ್ನು ನಿರ್ಬಂಧಿಸಿ ನಿರ್ಣಯ ಅಂಗೀಕರಿಸಿದ್ದ ಮಂಡ್ಯ ವಕೀಲರ ಸಂಘದ ನಡವಳಿಕೆಗೆ ಹೈಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತಂತೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕವೊಂದೇ ಮಿಗತೆ ಬಜೆಟ್ ಮಂಡಿಸಿದ್ದು, ಈ ಬಾರಿ ರಾಜ್ಯದ ಬಜೆಟ್ ಗಾತ್ರ ಶೇ 16 ರಷ್ಟು ಹೆಚ್ಚಳವಾಗಿದೆ. ವಿತ್ತೀಯ ಪ್ರಗತಿಯ ವೇಗ ‘ಟಾಪ್ ಗೇರ್’ನಲ್ಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಜೆಟ್ ಮೇಲಿನ ಚರ್ಚೆಗೆ ವಿಧಾನಸಭೆಯಲ್ಲಿ ಗುರುವಾರ ಉತ್ತರ ನೀಡಿದ ಅವರು, ‘ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಎಲ್ಲ ಕಡೆಗಳಲ್ಲೂ ಕೊರತೆ ಬಜೆಟ್ ಮಂಡಿಸಿದ್ದಾರೆ. ಕರ್ನಾಟಕ ಮಾತ್ರ ಮಿಗತೆ ಬಜೆಟ್ ಮಂಡಿಸಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ಆರ್ಥಿಕತೆ ಇನ್ನಷ್ಟು ವೇಗ ಪಡೆದುಕೊಳ್ಳಲಿದೆ’ ಎಂದರು.

2022–23 ರಲ್ಲಿ ₹14,699 ಕೋಟಿ ವಿತ್ತೀಯ ಕೊರತೆ ಆಗಬಹುದೆಂದು ಅಂದಾಜಿಸಲಾಗಿತ್ತು. ಆದರೆ, ಜನವರಿವರೆಗೆ ₹5,996 ಕೋಟಿ ಕಡಿಮೆಗೊಳಿಸಲಾಗಿದೆ. 2023–24ರ ಆರ್ಥಿಕ ವರ್ಷದಲ್ಲಿ ಆದಾಯ ಹೆಚ್ಚಳವನ್ನು ಸಾಧಿಸುವ ಸಾಧ್ಯತೆ ಇದೆ. ಕರ್ನಾಟಕ ಆರ್ಥಿಕ ನಿರ್ವಹಣೆಯಲ್ಲಿ ಕ್ರಮಬದ್ಧತೆಯನ್ನು ಸಾಧಿಸಿದೆ. ಕೋವಿಡ್ ನಂತರದ ವರ್ಷದಲ್ಲಿ ರಾಜ್ಯದ ಆರ್ಥಿಕತೆ ಆದಾಯ ಹೆಚ್ಚಳವಾಗುತ್ತಿರುವುದು, ರಾಜ್ಯದ ಅಂತರ್ಗತ ಆರ್ಥಿಕ ಶಕ್ತಿ, ಜನರ ಪರಿಶ್ರಮವೇ ಕಾರಣ ಎಂದು ಬೊಮ್ಮಾಯಿ ಹೇಳಿದರು.

ಕೇಂದ್ರದ ತೆರಿಗೆಯಲ್ಲಿ ರಾಜ್ಯದ ತೆರಿಗೆ ಪಾಲು ₹37,252 ಕೋಟಿಗೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ (ಕಳೆದ ಸಾಲಿಗಿಂತ ಶೇ 25 ರಷ್ಟು ಹೆಚ್ಚಿನ ಗುರಿ). ಕೇಂದ್ರ ಸರ್ಕಾರದಿಂದ ಡಿಬಿಟಿ ಸೇರಿದಂತೆ ರಾಜ್ಯಕ್ಕೆ ಅನುದಾನ ಹೆಚ್ಚಾಗಿದೆ. 2023–24 ರಲ್ಲಿ ಕರ್ನಾಟಕ ರಾಜ್ಯ ₹402 ಕೋಟಿ ಆದಾಯ ಹೆಚ್ಚಳವನ್ನು ಸಾಧಿಸಿರುವುದು, ರಾಜ್ಯ ಆರ್ಥಿಕ ನಿರ್ವಹಣೆಯ ಪ್ರತಿಬಿಂಬವಾಗಿದೆ ಎಂದರು.

‘ರಾಜ್ಯದ 65 ವರ್ಷಗಳ ಅವಧಿಯಲ್ಲಿ ₹1.30 ಲಕ್ಷ ಕೋಟಿ ಸಾಲ ಪಡೆದಿರಬಹುದು. ಆದರೆ, ಸಿದ್ದರಾಮಯ್ಯ ತಮ್ಮ 5 ವರ್ಷಗಳ ಅವಧಿಯಲ್ಲಿ ₹1.30 ಲಕ್ಷ ಕೋಟಿ ಸಾಲ ತೆಗೆದುಕೊಂಡರು. ಅವರ ಅವಧಿಯಲ್ಲಿ ಸಾಲ ಪಡೆಯಬಹುದಾದ ಗರಿಷ್ಠ ಮಿತಿಯಲ್ಲಿ ಶೇ 82.3 ರಷ್ಟು ತೆಗೆದುಕೊಂಡರೆ, ನಮ್ಮ ಸರ್ಕಾರ ಕೇವಲ ಶೇ 71 ರಷ್ಟು ಅವಕಾಶವನ್ನು ಬಳಸಿಕೊಂಡಿದೆ’ ಎಂದು ಹೇಳಿದರು.

‘2020–21 ರಲ್ಲಿ ಕೇಂದ್ರ ಸರ್ಕಾರದಿಂದ ಶೇ 5 ರಷ್ಟರವರೆಗೆ ಸಾಲ ಪಡೆಯಲು ಅವಕಾಶ ಕಲ್ಪಿಸಿದರೂ ನಮ್ಮ ಸರ್ಕಾರ ಕೇವಲ ಶೇ 3 ನ್ನೂ ದಾಟಿಲ್ಲ. ಆದ್ದರಿಂದ, ನಮ್ಮ ಅವಧಿಯಲ್ಲಿ ಬಹಳ ಸಾಲ ಮಾಡಲಾಗಿದೆ ಎನ್ನುವ ಸಿದ್ದರಾಮಯ್ಯ ಅವರ ಮಾತು ಸತ್ಯಕ್ಕೆ ದೂರ. ಸಾಲವನ್ನು ತೀರಿಸುವ ಕ್ಷಮತೆ ನಮ್ಮ ಸರ್ಕಾರಕ್ಕಿದೆ’ ಎಂದು ಬೊಮ್ಮಾಯಿ ಅವರು ಹೇಳಿದರು.

‘ಅಭಿವೃದ್ಧಿ ನೋಟದ ಪ್ರತಿಬಿಂಬ ಬಜೆಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ಮಂಡಿಸಿದ 2023–24ನೇ ಸಾಲಿನ ಬಜೆಟ್ ಎಲ್ಲ ಕ್ಷೇತ್ರಗಳ ಅಭಿವೃದ್ಧಿ ನೋಟದ ಪ್ರತಿಬಿಂಬ. ಮುಂದಾಲೋಚನೆಯ ಪರಿಪೂರ್ಣ ಬಜೆಟ್’ ಎಂದು ಬಿಜೆಪಿಯ ಆಯನೂರು ಮಂಜುನಾಥ್ ಬಣ್ಣಿಸಿದರು.

ವಿಧಾನ ಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ‘ಆರೋಗ್ಯ, ಶಿಕ್ಷಣ, ಆರ್ಥಿಕತೆ ಹೀಗೆ ಎಲ್ಲ ವಲಯಗಳಿಗೂ ಬಜೆಟ್‌ನಲ್ಲಿ ಸಮನಾಗಿ ಅನುದಾನ ಒದಗಿಸಲಾಗಿದೆ’ ಎಂದರು.

‘ಕೋವಿಡ್ ನಂತರ ರಾಜ್ಯ ಸಾಕಷ್ಟು ವೇಗದಲ್ಲಿ ಚೇತರಿಸಿಕೊಂಡಿದೆ. ಪರಿಣಾಮವಾಗಿ ಆರ್ಥಿಕ ಸ್ಥಿತಿ ಸುಧಾರಿಸಿದೆ. ಉತ್ಪಾದನಾ ಚಟುವಟಿಕೆ ಹೆಚ್ಚಿದೆ. ಅಗತ್ಯವಾದ ಕಚ್ಚಾವಸ್ತುಗಳು, ಕಾರ್ಮಿಕರ ಬಳಕೆಯೂ ಹೆಚ್ಚಾಗಿದೆ. ವಿಮಾನಯಾನ, ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಸಾಧನೆ ಆಗಿದೆ. ತಲಾವಾರು ಆದಾಯ ಹೆಚ್ಚಳವನ್ನೂ ಗಮನಿಸಬೇಕು’ ಎಂದರು.

‘ಶಿಕ್ಷಣ ಪಡೆಯಲು ಮಕ್ಕಳು ಮಾಡಿದ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಬೇಕು. ಕಾರ್ಮಿಕ ಕಲ್ಯಾಣ ಮಂಡಳಿಯನ್ನು ಪರಿಪೂರ್ಣವಾಗಿ ರಚಿಸಬೇಕು. ಸರ್ಕಾರ ಕನಿಷ್ಠ ವೇತನ ಜಾರಿಗೊಳಿಸಬೇಕು. ಕೆಳದಿ ಚೆನ್ನಮ್ಮ ಸ್ಮಾರಕ ನಿರ್ಮಿಸಬೇಕು’ ಎಂದು ಸಲಹೆ ನೀಡಿದರು.

ಬಜೆಟ್‌ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ಸಿನ ಪಿ.ಆರ್. ರಮೇಶ್, ‘ಇದರಲ್ಲಿರುವ ಘೋಷಣೆಗಳು ಬಜೆಟ್ ಪುಸ್ತಕದಲ್ಲಷ್ಟೆ ಉಳಿಯಲಿವೆ. ಅನುಷ್ಠಾನಗೊಳಿಸಲು ಸಾಧ್ಯವೇ ಇಲ್ಲ’ ಎಂದರು.

‘ಬೆಳೆಯುತ್ತಿರುವ ಬೆಂಗಳೂರು ನಗರದ ಸಂಚಾರ ದಟ್ಟಣೆ ನಿಯಂತ್ರಿಸಲು ಹೊಸ ನೀತಿ ರೂಪಿಸಬೇಕು. ರಾಮಮಂದಿರ ನಿರ್ಮಾಣ ಸರ್ಕಾರದ ಕೆಲಸವಲ್ಲ. ಅದರ ಬದಲು ರಾಜ್ಯದಾದ್ಯಂತ ಇರುವ ರಾಮ ಮಂದಿರಗಳು, ಭಜನಾ ಮಂಡಳಿಗಳಿಗೆ ಅನುದಾನ ನೀಡಬೇಕು’ ಎಂದರು.

ಕಾಂಗ್ರೆಸ್‌ನ ಸಿ.ಎಂ. ಲಿಂಗಪ್ಪ, ಜೆಡಿಎಸ್‌ನ ಗೋವಿಂದರಾಜು ಮತ್ತು ಮರಿತಿಬ್ಬೇಗೌಡ ಕೂಡಾ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದರು.

ಸಾರ್ವಜನಿಕ ಆಸ್ತಿ ಸಂರಕ್ಷಣೆಯಲ್ಲಿ ಹಿನ್ನಡೆ: ಬೊಮ್ಮಾಯಿ ಬೇಸರ

ಬೆಂಗಳೂರು: ‘ಬಿಡಿಎ, ಬಿಬಿಎಂಪಿ ಸೇರಿದಂತೆ ಸಾರ್ವಜನಿಕ ಆಸ್ತಿ ಸಂರಕ್ಷಣೆಗೆ ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸುವಲ್ಲಿ ವಿಫಲತೆ ಕಾಣುತ್ತಿದ್ದೇವೆ. ಆಸ್ತಿಗಳ ಸಂರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ದೇವರ ಚಿಕ್ಕನಹಳ್ಳಿ ಬಳಿ ನಿರ್ಮಿಸಿದ ಬಿಡಿಎ ಬಡಾವಣೆ ನಿವೇಶನಗಳ ಹಂಚಿಕೆ ರದ್ದು ಮಾಡಲು ಅವಕಾಶ ಕೊಡುವುದಿಲ್ಲ. ಭೂಸ್ವಾಧೀನ, ಬಡಾವಣೆ ನಿರ್ಮಾಣದ ವಿಷಯದಲ್ಲಿ ಹಲವು ನ್ಯೂನತೆಗಳು ಪತ್ತೆಯಾಗಿವೆ. ಅಧಿಕಾರಿಗಳು ಕೋರ್ಟ್‌ಗೆ ಸೂಕ್ತ ದಾಖಲೆಗಳನ್ನು ಸಲ್ಲಿಸಬೇಕು. ಖಾಸಗಿಯವರ ಜತೆ ಶಾಮೀಲಾದರೆ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಸಿದರು.

ಸಾಲಬಾಧೆ: ಒಂದೇ ಕುಟುಂಬದ ಮೂವರು ಆತ್ಮಹತ್ಯೆಗೆ ಶರಣು

ಪ್ರಜಾವಾಣಿ ವಾರ್ತೆ

ಸವಣೂರು (ಹಾವೇರಿ): ತಂದೆ, ತಾಯಿ ಮತ್ತು ಮಗಳು ಸೇರಿದಂತೆ ಒಂದೇ ಕುಟುಂಬದ ಮೂವರು ತಾಲ್ಲೂಕಿನ ತೊಂಡೂರು ಗ್ರಾಮದಲ್ಲಿ ಗುರುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹನುಮಂತಗೌಡ ಪಾಟೀಲ (54), ಪತ್ನಿ ಲಲಿತಾ ಪಾಟೀಲ (46) ಮತ್ತು ಮಗಳು ನೇತ್ರಾ ಉಮಾಶಂಕರ (23) ಮೃತರು.

ಹನುಮಂತಗೌಡ ಅವರು ತಮ್ಮ ಏಕೈಕ ಪುತ್ರಿ ನೇತ್ರಾ ಅವರನ್ನು 7 ತಿಂಗಳ ಹಿಂದೆ ದಾವಣಗೆರೆಯ ಉಮಾಶಂಕರ್ ಎಂಬುವರಿಗೆ ವಿವಾಹ ಮಾಡಿಕೊಟ್ಟಿದ್ದರು. ಬುಧವಾರ ಮಗಳನ್ನು ರಾಣೆಬೆನ್ನೂರಿನ ರೈಲ್ವೆ ನಿಲ್ದಾಣಕ್ಕೆ ತಂದೆ–ತಾಯಿ ಕರೆತಂದಿದ್ದಾರೆ. ನಂತರ ಸಂಬಂಧಿಕರಿಗೆ ಕರೆ ಮಾಡಿ, ವಿಷ ಕುಡಿದು ಮೂವರೂ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿದ್ದರು.

> ಸಾಲದ ಹಿನ್ನೆಲೆಯಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗಿ ಮೂವರು ಆತ್ಮಹತ್ಯೆಗೆ ಶರಣಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ತನಿಖೆ ನಡೆಸಲಾಗುವುದು
>
> **ಡಾ.ಶಿವಕುಮಾರ ಗುಣಾರೆ,** ಎಸ್ಪಿ

ಆತ್ಮಹತ್ಯೆ ತಪ್ಪಿಸಿದ್ದ ಎಸ್‌ಐ: ಈ ವಿಷಯ ತಿಳಿದ ರಾಣೆಬೆನ್ನೂರು ಗ್ರಾಮೀಣ ಠಾಣೆ ಎಸ್‌ಐ ಮಹಾಂತೇಶ ಅವರು ಮೂವರಿಗೂ, ಆತ್ಮಹತ್ಯೆ ಮಾಡಿಕೊಳ್ಳದಂತೆ ಮನವೊಲಿಸಿ ಸವಣೂರು ತಾಲ್ಲೂಕಿನ ತೊಂಡೂರು ಮನೆಗೆ ಕಳಿಸಿಕೊಟ್ಟಿದ್ದರು. ಆದರೆ, ಗುರುವಾರ ಮನೆಯಲ್ಲೇ ಮೂವರೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಾಲಭಾದೆ: ಮಗಳ ವಿದ್ಯಾಭ್ಯಾಸ ಮತ್ತು ಮದುವೆಗಾಗಿ ಪಾಲಕರು ಸಾಲ ಮಾಡಿಕೊಂಡಿದ್ದರು. ಸುಮಾರು ₹14.5 ಲಕ್ಷ ಸಾಲವನ್ನು ತೀರಿಸಲು ಸಾಧ್ಯವಾಗದೆ ನೇಣಿಗೆ ಶರಣಾಗಿದ್ದಾರೆ ಎಂದು ಶಂಕಿಸಲಾಗಿದೆ. 1.5 ಎಕರೆ ಕೃಷಿ ಜಮೀನು ಹೊಂದಿದ್ದ ಹನುಮಂತಗೌಡ ಅವರು ತರಕಾರಿ ಬೆಳೆಗಾರ. ತಮ್ಮ ಹೊಲ ಮತ್ತು ಮನೆಯನ್ನು ಮಾರಾಟ ಮಾಡಿ ಸಾಲ ತೀರಿಸುವ ಉದ್ದೇಶ ಹೊಂದಿದ್ದರು. ಆದರೆ, ಪಹಣಿಯಲ್ಲಿನ ದೋಷದಿಂದಾಗಿ ಮಾರಾಟ ಮಾಡಲು ತೊಡಕಾಗಿತ್ತು ಎನ್ನಲಾಗಿದೆ.

ಹನುಮಂತಗೌಡ ಪಾಟೀಲ

ಲಲಿತಾ

ನೇತ್ರಾ ಉಮಾಶಂಕರ

‘ತಟಸ್ಥ ಉಲ್ಲೇಖ’ ವ್ಯವಸ್ಥೆಗೆ ಸಿಜೆಐ ಚಾಲನೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ‘ನ್ಯೂಟ್ರಲ್ ಸೈಟೇಷನ್ಸ್’ ವ್ಯವಸ್ಥೆಗೆ ಗುರುವಾರ ಚಾಲನೆ ನೀಡಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪುಗಳ ಪೂರ್ವ ನಿದರ್ಶನಗಳನ್ನು ಆಧಾರವಾಗಿಸಿಕೊಂಡು ತಟಸ್ಥ ರೂಪದ ಪೂರ್ವ ನಿರ್ದೇಶಿತ ತೀರ್ಪುಗಳನ್ನು ಅನುಸರಿಸುವ ಮೂಲಕ ಏಕರೂಪತೆ ಕಾಯ್ದುಕೊಳ್ಳುವ ವ್ಯವಸ್ಥೆ ಇದಾಗಿದೆ.

ಚಂದಾಪುರ: ನಾಳೆ ಶ್ರೀನಿವಾಸ ಕಲ್ಯಾಣೋತ್ಸವ

ಪ್ರಜಾವಾಣಿ ವಾರ್ತೆ

ಆನೇಕಲ್ : ತಾಲ್ಲೂಕಿನ ಚಂದಾಪುರದ ಸೂರ್ಯಸಿಟಿಯ ಆಟದ ಮೈದಾನದಲ್ಲಿ ಫೆ.25ರಂದು ಶ್ರೀನಿವಾಸ ಕಲ್ಯಾಣೋತ್ಸವ ಆಯೋಜಿಸಲಾಗಿದೆ.

ಗ್ರಾಮೀಣ ಭಾಗದ ಮಂದಿ ತಿರುಪತಿ ವೆಂಕಟೇಶ್ವರಸ್ವಾಮಿ ದರ್ಶನ ಪಡೆಯಲು ಅನುಕೂಲವಾಗುವಂತೆ ಕಲ್ಯಾಣೋತ್ಸವ ಆಯೋಜಿಸಲಾಗಿದೆ ಎಂದು ಗುರುವಾರ ಕಲ್ಯಾಣೋತ್ಸವದ ಮಾಹಿತಿ ಪುಸ್ತಿಕೆ ಬಿಡುಗಡೆಗೊಳಿಸಿದ ನಿವೃತ್ತ ಐಎಎಸ್ ಅಧಿಕಾರಿ, ಬಿಜೆಪಿ ಮುಖಂಡ ಕೆ.ಶಿವರಾಮು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ತಿರುಪತಿ ದೇವಾಲಯದ ಮಾದರಿಯಲ್ಲಿ ವೇದಿಕೆ ಸಿದ್ದಪಡಿಸಲಾಗಿದೆ. ಅಂದು ಬೆಳಗಿನಿಂದ ಸಂಜೆಯವರೆಗೂ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿವೆ ಎಂದು ತಿಳಿಸಿದರು.

ಸಂಜೆ 5ಕ್ಕೆ ಶ್ರೀನಿವಾಸ ಕಲ್ಯಾಣೋತ್ಸವ ನಡೆಯಲಿದೆ. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಪಾಲ್ಗೊಳ್ಳಲಿದ್ದಾರೆ. ದರ್ಶನಕ್ಕೆ ಬರುವ ಜನರಿಗೆ ತಿರುಪತಿ ಪ್ರಸಾದ ವಿತರಿಸಲಾಗುವುದು. ಐದು ಸಾವಿರಕ್ಕೂ ಹೆಚ್ಚು ಮಂದಿ ಭಕ್ತರು ದರ್ಶನ ಪಡೆಯಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಮೈಕೋ ನಾಗರಾಜು, ಬ್ಯಾಗಡದೇನಹಳ್ಳಿ ರಾಜಪ್ಪ, ಎಸ್.ಟಿ.ಡಿ.ರಮೇಶ್, ಕಾವೇರಪ್ಪ, ಸತೀಶ್, ಚಂದ್ರು ಉಪಸ್ಥಿತರಿದ್ದರು.

‘ಅಸಿಸ್ಟಿವ್ ಟೆಕ್ನಾಲಜಿ ಎಲ್ಲರಿಗೂ ತಲುಪಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಎಲ್ಲ ವ್ಯವಸ್ಥೆಗಳನ್ನು ಅಂಗವಿಕಲರೂ ಸೇರಿದಂತೆ ಎಲ್ಲರಿಗೂ ತಲುಪಿಸುವ ಸಮಗ್ರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ’ ಎಂದು ಐಟಿ–ಬಿಟಿ ಇಲಾಖೆ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಸಮರ್ಥನಂ ಹಾಗೂ ಡಿಸಿಎಕ್ಸ್ ಟೆಕ್ನಾಲಜಿ ವತಿಯಿಂದ ಆಯೋಜಿಸಿದ್ದ ‘ಸಹಾಯಕ ತಂತ್ರಜ್ಞಾನಗಳ’ (ಅಸಿಸ್ಟಿವ್ ಟೆಕ್ನಾಲಜಿ) ಕುರಿತ ಜಾಗೃತಿ ಸಮಾವೇಶವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಗರದ ಯಾವುದೇ ಭಾಗಕ್ಕೆ ಅಂಗವಿಕಲರು ತಲುಪಲು ಸುಗಮ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಎಲ್ಲರೂ ಒಂದೇ ರೀತಿಯ ಬದ್ಧತೆಯಿಂದ ಒಟ್ಟಾಗಿ ಕೆಲಸ ಮಾಡಬೇಕು. ಅಂಗವಿಕಲರು ಎಲ್ಲ ರೀತಿಯ ಸಾಮರ್ಥ್ಯದಿಂದ ಜೀವನ ನಡೆಸುವಂತಾಗಬೇಕು ಎಂದರು.

ಬೆಂಗಳೂರು ತಂತ್ರಜ್ಞಾನದ ಪರಿಹಾರಗಳನ್ನು ಒದಗಿಸುವಲ್ಲಿ ಮುಂಚೂಣಿಯಲ್ಲಿದೆ. ದೇಶ ಹಾಗೂ ವಿಶ್ವಕ್ಕೆ ಪರಿಹಾರಗಳನ್ನು ನೀಡುತ್ತಿದೆ. ಅಂಗವಿಕಲರಿಗೂ ಎಲ್ಲ ಪರಿಹಾರ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡುತ್ತದೆ ಎಂದರು.

‘ಡಿಜಿಟಲ್ ಹಾಗೂ ಸಹಾಯಕ ತಂತ್ರಜ್ಞಾನ ಸಂಬಂಧಿ ಸಮಸ್ಯೆಗಳಿಗೆ ಸಿಗುವ ಪರಿಹಾರವನ್ನು ಎಲ್ಲರಿಗೂ ತಲುಪಿಸಲು ಅಗತ್ಯ ಸಂಪರ್ಕ ಸೇತುವೆ ಬೇಕಿದೆ. ಸಾಕಷ್ಟು ಪ್ರಯತ್ನಗಳಾಗಿದ್ದರೂ, ಅದು ಸಾಕಾಗಿಲ್ಲ. ಹೆಚ್ಚು ಬದ್ಧತೆ ಬೇಕು. ಕೆಲವೇ ಜನರನ್ನು ತಲುಪಿದರೆ ಸಾಕಾಗುವುದಿಲ್ಲ. ಅಂಗವೈಕಲ್ಯ ಎಂಬ ಪರಿಸ್ಥಿತಿ ಯಾರಿಗೆ ಬೇಕಾದರೂ ಬರಬಹುದು. ಹೀಗಾಗಿ ಸಮಾಜದ ಎಲ್ಲ ಜನರಿಗೂ ಪರಿಹಾರಗಳು ತಲುಪಬೇಕು. ಪ್ರಯತ್ನ ದೀರ್ಘಕಾಲಿಕವಾಗಿರಬೇಕು’ ಎಂದರು.

ಸಮರ್ಥನಂ ಸಂಸ್ಥಾಪಕ ಡಾ.ಮಹಾಂತೇಶ್ ಜಿ. ಕಿವಡಸನ್ನವರ್ ಮಾತನಾಡಿ, ‘ಅಂಗವಿಕಲರಿಗೆ ಸಹಾಯಕ ತಂತ್ರಜ್ಞಾನದ ಬಳಕೆಗೆ ವ್ಯವಸ್ಥೆ ರಚಿಸಿ, ಈ ಕ್ಷೇತ್ರಕ್ಕೆ ಹೂಡಿಕೆದಾರರನ್ನು ಆಕರ್ಷಿಸಿ ಬುದ್ಧಿಮತ್ತೆಯನ್ನು ಬಳಸಿಕೊಂಡು ಜಾಗೃತಿ ಮೂಡಿಸುವುದು ಈ ಸಮಾವೇಶದ ಉದ್ದೇಶವಾಗಿದೆ’ ಎಂದರು.

ಅಂಗವಿಕಲರು, ಅಂಗವಿಕಲ ಇಲಾಖೆ ನೌಕರರು, ವೈದ್ಯರು, ವಿಶೇಷ ಚೇತನ ಶಾಲೆಯ ಶಿಕ್ಷಕರು, ಐಟಿ ಸ್ಟಾರ್ಟ್ ಅಪ್‌ಗಳು, ಹೂಡಿಕೆದಾರರು, ಸರ್ಕಾರಿ ಅಧಿಕಾರಿಗಳು, ಉದ್ಯೋಗದಾತರು ಸೇರಿದಂತೆ 300ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಸಹಾಯಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಸ್ತುಪ್ರದರ್ಶನ ಆಯೋಜಿಸಲಾಗಿತ್ತು.

ಡಿಸಿಎಕ್ಸ್ ಟೆಕ್ನಾಲಜಿ ಮುಖ್ಯಸ್ಥ ಲೋಕೇಂದ್ರ ಸೇಥಿ, ಡಿಸಿಎಕ್ಸ್ ಟೆಕ್ನಾಲಜಿಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ನೀಲೇಶ್ ದೇಶ್‌ಪಾಂಡೆ, ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕರಾದ ಎಸ್.ಲತಾ ಕುಮಾರಿ, ಮೈಕ್ರೊಸಾಫ್ಟ್ ಇಂಡಿಯಾದ ಹಿರಿಯ ಪ್ರಧಾನ ಸಂಶೋಧಕ ಡಾ.ಮನೋಹರ ಸ್ವಾಮಿನಾಥನ್, ಕಂಟಿನ್ಯುಯಲ್ ಎಂಜಿ ಸಲಹೆಗಾರ ಡಾ.ಕೆ.ಶ್ರೀರಾಮ್ ಹಾಗೂ ಎಎನ್‌ಝೆಡ್ ವ್ಯವಸ್ಥಾಪಕ ನಿರ್ದೇಶ ವೆಂಕಟರಮಣ ಉಪಸ್ಥಿತರಿದ್ದರು.

‘ಸಹಾಯಕ ತಂತ್ರಜ್ಞಾನಗಳ’ ಕುರಿತ ಜಾಗೃತಿ ಸಮಾವೇಶದಲ್ಲಿ ಸಚಿವ ಡಾ. ಸಿ.ಎನ್ ಅಶ್ವತ್ಥನಾರಾಯಣ ಅವರಿಗೆ ಸಮರ್ಥನಂ ಸಂಸ್ಥಾಪಕ ಡಾ.ಮಹಾಂತೇಶ್ ಜಿ. ಕಿವಡಸನ್ನವರ್ ಸ್ಮರಣಿಕೆ ನೀಡಿದರು. ಎಸ್‌.ಲತಾ ಕುಮಾರಿ, ನೀಲೇಶ್ ದೇಶ್‌ಪಾಂಡೆ ಇದ್ದರು

ರಾಜಾನುಕುಂಟೆ ಸರ್ಕಾರಿ ಶಾಲೆಯ ಆವರಣದಲ್ಲಿ ಆಯೋಜನೆ

‘ಸಮೃದ್ಧಿ ಸಂಜೀವಿನಿ’ ಸಂತೆಗೆ ಚಾಲನೆ

ಯಲಹಂಕ: ರಾಜಾನುಕುಂಟೆ ಸರ್ಕಾರಿ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ‘ಸಮೃದ್ಧಿ ಸಂಜೀವಿನಿ’ ಮಾಸಿಕ ಸಂತೆ ಮತ್ತು ಮಾರಾಟ ಮೇಳಕ್ಕೆ ಶಾಸಕ ಎಸ್. ಆರ್. ವಿಶ್ವನಾಥ್ ಚಾಲನೆ ನೀಡಿದರು.

ರಾಜಾನುಕುಂಟೆ ಮತ್ತು ಅರಕೆರೆ ಗ್ರಾಮ ಪಂಚಾಯಿತಿ ಹಾಗೂ ವಿಶ್ವವಾಣಿ ಫೌಂಡೇಶನ್ ಸಹಯೋಗದಲ್ಲಿ ಸಂತೆ ಆಯೋಜಿಸಲಾಗಿತ್ತು. ತಾಜಾ ಹಣ್ಣು-ತರಕಾರಿ, ಕೃತಕ ಆಭರಣ, ಬಟ್ಟೆ, ಮಣ್ಣಿನಿಂದ ತಯಾರಿಸಿದ ಕಲಾತ್ಮಕ ವಸ್ತುಗಳು, ಸಿರಿಧಾನ್ಯ, ಸ್ವ-ಸಹಾಯ ಗುಂಪುಗಳ ಸದಸ್ಯರು ತಯಾರಿಸಿದ ವಸ್ತುಗಳ ಮಾರಾಟ ಮಳಿಗೆಗಳು ಸಂತೆಯಲ್ಲಿದ್ದವು.

ಶಾಸಕ ವಿಶ್ವನಾಥ್ ಮಾತನಾಡಿ, ‘ಸಣ್ಣ, ಗುಡಿ ಕೈಗಾರಿಕೆಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದರಿಂದ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಾಗುತ್ತದೆ’ ಎಂದರು.

ಫೌಂಡೇಶನ್ ವತಿಯಿಂದ ಸ್ವ-ಸಹಾಯ ಗುಂಪಿನ 4 ಸಾವಿರ ಸದಸ್ಯರಿಗೆ ಸೀರೆ (ಸಮವಸ್ತ್ರ), ಸರ್ಕಾರಿ ಶಾಲೆಯ 500 ಮಕ್ಕಳಿಗೆ ಜಾಮೆಂಟ್ರಿ ಬಾಕ್ಸ್, ಎರಡೂ ಪಂಚಾಯಿತಿ ವತಿಯಿಂದ ಮಹಿಳೆಯರಿಗೆ ಹೊಲಿಗೆ ಯಂತ್ರ, ಕ್ರೀಡಾ ಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಗ್ರಾ.ಪಂ. ಅಧ್ಯಕ್ಷರಾದ ಎಸ್.ಜಿ. ನರಸಿಂಹಮೂರ್ತಿ, ಶಶಿಕುಮಾರ್, ಮಾಜಿ ಅಧ್ಯಕ್ಷ ಕೆ. ವೀರಣ್ಣ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ನಾಗರಾಜ್, ಫೌಂಡೇಶನ್ ನಿರ್ದೇಶಕರಾದ ಅಲೋಕ್, ಪಲ್ಲವಿ, ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್. ರಾಜಣ್ಣ, ಹನುಮಯ್ಯ, ಚೊಕ್ಕನಹಳ್ಳಿ ವೆಂಕಟೇಶ್, ಡಿ.ಜಿ. ಅಪ್ಪಯಣ್ಣ, ಸತೀಶ್ ಕಡತನಮಲೆ, ಎಂ.ಮಂಜುನಾಥ್, ಎಂ.ಮೋಹನ್ ಕುಮಾರ್ ಹಾಜರಿದ್ದರು.

ರಾಜಾನುಕುಂಟೆ ಸರ್ಕಾರಿ ಶಾಲೆಯ ಆವರಣದಲ್ಲಿ ಆಯೋಜಿಸಿರುವ ‘ಸಮೃದ್ಧಿ ಸಂಜೀವಿನಿ’ ಸಂತೆಯಲ್ಲಿದ್ದ ಮಳಿಗೆಗಳಿಗೆ ಶಾಸಕ ವಿಶ್ವನಾಥ್ ಭೇಟಿ ನೀಡಿದರು

ಕ್ಷತ್ರಿಯರಿಗೆ 50 ಕ್ಷೇತ್ರಗಳಲ್ಲಿ ಟಿಕೆಟ್ ನೀಡಲು ಒತ್ತಾಯ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಕ್ಷತ್ರಿಯ ಸಮುದಾಯಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ತಲಾ 50 ಕ್ಷೇತ್ರಗಳಲ್ಲಿ ಟಿಕೆಟ್ ನೀಡಬೇಕು ಎಂದು ಕರ್ನಾಟಕ ಕ್ಷತ್ರಿಯ ಒಕ್ಕೂಟ ಆಗ್ರಹಿಸಿದೆ.

‘ರಾಜ್ಯದಲ್ಲಿ ಕ್ಷತ್ರಿಯ ಸಮುದಾಯಗಳ 38 ಉಪಪಂಗಡಗಳಿದ್ದು, 1.15 ಕೋಟಿ ಜನಸಂಖ್ಯೆ ಇದೆ. 30ರಿಂದ 35 ಕ್ಷೇತ್ರಗಳಲ್ಲಿ ಪ್ರಬಲವಾಗಿದ್ದು, 60–70 ಕ್ಷೇತ್ರಗಳಲ್ಲಿ ನಮ್ಮ ಸಮುದಾಯ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಸಮುದಾಯವನ್ನು ಎಲ್ಲಾ ರಾಜಕೀಯ ಪಕ್ಷಗಳು ನಿರ್ಲಕ್ಷ್ಯ ಮಾಡಿವೆ’ ಎಂದು ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಉದಯ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಈ ವಿಷಯವನ್ನು ನಮ್ಮ ಒಕ್ಕೂಟ ಗಂಭೀರವಾಗಿ ಪರಿಗಣಿಸಿದ್ದು, ಎಲ್ಲಾ ಉಪಪಂಗಡಗಳ ಮುಖಂಡರು ಸಭೆ ನಡೆಸಿದ್ದೇವೆ. ಎಲ್ಲಾ ಪಕ್ಷಗಳಲ್ಲೂ ಕ್ಷತ್ರಿಯ ಸಮುದಾಯದ ಮುಖಂಡರಿದ್ದು, ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಅವರಿಗೆ ಅವಕಾಶ ನೀಡಬೇಕು. ನಿರ್ಲಕ್ಷ್ಯ ವಹಿಸಿದರೆ ಹೆಚ್ಚು ಪ್ರಾತಿನಿಧ್ಯ ನೀಡುವ ಪಕ್ಷಕ್ಕೆ ಬೆಂಬಲ ನೀಡುವ ನಿರ್ಣಯ ಒಕ್ಕೂಟ ಕೈಗೊಳ್ಳಲಿದೆ’ ಎಂದರು.

‘ಕ್ಷತ್ರಿಯ ಸಮುದಾಯದ ಮುಖಂಡರನ್ನು ಪಕ್ಷಕ್ಕಾಗಿ ದುಡಿಸಿಕೊಂಡು ಬಳಿಕ ಮೂಲೆಗುಂಪು ಮಾಡಲಾಗುತ್ತಿದೆ. ಕೋಲಾರ ಜಿಲ್ಲೆಯ ಮಾಲೂರು ಕ್ಷೇತ್ರದಲ್ಲಿ ಹೂಡಿ ವಿಜಯಕುಮಾರ್ ಅವರಿಗೆ ಟಿಕೆಟ್ ನೀಡುವ ಭರವಸೆಯನ್ನು ಬಿಜೆಪಿ ನೀಡಿತ್ತು. ಈಗ ಅಲ್ಲಿ ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಸಜ್ಜಾಗಿದೆ. ಈ ರೀತಿಯ ಅನ್ಯಾಯಗಳನ್ನು ಒಕ್ಕೂಟ ಸಹಿಸುವುದಿಲ್ಲ. ಹೂಡಿ ವಿಜಯಕುಮಾರ್ ಅವರಿಗೆ ಟಿಕೆಟ್ ಕೈ ತಪ್ಪಿದರೆ, ಅದರ ಪರಿಣಾಮವನ್ನು ಬಿಜೆಪಿ ಇಡೀ ರಾಜ್ಯದಲ್ಲಿ ಎದುರಿಸಬೇಕಾಗುತ್ತದೆ’ ಎಂದು ಎಚ್ಚರಿಸಿದರು.

ಉದಯ್ ಸಿಂಗ್

4ರಿಂದ ರಾಷ್ಟ್ರೀಯ ಸಿರಿಧಾನ್ಯ ಶೃಂಗಸಭೆ ಆಯೋಜನೆ: ಕುಲಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತರಿಗೆ ಒಂದೇ ಸೂರಿನಡಿ ಸಿರಿಧಾನ್ಯಗಳ ಕುರಿತು ಸಮಗ್ರ ಮಾಹಿತಿ ನೀಡುವ ಉದ್ದೇಶದಿಂದ ಮಾ. 4 ಮತ್ತು 5ರಂದು ರಾಷ್ಟ್ರೀಯ ಸಿರಿಧಾನ್ಯ ಶೃಂಗಸಭೆಯನ್ನು ಆಯೋಜಿಸಲಾಗಿದೆ’ ಎಂದು ಕೃಷಿ ವಿ.ವಿಯ ಕುಲಪತಿ ಎಸ್.ವಿ. ಸುರೇಶ ಅವರು ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ತಮಿಳುನಾಡಿನ ತಂಜಾವೂರು ರಾಷ್ಟ್ರೀಯ ಆಹಾರ ತಂತ್ರಜ್ಞಾನ ಉದ್ಯಮಶೀಲತೆ ಮತ್ತು ನಿರ್ವಹಣೆ ಸಂಸ್ಥೆ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಸಿರಿಧಾನ್ಯಗಳು–ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳು ಎಂಬ ವಿಷಯದಡಿಯಲ್ಲಿ ಈ ಶೃಂಗಸಭೆ ನಡೆಯಲಿದೆ’ ಎಂದು ಮಾಹಿತಿ ನೀಡಿದರು.

‘ಈಗಾಗಲೇ 2 ಸಾವಿರ ರೈತರು ಈ ಶೃಂಗಸಭೆಯಲ್ಲಿ ಭಾಗವಹಿಸಲು ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಸಿರಿಧಾನ್ಯ ಪ್ರದರ್ಶನ ಮತ್ತು ಮಾರಾಟಕ್ಕೆ 200 ಮಳಿಗೆಗಳನ್ನು ತೆರೆಯಲಾಗುವುದು. ಸಿರಿಧಾನ್ಯಗಳ ಮಾರುಕಟ್ಟೆ ಸಂಪರ್ಕ ಹೆಚ್ಚಿಸಲು ಮತ್ತು ಮಾರಾಟದ ತಿಳಿವಳಿಕೆ ನೀಡಲು ಉದ್ಯಮಿಗಳಿಂದ ಉದ್ಯಮಿಗಳಿಗೆ, ಉದ್ಯಮಿಗಳಿಂದ ಗ್ರಾಹಕರಿಗೆ ಸಭೆಗಳನ್ನು ಆಯೋಜಿಸಲಾಗಿದೆ. ಜತೆಗೆ ಸಿರಿಧಾನ್ಯ ಮೌಲ್ಯವರ್ಧನೆಯ ಸಂಶೋಧನೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಾಗಿ ಸಿರಿಧಾನ್ಯಗಳ ಸಮರ್ಥ ಉತ್ಪನ್ನ, ಸಿರಿಧಾನ್ಯ ಸಂಸ್ಕರಣೆಗಾಗಿ ಉದ್ಯಮ ದೃಷ್ಟಿಕೋನ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಲು ಎಂಟು ಪ್ರತ್ಯೇಕ ತಾಂತ್ರಿಕ ಅಧಿವೇಶನಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಹೇಳಿದರು.

ಜಿಕೆವಿಕೆ ಆವರಣದ ಕೃಷಿ ವಿಜ್ಞಾನಗಳ ವಸ್ತುಸಂಗ್ರಹಾಲಯ ಸಂಕೀರ್ಣದಲ್ಲಿ ರಾಷ್ಟ್ರದಲ್ಲಿದಲ್ಲಿಯೇ ಮೊದಲ ಬಾರಿಗೆ ಆರಂಭಿಸಿರುವ ಅಂತರರಾಷ್ಟ್ರೀಯ ಸಿರಿಧಾನ್ಯಗಳ ಗ್ಯಾಲರಿಯನ್ನು ಗುರುವಾರ ಉದ್ಘಾಟನೆ ಮಾಡಲಾಯಿತು. ಈ ಗ್ಯಾಲರಿಯೂ ಒಂದೇ ಸೂರಿನಡಿ ಸಿರಿಧಾನ್ಯಗಳ ಕುರಿತಾದ ಸಮಗ್ರ ಮಾಹಿತಿಯನ್ನು ಕೃಷಿಕರಿಗೆ, ಶಾಲಾ ವಿದ್ಯಾರ್ಥಿಗಳಿಗೆ ಪೂರೈಸುವ ಉದ್ದೇಶವನ್ನು ಹೊಂದಿದೆ.

ಕೃಷಿ ವಿವಿಯ ಸಂಶೋಧನಾ ನಿರ್ದೇಶಕ ಡಾ.ಕೆ.ಬಿ.ಉಮೇಶ, ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣಗೌಡ ಅವರು ಈ ವೇಳೆ ಉಪಸ್ಥಿತರಿದ್ದರು.

ಹೆಚ್ಚಿನ ಮಾಹಿತಿಗೆ: 9750968417 ಸಂಪರ್ಕಿಸಿ

ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಸಾಧಕರಿಗೆ ಪ್ರಶಸ್ತಿ

ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಸಾಧಕರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಗುರುವಾರ ಪ್ರದಾನ ಮಾಡಿದರು.

2019ನೇ ಸಾಲಿನ ಪ್ರಶಸ್ತಿಯನ್ನು ವಿನಾಯಕ ತೊರವಿ (ಹಿಂದೂಸ್ತಾನಿ ಸಂಗೀತ), ವಸುಂಧರಾ ದೊರೆಸ್ವಾಮಿ (ಭರತನಾಟ್ಯ), ಮಂಜು ಭಾರ್ಗವಿ (ಕೂಚಿಪುಡಿ) ಸ್ವೀಕರಿಸಿದರು. 2020ನೇ ಸಾಲಿನ ಪ್ರಶಸ್ತಿಯನ್ನು ಆರ್.ಕೆ.ಪದ್ಮನಾಭ (ಕರ್ನಾಟಕ ಸಂಗೀತ), ಎಸ್.ಜಿ.ಲಕ್ಷ್ಮೀದೇವಮ್ಮ (ಜನಪದ), ಆರತಿ ಅಂಕಲಿಕರ್ (ಹಿಂದೂಸ್ತಾನಿ ಸಂಗೀತ), 2021ನೇ ಸಾಲಿನ ಪ್ರಶಸ್ತಿಯನ್ನು ರವೀಂದ್ರ ಯಾವಗಲ್ (ತಬಲಾ), ಎಚ್.ಆರ್. ಲೀಲಾವತಿ (ಸುಗಮ ಸಂಗೀತ), ಗರ್ತಿಕೆರೆ ರಾಘಣ್ಣ (ಜನಪದ) ಹಾಗೂ ಡಿ.ಬಾಲಕೃಷ್ಣ (ವೀಣೆ) ಅವರಿಗೆ ಪ್ರದಾನ ಮಾಡಲಾಯಿತು.

ರಂಗಭೂಮಿ- ವಸ್ತ್ರ ವಿನ್ಯಾಸ ವಿಭಾಗದಲ್ಲಿ 2020ರ ಪ್ರಶಸ್ತಿಯನ್ನು ಪುರುಷೋತ್ತಮ ತಲವಾಟ ಸ್ವೀಕರಿಸಿದರು. 500ಕ್ಕೂ ಹೆಚ್ಚು ನಾಟಕಗಳಿಗೆ ನೇಪಥ್ಯ ಕಲಾವಿದರಾಗಿ, ಅನೇಕ ನಾಟಕಗಳ ನಿರ್ದೇಶಕರಾಗಿ, ವಿನ್ಯಾಸಕಾರರಾಗಿ, ನಟರಾಗಿ ಅವರು ಸೇವೆ ಸಲ್ಲಿಸಿದ್ದಾರೆ. ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ನೀಡಲಾಯಿತು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪುರುಷೋತ್ತಮ ತಲವಾಟ ಹಾಗೂ ಆರ್.ಕೆ.ಪದ್ಮನಾಭ ಅವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ಪ್ರದಾನ ಮಾಡಿದರು

ಅಗ್ನಿವೀರರ ನೇಮಕಾತಿ: ಆನ್‌ಲೈನ್ ಮೂಲಕ ಪರೀಕ್ಷೆ

ನವದೆಹಲಿ (ಪಿಟಿಐ): ಅಗ್ನಿವೀರರ ನೇಮಕಾತಿಗೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಇ) ಈ ಬಾರಿ ಆನ್‌ಲೈನ್‌ನಲ್ಲಿ ನಡೆಸಲಾಗುವುದು. ಅದರ ಹೊರತಾಗಿ ಪಠ್ಯ ಮತ್ತು ಪರೀಕ್ಷಾ ವಿಧಾನದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಭಾರತೀಯ ಸೇನೆ ನೇಮಕಾತಿಯ ಪ್ರಧಾನ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ಎನ್.ಎಸ್. ಸರ್ನಾ ಗುರುವಾರ ತಿಳಿಸಿದರು.

ಸಹಕಾರಿ ಬ್ಯಾಂಕ್ ಹಗರಣ: ರಾಜೇಶ್ ಬಂಧಿಸಿದ ಇ.ಡಿ

ಒಂದನೇ ಪುಟದಿಂದ

ಆರೋಪಿಯು ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಿಂದ ₹ 40.40 ಕೋಟಿ ಸಾಲ ಪಡೆದು ವಂಚಿಸಿದ್ದಾರೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಪಾಸಣಾ ವರದಿಯಲ್ಲಿ ತಿಳಿಸಿತ್ತು. ಬ್ಯಾಂಕ್ ಆಡಳಿತವು ಪ್ರಕಟಿಸಿರುವ ಸುಸ್ತಿದಾರರ ಪಟ್ಟಿಯ ಪ್ರಕಾರ, ರಾಜೇಶ್ ವಿ.ಆರ್ ಮತ್ತು ಸಹಚರರು ₹ 234.70 ಕೋಟಿ ಮೊತ್ತದ ಸಾಲ ಪಡೆದಿದ್ದರು.

ರಾಜೇಶ್, ಅವರ ಪತ್ನಿ ಮತ್ತು ಸಹಚರರು ಹಲವು ಸಹಕಾರ ಬ್ಯಾಂಕ್‌ಗಳು ಹಾಗೂ ಸಂಸ್ಥೆಗಳಲ್ಲಿ ಸಾಲ ಪಡೆದು ವಂಚಿಸಿದ ಆರೋಪಗಳಿವೆ. ಈ ಸಂಬಂಧ ಹಲವು ಮೊಕದ್ದಮೆಗಳು ದಾಖಲಾಗಿರುವ ವಿಷಯ ಆರ್‌ಬಿಐ ... ಹೆಚ್ಚಿನ ಬಡ್ಡಿ ದರ ನೀಡುವುದಾಗಿ ಠೇವಣಿ ಸಂಗ್ರಹಿಸಿ, ಅದನ್ನು ಬಳಸಿಕೊಂಡು ಸಾಕಷ್ಟು ಆಧಾರಗಳಿಲ್ಲದೇ ಸಾಲ ಮಂಜೂರು ಮಾಡಿದ್ದರು. ಸಾಲ ಪಡೆದವರು ವಂಚಿಸಿದ್ದಾರೆ ಎಂದು ಇ.ಡಿ ತಿಳಿಸಿದೆ.

ಆರೋಪಿಯನ್ನು ಬೆಂಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಎದುರು ಹಾಜರುಪಡಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ ಮೂರು ದಿನಗಳ ಕಾಲ ತನಿಖಾ ಸಂಸ್ಥೆಯ ವಶಕ್ಕೆ ನೀಡಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಮಹಾಧಿವೇಶನ ಇಂದಿನಿಂದ

ರಾಯಪುರ (ಪಿಟಿಐ): 2024ರ ಲೋಕಸಭಾ ಚುನಾವಣೆಗೆ ಸ್ಪಷ್ಟ ಮಾರ್ಗಸೂಚಿ ರೂಪಿಸುವ ಕುರಿತು ಮತ್ತು ಬಿಜೆಪಿಯನ್ನು ಸೋಲಿಸಲು ಸಮಾನ ಮನಸ್ಕ ಪಕ್ಷಗಳೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಇಲ್ಲಿ ಫೆಬ್ರುವರಿ 24ರಿಂದ ಆರಂಭವಾಗುವ ಕಾಂಗ್ರೆಸ್ ಮಹಾಧಿವೇಶನದಲ್ಲಿ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಎಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರ ಸಾರಥ್ಯಕ್ಕೆ ಅಧಿಕೃತವಾಗಿ ಅನುಮೋದನೆ ನೀಡ ಲಿರುವ 85ನೇ ಮಹಾಧಿವೇಶನದಲ್ಲಿ ಪಕ್ಷದ ಪ್ರಮುಖ ನಾಯಕರು ಪಾಲ್ಗೊಳ್ಳಲಿದ್ದಾರೆ.

ಪವನ್ ಖೇರಾ ಬಂಧನ, ಬಿಡುಗಡೆ

ಒಂದನೇ ಪುಟದಿಂದ

ಎಲ್ಲ ಎಫ್‌ಐಆರ್‌ಗಳನ್ನು ಒಟ್ಟು ಸೇರಿಸಿ ತನಿಖೆ ನಡೆಸಬೇಕು ಎಂಬ ಮನವಿಗೆ ಸಂಬಂಧಿಸಿ ಉತ್ತರ ಪ್ರದೇಶ ಮತ್ತು ಅಸ್ಸಾಂ ಪೊಲೀಸರಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಲಾಗಿದೆ.

ಅಸ್ಸಾಂ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು ಜಾಮೀನು ಅರ್ಜಿಗೆ ವಿರೋಧ ವ್ಯಕ್ತಪಡಿಸಿದರು. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಸತ್ತೆಯ ಚುನಾಯಿತ ಪ್ರಧಾನಿಯ ವಿರುದ್ಧ ಆರೋಪಿಯು ಉದ್ದೇಶಪೂರ್ವಕವಾಗಿ ಈ ಹೇಳಿಕೆ ನೀಡಿದ್ದಾರೆ. ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧಿಸಲಾದ ಅವರನ್ನು ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಪ್ರಯಾಣಕ್ಕೆ ಅನುಮತಿ ಪಡೆದುಕೊಳ್ಳಲಾಗುವುದು. ಜಾಮೀನು ಅರ್ಜಿಯನ್ನು ಅವರು ಅಲ್ಲಿಯೇ ಸಲ್ಲಿಸಬಹುದು ಎಂದು ವಾದಿಸಿದರು.

ಐಪಿಸಿ ಸೆಕ್ಷನ್ 153ಎ, 153ಬಿ, 295, 500, 504 ಮತ್ತು 505ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆದರೆ, ಈ ಸೆಕ್ಷನ್ ಅಡಿಯಲ್ಲಿ ಸಾಬೀತು ಮಾಡಬಹುದಾದ ಯಾವುದೇ ಅಪರಾಧವನ್ನು ಖೇರಾ ಅವರು ಎಸಗಿಲ್ಲ. ಅದಲ್ಲದೆ, ಅವರು ಎಸಗಿದ್ದಾರೆ ಎಂದು ಹೇಳಲಾಗುವ ಅಪರಾಧವು ಏಳು ವರ್ಷಗಳವರೆಗಿನ ಶಿಕ್ಷೆ ವಿಧಿಸಬಹುದಾದ ಕೃತ್ಯ ಅಲ್ಲ. ಹಾಗಾಗಿ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ 41ಎ ಅಡಿಯಲ್ಲಿ ಬಂಧಿಸುವ ಅವಶ್ಯಕತೆಯೂ ಇಲ್ಲ ಎಂದು ಸಿಂಘ್ವಿ ವಾದಿಸಿದರು.

ಮುಂಬೈನಲ್ಲಿ ಇದೇ 17ರಂದು ಮಾಧ್ಯಮಗೋಷ್ಠಿ ನಡೆಸಿದ್ದ ಖೇರಾ ಅವರು, ನರೇಂದ್ರ ಗೌತಮ್‌ದಾಸ್ ಮೋದಿ ಎಂದು ಹೇಳಿ ಬಳಿಕ ತಪ್ಪು ತಿದ್ದಿಕೊಂಡು ನರೇಂದ್ರ ದಾಮೋದರ ದಾಸ್ ಮೋದಿ ಎಂದು ಹೇಳಿದ್ದರು.



ಕಾಂಗ್ರೆಸ್ ಮುಖಂಡರು ವಿಮಾನದ ಸಮೀಪ ಧರಣಿ ನಡೆಸಿದರು

ಎಲ್ಲವನ್ನೂ ಕಾನೂನುಬದ್ಧವಾಗಿಯೇ ನಡೆಸಲಾಗಿದೆ. ತಾವು ಕಾನೂನಿಗಿಂತ ಮೇಲೆ ಇರುವವರು ಎಂಬ ತಪ್ಪುಗ್ರಹಿಕೆಯಲ್ಲಿ ಕಾಂಗ್ರೆಸ್ ಮುಖಂಡರು ಇರಬಾರದು

ಗೌರವ್ ಭಾಟಿಯಾ, ಬಿಜೆಪಿ ವಕ್ತಾರ

ಪ್ರಧಾನಿ ಮೋದಿ ಅವರ ದ್ವೇಷ, ಕಿರುಕುಳ ಮತ್ತು ಬೆದರಿಕೆ ರಾಜಕಾರಣದ ಹೊಸ ಉದಾಹರಣೆ ಇದು. ಭಾರತ್ ಜೋಡೊ ಯಾತ್ರೆಯ ಯಶಸ್ಸಿನಿಂದ ಬಿಜೆಪಿ ಬೆದರಿದೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ನಾಟಕೀಯ ಬೆಳವಣಿಗೆ

ದೆಹಲಿ ವಿಮಾನ ನಿಲ್ದಾಣದಲ್ಲಿ ಖೇರಾ ಅವರನ್ನು ಬಂಧಿಸುವ ಹೊತ್ತಿಗೆ ಕುತೂಹಲ ಘಟನೆಗಳು ನಡೆದು ಹೋದವು.

ಖೇರಾ ಅವರು ಪ್ರಯಾಣಿಸಲು ಉದ್ದೇಶಿಸಿದ್ದ ಇಂಡಿಗೊ ವಿಮಾನದಲ್ಲಿ ಕಾಂಗ್ರೆಸ್‌ನ ಹಲವು ಮುಖಂಡರೂ ಇದ್ದರು. ಖೇರಾ ಅವರನ್ನು ಸಿಬ್ಬಂದಿಯು ವಿಮಾನದಿಂದ ಇಳಿಸುವ ಹೊತ್ತಿಗೆ ಹೆಚ್ಚಿನ ಪ್ರಯಾಣಿಕರು ತಮ್ಮ ಆಸನಗಳಲ್ಲಿ ಕುಳಿತಿದ್ದರು. ಆರಂಭದಲ್ಲಿ ಲಗೇಜ್‌ಗೆ ಸಂಬಂಧಿಸಿದ ಗೊಂದಲ ಎಂದೇ ಪ್ರಯಾಣಿಕರು ಭಾವಿಸಿದ್ದರು. ಕಾಂಗ್ರೆಸ್ ಮುಖಂಡರಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸುರ್ಜೇವಾಲಾ ಅವರೂ ಖೇರಾ ಅವರೊಂದಿಗೆ ಕೆಳಕ್ಕೆ ಇಳಿದರು. ಖೇರಾ ಅವರನ್ನು ಏಕೆ ಕೆಳಕ್ಕೆ ಇಳಿಸಲಾಗಿದೆ ಎಂದು ಸಿಬ್ಬಂದಿ ಜೊತೆಗೆ ವಾಗ್ವಾದ ನಡೆಸಿದರು.

ಸ್ವಲ್ಪ ಹೊತ್ತಿನ ಬಳಿಕ ಪೊಲೀಸರು ಸ್ಥಳಕ್ಕೆ ಬಂದು, ಅಸ್ಸಾಂ ಪೊಲೀಸರ ವಿನಂತಿಯಂತೆ ತಮ್ಮನ್ನು ವಶಕ್ಕೆ ಪಡೆದುಕೊಳ್ಳಲಾಗುತ್ತಿದೆ ಎಂದು ಖೇರಾ ಅವರಿಗೆ ಹೇಳಿದರು. ಆದರೆ, ಖೇರಾ ಅವರನ್ನು ವಶಕ್ಕೆ ಪಡೆಯುವುದಕ್ಕೆ ಕಾಂಗ್ರೆಸ್ ಮುಖಂಡರು ಆಕ್ಷೇಪ ಎತ್ತಿದರು. ಎಫ್‌ಐಆರ್ ಅಥವಾ ವಾರಂಟ್ ಇದ್ದರೆ ತೋರಿಸಬೇಕು ಎಂದು ಆಗ್ರಹಿಸಿದರು. ಆದರೆ ವಿಮಾನದಲ್ಲಿದ್ದ ಮುಖಂಡರಾದ ಮಣಿಶಂಕರ್ ಅಯ್ಯರ್ ಮತ್ತು ತಾರಿಖ್ ಅನ್ವರ್ ಅವರೂ ಪ್ರತಿಭಟನೆಗೆ ಸೇರಿಕೊಂಡರು.

ವಿಮಾನದ ಹೊರಭಾಗದಲ್ಲಿಯೇ ಕಾಂಗ್ರೆಸ್ ಮುಖಂಡರು ಧರಣಿ ಕುಳಿತರು. ಪ್ರಧಾನಿ ನರೇಂದ್ರ ಮೋದಿ ಮತ್ತು ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿದರು. ಖೇರಾ ಅವರನ್ನು ವಶಕ್ಕೆ ಪಡೆಯಲು ನೆರವು ಕೋರಿ ಅಸ್ಸಾಂ ಪೊಲೀಸರು ಕಳುಹಿಸಿದ್ದ ಮನವಿಯನ್ನು ಪೊಲೀಸರು ತೋರಿಸಿ, ಖೇರಾ ಅವರನ್ನು ವಶಕ್ಕೆ ಪಡೆದರು. ಈ ಎಲ್ಲ ಬೆಳವಣಿಗೆಗಳಿಂದಾಗಿ ವಿಮಾನವು ನಾಲ್ಕು ತಾಸು ತಡವಾಗಿ ಹೊರಟಿತು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು
Email -dhochikmagalur@gmail.com
ಸಂಖ್ಯೆ : ಜಿಅಕುಕ:ಸಿವಿ(5)27/2022–23 ದಿನಾಂಕ :20–02–2023
:: ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು ಇವರ ಅಧೀನದ ಆರೋಗ್ಯ ಸಂಸ್ಥೆಗಳಿಗೆ 2023–24ನೇ ಸಾಲಿಗೆ 166 ಗ್ರೂಪ್ 'ಡಿ', 58 ಫಾರ್ಮಾಸಿಸ್ಟ್ ಮತ್ತು II ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗೆ ಹೊರಸಂಪನ್ಮೂಲನದಿಂದ ಒದಗಿಸುವುದಕ್ಕಾಗಿ ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು http//eproc.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ–2/ಐಎಫ್‌ಟಿ–70/2022–23
ದಿನಾಂಕ:21–02–2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ, & ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
3054–03–337–0–05–200, ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ
1. ಹೊಸನಗರ ತಾಲ್ಲೂಕು । ಕಾಮಗಾರಿ
ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ: 22–02–2023 ರಿಂದ 01–03–2023.
ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 6 ತಿಂಗಳು.
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಎಂಸಿಎ/ಶಿ/202/02/22–23/1974

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in
ಅಲ್ಪಾವಧಿ ಟೆಂಡರ್ ಪ್ರಕಟಣೆ
ಉಲ್ಲೇಖ:– **No: EE/ KNNL/ BCD-5/DVG/PB-1/4701/3227/10/ 2022-23 Dated:15.02.2023**
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆರವರು, ಉಲ್ಲೇಖಿತ ಪತ್ರದಲ್ಲಿ ಲೆಕ್ಕಶೀರ್ಷಿಕೆ 4701 ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಡಿ ಇ–ಪೋರ್ಟ್‌ಲ್ ಮುಖಾಂತರ ಟೆಂಡರ್‌ನ್ನು ಅಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ ದಿ: 20.02.2023 ರಿಂದ 28.02.2023 ಸಂಜೆ 5.00 ಡೌನಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತ ಸ್ಪಷ್ಟೀಕರಣಕ್ಕೆ ದಿನಾಂಕ: 24.02.2023 ರಂದು ಸಂಜೆ 5.00 ಘಂಟೆಯವರೆಗೆ. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 01.03.2023 ರಂದು ಸಂಜೆ 5.10 ಘಂಟೆ ಒಟ್ಟು ಕಾಮಗಾರಿಗಳ ಸಂಖ್ಯೆ 1. ಕಾಮಗಾರಿಗಳ ಒಟ್ಟು ಮೊತ್ತ ರೂ. 50.00 ಲಕ್ಷಗಳು.
1.KNNL/2022-23/RD/WORK_INDENT 35766- 50.00 ಲಕ್ಷಗಳು.
ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.
ವಾಸಾಇ/ಡಿವಿಜಿ/960/ಕೆಎಸ್‌ಎಂಸಿಎ/2022–23 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ಕ್ರ.ಸಂ:ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ:22–02–2023
ಟೆಂಡರ್ ಅಧಿಸೂಚನೆ
ಬೆಳಗಾವಿ ಜಿಲ್ಲೆಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯ ಕಾಮಗಾರಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ KW-4 ಡಾಕುಮೆಂಟ್ ಉಪಯೋಗಿಸಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.
(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ
1	ಗೋಕಾಕ ನಗರಸಭೆ ವ್ಯಾಪ್ತಿಯಲ್ಲಿ ನಾಕಾ ನಂ:1 ರಿಂದ ಜಾಧವ ಪೆಟ್ರೋಲ್ ಪಂಪ ವರೆಗೆ ರಸ್ತೆ ಎರಡು ಬದಿ ಚರಂಡಿ ಹಾಗೂ ಫೂಟಪಾತ ಕಾಮಗಾರಿ ಕೈಕೊಂಡ ಸ್ಥಳದಲ್ಲಿ ಇರುವ ವಿದ್ಯುತ್ ಕಂಬ ಹಾಗೂ ಲೈನ್ ಸ್ಥಳಾಂತರಿಸುವುದು.(Tender No. DMA/2022-23/ EL/WORK_INDENT140726)	108.80	1.63

ಗುತ್ತಿಗೆದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	09–03–2023ರಂದು 17–00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	10–03–2023ರಂದು 17–01 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/–ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/BGM/RO-NO-1862/MCA/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–2/ಟೆಂಡರ–43/2022–23/5167 ದಿನಾಂಕ: 21.02.2023
ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)
ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: **01.03.2023 16.30** ಗಂಟೆ ವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: **02.03.2023 16.30** ಗಂಟೆ ವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: **03.03.2023 17.00** ಗಂಟೆ ವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: **04.03.2023 17.00** ಗಂಟೆ ವರೆಗೆ
ಕಾಮಗಾರಿಯ ಹೆಸರು: ಲೆಕ್ಕ ಶೀಷಿಕೆ : **4059-Court Buildings APPENDIX 'E'** ಇಂಡೆಂಟ್ ನಂ: **(1) 163050**
(ಕೆಡಬ್ಲು–4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ **e-proc** ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ **"eproc.karnataka.gov.in"** ನೋಡಬಹುದು. ಹೆಚ್ಚಿನ ಮಾಹಿತಿಗಾಗಿ **help desk Bangalore (Phone No. 918025501216 & 918025501227)** ಇವರನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ
DIPR/ADK/KSMCA/1035/22-23 dt.23.02.2023

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ
ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ , ಧಾರವಾಡ–580 001. ಫೋನ್: 0836–2461218
e-mail:- eesliddwd@gmail.com
No.KNN/SLID/DWD/PB-1/Savanur-Additional/Tender-II/2022-23/1700 Date:22-02-2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಎರಡನೇ ಕರೆ)
(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಉಲ್ಲೇಖ :–ಈ ಕಚೇರಿ ಟೆಂಡರ ಪ್ರಕಟಣೆ ಸಂ:1395 ದಿನಾಂಕ:29.12.2022
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ **"Filling up of Additional 14 Nos. and Augmentation to 3 Nos. of MI/ZP Tanks under DC-4 of Savanur Lift Irrigation Scheme including Operation & Maintenance for a period of 5 years on Turn-key Basis"** (ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 3045.78 ಲಕ್ಷಗಳಿಗೆ) ದ್ವಿ–ಲಕೋಟೆ ಪದ್ಧತಿಯಲ್ಲಿ ಟರ್ನಕೀ ಆಧಾರದ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ **ದಿನಾಂಕ: 24/02/2023 ಬೆಳಿಗ್ಗೆ 11.00 ರಿಂದ** ಡೌನಲೋಡ್ ಮಾಡಿಕೊಂಡು **ದಿನಾಂಕ:06/03/2023 ರ ಸಂಜೆ 4.00 ಘಂಟೆವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ ಪೂರ್ವಭಾವಿ ಸಭೆಯನ್ನು **ದಿನಾಂಕ:27/02/2023 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಮುಖ್ಯ ಇಂಜನೀಯರರು, ಕನೀನಿನಿ, ಮಲಪ್ರಭಾ ಯೋಜನಾ ವಲಯ , ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರಗಳನ್ನು **ದಿನಾಂಕ:07/03/2023 ರಂದು ಸಂಜೆ 4.30 ಘಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು **ದಿನಾಂಕ:09/03/2023 ರಂದು ಬೆಳಿಗ್ಗೆ 11.00 ಘಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.
ಟೆಂಡರನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (e-Procurement portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. (ಎಸ್.ಕೆ.ಕುಲಕರ್ಣಿ)
ಕಾರ್ಯನಿರ್ವಾಹಕ ಇಂಜನೀಯರರು
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ
ವಾಸಾಸಂಇ/ಧಾ/ದಿಶಾ/1144/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಾಂತಿನಗರ ವಿಭಾಗ, ಪಿ.ಯು. ಕಟ್ಟಡ, 9ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು–560001
ನಂ.: ಕಾಪಾಅ/ಶಾನ/ಟೆಂಡರ್/19/2022–23 ದಿನಾಂಕ: 23.02.2023
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ ಪದ್ಧತಿ
ಕಾರ್ಯಪಾಲಕ ಅಭಿಯಂತರರು (ಶಾಂತಿನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಕೆಡಬ್ಲ್ಯು–3).**

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂಪಾಯಿಗಳಲ್ಲಿ)
1	2022–23ನೇ ಸಾಲಿಗೆ ಶಾಂತಿನಗರ ವಿಭಾಗ, **ವಾರ್ಡ್ ನಂ. 111**ರಲ್ಲಿ ಪೂರ್ವ ವಲಯ ನಿಯಂತ್ರಣ ಕೊಠಡಿಗೆ ತುರ್ತು ಪರಿಹಾರ ಕಾರ್ಯ ತಂಡವನ್ನು ಒದಗಿಸುವುದು.	99.00	1,98,000/–

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **27.02.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಪೂರ್ವಭಾವಿ ಸಭೆಯು ಕಾರ್ಯಪಾಲಕ ಅಭಿಯಂತರರ ಕಛೇರಿ, 9ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂಜಿ ರಸ್ತೆ, ಬೆಂಗಳೂರು ಇಲ್ಲಿ **04.03.2023**ರ **ಮಧ್ಯಾಹ್ನ 3:30 ಗಂಟೆಗೆ** ನಡೆಯಲಿದೆ. **(3)** ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **09.03.2023**ರ **ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. **(4)** ತಾಂತ್ರಿಕ ಬಿಡ್ಡನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, ಶಾಂತಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇಲ್ಲಿ ವೆಬ್‌ಸೈಟ್ **https://eproc.karnataka.gov.in** ಮೂಲಕ **10.03.2023**ರ **ಸಂಜೆ 4:00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬಿಬಿಎಂಪಿ

TAMILNADU NEWSPRINT AND PAPERS LIMITED
Mondipatti, Manapparai Tk, Trichy Dist - 621 306
Ph : 044332 - 261600, Email : purchase.wood@tnpl.co.in
NOTICE INVITING TENDER

Tender No.	Description of Work	Due date
222323 004497	Supply of debarked Acacia pulpwood from open market sources of Karnataka to TNPL Unit-2 at Mondipatti, Manaparai, Trichy District, Tamilnadu	06.03.2023

Corrigendum if any will be displayed only in TNPL website. Detailed requirements, Period, Terms & conditions, Tender fee, EMD, etc., are available in tender document at our websites : **www.tnpl.com / www.tenders.tn.gov.in**
DIPR/1120/TENDER/2023 *TNPL - Maker of bagasse based eco-friendly Paper*
"சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்."

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
ಟೆಂಡರ್ ಪ್ರಕಟಣೆ ಸಂಖ್ಯೆ : 8-4th, 9-5th, 19-2nd, 20-2nd Call Dtd : 20.02.2023
ಟೆಂಡರ್ ಆಹ್ವಾನ ಪ್ರಕಟಣೆ
ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು, ಎನ್ .ಆರ್. ಪುರ ಕೊಪ್ಪ, ಶೃಂಗೇರಿ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್, ಮುಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಕನಿಷ್ಠ ಮೊತ್ತ ರೂ. 11.39 ಹಾಗೂ ಗರಿಷ್ಠ ಮೊತ್ತ ರೂ.104.56 ಲಕ್ಷಗಳು ಒಟ್ಟು 6 ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-1, 2 & 4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: 20.02.2023 ರಿಂದ 01.03.2023 ರವರೆಗೆ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ 02.03.2023 ರಂದು ಸಂಜೆ 05:30ಕ್ಕೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು www.eproc.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ: ಸಂ: 08194–235018 ಇ–ಮೇಲ್: dhochitradurga@gmail.com
ಸಂ.ಜಿಆಕುಕ/ಚಿ/ಟೆ/17/2022–23 ದಿನಾಂಕ: 20.02.2023
ಇ–ಟೆಂಡರ್ ಪ್ರಕಟಣೆ
ಜಿಲ್ಲೆಯ ಅಧೀನ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಫಾರ್ಮಸಿ ಅಧಿಕಾರಿ ಹುದ್ದೆಗಳ ಪೈಕಿ 21 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿರುತ್ತದೆ. ಅರ್ಹ ನೋಂದಾಯಿತ ಮತ್ತು ಆಸಕ್ತ ಸಂಸ್ಥೆಗಳು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಸೂಚಿಸಲಾಗಿದೆ. ಇ–ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ದಿನಾಂಕ:–20–01–2023 ರಿಂದ ದಿನಾಂಕ:– 06–03–2023 ರ ಸಮಯ 5=30 ಗಂಟೆಯವರೆಗೆ ಅಪ್ ಲೋಡ್ ಮಾಡಬಹುದು. ಟೆಂಡರ್‌ನ ತಾಂತ್ರಿಕ ಬಿಡ್ ದಿನಾಂಕ:–08–03–2023 ರ ಬೆಳಿಗ್ಗೆ 11–00 ಗಂಟೆಗೆ, ಟೆಂಡರ್‌ನ ಪ್ರತಿಯೊಂದು ಷರತ್ತು ಮತ್ತು ನಿಬಂಧನೆಗಳನ್ನು http://eproc.karnataka.gov.in ಅಂತರ್‌ಜಾಲದಲ್ಲಿ ಪಡೆದು ಕೊಳ್ಳಬಹುದು.
ಹೆಚ್ಚಿನ ವಿವರಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿಸಂಪರ್ಕಿಸುವುದು,
DIPR/CTA/KSMCA/ 1044/2022-23
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾನೀನಿನಿ., ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 22/2022–23
ದಿನಾಂಕ: 23.02.2023
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿಅರ್ಹ ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ/ಇತರೆ ಇಲಾಖೆಗಳಲ್ಲಿ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿಕರ್ನಾಟಕ ಪಾರದರ್ಶಕ ಕಾಯಿದೆ KW-3 ಅನ್ವಯಐಟಂ ವಾರು ಟೆಂಡರ್‌ಗಳನ್ನು E-procurement Plat form ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿದೆ. 1.ಟೆಂಡರ್ ಪ್ರೋಸೆಸ್ಸಿಂಗ್ ಫೀ: E-procurement ನಲ್ಲಿ ನೋಡುವುದು. 2.E-procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವಅವಧಿ: ದಿನಾಂಕ: 23.02.2023 ರಿಂದ03.03.2023 ಸಂಜೆ4.00 ಘಂಟೆಯವರೆಗೆ. 3.ಟೆಂಡರ್ ಸಲ್ಲಿಸಲುಕೊನೆಯ ದಿನಾಂಕ: 03.03.2023 ಸಂಜೆ 4.00 ಘಂಟೆಯವರೆಗೆ. 4.ಮೊದನೇ ಲಕೋಟೆ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ: 06.03.2023 ಬೆಳಗ್ಗೆ 11.00ರ ನಂತರ 5.ಎರಡನೇ ಲಕೋಟೆ (ಆರ್ಥಿಕ ಬಿಡ್) ತೆರೆಯುವ ದಿನಾಂಕ: 07.03.2023ರ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಗುತ್ತಿಗೆದಾರರ ಬಿಡ್‌ಗಳನ್ನು ಮಾತ್ರ. 6.ಕಾಮಗಾರಿಗಳ ಸಂಖ್ಯೆ: 8 ಪ್ಯಾಕೇಜ್ ಕಾಮಗಾರಿಗಳು. 7.ಕೆಲಸದ ರೀತಿ:ಸಿ.ಸಿ. ರಸ್ತೆ, ಚರಂಡಿ ಮತ್ತು ದೇವಸ್ಥಾನ ಕಾಮಗಾರಿಗಳು. 8.ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ: ರೂ.50.72 ಲಕ್ಷದಿಂದರೂ. 80.14 ಲಕ್ಷ 9.ಇ. ಎಂ. ಡಿ.:ರೂ. 1.01 ಲಕ್ಷದಿಂದರೂ. 1.60 ಲಕ್ಷ 10.ಗುತ್ತಿಗೆದಾರರ ವರ್ಗ: ಮೂರನೇದರ್ಜೆಮತ್ತು ಮೇಲ್ಪಟ್ಟು **ಸೂಚನೆ:** 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು E-procurement portal www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. 3.ಟೆಂಡರ್‌ಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಹೇ.ಬ.ನಾ ವಿಭಾಗ, ಹೊಳೆನರಸೀಪುರ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1138/2022–23

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ
ವಾರಸುದಾರರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ
ಮಗುವಿನ ವಿವರ: ಕ್ರ.ಸಂ.1)ಹೆಸರು: ಸ್ಪಂದನ (ಸಂಸ್ಥೆಯಲ್ಲಿ ಇಟ್ಟಿರುವ ಹೆಸರು. 2)ವಯಸ್ಸು: 8 ದಿನ 3)ಲಿಂಗ: ಹೆಣ್ಣು. 4)ತೂಕ: 1.900 ಗ್ರಾ ಕೆ.ಜಿ 5)ಬಣ್ಣ: ಗೋಧಿ ಬಣ್ಣ 6)ಪತ್ತೆಯಾದ ದಿನಾಂಕ: 08.02.2023 7)ಮಗು ದೊರೆತ ಸ್ಥಳ: ಬ್ಯಾಕರವಳ್ಳಿ ಗ್ರಾಮ, ಹೆತ್ತೂರು ಹೋ॥ ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ. 8)ಪೊಲೀಸ್ ಠಾಣೆ: ಸಕಲೇಶಪುರ, ಪೊಲೀಸ್ ಠಾಣೆ.
ಮಗುವಿನ ಭಾವ ಚಿತ್ರ

ಮೇಲೆ ತಿಳಿಸಿರುವ ಮಗುವಿನ ವಾರಸುದಾರರು ಇದ್ದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಕಲ್ಯಾಣ ಸಮಿತಿ, ಹಾಸನ ಇವರನ್ನು ಸಂಪರ್ಕಿಸಬಹುದಾಗಿದೆ.
ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1127/2022–23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸವಣೂರ–581118
ಇ–ಮೇಲ್: apmcsavanur1@gmail.com ಜಿಲ್ಲೆ: ಹಾವೇರಿ ದೂರವಾಣಿ: 08378–241622
ಕ್ರಸಂ:ಕೃಮಾಇ;ಕೃಉಮಾಸ:ಸ:ವಾಕ್ರಿಯೋ: 308:2022–23 ದಿನಾಂಕ:22–02–2023
ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ
ಸಮಿತಿಯ 2023–24 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದನೆಯಾದ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 100 ಎಂಟಿ ಸಾಮರ್ಥ್ಯದ ಬೃಹತ್ ತೂಕದ ಯಂತ್ರ ನಿರ್ಮಿಸುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋದಾಯಿತ ಅರ್ಹ ಗುತ್ತಿಗೆದಾರರಿಂದ KW-2 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಸ್ಪರ್ಧಾತ್ಮಕ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿರುತ್ತದೆ (INDENT5493). ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 10–03–2023 ಸಾಯಂಕಾಲ 4:30 ಗಂಟೆವರೆಗೆ.** ಟೆಂಡರ ತೆರೆಯುವ **ದಿನಾಂಕ: 13–03–2023 ಸಾಯಂಕಾಲ 4:30 ಗಂಟೆಗೆ.** ಟೆಂಡರಗಿಟ್ಟ ಮೊತ್ತ **ರೂ. 3095298.00.** ಇ.ಎಂ.ಡಿ ಮೊತ್ತ ರೂ.61905.00. ಕಾಲಾವಧಿ:51/2 ತಿಂಗಳು (ಮಳೆಗಾಲ ಸಹಿತ). ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಾರ್ಯಾಲಯದ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ (http://eproc.karnataka.gov.in) ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರನ್ನು ಸ್ವೀಕರಿಸುವ ಅಥವಾತಿರಸ್ಕರಿಸುವಅಧಿಕಾರವನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/–(ವಿರೇಂದ್ರಗೌಡ ಡಿ ಪಾಟೀಲ) ಕಾರ್ಯದರ್ಶಿ, ಕೃ.ಉ.ಮಾ.ಸ.,ಸವಣೂರು
ಸಹಿ/– (ಅನಿಲ್‌ಕುಮಾರ ಜಿ) ಆಡಳಿತಾಧಿಕಾರಿ, ಕೃ.ಉ.ಮಾ.ಸ., ಸವಣೂರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560 001.
ಫೋನ್: 080–22215601, 22215801, ಫ್ಯಾಕ್ಸ್: 080–22215602
ಸಂಖ್ಯೆ: ಡಿವೈಇಎಸ್/ಎಸ್‌ಎಂಸಿ/182/2022–23 ದಿನಾಂಕ: 22.02.2023
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001, ಕರ್ನಾಟಕ ಇವರು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣ ಮತ್ತು ಇತರೆ ಕೇಂದ್ರಗಳಿಗೆ ಭದ್ರತೆ, ಸ್ವಚ್ಛತೆ ಮತ್ತು ಇತರೆ ಸಿಬ್ಬಂದಿಯ ಸೇವೆಯನ್ನು ಎರಡು ವರ್ಷ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಒದಗಿಸವ ಬಗ್ಗೆ ಇ–ಟೆಂಡರ್ ಮೂಲಕ ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ ಲಕ್ಷಗಳಲ್ಲಿ)
1	ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣ ಮತ್ತು ಇತರೆ ಕೇಂದ್ರಗಳಿಗೆ ಭದ್ರತೆ, ಸ್ವಚ್ಛತೆ ಮತ್ತು ಇತರೆ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸವುದು.	ರೂ.892.00	ರೂ.13.38

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 24.03.2023 ಸಮಯ 16.00 ಗಂಟೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.03.2023 ಸಮಯ 16.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/–
ಉಪ–ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
ವಾ.ಸಾ.ಸಂ.ಇ/ವಾಪ್ರ/4902/ ಆಕಾರ್/22–23



ಮಾನ್ವಿತ ಕಾಮತ್

‘ಲವ್ ಲಿ ಸ್ಟಾರ್’ಗೆ ‘ಟಗರು ಪುಟ್ಟಿ’ ಜೋಡಿ

ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ನಟನೆಯ ‘ಟಗರು’ ಸಿನಿಮಾದಲ್ಲಿನ ನಟನೆ ಬಳಿಕ ಸ್ಯಾಂಡಲ್‌ವುಡ್‌ನ ‘ಟಗರು ಪುಟ್ಟಿ’ಯಾದ ನಟಿ ಮಾನ್ವಿತ ಕಾಮತ್, ಕೊಂಚ ಗ್ಯಾಪ್ ಬಳಿಕ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳಲು ಸಜ್ಜಾಗುತ್ತಿದ್ದಾರೆ.

ಕೆ.ಆರ್.ಎಸ್ ಪ್ರೊಡಕ್ಷನ್ಸ್‌ನ ಚೊಚ್ಚಲ ಚಿತ್ರಕ್ಕೆ ಪ್ರವೇಶಿಸಿರುವ ಮಾನ್ವಿತ ‘ಲವ್ ಲಿ’ ಸ್ಟಾರ್ ಪ್ರೇಮ್‌ಗೆ ಜೋಡಿಯಾಗಿದ್ದಾರೆ. ಅಥರ್ವ ಆರ್ಯ ನಿರ್ದೇಶನದಲ್ಲಿ ಈ ಚಿತ್ರ ಮೂಡಿಬರಲಿದೆ. ತಂದೆ ಮಗನ ಭಾವನಾತ್ಮಕ ಕಥಾಹಂದರ ಒಳಗೊಂಡಿರುವ ವಿಷಯಾಧಾರಿತ(ಕಂಟೆಂಟ್) ಚಿತ್ರದಲ್ಲಿ ಪ್ರೇಮ್ ಪ್ರಮುಖ ಪಾತ್ರವೊಂದಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಈಗಾಗಲೇ ಚಿತ್ರೀಕರಣದಲ್ಲಿ ಮಾನ್ವಿತಾ ಭಾಗಿಯಾಗಿದ್ದು, ಇದೇ ಮೊದಲ ಬಾರಿಗೆ ಈ ಇಬ್ಬರ ಕಾಂಬಿನೇಷನ್ ತೆರೆ ಮೇಲೆ ಬರುತ್ತಿದೆ.

ಸದ್ಯದಲ್ಲೇ ಸಿನಿಮಾದ ಶೀರ್ಷಿಕೆಯನ್ನು ಚಿತ್ರತಂಡ ಘೋಷಿಸಲಿದೆ. ‘ಜೂಟಾಟ’, ‘ಗುಬ್ಬಚ್ಚಿ’ ಸಿನಿಮಾ ನಿರ್ದೇಶಿಸಿರುವ ಅಥರ್ವ ಆರ್ಯ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮೂರನೇ ಚಿತ್ರವಿದು. ‘ತಂದೆಯ ಮಹತ್ವ ಸಾರುವ ಸಿನಿಮಾ ಇದಾಗಿದ್ದು, ಕುಟುಂಬ ಅಥವಾ ಸಮಾಜದಲ್ಲಿ ಆತ ಕಡೆಗಣನೆಗೆ ಒಳಗಾದಾಗ ಯಾವ ರೀತಿ ನೋವು ಅನುಭವಿಸುತ್ತಾನೆ ಎನ್ನುವುದು ಚಿತ್ರದ ಒನ್ ಲೈನ್ ಕಥೆ’ ಎಂದಿದ್ದಾರೆ ಅಥರ್ವ. ಚಿತ್ರದಲ್ಲಿ ತಬಲ ನಾಣಿ ತಂದೆ ಪಾತ್ರವನ್ನು ನಿರ್ವಹಿಸುತ್ತಿದ್ದು, ಈ ಚಿತ್ರದ ಮೂಲಕ ರಂಗಭೂಮಿ ಕಲಾವಿದರಾದ ಸಂಜಯ್ ಹಾಗೂ ಜೀವಿತ ವಸಿಷ್ಠ ಚಿತ್ರರಂಗಕ್ಕೆ ಪ್ರವೇಶಿಸುತ್ತಿದ್ದಾರೆ.

ಚಿತ್ರಕ್ಕೆ ನಾಗಾರ್ಜುನ ಆರ್.ಡಿ ಛಾಯಾಗ್ರಹಣ, ಆಕಾಶ್ ಪರ್ವ ಸಂಗೀತ ನಿರ್ದೇಶನ, ವೇದಿಕ್ ವೀರ ಸಂಕಲನವಿದೆ. ಬಾಲ ರಾಜ್ವಾಡಿ, ಗಿರೀಶ್ ಜತ್ತಿ, ವಿಜಯ್ ಚೆಂಡೂರ್, ಅರುಣ ಬಾಲರಾಜ್ ಒಳಗೊಂಡ ತಾರಾಬಳಗವಿದೆ.

‘ಗೌಳಿ’ ಕಿಟ್ಟಿ

ಶ್ರೀನಗರ ಕಿಟ್ಟಿ

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬಾಲನಟನಾಗಿ ಆಕಸ್ಮಿಕವಾಗಿ ಹವ್ಯಾಸಿ ರಂಗಭೂಮಿಗೆ ಕಾಲಿಟ್ಟ ಶ್ರೀನಗರ ಕಿಟ್ಟಿ ಬೆಳ್ಳಿ ತೆರೆಯಲ್ಲಿ ಬೆಳಗಿ ಹತ್ತಾರು ವರ್ಷಗಳೇ ಕಳೆದವು. ರೇಡಿಯೊ, ಟಿವಿ, ಸಿನಿಮಾ ಮಾಧ್ಯಮಗಳಲ್ಲಿ ತೆರೆದುಕೊಂಡ ಬಹುಮುಖಿ ಪ್ರತಿಭಾವಂತ ಕಿಟ್ಟಿ, ‘ಗೌಳಿ’ ಮೂಲಕ ಹಳ್ಳಿಗಾಡಿನ ಕತೆ ಹೇಳಲು ಬರುತ್ತಿದ್ದಾರೆ. ಕಿಟ್ಟಿ– ಗೌಳಿಯ ಬದುಕು ತೆರೆದುಕೊಂಡದ್ದು ಹೀಗೆ...

ಶರತ್ ಹೆಗ್ಡೆ

- **ಪ್ರಧಾನ ಪಾತ್ರಗಳ ಸಹಿತ ಒಟ್ಟು 42 ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದೀರಿ. ಸಿನಿಪಯಣ ಹೇಗಿದೆ?**

– ತುಂಬಾ ಮಜವಾಗಿದೆ. ಚಿತ್ರರಂಗ ನನ್ನನ್ನು ಸ್ವೀಕರಿಸಿ ಪ್ರೀತಿಸಿದೆ, ಪೋಷಿಸಿದೆ. ನಾನು ಕೃತಜ್ಞನಾಗಿದ್ದೇನೆ. ಈ ಬಾರಿಯೂ ನನ್ನ ಮೇಲೆ ನಂಬಿಕೆ ಇಟ್ಟು ಒಂದು ಅಪರೂಪದ ಪಾತ್ರದಲ್ಲಿ ತೊಡಗಿಸಿದ್ದಾರಲ್ಲಾ? ಅವರಿಗೆ ನಾನು ಆಭಾರಿಯಾಗಿದ್ದೇನೆ. ಏರಿಳಿತಗಳು ಇದ್ದೇ ಇವೆ. ಎಲ್ಲರ ಬದುಕಲ್ಲೂ ಇದ್ದದ್ದೇ ಅಲ್ವಾ... ಹೀಗೇ ಸಾಗಿದೆ ಜೀವನ.

- **ಕಿಟ್ಟಿ ಯಾರು? ಮಾಸ್ ಹೀರೊ, ಲವರ್ ಬಾಯ್, ಖಳನಾಯಕ...?**

ಹೀಗೇ ಎಂದೇನೂ ಇಲ್ಲ. ಯಾವ ಪಾತ್ರ ಏನನ್ನು ಕೇಳುತ್ತದೆಯೋ ಅದಕ್ಕೆ ತಕ್ಕಂತೆ ತಯಾರಿ ಮಾಡಿಕೊಳ್ಳುವುದೇ ನನ್ನ ಕೆಲಸ. ಬಣ್ಣ ಹಚ್ಚಿದ ಮೇಲೆ ಆ ಪಾತ್ರ, ಈ ಪಾತ್ರ, ಮಾಸ್–ಕ್ಲಾಸ್ ಎಂಬ ವ್ಯತ್ಯಾಸ ಏನೂ ಇರುವುದಿಲ್ಲ. ಪಾತ್ರ ಕೇಳಿದ್ದನ್ನು ಮಾಡಬೇಕು. ಒಬ್ಬ ಕಲಾವಿದನ ಮನಸ್ಸಿನಲ್ಲಿ ಆ ವ್ಯತ್ಯಾಸಗಳು ಬರಲೂಬಾರದು.

- **ರೇಡಿಯೊದ ‘ರಾಮು’, ಟಿವಿ ಧಾರಾವಾಹಿಯ ನಟ, ಸಿನಿಮಾ ನಾಯಕ... ಹೀಗೆ ಮಾಧ್ಯಮ ಬದಲಾವಣೆಯ ಅನುಭವ?**

ಅದಿನ್ನೂ ನನ್ನ ಗಮನಕ್ಕೆ ಬಂದಿಲ್ಲ. ಯಾವ ಮಾಧ್ಯಮ, ಏನನ್ನು ಬಯಸುತ್ತದೋ ಅದನ್ನು ಕೊಡುತ್ತಲೇ ಬಂದೆ. ಅದು ಹೀಗೇ ಆಯಿತು ಎಂದೇನೂ ಅಲ್ಲ. ಆಯಾ ವೇದಿಕೆಗಳು ಸ್ವೀಕರಿಸಿದವು. ನಡೆಸಿಕೊಂಡು ಬಂದಿದ್ದೇನೆ.

- **ತುಂಬಾ ನೆನಪಿಟ್ಟುಕೊಳ್ಳುವ ಚಿತ್ರ, ಪಾತ್ರ, ನಿರ್ದೇಶಕರು?**

ಚಿತ್ರ–ಇಂತಿ ನಿನ್ನ ಪ್ರೀತಿಯ, ನಿರ್ದೇಶಕ–ಸೂರಿ, ಪಾತ್ರ–ರಾಜೀವ. ಸೂರಿ ಅವರಲ್ಲೊಬ್ಬ ಅನುಭವಿ ಇದ್ದಾರೆ. ಅವರದ್ದು ಬರಿಯ ಕಲ್ಪನೆಗಳಲ್ಲ. ಅನುಭವಗಳನ್ನೇ ಕಥೆ, ಕೃತಿಗಿಳಿಸಿಬಿಡುತ್ತಾರೆ. ಅವರಲ್ಲೊಂದು ಪರಿಪೂರ್ಣತೆ ಇದೆ. ತುಂಬಾ ಇಷ್ಟಪಡುವ ಚಿತ್ರಗಳು ‘ಕಸ್ತೂರಿ ನಿವಾಸ’ ಮತ್ತು ‘ಸಾಕ್ಷಾತ್ಕಾರ’.

ಇನ್ನು ಕೆಲವು ಚಿತ್ರಗಳ ಬಗ್ಗೆ ಪ್ರಸ್ತಾಪಿಸುವುದಾದರೆ ‘ಒಲವೇ ಜೀವನ ಲೆಕ್ಕಾಚಾರ’. ಅದೊಂದು ಬೇರೆಯೇ ರೀತಿಯ ಕತೆ. ಅದರಲ್ಲಿ ನಟಿಸಿದ ಅನುಭವವೇ ಬೇರೆ ಮತ್ತು ಅದ್ಭುತವಾದದ್ದು. ಮಳೆ ಬರಲಿ ಮಂಜೂ ಇರಲಿ... ಹೀಗೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಆಯಾ ಪ್ರಾದೇಶಿಕತೆ, ಸೊಗಡನ್ನು ಅಳವಡಿಸಿಕೊಂಡು ತೊಡಗುವುದಿದೆಯಲ್ಲಾ ಅದೇ ಅದ್ಭುತ. ಅದೇ ‘ಗೌಳಿ’ ಚಿತ್ರದಲ್ಲೂ ಆಗಿದೆ.

- **‘ಗೌಳಿ’ ಯಾರು?**

ಗೌಳಿ ಒಂದು ಪುಟ್ಟ ಹಳ್ಳಿಯ ಅಮಾಯಕ, ಮುಗ್ಧ ವ್ಯಕ್ತಿ. ಅವನು, ಅವನ ಸಂಸಾರ, ಹಸು, ಕುರಿ ಇವಿಷ್ಟೇ ಅವನ ಪ್ರಪಂಚ. ಅಂಥವನ ಬದುಕಿಗೇ ಕೊಳ್ಳಿ ಇಡುವ ಘಟನೆ ನಡೆಯುತ್ತದೆ. ಅನಗತ್ಯ ಒತ್ತಡಗಳು ಅವನ ಮೇಲೆ ಬೀಳುತ್ತವೆ. ಬದುಕಬೇಕಾದರೆ ಅವನು ಏನಾದರೂ ಮಾಡಬೇಕು. ಅವನು ಹೇಗೆ ತನ್ನ ಸಂಸಾರ, ಪುಟ್ಟ ಪ್ರಪಂಚವನ್ನು ಉಳಿಸಿಕೊಳ್ಳಲು ಹೋರಾಡುತ್ತಾನೆ ಎಂಬುದೇ ಕಥಾವಸ್ತು.

- **ಗೌಳಿ ನೋಡಲು ಪ್ರಧಾನ ಕಾರಣ?**

ಇದುವರೆಗೆ ನೋಡದ ಕಂಟೆಂಟ್ ಕೊಟ್ಟಿದ್ದೇವೆ. 2ಗಂಟೆ 22 ನಿಮಿಷ ಪ್ರೇಕ್ಷಕನನ್ನು ಬೇರೆಯದೇ ಲೋಕಕ್ಕೆ ಕರೆದೊಯ್ಯುತ್ತದೆ. ಈಗ ಮಾರ್ನಿಂಗ್ ಶೋ ನೋಡುವ ಯುವಕರು ಅವರು ಕಾಣದ ಅವರ ಹಿರಿಯರ ತಲೆಮಾರಿನ ಲೋಕವೊಂದನ್ನು ತೆರೆಯ ಮೇಲೆ ನೋಡುತ್ತಾರೆ. ಇದು ಎಲ್ಲ ವರ್ಗದವರಿಗೂ ಇಷ್ಟವಾಗುವ ಸಿನಿಮಾ. ಇಡೀ ಚಿತ್ರದಲ್ಲಿ ನಿರ್ದೇಶಕ ಸೂರ ಅವರ ಪರಿಶ್ರಮ, ಪೂರ್ವತಯಾರಿ, ಶಿಸ್ತುಬದ್ಧತೆ, ಪರಿಪೂರ್ಣತೆ ಇದೆ. ಹಾಗಾಗಿ ಇಡೀ ಚಿತ್ರ ಅವರ ಕೂಸು. ಅವರು ಅಂದುಕೊಂಡಂತೆ ಬಂದಿದೆ.

- **ಬದುಕು ಹೇಗಿದೆ?**

ಅದ್ಭುತವಾಗಿದೆ. ಸಂಸಾರಸ್ಥನಾಗಿ 14 ವರ್ಷಗಳು ಕಳೆದವಲ್ಲಾ? ಪರಸ್ಪರ ಅರ್ಥಮಾಡಿಕೊಂಡು ಸಾಗಿದ್ದೇವೆ. ನನ್ನ ಕೆಲಸ, ಅದರ ರೀತಿಯನ್ನು ಪತ್ನಿ ಅರ್ಥ ಮಾಡಿಕೊಂಡಿದ್ದಾಳೆ. ಅವಳ ಕ್ಷೇತ್ರದ ಒಳಹೊರಗನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಹೀಗೆ ಬದುಕು ಚೆನ್ನಾಗಿಯೇ ಸಾಗಿದೆ. ❖

ನಮ್ಮ ಫ್ಲೆಕ್ಸ್‌ನಲ್ಲಿ ‘ಮ್ಯೂಟ್’

ಒಟಿಟಿ

ಅರ್ಚನಾ ಜೋಯಿಸ್

ಟ್ರೇಲರ್ ಮೂಲಕವೇ ಗಮನಸೆಳೆದಿದ್ದ ಪ್ರಶಾಂತ್ ಚಂದ್ರ ನಿರ್ದೇಶನದ ‘ಮ್ಯೂಟ್’ ಸಿನಿಮಾ ‘ನಮ್ಮ ಫ್ಲೆಕ್ಸ್’ ಒಟಿಟಿಯಲ್ಲಿ ತೆರೆಕಂಡಿದೆ. ‘ಕೆಜಿಎಫ್’ ಸಿನಿಮಾದಲ್ಲಿ ನಾಯಕನ ಅಮ್ಮನ ಪಾತ್ರಕ್ಕೆ ಬಣ್ಣಹಚ್ಚಿದ್ದ ನಟಿ ಅರ್ಚನಾ ಜೋಯಿಸ್ ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

ಈ ಪ್ಯಾನ್ ಇಂಡಿಯಾ ಚಿತ್ರ ಐದು ಭಾಷೆಗಳಲ್ಲಿ ತೆರೆಕಾಣಲಿದೆ. ಮೊದಲ ಹಂತದಲ್ಲಿ ಕನ್ನಡದಲ್ಲಿ ಮಾತ್ರ ಸಿನಿಮಾ ಬಿಡುಗಡೆಯಾಗಿದೆ. ಈ ಚಿತ್ರದ ಟ್ರೇಲರ್ ಅನ್ನು ಬಾಲಿವುಡ್ ನಟಿ ರವೀನಾ ಟಂಡನ್ ಏಕಕಾಲದಲ್ಲಿ ಕನ್ನಡ, ತೆಲುಗು, ಮಲಯಾಳಂ, ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಬಿಡುಗಡೆ ಮಾಡಿದ್ದರು. ತಮಿಳಿನ ಖ್ಯಾತ ನಟ ಆಡುಕಲಂ ನರೇನ್ ಈ ಸಿನಿಮಾದಲ್ಲಿ ಅಭಿನಯಿಸಿದ್ದು, ಸಿದ್ದಾರ್ಥ್ ಮಾಧ್ಯಮಿಕ, ತೇಜಸ್ ವೆಂಕಟೇಶ್ ತಾರಾಬಳಗದಲ್ಲಿದ್ದಾರೆ.

ಇ.ಕೆ. ಪಿಕ್ಚರ್ಸ್ ಬ್ಯಾನರ್‌ನಲ್ಲಿ ಜಿ.ಗಂಗಾಧರ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವಾಗಿದ್ದು, ಹಲವು ತಿರುವುಗಳು ಕಥೆಯಲ್ಲಿವೆ ಎಂದಿದ್ದಾರೆ ಪ್ರಶಾಂತ್. ದಿವ್ಯಾ ಎನ್ನುವಾಕೆ ತನ್ನ ಗಂಡನ ಮೋಸ ತಿಳಿದಾಗ ಜೀವನದಲ್ಲಿ ಕುಸಿಯುತ್ತಾಳೆ. ಆದರೆ ‘ಕಾಸ್ಮೋ’ ಎಂಬ ಹೆಸರು ಇಟ್ಟು ಪ್ರೀತಿಯಿಂದ ನಾಯಿಯೊಂದನ್ನು ಸಾಕಿದ ಮೇಲೆ ಅವಳ ಜೀವನ ಬದಲಾಗುತ್ತದೆ. ಸಾಮಾಜಿಕ ಮಾಧ್ಯಮಗಳಲ್ಲಿ ದಿವ್ಯಾಳ ‘ದಿವ್ಯಾ ಸ್ಟೇಟ್ ಆಫ್ ಮೈಂಡ್’ ಹೆಸರಿನ ಪೇಜ್ ತುಂಬಾ ಖ್ಯಾತಿ ಪಡೆಯುತ್ತದೆ. ಇದೇ ಸಂದರ್ಭದಲ್ಲಿ ‘ಕಾಸ್ಮೋ’ ಕಾಣೆಯಾಗುತ್ತದೆ. ಅದನ್ನು ಹುಡುಕುವ ಹಾದಿ ಹಲವು ತಿರುವು ಪಡೆಯುತ್ತದೆ. ಇದುವೇ ಚಿತ್ರದ ಎಳೆ.

ಫೆಬ್ರುವರಿಯಲ್ಲಿ ಸಿನಿ‘ಜಾತ್ರೆ’!

ಫೆಬ್ರುವರಿಯಲ್ಲಿ ದಿನಗಳು ಇಪ್ಪತ್ತೆಂಟೇ ಆದರೂ ಗಾಂಧಿನಗರದ ತೆರೆಗಳಲ್ಲಿ ಅಪ್ಪಳಿಸಿದ ಸಿನಿಮಾಗಳ ಸಂಖ್ಯೆ 35ಕ್ಕೂ ಅಧಿಕ! ಹೌದು ಈ ತಿಂಗಳ ಕಳೆದೆರಡು ಶುಕ್ರವಾರ 20ಕ್ಕೂ ಅಧಿಕ ಸಿನಿಮಾಗಳು ತೆರೆ ಕಂಡಿವೆ. ತಿಂಗಳ ಕೊನೆಯ ಶುಕ್ರವಾರ; ಅಂದರೆ ಇಂದು(ಫೆ.24) ಈ ಪಟ್ಟಿಗೆ ಮತ್ತೆ ಹತ್ತಕ್ಕೂ ಅಧಿಕ ಸಿನಿಮಾಗಳು ಸೇರ್ಪಡೆಯಾಗಲು ಸಜ್ಜಾಗಿವೆ. ಈ ಸಿನಿ‘ಜಾತ್ರೆ’ಯಲ್ಲಿ ಗೆದ್ದ ಸಿನಿಮಾಗಳೆಷ್ಟು ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ವಿಮರ್ಶೆಗೊಳಪಟ್ಟ ಸಿನಿಮಾಗಳು ಬೆರಳೆಣಿಕೆಯಷ್ಟೇ! ನಟ ಶ್ರೀನಗರ ಕಿಟ್ಟಿ ಅಭಿನಯದ ‘ಗೌಳಿ’ ಹೊರತುಪಡಿಸಿ ಈ ವಾರವೂ ತೆರೆಗಳಲ್ಲಿ ಹೊಸಬರ ಸಿನಿಮಾಗಳ ಸಾಲೇ ಇದೆ.

ಪಾವನಾ ಗೌಡ

ಗೌಳಿ

ಶ್ರೀನಗರ ಕಿಟ್ಟಿ ಕೊಂಚ ಸಮಯದ ಬಳಿಕ ನಾಯಕನಾಗಿ ತೆರೆಗೆ ಮರಳುತ್ತಿದ್ದಾರೆ. ‘ಗೌಳಿ’ ಚಿತ್ರದ ಮುಖಾಂತರ ರಗಡ್ ಲುಕ್‌ನೊಂದಿಗೆ ಬಂದಿದ್ದಾರೆ ಕಿಟ್ಟಿ. ರಘು ಸಿಂಗಂ ನಿರ್ಮಾಣದ, ಸೂರ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರ ಗೌಳಿ ಎನ್ನುವ ಜನಾಂಗದ ಕಥೆ ಹೊತ್ತಿದೆ. ಸಿನಿಮಾಟೋಗ್ರಫರ್ ಆಗಿದ್ದ ಸೂರ ಅವರ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದೆ. ಮಣ್ಣಿನ ಸೊಗಡಿನ ಕಥಾನಕವನ್ನು ಹೊಂದಿದ ನೈಜ ಘಟನೆ ಆಧಾರಿತ ಸಿನಿಮಾ ಇದಾಗಿದೆ. ಚಿತ್ರದಲ್ಲಿ ಕಿಟ್ಟಿಗೆ ಪಾವನ ಗೌಡ, ಗಿರಿಜಾ ಎಂಬ ಪಾತ್ರದಲ್ಲಿ ಜೋಡಿಯಾಗಿದ್ದಾರೆ.

ಪಾಲಾರ್

ಕೋಲಾರ, ದೇವನಹಳ್ಳಿ ಸುತ್ತಮುತ್ತ ನಡೆದ ಕಥೆಯನ್ನಿಟ್ಟುಕೊಂಡು ಜೀವಾ ನವೀನ್ ಅವರು ನಿರ್ದೇಶಿಸಿರುವ ಚಿತ್ರ ‘ಪಾಲಾರ್’. ಈ ಚಿತ್ರವನ್ನು ಸತ್ಯ ಸಿನಿ ಡಿಸ್ಟ್ರಿಬ್ಯೂಟರ್ಸ್ ಬಿಡುಗಡೆ ಮಾಡಲಿದೆ. ಇದೊಂದು ಮಹಿಳಾ ಪ್ರಧಾನ, ಸಂಘರ್ಷದ, ಹೋರಾಟದ ಕಥನ. ತೆಲುಗಿನ ‘ಸಿನಿಮಾ ಬಂಡಿ’ ನಟಿ, ಗಾಯಕಿ ವೈ.ಜಿ.ಉಮಾ ಅವರು ಈ ಚಿತ್ರದಲ್ಲಿ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ.

ಜೂಲಿಯೆಟ್ 2

ಬೃಂದಾ ಆಚಾರ್ಯ

‘ಪ್ರೇಮಂ ಪೂಜ್ಯಂ’ ಚಿತ್ರದ ಮುಖಾಂತರ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ಬೃಂದಾ ಆಚಾರ್ಯ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಚಿತ್ರ ಜೂಲಿಯೆಟ್ 2’. ಕ್ರೈಮ್ ಥ್ರಿಲ್ಲರ್ ಜಾನರ್‌ನ ಈ ಚಿತ್ರವನ್ನು ವಿರಾಟ್ ಬಿ. ಗೌಡ ನಿರ್ದೇಶಿಸಿದ್ದಾರೆ. ಕಥೆ, ಚಿತ್ರಕಥೆ ಕೂಡ ವಿರಾಟ್ ಅವರದ್ದೇ. ನಗರವಾಸಿಯಾದ ಮಗಳು, ತನ್ನ ತಂದೆಯ ಕೊನೆಯ ಆಸೆ ಈಡೇರಿಸಲು ಹುಟ್ಟೂರಿಗೆ ಹೋಗಿ ನೆಲೆಸುತ್ತಾಳೆ. ಅಲ್ಲಿ ಏನೆಲ್ಲಾ ಆಗುತ್ತದೆ ಹಾಗೂ ತನಗೆ ತೊಂದರೆಯಾದಾಗ ಆಕೆ ಹೇಗೆ ಉಗ್ರರೂಪಿಯಾಗುತ್ತಾಳೆ ಎಂಬುದು ಈ ಚಿತ್ರದ ಎಳೆ. ಅನೂಪ್ ಸಾಗರ್, ಖುಷ್ ಆಚಾರ್ಯ, ರವಿ, ರಾಧೇಶ್ ಶೆಣೈ, ಶ್ರೀಕಾಂತ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಕ್ಯಾಂಪಸ್ ಕ್ರಾಂತಿ

‘ಸ್ಟೂಡೆಂಟ್ಸ್’ ಹಾಗೂ ‘ಬಿಂದಾಸ್ ಗೂಗ್ಲಿ’ ಚಿತ್ರಗಳನ್ನು ನಿರ್ದೇಶಿಸಿದ್ದ ಸಂತೋಷ್‌ಕುಮಾರ್ ನಿರ್ದೇಶನದ ಮತ್ತೊಂದು ಚಿತ್ರ ‘ಕ್ಯಾಂಪಸ್ ಕ್ರಾಂತಿ’. ಕಾಲೇಜ್ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳ ಸುತ್ತ ನಡೆಯುವ ಕಥೆ ಇದಾಗಿದ್ದು, ಆರ್ಯ, ಅಲಂಕಾರ್ ಹಾಗೂ ಇಶಾನಾ, ಆರತಿ ಇಲ್ಲಿ ನಾಯಕ, ನಾಯಕಿಯರಾಗಿ ನಟಿಸಿದ್ದಾರೆ. ಕಾಲೇಜು ಹುಡುಗರೆಲ್ಲ ಸೇರಿ ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಲು ನಡೆಸುವ ಕ್ರಾಂತಿ ಇದಾಗಿದೆ. ಕರ್ನಾಟಕ, ಮಹಾರಾಷ್ಟ್ರ ಗಡಿಯ ಅಗ್ನಿರಾಂಪುರ ಎಂಬ ಕಾಲ್ಪನಿಕ ಊರೊಂದರಲ್ಲಿ ಈ ಚಿತ್ರದ ಕಥೆ ನಡೆಯುತ್ತದೆ. ಪ್ರೇಮಕಥೆಯ ಜೊತೆಗೆ ಜೊತೆಗೆ, ಹಾಸ್ಯ, ಆ್ಯಕ್ಷನ್ ಎಲ್ಲವೂ ಚಿತ್ರದಲ್ಲಿದೆ ಎಂದಿದೆ ಚಿತ್ರತಂಡ.

ಆರ್ಟಿಕಲ್ 370

ಕೆ. ಶಂಕರ್ ಅವರ ನಿರ್ದೇಶನದ ಚಿತ್ರವಿದು. ಯೋಧರ ಸಾಹಸದ ಕಥೆಯ ಜೊತೆಗೆ ಜಮ್ಮು ಕಾಶ್ಮೀರದ ಪಂಡಿತರ ಮೇಲೆ ನಡೆದ ದೌರ್ಜನ್ಯದ ಘಟನೆಗಳನ್ನು ಇಲ್ಲಿ ಹೇಳಲಾಗಿದೆ ಎಂದಿದೆ ಚಿತ್ರತಂಡ. ನಟ ಶಶಿಕುಮಾರ್ ‘ಮೇಜರ್ ಸುಶೀಲ್ ಕುಮಾರ್’ ಎಂಬ ಸೇನೆಯ ಅಧಿಕಾರಿ ಪಾತ್ರದಲ್ಲಿ ಇಲ್ಲಿ ಕಾಣಿಸಿಕೊಂಡಿದ್ದು, ಅವರ ಪತ್ನಿಯಾಗಿ ಶ್ರುತಿ ನಟಿಸಿದ್ದಾರೆ. ಭರತ್‌ಗೌಡ ಅವರ ನಿರ್ಮಾಣದ ಈ ಚಿತ್ರಕ್ಕೆ ಯುಗಂತ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಸಾಹಿತಿ ದೊಡ್ಡರಂಗೇಗೌಡ, ರಮಾನಂದ್, ವೆಂಕಟೇಶ್, ಲಕ್ಷ್ಮಣ, ಕಿಲ್ಲರ್ ವೆಂಕಟೇಶ್, ಅವಿನಾಶ್, ರಘುರಂಜನ್ ಮುಂತಾದವರು ಪಾತ್ರವರ್ಗದಲ್ಲಿದ್ದಾರೆ.

ಸಾರ್ಥಕ್, ಕಾಶಿಮ

ಸೌತ್ ಇಂಡಿಯನ್ ಹೀರೋ

‘ಫಸ್ಟ್ ರ್‍ಯಾಂಕ್ ರಾಜು’ ಖ್ಯಾತಿಯ ನರೇಶ್‌ಕುಮಾರ್ ಎಚ್.ಎನ್. ಹೊಸಳ್ಳಿ ಅವರ ನಿರ್ದೇಶನದ ಚಿತ್ರ ‘ಸೌತ್ ಇಂಡಿಯನ್ ಹೀರೋ’. ಶಿಲ್ಪಾ ಈ ಚಿತ್ರದ ನಿರ್ಮಾಪಕಿ. ಕಿರುತೆರೆ ನಟ ಸಾರ್ಥಕ್, ‘ಲಾಜಿಕ್ ಲಕ್ಷ್ಮಣರಾವ್’ ಎಂಬ ಪಾತ್ರದಲ್ಲಿ ನಾಯಕನಾಗಿ ನಟಿಸಿದ್ದು, ನಾಯಕಿಯರಾಗಿ ಕಾಶಿಮಾ ಹಾಗೂ ಮುಂಬೈ ಮೂಲದ ಊರ್ವಶಿ ನಟಿಸಿದ್ದಾರೆ. ಚಿತ್ರದ ನಾಯಕ ಭೌತಶಾಸ್ತ್ರದ ಶಿಕ್ಷಕ. ಚಿತ್ರರಂಗದ ಯಾವುದೇ ಸಂಪರ್ಕವಿಲ್ಲದ ಆತ ಹೇಗೆ ಚಿತ್ರರಂಗಕ್ಕೆ ಬರುತ್ತಾನೆ, ಬಂದಮೇಲೆ ಏನೆಲ್ಲ ಸಂಕಷ್ಟ ಎದುರಿಸುತ್ತಾನೆ ಎನ್ನುವುದೇ ಚಿತ್ರದ ತಿರುಳು.

1975

ಜೈ ಶೆಟ್ಟಿ, ಮಾನಸಾ

‘ಒನ್ ಲವ್ ಟು ಸ್ಟೋರಿ’ ಸಿನಿಮಾ ಮೂಲಕ ಪರಿಚಿತರಾದ ವಸಿಷ್ಠ ಬಂಟನೂರು ಸಾರಥ್ಯದ ಮತ್ತೊಂದು ಚಿತ್ರ ‘1975’. ಸಿಲ್ವರ್ ಸ್ಕ್ರೀನ್ ಫಿಲ್ಮಂ ಫ್ಯಾಕ್ಟರಿ ಬ್ಯಾನರ್‌ನಡಿ ದಿನೇಶ್ ರಾಜನ್ ಈ ಚಿತ್ರ ನಿರ್ಮಿಸಿದ್ದಾರೆ. ಜೈ ಶೆಟ್ಟಿ, ಮಾನಸ ನಾಯಕ ಹಾಗೂ ನಾಯಕಿಯಾಗಿ ನಟಿಸಿದ್ದಾರೆ. ಕ್ರೈಂ, ಸಸ್ಪೆನ್ಸ್, ಥ್ರಿಲ್ಲರ್ ಜೊತೆಗೆ ಉಪಕಥೆಗಳು ಚಿತ್ರದಲ್ಲಿವೆ. ಚಕ್ರವರ್ತಿ ಚಂದ್ರಚೂಡ್, ವೆಂಕಟೇಶ್ ಪ್ರಸಾದ್, ಭೂಷಣ್ ಗೌಡ, ಮುರಳಿ, ಉಮೇಶ್, ಮಧು, ಸಿಂಧು ಲೋಕನಾಥ್ ತಾರಾಬಳಗದಲ್ಲಿದ್ದಾರೆ. ❖



ಎನ್‌ಐಎ ಶೋಧ: ಆರು ಮಂದಿ ಬಂಧನ

ನವದೆಹಲಿ: ಭಯೋತ್ಪಾದಕನೆಂದು ಘೋಷಿಸಲಾದ ಕೆನಡಾ ಮೂಲದ ಅರ್ಷದೀಪ್ ಸಿಂಗ್ ಅಲಿಯಾಸ್ ಅರ್ಷ್ ದಲಾ ಎಂಬಾತನ ಸಹಚರ ಲಕ್ಕಿ ಖೋಖರ್ ಅಲಿಯಾಸ್ ಡೆನಿಸ್ ಸೇರಿದಂತೆ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಕ್ತಾರರು ಗುರುವಾರ ತಿಳಿಸಿದ್ದಾರೆ.

ಭಯೋತ್ಪಾದಕ ಸಂಘಟನೆಗಳು ಮತ್ತು ಅಪರಾಧಿಗಳ ನಡುವಿನ ನಂಟಿಗೆ ಸಂಬಂಧಿಸಿ ಎಂಟು ರಾಜ್ಯಗಳ 76 ಸ್ಥಳಗಳಲ್ಲಿ ಮಂಗಳವಾರ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಇವರನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ.

ಲಖ್ವಿರ್ ಸಿಂಗ್, ಹರ್‌ಪ್ರೀತ್, ದಲೀಪ್ ಬಿಷ್ಣೋಯ್, ಸುರಿಂದರ್ ಮತ್ತು ಹರಿ ಓಂ ಇತರ ಬಂಧಿತರು.

ಪಂಜಾಬ್‌ನ ಬಟಿಂಡಾ ನಿವಾಸಿಯಾಗಿರುವ ಲಕ್ಕಿ ಖೋಖರ್‌ನನ್ನು ರಾಜಸ್ಥಾನದ ಶ್ರೀ ಗಂಗಾನಗರದಿಂದ ಬಂಧಿಸಲಾಗಿದೆ. ಈತ ಅರ್ಷದೀಪ್ ಸಿಂಗ್ ಜೊತೆಗೆ ನೇರ ನಂಟು ಹೊಂದಿದ್ದಾನೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಮಗುವಿನ ಚಿಕಿತ್ಸೆಗೆ ₹15 ಕೋಟಿ ದಾನ ನೀಡಿದ ಅನಾಮಧೇಯ!

ಮುಂಬೈ (ಪಿಟಿಐ): ಇತ್ತೀಚೆಗೆ ಕೇರಳಕ್ಕೆ ಸ್ಥಳಾಂತರಗೊಂಡ ಮುಂಬೈನ ದಂಪತಿ ತಮ್ಮ 16 ತಿಂಗಳ ಮಗುವಿನ ಚಿಕಿತ್ಸೆಗಾಗಿ ಜೀವರಕ್ಷಕ ಔಷಧವನ್ನು ಖರೀದಿಸಲು ಅನಾಮಧೇಯ ದಾನಿಯೊಬ್ಬರಿಂದ ₹ 15.31 ಕೋಟಿ ಪಡೆದಿದ್ದಾರೆ.

ಮರ್ಚೆಂಟ್ ನೇವಿ ಎಂಜಿನಿಯರ್ ಆಗಿರುವ ಸಾರಂಗ್ ಮೆನನ್ ಮತ್ತು ಅದಿತಿ ನಾಯರ್ ಅವರ ಪುತ್ರ ನಿರ್ವಾಣ್, ಸ್ಪೈನಲ್ ಮಸ್ಕುಲರ್ ಆಟ್ರೋಫಿ (ಎಸ್‌ಎಂಎ) ಟೈಪ್ 2 ಎಂಬ ಅಪರೂಪದ ಕಾಯಿಲೆಗೆ ತುತ್ತಾಗಿದ್ದು, ಇದಕ್ಕೆ ಒಂದು ಬಾರಿ ಬಳಸುವ ಅಗತ್ಯ ಔಷಧದ ಬೆಲೆ ಸುಮಾರು ₹ 17.3 ಕೋಟಿ ಇದೆ.

'₹17.50ಕೋಟಿ ಗುರಿ ಇಟ್ಟುಕೊಂಡು Milaap.org ನಲ್ಲಿ ಕ್ರೌಡ್‌ಫಂಡಿಂಗ್ ಪುಟ ಪ್ರಾರಂಭಿಸಲಾಗಿತ್ತು. ಆದರೆ ₹15.31 ಕೋಟಿ ನೀಡಿದ ವ್ಯಕ್ತಿಯ ಗುರುತು ತಿಳಿದಿಲ್ಲ. ಉಳಿದ ಮೊತ್ತವನ್ನು ಸಂಬಂಧಿಕರು ಮತ್ತು ಸ್ನೇಹಿತರ ಮೂಲಕ ಸಂಗ್ರಹಿಸಲು ಚಿಂತಿಸಿದ್ದೇವೆ. ಅಮೆರಿಕದಿಂದ ಮುಂಬೈಗೆ ಔಷಧ ಬರಲಿದೆ. ಬಳಿಕ ನಿರ್ವಾಣ್‌ನನ್ನು ಮತ್ತೆ ಮುಂಬೈಗೆ ಕರೆದೊಯ್ಯಬೇಕಾಗುತ್ತದೆ' ಎಂದು ನಾಯರ್ ಹೇಳಿದರು.

ಔಷಧಕ್ಕೆ ಅಗತ್ಯವಾದ ಅನುಮತಿಗಳಿಗಾಗಿ ಕುಟುಂಬವು ಈಗಾಗಲೇ ಕೇಂದ್ರ ಹಣಕಾಸು ಸಚಿವಾಲಯ ಮತ್ತು ಆಮದು-ರಫ್ತು ಇಲಾಖೆಯೊಂದಿಗೆ ಮಾತುಕತೆ ನಡೆಸಿದೆ. ಹಿಂದೂಜಾ ಆಸ್ಪತ್ರೆಯ ಮಕ್ಕಳ ನರರೋಗ ತಜ್ಞ ಡಾ.ನೀಲು ದೇಸಾಯಿ ಅವರು ಮಗುವಿಗೆ ಚಿಕಿತ್ಸೆ ನೀಡಲಿದ್ದಾರೆ. ತೋಳುಗಳು, ಕಾಲುಗಳು, ಮುಖ, ಗಂಟಲು, ನಾಲಿಗೆಯಲ್ಲಿ ಚಲನೆಯನ್ನು ಮಿದುಳು ಮತ್ತು ಬೆನ್ನುಹುರಿಯಲ್ಲಿನ ವಿಶೇಷ ನರ ಕೋಶಗಳು ನಿಯಂತ್ರಿಸುತ್ತವೆ. ಎಸ್‌ಎಂಎ ಸ್ಥಿತಿಯಲ್ಲಿ ಈ ನರಕೋಶಗಳು ನಶಿಸಿ ಹೋಗುತ್ತವೆ.

ಅಮೃತಸರ ಬಳಿಯ ಅಜ್ನಾಲಾ ಪೊಲೀಸ್ ಠಾಣೆಯ ಬಳಿ ಅಮೃತ್‌ಪಾಲ್ ಸಿಂಗ್ ಬೆಂಬಲಿಗರು ಮತ್ತು ಪೊಲೀಸರ ನಡುವೆ ಗುರುವಾರ ಘರ್ಷಣೆ ನಡೆಯಿತು —ಪಿಟಿಐ ಚಿತ್ರ

ಠಾಣೆಗೆ ಪ್ರತಿಭಟನಕಾರರ ಮುತ್ತಿಗೆ ಎಫ್‌ಐಆರ್ ರದ್ದತಿಗೆ ಒತ್ತಾಯ

ಅಮೃತಸರ (ಪಂಜಾಬ್): ಅಪಹರಣ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ, ಧರ್ಮ ಪ್ರಚಾರಕನಾದ ಅಮೃತ್‌ಪಾಲ್ ಸಿಂಗ್ ಅವರ ಸಹಚರನೊಬ್ಬನನ್ನು ಬಂಧಿಸಿರುವುದನ್ನು ಖಂಡಿಸಿ, ಸಿಂಗ್ ಬೆಂಬಲಿಗರು ಗುರುವಾರ ಇಲ್ಲಿನ ಅಜ್ನಾಲಾ ಪೊಲೀಸ್ ಠಾಣೆಯೆದುರಿಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ನಂತರ ಠಾಣೆಗೆ ಮುತ್ತಿಗೆ ಹಾಕಿದರು. ಈ ವೇಳೆ ಪ್ರತಿಭಟನಕಾರರು ಮತ್ತು ಪೊಲೀಸರ ನಡುವೆ ಘರ್ಷಣೆ ನಡೆದಿದೆ.

ಖಲಿಸ್ತಾನ ಪರ ಸಹಾನುಭೂತಿ ಹೊಂದಿರುವ ಅಮೃತ್‌ಪಾಲ್ ಸಿಂಗ್ ಕೂಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ರೂಪನಗರ ಜಿಲ್ಲೆಯ ಚಮ್ಕೌರ್ ಸಾಹಿಬ್ ನಿವಾಸಿ ವರೀಂದರ್ ಸಿಂಗ್ ಎಂಬುವವರನ್ನು ಅಪಹರಿಸಿ, ಥಳಿಸಿರುವ ಆರೋಪದಲ್ಲಿ ಅಮೃತ್‌ಪಾಲ್ ಮತ್ತು ಅವರ ಸಹಚರರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಖಡ್ಗ ಮತ್ತು ಬಂದೂಕುಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಅಜ್ನಾಲಾ ಪೊಲೀಸ್ ಠಾಣೆ ಬಳಿ ಸ್ಥಾಪಿಸಿದ್ದ ಬ್ಯಾರಿಕೇಡ್‌ಗಳನ್ನು ದಾಟಿ ಠಾಣೆಗೆ ನುಗ್ಗಿದ್ದಾರೆ. ಈ ವೇಳೆ ಘರ್ಷಣೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಸಿಂಗ್ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಅನ್ನು ರದ್ದುಗೊಳಿಸಬೇಕು ಇಲ್ಲದಿದ್ದರೆ ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಪ್ರತಿಭಟನಕಾರರು ಪೊಲೀಸರಿಗೆ ಬೆದರಿಕೆ ಹಾಕಿದ್ದಾರೆ ಎಂದಿವೆ.

ಅಮೃತ್‌ಪಾಲ್ ಸಿಂಗ್ ಅವರು 'ವಾರಿಸ್ ಪಂಜಾಬ್ ದೆ' ಸಂಘಟನೆಯ ಮುಖ್ಯಸ್ಥರಾಗಿದ್ದಾರೆ.

ಸಿನಿಮಾ ಪುರವಣಿ ಓದಿರಿ

ತಿರುಪತಿ ದೇಗುಲದಲ್ಲಿ ಮುಖ ಗುರುತಿಸುವಿಕೆ ತಂತ್ರಜ್ಞಾನ

ತಿರುಪತಿ (ಪಿಟಿಐ): ಭಕ್ತರು ದೇವಸ್ಥಾನದ ಸೇವೆ ಹಾಗೂ ಸೌಕರ್ಯಗಳನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಆಡಳಿತವು ವೆಂಕಟೇಶ್ವರ ದೇಗುಲದಲ್ಲಿ ಮುಖ ಗುರುತಿಸುವಿಕೆ ತಂತ್ರಜ್ಞಾನ ಪರಿಚಯಿಸಲು ಮುಂದಾಗಿದೆ.

'ಟಿಟಿಡಿಯು ವೈಕುಂಠಂ-2 ಹಾಗೂ 'ಎಎಂಎಸ್' ವ್ಯವಸ್ಥೆಯಲ್ಲಿ ಮಾರ್ಚ್ 1ರಿಂದ ಮುಖ ಗುರುತಿಸುವಿಕೆ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಪರಿಚಯಿಸಲು ಸಿದ್ಧತೆ ನಡೆಸಿದೆ' ಎಂದು ದೇವಸ್ಥಾನದ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

'ಹಿಂದೆ ದರ್ಶನಕ್ಕೆ ಬರುವ ಭಕ್ತರನ್ನು ಅವರ ಆಧಾರ್ ಕಾರ್ಡ್ ಪರಿಶೀಲಿಸಿ, ವೈಯಕ್ತಿಕ ವಿವರಗಳನ್ನು ನಮೂದಿಸಿಕೊಂಡು ಒಳಗೆ ಬಿಡಲಾಗುತ್ತಿತ್ತು. ಇದು ತ್ರಾಸದಾಯಕ ಕೆಲಸವಾಗಿತ್ತು. ಮುಖ ಗುರುತಿಸುವಿಕೆ ತಂತ್ರಜ್ಞಾನದಿಂದಾಗಿ ಭಕ್ತರ ತಪಾಸಣೆ ಕಾರ್ಯ ಸುಲಭವಾಗಲಿದೆ. ಲಡ್ಡು ಪ್ರಸಾದ ವಿತರಣೆ, ಕೊಠಡಿಗಳ ಹಂಚಿಕೆ ಸೇರಿದಂತೆ ಇತರ ಕಾರ್ಯಗಳಲ್ಲಿ ಪಾರದರ್ಶಕತೆ ತರಬಹುದು' ಎಂದು ಹಿರಿಯ ಐಎಎಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರ ದತ್ತಾಂಶವನ್ನು ಸಂಗ್ರಹಿಸಿಡಲಾಗಿರುತ್ತದೆ. ಇನ್ನು ಮುಂದೆ ಮುಖ ಗುರುತಿಸುವಿಕೆ ತಂತ್ರಜ್ಞಾನಕ್ಕೆ ಒಳಪಟ್ಟ ಭಕ್ತರ ದತ್ತಾಂಶವು ಈಗಾಗಲೇ ಸಂಗ್ರಹಿಸಿಟ್ಟಿರುವ ದತ್ತಾಂಶಕ್ಕೆ ಹೋಲಿಕೆಯಾಗಬೇಕು. ಆಗ ಮಾತ್ರ ಅವರಿಗೆ ಕೊಠಡಿ ಹಂಚಿಕೆ ಮಾಡಲಾಗುತ್ತದೆ. ಹೊಸ ತಂತ್ರಜ್ಞಾನದಿಂದಾಗಿ ಲಡ್ಡು ಪ್ರಸಾದ ವಿತರಣೆಯಲ್ಲಿ ಆಗುತ್ತಿರುವ ಅಕ್ರಮವನ್ನೂ ತಡೆಯಬಹುದು. ಭಕ್ತರು ನಕಲಿ ಆಧಾರ್ ಕಾರ್ಡ್‌ಗಳ ಮೂಲಕ ದೇವಸ್ಥಾನದ ಆಡಳಿತದ ದಾರಿ ತಪ್ಪಿಸುವ ಸಾಧ್ಯತೆ ಇರುತ್ತದೆ.

ಮುಖ ಗುರುತಿಸುವಿಕೆ ತಂತ್ರಜ್ಞಾನದಿಂದ ಇಂತಹ ಅಕ್ರಮಗಳಿಗೂ ಕಡಿವಾಣ ಹಾಕಬಹುದು' ಎಂದು ಟಿಟಿಡಿಯ ಐಟಿ ವಿಭಾಗದ ಅಧಿಕಾರಿ ಸಂದೀಪ್ ಅವರು ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಮಹಿಳೆಯರಿಗೆ ಕಾರ್ಖಾನೆಗಳಲ್ಲಿ ರಾತ್ರಿ ಪಾಳಿಯಲ್ಲಿಯೂ ಕೆಲಸ ಮಾಡಲು ಅವಕಾಶ ಕಲ್ಪಿಸುವ ಸರ್ಕಾರದ ಕ್ರಮ ಅವರ ಸಬಲೀಕರಣದ ಮತ್ತೊಂದು ಹೆಜ್ಜೆ ಎಂದು ಭಾವಿಸುತ್ತೀರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ ಇಎಂಡಿ
ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560009	
ಐಎಫ್‌ಬಿ ನಂ. ಬೆಂಜಮಂ/ಪ್ರಮುಖ/ಅಮುಅ(ತ್ಯಾಜ್ಯನೀರು-ಯೋ-ಪಶ್ಚಿಮ)/ಉಮುಅ(ತ್ಯಾಜ್ಯನೀರು-ಪೂರ್ವ)/ಟಾಂಡ್-2/7818/2022-23 ದಿನಾಂಕ: 23.02.2023	
ಟರ್ನ್‌ಕೀ ಆಧಾರದ ಮೇಲೆ ಐದು ವರ್ಷಗಳ (5+2) ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ಎರಡು ವರ್ಷಗಳ ನಿರ್ಮಾಣ ಗುತ್ತಿಗೆ ಸಮಯದಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ ಐಎಫ್‌ಎಎಸ್ ಪ್ರಕ್ರಿಯೆಯ ಆಧಾರದ ಮೇಲೆ ಯಲಹಂಕದಲ್ಲಿ ಹಾಲಿ ಇರುವ 10 ಎಂಎಲ್‌ಡಿ ಸಾಮರ್ಥ್ಯದ ತೃತೀಯ ಹಂತದ ಸಂಸ್ಕರಣಾ ಘಟಕದ ವಿನ್ಯಾಸ ಮತ್ತು ಉನ್ನತೀಕರಣಗೊಳಿಸುವ ಕಾಮಗಾರಿ. (3ನೇ ಕರೆ)	ರೂ. 19.82 ಕೋಟಿ ರೂ. 0.24 ಕೋಟಿ
ಐಎಫ್‌ಬಿ ನಂ. ಬೆಂಜಮಂ/ಪ್ರಮುಖ/ಅಮುಅ(ತ್ಯಾಜ್ಯನೀರು-ಯೋ-ಪಶ್ಚಿಮ)/ಉಮುಅ(ತ್ಯಾಜ್ಯನೀರು-ಪೂರ್ವ)/ಟಾಂಡ್-2/7821/2022-23 ದಿನಾಂಕ: 23.02.2023	
ಟರ್ನ್‌ಕೀ ಆಧಾರದಲ್ಲಿ 5 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ಬೆಂಗಳೂರಿನ ದೊಡ್ಡಬೆಲೆಯಲ್ಲಿ ಹಾಲಿಯಿರುವ 20 ಎಂಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಉನ್ನತೀಕರಣಗೊಳಿಸುವುದು ಮತ್ತು 35 ಎಂಎಲ್‌ಡಿ ಎಸ್‌ಟಿಪಿ ತಂತ್ರಜ್ಞಾನದ ಸಾಮರ್ಥ್ಯಕ್ಕೆ ನ್ಯೂಟ್ರಿಯಂಟ್ ವಿನ್ಯಾಸ ಮತ್ತು ನಿರ್ಮಾಣದ ಕಾಮಗಾರಿ ಹಾಗೂ 15 ಎಂಎಲ್‌ಡಿ ಸಾಮರ್ಥ್ಯದ ಇನ್‌ಲೆಟ್ ಗ್ರಿಟ್ ಚೇಂಬರ್‌ನೊಂದಿಗೆ ಹೊಸ ಟಿಎಸ್‌ಪಿಎಸ್ ನಿರ್ಮಾಣ ಕಾಮಗಾರಿ ಮಾಡುವುದು. (2ನೇ ಕರೆ).	ರೂ. 32.81 ಕೋಟಿ ರೂ. 38.20 ಲಕ್ಷಗಳು

ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **10.03.2023**ರ ಮಧ್ಯಾಹ್ನ **2:00** ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **13.03.2023** ರಂದು ಬೆಳಿಗ್ಗೆ **11:00** ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-
ಪ್ರಧಾನ ಮುಖ್ಯ ಅಭಿಯಂತರರು

DIPR/CP/MIA/4908/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,
ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ-2 ಭಾಲ್ಕಿ.

ಸಂಖ್ಯೆ:ಕಾ.ನಿಅ/ಕ.ನೀ.ನಿ.ನಿ/ಕೆತು/ವಿಭಾಗ/ಭಾಲ್ಕಿ/ಟಿ.ಎಸ್-5/2022-23/1747 ದಿನಾಂಕ:22-02-2023

ಶೇಕಡಾವಾರು ಟೆಂಡರ ಅಧಿಸೂಚನೆ. (ಅಲ್ಪಾವಧಿ)/Call-2
(ಇ-ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ). (ಏಕ & ದ್ವಿ ಲಕೋಟೆಯಲ್ಲಿ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ-2 ಭಾಲ್ಕಿ, ವಿಭಾಗದಿಂದ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಛೇರಿಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ಏಕ & ದ್ವಿ-ಲಕೋಟೆಯಲ್ಲಿ ಇ-ಪ್ರೋಕ್ಯೂರಮೆಂಟ್ ಮುಖಾಂತರ ಆವ್ಹಾನಿಸಲಾಗಿರುತ್ತದೆ, ವಿವರಗಳು ಈ ಕೆಳಗಿನಂತೆ ಇರುತ್ತವೆ. ಕಾಮಗಾರಿಯ ಇಂಡೆಂಟ್ ಸಂ. 1) 35614/Call-2, 2) 34876/Call-5 & 3) 35854/Call-2. ಇರುತ್ತದೆ. ಹಾಗೂ ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ) 1) 124.65 LAKHS, 2) 10.59 LAKHS & 3) 10.55 LAKHS. ವರೆಗೆ ಇರುತ್ತದೆ. ಇ.ಎಂ.ಡಿ ಹಾಗೂ ಅರ್ಹಗುತ್ತಿಗೆದಾರರ ವಿವರ ಇ-ಪೋರ್ಟಲ್‌ನಂತೆ ಇರುತ್ತದೆ. **ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ** :i) ಗುತ್ತಿಗೆದಾರರು ಇ-ಪೋರ್ಟಲ್‌ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 22-02-2023, b) The Last date of Submission of completed tender documents 02-03-2023 @ 16.30Hrs c) Date of Opening of Technical Bid is 03-03-2023 @ 17.00 Hrs & Financial bid is 04-03-2023 @ 17.01 Hrs respectively, Website www.eproc.karnataka.gov.in ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ08484-262257 ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ-2 ಭಾಲ್ಕಿ

ವಾ.ಸಾ.ಸಂ.ಇ/ಬೀದರ/484/ಎಂಸಿ&ಎ/2022-23

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 069.
ದೂರವಾಣಿ: +91-80-22977666/276/433/216/217 ಟೆಲಿ-ಫ್ಯಾಕ್ಸ್:080-26534477
ಇ-ಮೇಲ್: director@jayadevacardiology.com/pstodirectorsjicr@gmail.com/pe.sjicrblr@gmail.com

ಇ-ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್) ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ವಿಭಾಗಗಳಿಗೆ ಎರಡು ವರ್ಷಗಳ ಅವಧಿಗೆ ರಾಸಾನಿಕ ಮತ್ತು ಇತ್ಯಾದಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಕಾಮಗಾರಿಗಳ ವಿವರ
1	ಎಸ್‌ಜೆಐಸಿ&ಆರ್/ಟಿಎಸ್/137/ 2022-23 ದಿನಾಂಕ:23.02.2023	ಬಯೋಕೆಮಿಸ್ಟ್ರಿ ವಿಭಾಗಕ್ಕೆ ರಾಸಾಯನಿಕಗಳು, ಕಾರಕಗಳು ಮತ್ತು ಉಪಭೋಗ್ಯ ವಸ್ತುಗಳ ಪೂರೈಕೆ.
2	ಎಸ್‌ಜೆಐಸಿ&ಆರ್/ಟಿಎಸ್/138/ 2022-23 ದಿನಾಂಕ:23.02.2023	ಪಾಥೋಲಜಿ ವಿಭಾಗಕ್ಕೆ ರಾಸಾಯನಿಕಗಳು, ಕಾರಕಗಳು ಮತ್ತು ಉಪಭೋಗ್ಯ ವಸ್ತುಗಳ ಪೂರೈಕೆ.
3	ಎಸ್‌ಜೆಐಸಿ&ಆರ್/ಟಿಎಸ್/139/ 2022-23 ದಿನಾಂಕ:23.02.2023	ಮೈಕ್ರೊಬಯಾಲಜಿ ವಿಭಾಗಕ್ಕೆ ರಾಸಾಯನಿಕಗಳು, ಕಾರಕಗಳು ಮತ್ತು ಉಪಭೋಗ್ಯ ವಸ್ತುಗಳ ಪೂರೈಕೆ.
4	ಎಸ್‌ಜೆಐಸಿ&ಆರ್/ಟಿಎಸ್/140/ 2022-23 ದಿನಾಂಕ:23.02.2023	ರಕ್ತನಿಧಿ ಕೇಂದ್ರಕ್ಕೆ ರಾಸಾಯನಿಕಗಳು, ಕಾರಕಗಳು ಮತ್ತು ಉಪಭೋಗ್ಯ ವಸ್ತುಗಳ ಪೂರೈಕೆ.
5	ಎಸ್‌ಜೆಐಸಿ&ಆರ್/ಟಿಎಸ್/141/ 2022-23 ದಿನಾಂಕ:23.02.2023	ರೇಡಿಯಾಲಜಿ ವಿಭಾಗಕ್ಕೆ ರಾಸಾಯನಿಕಗಳು, ಕಾರಕಗಳು ಮತ್ತು ಉಪಭೋಗ್ಯಗಳ ಪೂರೈಕೆ / ನ್ಯೂಕ್ಲಿಯರ್ ಕಾರ್ಡಿಯಾಲಜಿ ವಿಭಾಗಕ್ಕೆ ಜನರೇಟರ್ ಮತ್ತು ಐಸೊಟೋಪ್‌ಗಳ ಪೂರೈಕೆ.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://eproc.karnataka.gov.in** ವೆಬ್‌ಸೈಟ್‌ನಿಂದ ದಿನಾಂಕ : **27.02.2023 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **28.03.2023 ರ ಸಂಜೆ 4.00 ಗಂಟೆಯವರೆಗೆ.**
2. ಪ್ರಿ-ಬಿಡ್ ಮೀಟಿಂಗ್ ದಿನಾಂಕ : **15.03.2023 ರ ಬೆಳಿಗ್ಗೆ 11:30 ಗಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **29.03.2023 ರ ಸಂಜೆ 4:00 ಗಂಟೆಗೆ.**
4. **ಇ.ಎಂ.ಡಿ. :** ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
5. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/-
ಮುಖ್ಯ ಆಡಳಿತಾಧಿಕಾರಿಗಳು.

ಕರ್ನಾಟಕ ಸರಕಾರ
(ಲೋಕೋಪಾಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ
GSTIN:29BLR002252F1DR

ಸಂ.ಕಾನಿಅ/ಲೋಇ/ಯಾವಿ/ತಾಶಾ-2/ಇ-ಟೆಂಡರ್ ಪ್ರಕಟಣೆ/2022-23/ 7066, ದಿನಾಂಕ: 16.02.2023

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ.

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ- 1 ಮತ್ತು 4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2022-23 ನೇ ಸಾಲಿನ ನಬಾರ್ಡ ಹಾಗೂ ಎಂಎಲ್‌ಎಲ್ಯಾಡ್ ಅಡಿಯಲ್ಲಿ ಒಟ್ಟು 02 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ವರ್ಕ ಇಂಡೆಂಟ್ ಸಂಖ್ಯೆ: (1)165165(ಸಾಮಾನ್ಯ) ಮತ್ತು (2)164937(ಎಸ್.ಟಿ. ಮೀಸಲು). 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ.10.00 ಲಕ್ಷಗಳು ಹಾಗೂ ಗರಿಷ್ಠ ರೂ:690.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ ಮತ್ತು ಕಾಲಾವಧಿ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ: 10500.00, ಗರಿಷ್ಠ ರೂ:877000.00 5) ಪ್ರೀ-ಬಿಡ್ ಮೀಟಿಂಗ್ ದಿನಾಂಕ: 22.02.2023 (17.00 ರ ನಂತರ) 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 24.02.2023 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 28.02.2023 (16.00 ಗಂಟೆವರೆಗೆ) 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:01.03.2023 (16.00 ಗಂಟೆ ನಂತರ) ಕೆಡಬ್ಲ್ಯೂ-ರ ಕಾಮಗಾರಿ ಮಾತ್ರ 9) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 01.03.2023 (16.30 ಗಂಟೆ ನಂತರ)(ಕೆಡಬ್ಲ್ಯೂ-4ರ ಕಾಮಗಾರಿಗೆ ಮಾತ್ರ) 10) ಆರ್ಥಿಕ ಬಿಡ್ ತೆರೆಯುವ ದಿನಾಂಕ : 02.03.2023 (16.30 ಗಂಟೆ ನಂತರ) (ಕೆಡಬ್ಲ್ಯೂ-4ರ ಕಾಮಗಾರಿಗೆ ಮಾತ್ರ) 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 12) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಮಾಡಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು
ಲೋಕೋಪಾಯೋಗಿ ಇಲಾಖೆ, ವಿಭಾಗ
ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/489/ಕೆ.ಎಸ್.ಎಂ.ಸಿ.&ಎ/2022-23

Government of India
Ministry of Labour & Employment - DGE
NATIONAL CAREER SERVICE CENTRE FOR DIFFERENTLY ABLED
No. A-417, 1st Cross, B Main Road, Behind Peenya Police Station, Peenya 1st Stage, Bangaluru - 560 058.

Employment News Advertisement No. 01/2023 dt 4-10 February 2023
Last date for receipt of application: As per Employment news Advt. No 01/2023
(Applications received after due date will not be considered)
Applications are invited from eligible candidates for the following posts.

Sl.No.	Name of the Post	SC	ST	OBC	EWS	UR	Total	
1.	Vocational Instructor (General Mechanic) Pay Rs. 35,400/- Pay Lavel 6 of the 7th CPC	—	–	–	–	1*	1*	*Post is reserved for PWD category (b) HH
2.	Vocational Instructor (Refrigeration and Air Conditioning) Pay Rs. 35,400/- Pay Lavel 6 of the 7th CPC	1	—	–	–	–	1	
	Total	1	0	0	0	1	2	

DA and other allowances admissible to Central Government Employees are paid in addition to the pay mentioned against each post.
Candidates already employed in Govt. service shall apply through proper channel
Filled application to be sent to **The Head Of ofiice National Career Service Centre for Differently Abled, No. A-417, 1st Cross, B Main Road, Behind Peenya Police Station, Peenya 1st Stage, Bengaluru, Karnataka - 560058.**
For application and other details please refer Employment News **dated 4-10 February 2023 Page No. 35 and 36 of Central Employment Exchange.**

Sd/- REHABILITATION OFFICER / HEAD OF OFFICE

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ,
ಕೃಭಾಜನಿನಿ, ನಾಎದಂಕಾ ವಿಭಾಗ, ಹುಣಸಗಿ-585215,
ತಾ: ಹುಣಸಗಿ, ಜಿಲ್ಲೆ: ಯಾದಗಿರಿ, ರಾಜ್ಯ: ಕರ್ನಾಟಕ
Office of the Executive Engineer, KBJNL NLBC Divn. Hunasagi

ಕ್ರಮಸಂ:ಕೃಭಾಜನಿನಿ/ನಾಎದಂಕಾವಿಹು/ಪಿಬಿ/ಟೆಂಡರ್/2022-23/ 1081, 1082 & 1083 ದಿನಾಂಕ: 20.2.2023

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಅಡಿ 2022-23 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ Two Cover System ನ 15 ಕಾಮಗಾರಿಗಳಿಗಾಗಿ ಟೆಂಡರ್ ಆಹ್ವಾನಿಸಲಾಗಿದ್ದು. Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಸದರಿ ಕಾಮಗಾರಿಗಳಿಗಾಗಿ ಈ ಕಛೇರಿ ಟೆಂಡರು ಪ್ರಕಟಣೆ ಸಂ. (1) 1081 (2) 1082 & (3) 1083 ದಿನಾಂಕ:- 20-2-2023 ಅಡಿಯಲ್ಲಿ ಮೊಹರಾದ ಶೇಕಡಾವಾರು ಟೆಂಡರ್‌ಗಾಗಿ ಇ-ಪ್ರೋಟಲ್ ಮುಖಾಂತರ http://eproc.karnataka.gov.in/eportal/ines.seam ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ವಿವರ	ಟೆಂಡರ ಪ್ರಕ್ರಿಯೆಯ ದಿನಾಂಕ
1	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿ: 24.2.2023 ರಿಂದ 06.03.2023 ಸಂಜೆ 5.00 ಗಂಟೆಯವರೆಗೆ
2	ಪೂರ್ವ ಭಾವಿ ಸಭೆಯ ದಿನಾಂಕ: (ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರ ಕಚೇರಿಯಲ್ಲಿ)	ದಿ: 28.2.2023 ಮುಂಜಾನೆ 11.00 ಗಂಟೆಗೆ
3	ಗುತ್ತಿಗೆದಾರರು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ದಿ: 06.03.2023 ಸಂಜೆ 5.00 ಗಂಟೆಯವರೆಗೆ
4	ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ನಾಎದಂಕಾವಿಭಾಗ ಹುಣಸಗಿ ಇವರ ಕಚೇರಿಯಲ್ಲಿ)	ದಿ: 08.03.2023 ಮುಂಜಾನೆ 11.00 ಗಂಟೆಗೆ
5	ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರ ಕಚೇರಿಯಲ್ಲಿ)	ದಿ: 10.03.2023 ಮುಂಜಾನೆ 11.00 ಗಂಟೆಗೆ (ತಾತ್ಕಾಲಿಕ)

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in/eportal/ines.seam ನಲ್ಲಿ ವೀಕ್ಷಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ನಾಎದಂಕಾ ವಿಭಾಗ ಹುಣಸಗಿ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಕೃಭಾಜನಿನಿ, ನಾಎದಂಕಾ ವಿಭಾಗ, ಹುಣಸಗಿ

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2022-23 **NOTICE FOR PRIVATE SALE OF GOLD** 21/02/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-03-2023 as shown below:

Br. Bangalore/Sadashivanagar: #88, Keerthi, 2nd Main, Palace Guttahalli P O, Bangalore- 560 003 Ph No. 080 23565050 :-
21986400036476,21986400033515,21986400028374,21986400031683,21986400028754.

Br. Chikkaballapur: No 1153/3, BB Road, Chikkaballapur- 562 101 Ph No. 08156-274088 :-
20216400034722,20216400032445,20216400031009,20216400031728,20216400031348,20216400032312,20216400032320,20216400031587,20216400026132,20216400032106,20216400032312,20216400035224,20216400024954,20216400032049,20216400035232,20216400026132,20216400026926,20216400034722.

Br. Chikkajala: Sri Byraveshwara Complex, No 82/3, Chikkajala Village, Chikkajala Post, KIAL Road, Bangalore North Taluk, Bangalore- 562 157 , Ph No. 080-28467032 :- 20866400029625,20866400016051,20866400034922,20866400030219,20866400029633,20866400029765,20866400034930,20866400030227,20866400029419,20866400035051,20866400035663,20866400030912,20866400010526,20866400024980,20866400029781,20866400030946,20866400010534,20866400031308,20866400030334,20866400035937,20866400010542,20866400027165,20866400029294,20866400029286,20866400030276,20866400010765,20866400028692,20866400024717,20866400029997,20866400022216,20866400011680,20866400018073,20866400030003,20866400029708,20866400029047,20866400018081,20866400030011,20866400029716,20866400030185,20866400031811,20866400030029,20866400029724,20866400030193,20866400033858,20866100040336,20866400028833,20866400030201,20866400029914,20866400029534,20866400030441.

Br. Doddaballapur: D Cross Road, Doddaballapur, Bangalore Rural- 561 203 Ph No.080-27622105 :-
16316400075521,16316400075406,16316400080653,16316400055176,16316400055903,16316400075190,16316400075570,16316400076800,16316400081347,16316400081883,16316400067239,16316400075604,16316400075828,16316400053445,16316400074706,16316400068195,16316400081669,16316400074664,16316400076297,16316400074698,16316400076172,16316400055820,16316400075919,16316400080521,16316400057255,16316400082410,16316400076859,16316400081495,16316400065159,16316400051381,16316400076792,16316400065902,16316400061414,16316400055184,16316400056513,16316400073203,16316400050730,16316400054971,16316400056596,16316400074805,16316400081701.

Br. Devanahalli: 135/9, Next To Corporation Bank, D B Cross, Devanahalli , Bangalore Rural- 562 110, Ph No. 080 27683906 :-
15296400101611,15296400105927,15296400114325,15296400104235,15296400101629,15296400105760,15296400113525,15296400104177,15296400117385,15296400116163,15296400115595,15296400104284,15296400105943,15296400103047,15296400114937,15296400109036.

Br. Dommasandra: Khata No. 13 - Gramathana, Dommasandra (Bangalore East), Bidarahalli Hobli, Virgonagar P O, Bangalore- 560 049, Ph No. 080-29906232:-21656400005819,21656400009084,21656400005801,21656700000908,21656700001088,21656400005413,21656400008474,21656100043839,21656100044845,21656100044480,21656400007187,21656100043615,21656100040900,21656700001039,21656700001278,21656400009373,21656700001104,21656400007112,21656400007013,21656400006940,21656400006924,21656400007476,21656400004770,21656700001765,21656400007641,21656700001963,21656400007773,21656400007914,21656100045487,21656100044076,21656100042682,21656100044647,21656100045198,21656400009811,21656400010017.

Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore- 560 049 Ph No:8867121675 :-
21636400048050,21636100018049,21636400049363,21636400049348, 21636400048522,21636100017900,21636100018064,21636400050049, 21636100017991,21636100018023,21636400046823,21636100018072, 21636100018007,21636100018080,21636400051211.

Br. Hoskote: Gangamma Gudi Road, M V Extension, Hoskote, Bangalore Rural-562 114 Ph no. 080-27933430:- 15856400022354,15856400022545.

Br. Kunigal: KRS Agrahara, BM Road, Kunigal, Tumkur- 572 130 Ph no. 08132221111 :-
20706400056923,20706400064760,20706400057772,20706400064778,20706400065460,20706400042758,20706400061642,20706400047377,20706400047369,20706400066021,20706400051882,20706400064174,20706400049209,20706400065965,20706400064042,20706400064380,20706400058226,20706400041719,20706400065569,20706400065593,20706400064059,20706400040216,20706400066336,20706400055537,20706400065916,20706400042659,20706400059125,20706400059067,20706400066187,20706400056923.

Br. Nelamangala: Paramanna Layout, B H Road, Nelamangala, Bangalore Rural- 562 123 Ph no. 080-27722251 :- 15536300000011,15536300000029,15536300000037,15536300000052,15536300000060,15536300000086,15536300000094,15536300000128,15536300000136,15536300000144,15536300000151,15536300000169,15536300000177,15536300000185,15536300000235,15536300000243,15536300000276,15536300000300,15536300000334,15536300000359,15536300000375,15536300000383,15536300000391,15536300000417,15536300000557,15536300000565,15536300000581,15536300000607,15536300000615,15536400037475,15536400071581,15536400071854,15536400071896,15536400074312,15536400074320,15536400079410,15536400083628,15536400083636,15536400083669,15536400083677,15536400084303,15536400085052,15536400085060,15536400085375,15536400085441,15536400085540,15536400085573,15536400085672,15536400085755,15536400086043,15536400086050,15536400086209,15536400086530,15536400086886,15536400087199,15536400087512,15536400087645,15536400087728,15536400087744,15536400087769,15536400087777,15536400087835,15536400087983,15536400088650.

Br. Tumkur: Amogh Mansion, KR Extension, Tumkur-572 101 Ph no. 0816-2255470 :-
16036400062085,16036400063240,16036400065476,16036400058166,16036400069338,16036400060329,16036400066664,16036400064727,16036400069320,16036400059008,16036400066656,16036400062390,16036400069205,16036400058992,16036400069817,16036400063299,16036400062325,16036400053597,16036400065104,16036400065914,16036400055162,16036400063992,16036400062689,16036100126339,16036400049769,16036400065393,16036400055261,16036100126321,16036400066391,16036400065385,16036400062820,16036400069288,16036400066540,16036400065419,16036400060402,16036400069270,16036400066904,16036400065401,16036400068264,16036400069262,16036100130661,16036400066920,16036400060923,16036400069247,16036400052318,16036400063315,16036400059487,16036400069197,16036400061327,16036400060188,16036400060857,16036400069080,16036400065948,16036400063729,16036400060725,16036400068298,16036400065930,16036400060105,16036400060154,16036400050841,16036400065922,16036400059263,16036400070104,16036400061087,16036400052128,16036400052664,16036400062671,16036400066003,16036400068975,16036400055238,16036400062663,16036400065542,16036400067753,16036400052656,16036400056210,16036400065526,16036400066169,16036400065955,16036400065849.

Br. Tiptur: 156 & 157 , Opp Janata Deluxe lodge, Vinayaka Nagara, Off B H Road, Tiptur, Tumkur- 572 201 Ph no. 083134250114 :-
19906400014962,19906400019334,19906400019870,19906400019987,19906400020126,19906400020175,19906400020274,19906400020340,19906400020423,19906400020308,19906400016652,19906400019680,19906400018583.

Bangalore 21-02-2023 Vice President & Zonal Head

ಪ್ರಬುದ್ಧರ ಜತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂವಾದ

‘ಕಾಂಗ್ರೆಸ್‌ಗೆ ಸಿದ್ಧಾಂತವೇ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯ ಹೋರಾಟದ ಉದ್ದೇಶದಿಂದ ಹುಟ್ಟಿದಾಗ ಕಾಂಗ್ರೆಸ್ ಒಂದು ಸಂಘಟನೆ ಆಗಿತ್ತು. ಹೀಗಾಗಿ ಸ್ವಾತಂತ್ರ್ಯ ದೊರೆತ ಎಲ್ಲ ಪುಣ್ಯವನ್ನು ಅದು ತನ್ನ ಖಾತೆಗೆ ಹಾಕಿಕೊಂಡಿತು. ಸ್ವಾತಂತ್ರ್ಯ ಬಂದಮೇಲೆ ಕಾಂಗ್ರೆಸ್ ವಿಸರ್ಜನೆಯಾಗಬೇಕು ಎಂದು ಗಾಂಧೀಜಿಯೇ ಬಯಸಿದ್ದರು. ಆದರೆ, ಆಮೇಲೆ ಅದು ಪರಿವಾರವಾದಿ ಪಕ್ಷವಾಗಿ ಬಿಟ್ಟಿತು. ಅದಕ್ಕೆ ಸಿದ್ಧಾಂತವೇ ಇಲ್ಲ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಟೀಕಿಸಿದರು.

ಗುರುವಾರ ನಗರದ ಟೌನ್‌ಹಾಲ್‌ನಲ್ಲಿ ‘ಸಂವಾದ’ ಆಯೋಜಿಸಿದ್ದ ಪ್ರಬುದ್ಧರ ಜತೆ ಸಂವಾದ ಕಾರ್ಯಕ್ರಮದಲ್ಲಿ ಅವರು ‘ಭಾರತೀಯ ರಾಜಕೀಯ ವ್ಯವಸ್ಥೆ: 65 ವರ್ಷಗಳ ದೇಶದ ರಾಜಕೀಯ ಸ್ಥಿತಿಗತಿ ಹಾಗೂ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಆದ ಮನ್ವಂತರ’ ಎನ್ನುವ ವಿಷಯ ಕುರಿತು ಮಾತನಾಡಿದರು.

‘ಸ್ವಚ್ಛತೆ, ಆರೋಗ್ಯದ ಸಂಬಂಧ ರಾಹುಲ್ ಗಾಂಧಿಗೆ ಗೊತ್ತಿಲ್ಲ’

‘ಸ್ವಚ್ಛತೆಗೂ ಆರೋಗ್ಯಕ್ಕೂ ಇರುವ ಸಂಬಂಧ ಎಂಥದೆನ್ನುವುದು ರಾಹುಲ್ ಗಾಂಧಿ ಅವರಿಗೆ ಗೊತ್ತಿಲ್ಲ, ಮಹಾತ್ಮ ಗಾಂಧಿ ಅವರಿಗೆ ಗೊತ್ತಿತ್ತು’ ಎಂದು ಅಮಿತ್ ಶಾ ವ್ಯಂಗ್ಯವಾಡಿದರು.

ರಾಮಮಂದಿರ, ಕಾಶಿಯಲ್ಲಿನ ವಿಶ್ವನಾಥನ ಕಾರಿಡಾರ್ ನಿರ್ಮಾಣ ಕಾಮಗಾರಿಗೆ ಒತ್ತು ನೀಡಿದ್ದು, ಪಿಎಫ್‌ಐ ಸಂಘಟನೆಯನ್ನು ದೃಢನಿಶ್ಚಯದಿಂದ ರದ್ದುಗೊಳಿಸಿದ್ದು, ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಪ್ರಾದೇಶಿಕ ಭಾಷೆಗಳಲ್ಲೂ ಉತ್ತಮ ಕಲಿಕೆಯನ್ನು ಸಾಧ್ಯಪಡಿಸಿದ್ದು ಎಲ್ಲವನ್ನೂ ಅವರು ಹೇಳಿಕೊಂಡರು. 2047ರ ಹೊತ್ತಿಗೆ ಹೊಸ ಭಾರತ ರಚನೆಯಾಗಲಿದ್ದು, ಈ ಎಲ್ಲವೂ ಅದಕ್ಕೆ ಪೂರಕವಾಗಿವೆ ಎಂದೂ ತಿಳಿಸಿದರು.

‘ಬಿಜೆಪಿಯದ್ದು ಸಾಂಸ್ಕೃತಿಕ ರಾಷ್ಟ್ರವಾದದ ಸಿದ್ಧಾಂತ. ನಮ್ಮದು ಭೌಗೋಳಿಕ–ರಾಜಕೀಯ ದೇಶವಲ್ಲ, ಭೌಗೋಳಿಕ–ಸಾಂಸ್ಕೃತಿಕ ದೇಶ. ವ್ಯಕ್ತಿಯಿಂದ ಸಮಷ್ಟಿ ಎಡೆಗಿನ ಯಾತ್ರೆ ನಮ್ಮದು. 65 ವರ್ಷಗಳ ಕಾಲ ದೇಶದ ಆಡಳಿತ ಹೇಗೆ ನಡೆಯಿತು, ಕಳೆದ ಹತ್ತು ವರ್ಷಗಳಲ್ಲಿ ಮೋದಿ ನೇತೃತ್ವದಲ್ಲಿ ಹೇಗೆ ನಡೆಯಿತು ಎಂಬ ತೌಲನಿಕ ಅಧ್ಯಯನವೇ ಕೆಲವರಲ್ಲಿ ಬಿಜೆಪಿ ಕುರಿತು ಇರಬಹುದಾದ ಗೊಂದಲಗಳಿಗೆ ಉತ್ತರ ಕೊಟ್ಟೀತು’ ಎಂದು ಹೇಳಿದರು.

‘ಲೋಹಿಯಾ ಶಕೆಯ ನಂತರ ಸಮಾಜವಾದಿ ಪಕ್ಷವು ಜಾತಿವಾದಿ, ಕುಟುಂಬವಾದಿ ಪಕ್ಷವಾಯಿತು. ಕಮ್ಯುನಿಸ್ಟ್ ಪಕ್ಷವು ಸಂಕೀರ್ಣ ಆಲೋಚನೆಗಳಿಂದ ಅಳಿಯಿತು. ಜೆಡಿಎಸ್‌ನಲ್ಲಿ ಪರಿವಾರದವರೆಲ್ಲರಿಗೂ ಚುನಾವಣೆ ಬೇಕು. ಹಾಗಿರುವಾಗ ಮನೆ ನಡೆಸುವವರು ಯಾರೋ? ಹೀಗಾಗಿದೆ ಪರಿಸ್ಥಿತಿ’ ಎಂದು ವ್ಯಂಗ್ಯವಾಡಿದರು. ಜನಸಂಘವು ಜನತಾ ಪಾರ್ಟಿ ಆಗಿ, ಆಮೇಲೆ ಬಿಜೆಪಿ ಆಗಿ ಕಷ್ಟಪಟ್ಟು ಬೆಳೆದಿದೆ ಎಂದು ಹೇಳಿಕೊಂಡರು.

ದೇಶದ 11 ಕೋಟಿ ಜನರಿಗೆ ಶೌಚಾಲಯ ನಿರ್ಮಿಸಿದ್ದು, 13 ಕೋಟಿ ಜನರಿಗೆ ಅಡುಗೆ ಅನಿಲ ಒದಗಿಸಿದ್ದು, ಕೋವಿಡ್ ಸಂದರ್ಭದಲ್ಲಿ ಲಸಿಕೆ ತಯಾರಿ–ಪೂರೈಕೆ, ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ, ಸೇನಾ ಪರಿಕರಗಳ ತಯಾರಿಯಲ್ಲಿ ಶೇ 70ರಷ್ಟು ಆತ್ಮನಿರ್ಭರ ವ್ಯವಸ್ಥೆ ಜಾರಿಗೊಳಿಸಿರುವುದೂ ಸೇರಿ ಕೇಂದ್ರ ಸರ್ಕಾರ ಮಾಡಿದ ಕೆಲಸಗಳು ಹಾಗೂ ಜಾರಿಗೆ ತಂದ ಯೋಜನೆಗಳನ್ನು ಅವರು ಅಂಕಿಅಂಶಗಳ ಸಮೇತ ಪುನರುಚ್ಚರಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ನಟ ಪ್ರಕಾಶ್ ಬೆಳವಾಡಿ ಸಂವಾದದಲ್ಲಿ ಇದ್ದರು.

‘ಕರ್ನಾಟಕ ಬಿಜೆಪಿ ಭದ್ರಕೋಟೆ’

ಬೆಂಗಳೂರು: ಕರ್ನಾಟಕ ಹಲವು ದಶಕಗಳಿಂದ ಬಿಜೆಪಿಯ ಭದ್ರಕೋಟೆಯಾಗಿದ್ದು, ಈ ಬಾರಿ ಬಿಜೆಪಿ ಬಹುಮತದಿಂದ ಮರು ಆಯ್ಕೆಯಾಗಿ ಮತ್ತೊಮ್ಮೆ ಅಧಿಕಾರ ಹಿಡಿಯಲಿದೆ ಎಂದು ಕೇಂದ್ರ ಸಚಿವ ಮತ್ತು ಬಿಜೆಪಿಯ ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯ ಚುನಾವಣಾ ಉಸ್ತುವಾರಿಯಾಗಿ ನೇಮಕಗೊಂಡ ಬಳಿಕ ಇದೇ ಮೊದಲ ಬಾರಿಗೆ ಬೆಂಗಳೂರಿಗೆ ಬಂದ ಪ್ರಧಾನ್ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಮನೆಗೆ ಭೇಟಿ ನೀಡಿ ಅವರು ಸಮಾಲೋಚನೆ ನಡೆಸಿದರು. ಈ ವೇಳೆ ಕರ್ನಾಟಕ ಚುನಾವಣಾ ಸಹ ಉಸ್ತುವಾರಿ ಮನ್‌ಸುಖ್ ಮಾಂಡವೀಯ, ಬಿ.ವೈ. ವಿಜಯೇಂದ್ರ ಇದ್ದರು.

ರೇವಣ್ಣ ಕುಟುಂಬದಿಂದ ಪ್ರಚಾರ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯ ಹಾಸನ ಕ್ಷೇತ್ರದ ಜೆಡಿಎಸ್ ಟಿಕೆಟ್‌ಗೆ ಸಂಬಂಧಿಸಿದ ಗೊಂದಲ ಮುಂದುವರಿದಿರುವ ನಡುವೆಯೇ ಶಾಸಕ ಎಚ್.ಡಿ. ರೇವಣ್ಣ ಅವರ ಕುಟುಂಬ ಗುರುವಾರ ಕ್ಷೇತ್ರದಲ್ಲಿ ಪ್ರಚಾರ ಕಾರ್ಯ ಆರಂಭಿಸಿದೆ.

ಮನೆದೇವರಾದ ಹರದನಹಳ್ಳಿ ದೇವೇಶ್ವರ ಹಾಗೂ ಬೆಟ್ಟದ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆ ಪೂಜೆ ಸಲ್ಲಿಸಿದ ರೇವಣ್ಣ–ಭವಾನಿ ದಂಪತಿಯು, ನಂತರ ಸಂಸದ ಪ್ರಜ್ವಲ್ ರೇವಣ್ಣ ಅವರ ನಗರದ ನಿವಾಸಕ್ಕೆ ಭೇಟಿ ನೀಡಿದರು.

‘ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಹಾಸನ ವಿಧಾನಸಭಾ ಕ್ಷೇತ್ರದ 12 ಗ್ರಾಮ ಪಂಚಾಯಿತಿಗಳಿಗೆ ತೆರಳಿ ಜನರ ಕುಂದು ಕೊರತೆಗಳನ್ನು ಆಲಿಸಲಾಗುವುದು. ಹಾಸನದ್ದೂ ಸೇರಿದಂತೆ ಜೆಡಿಎಸ್ ಎರಡನೇ ಪಟ್ಟಿಯನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ವರಿಷ್ಠ ಎಚ್.ಡಿ. ದೇವೇಗೌಡರು ಹಾಗೂ ಕ್ಷೇತ್ರದ ಜನರ ಅಭಿಪ್ರಾಯ ಸಂಗ್ರಹಿಸಿ ಅಂತಿಮಗೊಳಿಸಲಾಗುವುದು’ ಎಂದರು.

ಹೊಳೆನರಸೀಪುರದ ದೊಡ್ಡಪುರದ ಮಲ್ಲೇಶ್ವರ ದೇವಸ್ಥಾನದಲ್ಲಿ ಶಾಸಕ ಎಚ್.ಡಿ. ರೇವಣ್ಣ, ಭವಾನಿ ರೇವಣ್ಣ, ಸಂಸದ ಪ್ರಜ್ವಲ್ ಗುರುವಾರ ಪೂಜೆ ಸಲ್ಲಿಸಿದರು

> **ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ದಾಖಲೆ ಇಟ್ಟುಕೊಂಡು ಮಾತನಾಡಲಿ. ಹಾಸನ ಜಿಲ್ಲೆಯ ಅಭಿವೃದ್ಧಿ ಮಾಡಿದ್ದು ರೇವಣ್ಣ ಅವರ ಅಪ್ಪ ದೇವೇಗೌಡರು**
>
> **ಎಚ್.ಡಿ. ರೇವಣ್ಣ,** ಶಾಸಕ

ಈ ಕುರಿತು ಶಿವಮೊಗ್ಗದಲ್ಲಿ ಪ್ರತಿಕ್ರಿಯಿಸಿರುವ ಎಚ್.ಡಿ. ಕುಮಾರಸ್ವಾಮಿ, ‘ಹಾಸನ ತಾಲ್ಲೂಕಿನಲ್ಲಿ ರೇವಣ್ಣ, ಭವಾನಿ ಹಾಗೂ ಪ್ರಜ್ವಲ್ ಪಕ್ಷ ಸಂಘಟಿಸುತ್ತಿದ್ದಾರೆ. ಯಾರಿಗೆ ಟಿಕೆಟ್ ಕೊಡಲಾಗುವುದೋ ಅವರ ಪರವಾಗಿ ಕೆಲಸ ಮಾಡಲಿದ್ದಾರೆ’ ಎಂದಿದ್ದಾರೆ.

‘ತಾಲ್ಲೂಕಿನ ಹಲವೆಡೆ ಪ್ರಜ್ವಲ್ ಆಯೋಜಿಸುತ್ತಿರುವ ಪಕ್ಷ ಸಂಘಟನೆಯ ಸಭೆಗಳಲ್ಲಿ ಭವಾನಿ, ರೇವಣ್ಣ ಭಾಗವಹಿಸುತ್ತಿದ್ದು, ಹಾಸನ ಕ್ಷೇತ್ರದಿಂದ ಅವರ ಕುಟುಂಬದವರೇ ಸ್ಪರ್ಧಿಸುವುದು ಖಚಿತ’ ಎಂಬ ಮಾತುಗಳು ಕಾರ್ಯಕರ್ತರಿಂದ ಕೇಳಿ ಬರುತ್ತಿವೆ. ಈಚೆಗಷ್ಟೇ ರೇವಣ್ಣ–ಭವಾನಿ ದಂಪತಿ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಯಾಗ ಮಾಡಿಸಿ ಬಂದಿದ್ದಾರೆ.

‘ಹಾಲಿ ಶಾಸಕರಿಗೆ ಟಿಕೆಟ್’

ವಿ.ಶ್ರೀನಿವಾಸ ಪ್ರಸಾದ್

ಚಾಮರಾಜನಗರ: ‘ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಹಾಲಿ ಶಾಸಕರಿಗೆ ಟಿಕೆಟ್ ಕೊಡಲಾಗುವುದು ಎಂದು ವರಿಷ್ಠರು ಹೇಳಿದ್ದಾರೆ’ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಗುರುವಾರ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಸಭೆ ನಡೆಸಿದ್ದು, ಯಾರಿಗೇ ಟಿಕೆಟ್ ಕೊಟ್ಟರೂ ಒಗ್ಗಟ್ಟಾಗಿ ದುಡಿಯೋಣ. ಕಾರ್ಯಕರ್ತರ ಅಭಿಪ್ರಾಯಕ್ಕೆ ಮನ್ನಣೆ ಕೊಡಲಾಗುವುದು ಎಂದಿದ್ದಾರೆ’ ಎಂದರು.

‘ಮುಂದಿನ ಚುನಾವಣೆಯಲ್ಲಿ ಸಂಪೂರ್ಣ ಗೆಲುವು ನಮ್ಮದೇ. ಅದೇ ಮಾತನ್ನು ಕಾಂಗ್ರೆಸ್, ಜೆಡಿಎಸ್‌ನವರೂ ಹೇಳುತ್ತಿದ್ದಾರೆ. ಹೇಳಿಕೊಳ್ಳಲಿ. ಲೋಕಸಭೆಯಲ್ಲಿ ಒಂದು ಸೀಟು ಗೆದ್ದವರು, ಕಳೆದ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡವರೇ ಹೇಳುವಾಗ, 25 ಸ್ಥಾನ ಗೆದ್ದ ನಾವು ಇನ್ನೆಷ್ಟು ಜೋರಾಗಿ ಹೇಳಬೇಕು’ ಎಂದು ಪ್ರಶ್ನಿಸಿದರು.

‘ಸಿದ್ದರಾಮಯ್ಯ ಕ್ಷೇತ್ರ ಹುಡುಕಿಕೊಂಡು ಕದ್ದು ಓಡಾಡುತ್ತಿದ್ದಾನೆ. ಚಾಮುಂಡೇಶ್ವರಿಯಿಂದ ಬಾದಾಮಿ, ಅಲ್ಲಿಂದ ಕೋಲಾರಕ್ಕೆ ಪಲಾಯನ ಮಾಡಿದ್ದಾನೆ. ಮೈಸೂರು ಜಿಲ್ಲೆಯಿಂದ ಗೆಲ್ಲುತ್ತೇನೆ ಎಂಬ ವಿಶ್ವಾಸ ಅವನಿಗಿಲ್ಲ’ ಎಂದರು.

‘ಕಮಲ, ಮೋದಿ ಹೆಸರಲ್ಲಿ ಪ್ರಚಾರ’

ಬಳ್ಳಾರಿ ವಿಭಾಗದ 4 ಜಿಲ್ಲೆಗಳ ಬಿಜೆಪಿ ಪ್ರಮುಖರ ಸಭೆಯಲ್ಲಿ ಅಮಿತ್ ಶಾ

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ): ‘ಮನೆಮನೆಗೂ ತೆರಳಿ ಕಮಲ ಮತ್ತು ಮೋದಿ ಹೆಸರಲ್ಲಿ ಪ್ರಚಾರ ಮಾಡಬೇಕು’ ಎಂದು ಗೃಹ ಸಚಿವ ಅಮಿತ್ ಶಾ ಸಂಡೂರಿನಲ್ಲಿ ಗುರುವಾರ ಬಳ್ಳಾರಿ ವಿಭಾಗದ ನಾಲ್ಕು ಜಿಲ್ಲೆಗಳ ಪ್ರಮುಖರಿಗೆ ತಾಕೀತು ಮಾಡಿದ್ದಾರೆ.

ಸಂಡೂರಿನಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಭಾಗವಹಿಸಿದ ಬಳಿಕ ನಡೆದ ಬಳ್ಳಾರಿ, ವಿಜಯನಗರ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಬಿಜೆಪಿ ಪ್ರಮುಖರ ಸಭೆಯಲ್ಲಿ ಬಿಡುವಿಲ್ಲದ ಪ್ರಚಾರದಲ್ಲಿ ತೊಡಗುವಂತೆ ಪಕ್ಷದ ಟಿಕೆಟ್ ಆಕಾಂಕ್ಷಿಗಳಿಗೂ ಸೂಚಿಸಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

ನಾಲ್ಕು ಜಿಲ್ಲೆಗಳಲ್ಲಿ ಒಟ್ಟು 22 ವಿಧಾನಸಭಾ ಕ್ಷೇತ್ರಗಳಿವೆ. ಇದರಲ್ಲಿ ಕನಿಷ್ಠ 20 ಸ್ಥಾನಗಳನ್ನಾದರೂ ಗೆಲ್ಲುವ ಪ್ರಯತ್ನ ಮಾಡಬೇಕು. ಪಕ್ಷ ಹಾಗೂ ಸರ್ಕಾರ ಒಟ್ಟುಗೂಡಿ ಕೆಲಸ ಮಾಡಿದರೆ ಇದೇನು ಕಷ್ಟವಲ್ಲ ಎಂದು ಶಾ ಅಭಿಪ್ರಾಯಪಟ್ಟರು.

ಪ್ರತಿಯೊಂದು ಕ್ಷೇತ್ರದಲ್ಲೂ ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಯುತ್ತಿದೆ. ಯಾವ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಕೊಡಬೇಕು ಎಂಬುದನ್ನು ಪಕ್ಷದ ಕೇಂದ್ರ ಸಮಿತಿ ತೀರ್ಮಾನಿಸಲಿದೆ ಎಂದು ಸಚಿವರು ಹೇಳಿದರು.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 2–3 ಗ್ರಾಮಗಳಿಗೊಂದರಂತೆ ಕ್ಲಸ್ಟರ್ ರಚಿಸಬೇಕು. ಶಾಸಕರು ಕ್ಲಸ್ಟರ್‌ಗಳ ಮೂಲಕ ಜನರ ಸಮಸ್ಯೆ ನಿವಾರಣೆಗೆ ಪ್ರಯತ್ನಿಸಬೇಕು. ಪಕ್ಷದ ಯುವ ಕಾರ್ಯಕರ್ತರು ಬೈಕ್ ರ‍್ಯಾಲಿ ನಡೆಸಬೇಕು ಎಂದರು.

ಬಿಜೆಪಿ ಮಹಿಳಾ ಮೋರ್ಚಾವನ್ನು ಪ್ರತಿ ಕ್ಷೇತ್ರದಲ್ಲೂ ಬಲಪಡಿಸಬೇಕು. ಸ್ವಸಹಾಯ ಸಂಘ, ಸ್ತ್ರೀ ಶಕ್ತಿ ಸಂಘಗಳ ಕಾರ್ಯಕರ್ತರನ್ನು ಸಂಘಟಿಸಿ ಸರ್ಕಾರದ ಯೋಜನೆಗಳನ್ನು ಮನವರಿಕೆ ಮಾಡಿಕೊಡಬೇಕು ಎಂದು ಅವರು ಕಿವಿಮಾತು ಹೇಳಿದರು.

ರೆಡ್ಡಿ ಹೊಸ ಪಕ್ಷದ ಪ್ರಸ್ತಾಪ: ಬಿಜೆಪಿ ಪ್ರಮುಖರ ಸಭೆಯಲ್ಲಿ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಹೊಸ ಪಕ್ಷ ಕುರಿತು ಪ್ರಸ್ತಾಪವಾಯಿತು. ‘ನನ್ನ ವಿರುದ್ಧ ನನ್ನ ಸೊಸೆಯೇ ಸ್ಪರ್ಧೆ ಮಾಡುತ್ತಿದ್ದಾರೆ’ ಎಂದು ಬಳ್ಳಾರಿ ನಗರ ಶಾಸಕ ಸೋಮಶೇಖರ ರೆಡ್ಡಿ ಆತಂಕ ವ್ಯಕ್ತಪಡಿಸಿದರು. ‘ಎಲ್ಲ ಬೆಳವಣಿಗೆ ನನ್ನ ಗಮನದಲ್ಲಿದೆ. ನಿಮ್ಮ ಪಾಡಿಗೆ ನೀವು ಕೆಲಸ ಮಾಡಿ. ಪಕ್ಷ ಎಲ್ಲವನ್ನೂ ನೋಡಿಕೊಳ್ಳುತ್ತದೆ’ ಎಂದು ಶಾ ಭರವಸೆ ನೀಡಿದರು.

ಗಂಗಾವತಿ ಶಾಸಕ ಪರಣ್ಣ ಮುನವಳ್ಳಿ ಅವರಿಗೂ ಅಮಿತ್ ಶಾ ಆತ್ಮವಿಶ್ವಾಸ ತುಂಬಿದರು ಎಂದು ಮೂಲಗಳು ಸ್ಪಷ್ಟಪಡಿಸಿವೆ. ಸಚಿವರಾದ ಆನಂದ್ ಸಿಂಗ್, ಶಶಿಕಲಾ ಜೊಲ್ಲೆ, ಬಳ್ಳಾರಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಗೋನಾಳ್ ಮುರಹರಗೌಡ ಸೇರಿದಂತೆ ಎಲ್ಲ ಜಿಲ್ಲೆಗಳ ಅಧ್ಯಕ್ಷರಿಂದ ಪಕ್ಷ ಸಂಘಟನೆ ಕುರಿತು ಗೃಹ ಸಚಿವರು ಮಾಹಿತಿ ಪಡೆದರು ಎಂದು ಮೂಲಗಳು ಹೇಳಿವೆ.

ರೈತರ ಕಲ್ಯಾಣಕ್ಕೆ ಸಿದ್ದರಾಮಯ್ಯ ಕೊಡುಗೆ ಶೂನ್ಯ: ಶೋಭಾ

ಬೆಳಗಾವಿ: ‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಜಾತಿ, ಧರ್ಮಗಳ ಹೆಸರಲ್ಲಿ ಒಡೆದಾಳುವ ರಾಜಕಾರಣ ಮಾಡಿರುವುದನ್ನು ಬಿಟ್ಟರೆ, ರೈತರ ಕಲ್ಯಾಣಕ್ಕಾಗಿ ಏನೂ ಮಾಡಿಲ್ಲ’ ಎಂದು ಕೃಷಿ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ವಾಗ್ದಾಳಿ ನಡೆಸಿದರು.

‘ರೈತರಿಗಾಗಿ ಪ್ರಧಾನಿ ನರೇಂದ್ರ ಮೋದಿ ಏನು ಮಾಡಿದ್ದಾರೆ’ ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ, ಇಲ್ಲಿ ಸುದ್ದಿಗಾರರಿಗೆ ಹೀಗೆ ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯ ಚುನಾವಣೆ ಬಂದಾಗ ಹೀಗೆ ಮಾತನಾಡುತ್ತಾರೆ. ಅವರು ತಮ್ಮ ಬೆನ್ನಿನ ಹಿಂದಿನ ಸಂಗತಿಗಳನ್ನು ಒಮ್ಮೆ ತಿರುಗಿ ನೋಡಬೇಕು. ಅವರ ಒಂದು ಬೆರಳು ನಮ್ಮ ಕಡೆ ತೋರಿಸಿದರೆ, ನಾಲ್ಕು ಬೆರಳು ಅವರ ಕಡೆ ತೋರಿಸುತ್ತವೆ. 10 ಬಜೆಟ್ ಮಂಡಿಸಿದ್ದೇನೆ ಎನ್ನುವ ಅವರು, ಬಜೆಟ್‌ನಲ್ಲಿ ರೈತರು ಹಾಗೂ ರಾಜ್ಯದ ಜನರ ಅಭಿವೃದ್ಧಿಗೆ ಕೊಡುಗೆ ನೀಡಿದ್ದರೆ, ಇಂದು ಸಮಸ್ಯೆಗಳೇ ಇರುತ್ತಿರಲಿಲ್ಲ’ ಎಂದು ತಿರುಗೇಟು ಕೊಟ್ಟರು.

‘ಜನರು ಅವಕಾಶ ಕೊಟ್ಟಾಗ, ಅಭಿವೃದ್ಧಿಗೆ ಶ್ರಮಿಸದೆ ಓಡಿಹೋದರು. ಒಂದು ವೇಳೆ ಆಗ ಸಿದ್ದರಾಮಯ್ಯ ಅಭಿವೃದ್ಧಿ ಕೆಲಸ ಕೈಗೊಂಡಿದ್ದರೆ, 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲುತ್ತಿರಲಿಲ್ಲ’ ಎಂದರು.

ಸದನ ಸುದ್ದಿ

₹ 1,819 ಕೋಟಿ ಜಿಎಸ್‌ಟಿ ವಂಚನೆ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ₹ 1,819 ಕೋಟಿ ಜಿಎಸ್‌ಟಿ ವಂಚನೆ ಪತ್ತೆ ಹಚ್ಚಲಾಗಿದೆ. ತೆರಿಗೆ, ಬಡ್ಡಿ ಹಾಗೂ ದಂಡ ಸೇರಿ ₹ 648.85 ಕೋಟಿ ಸಂಗ್ರಹಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ಕೆ. ರಾಥೋಡ್ ಪ್ರಶ್ನೆಗೆ ಉತ್ತರಿಸಿದ ಅವರು, ತೆರಿಗೆ ವಂಚನೆ, ಸೋರಿಕೆ ತಡೆಗೆ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ನಕಲಿ ದಾಖಲೆಗಳ ಸೃಷ್ಟಿ, ಸೂಕ್ತ ದಾಖಲೆಗಳಿಲ್ಲದೆ ಸರಕು ಸಾಗಣೆ, ಮಾರಾಟ ಮಾಡಿದ ವಸ್ತುಗಳಿಗೆ ಬಿಲ್ ನೀಡದೆ ಇರುವ 11,914 ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ಎಂದರು.

ತೆರಿಗೆ ರಿಯಾಯಿತಿ ಅವಕಾಶ ಪಡೆಯಲು ಒಬ್ಬ ಉದ್ಯಮಿ 200 ಸಣ್ಣ ಸಣ್ಣ ಕಂಪನಿಗಳನ್ನು ತೆರೆದಿದ್ದ ಪ್ರಕರಣ ಪತ್ತೆ ಮಡಲಾಗಿದೆ. ಮಂಗಳೂರಿನಿಂದ ದೆಹಲಿಯವರೆಗೆ ಗುಜರಿ ಸಾಮಗ್ರಿ ಮಾರಾಟ ಜಾಲ ಪತ್ತೆ ಹಚ್ಚಿ, ₹ 800 ಕೋಟಿಗೂ ಹೆಚ್ಚು ತೆರಿಗೆ ವಸೂಲಿ ಮಾಡಲಾಗಿದೆ. ಇಂತಹ ಕ್ರಮಗಳ ಫಲವಾಗಿ ರಾಜ್ಯ ತೆರಿಗೆ ಸಂಗ್ರಹದಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ಮಾಹಿತಿ ನೀಡಿದರು.

42.13 ಲಕ್ಷ ನಲ್ಲಿ ಸಂಪರ್ಕ ಬಾಕಿ: ಜಲಜೀವನ್ ಮಿಷನ್ ಯೋಜನೆ ಅಡಿ 80.72 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸುವ ಗುರಿ ಹೊಂದಲಾಗಿದೆ. 38.8 ಲಕ್ಷ ಮನೆಗಳಿಗೆ ಈಗಾಗಲೇ ಸಂಪರ್ಕ ಕಲ್ಪಿಸಲಾಗಿದೆ. 42.13 ಲಕ್ಷ ಮನೆಗಳ ಸಂಪರ್ಕ ಬಾಕಿ ಇವೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

₹1.07 ಲಕ್ಷ ಕೋಟಿ ಲೇಖಾನುದಾನಕ್ಕೆ ಒಪ್ಪಿಗೆ

ಬೆಂಗಳೂರು: ಏಪ್ರಿಲ್ 1ರಿಂದ ಜುಲೈ ಅಂತ್ಯದವರೆಗೆ ಸರ್ಕಾರ ಮಾಡಲೇಬೇಕಾದ ₹1.07ಲಕ್ಷ ಕೋಟಿ ಮೊತ್ತದ ಲೇಖಾನುದಾನಕ್ಕೆ ವಿಧಾನಸಭೆ ಗುರುವಾರ ಅನುಮೋದನೆ ನೀಡಿತು.

ಇದೇ 17ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2023–24 ಸಾಲಿಗೆ ₹3.09 ಲಕ್ಷ ಕೋಟಿ ಮೊತ್ತದ ಬಜೆಟ್ ಮಂಡಿಸಿದ್ದರು. ಪೂರ್ಣ ಆಯವ್ಯಯ ಮಂಡಿಸಿದ್ದ ಅವರು ಜುಲೈವರೆಗಿನ ವೆಚ್ಚಕ್ಕೆ ಒಪ್ಪಿಗೆ ನೀಡುವಂತೆ ಕೋರಿದ್ದರು.

ಗುರುವಾರ ಧನವಿನಿಯೋಗ ವಿಧೇಯಕ ಮಂಡಿಸಿದ ಅವರು ಲೇಖಾನುದಾನಕ್ಕೆ ಅನುಮತಿ ನೀಡುವಂತೆ ಕೋರಿದರು. ಇದರ ಜತೆಗೆ ಈ ಸಾಲಿನಲ್ಲಿ ಬಜೆಟ್‌ಗೆ ಹೊರತಾಗಿ ಮಾಡಿದ ಹೆಚ್ಚುವರಿ ಮೊತ್ತ ₹11,267 ಕೋಟಿಯ ಪೂರಕ ಅಂದಾಜಿಗೂ ಒಪ್ಪಿಗೆ ನೀಡಲಾಯಿತು.

ಬಿಜೆಪಿಯ ಎಸ್.ಕೇಶವಪ್ರಸಾದ್, ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ₹ 59 ಸಾವಿರ ಕೋಟಿ ಅಂದಾಜು ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಇದುವರೆಗೂ ₹ 7,904 ಕೋಟಿ ಖರ್ಚು ಮಾಡಲಾಗಿದೆ ಎಂದರು.

ನ್ಯಾಯಬೆಲೆ ಅಂಗಡಿ ಮಂಜೂರಾತಿಗೂ ಮೀಸಲಾತಿ

ಬೆಂಗಳೂರು: ನ್ಯಾಯಬೆಲೆ ಅಂಗಡಿ ಮಂಜೂರಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ 24.1ರಷ್ಟು ಮೀಸಲಾತಿ ನೀಡಬೇಕು ಎಂದು ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಶಿಫಾರಸು ಮಾಡಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿಯು ತನ್ನ ಏಳನೇ ವರದಿಯನ್ನು ವಿಧಾನಸಭೆಯಲ್ಲಿ ಗುರುವಾರ ಮಂಡಿಸಿತು.

ಸಿಎಸ್‌ಆರ್ ನಿಧಿಯಲ್ಲಿ ಶೇ 25, ಬೆಳೆ ಪರಿಹಾರ ಮೊತ್ತ ಶೇ 50ರಷ್ಟು ಹೆಚ್ಚಳ, ಬ್ಯಾಂಕ್, ಸಹಕಾರ ಸಂಘಗಳಲ್ಲೂ ಮೀಸಲಾತಿ ನಿಗದಿ, ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಕಟ್ಟಡ, ಹಾಸ್ಟೆಲ್ ಹಾಗೂ ಕಾಲೇಜುಗಳ ನಿರ್ಮಾಣಕ್ಕೆ ಬಳಸದೆ ಪರಿಶಿಷ್ಟ ಸಮುದಾಯದ ಕಲ್ಯಾಣಕ್ಕೆ ಮಾತ್ರ ಬಳಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಬ್ಯಾಕ್‌ಲಾಗ್ ಹುದ್ದೆಗಳ ವಿಷಯದಲ್ಲಿ ಕೆಲ ಕಾಲೇಜುಗಳಿಗೆ ನೋಟಿಸ್ ನೀಡಿದ್ದು, ಪ್ರಾಂಶುಪಾಲರ ವೇತನ ತಡೆಗೆ ನೀಡಿದ ಸೂಚನೆಯನ್ನು ವಾಪಸ್ ಪಡೆಯಬೇಕು. ಪರಿಶಿಷ್ಟ ವಿದ್ಯಾರ್ಥಿಗಳ ಶುಲ್ಕವನ್ನು ಕಾಲೇಜಿಗೆ, ವಿದ್ಯಾರ್ಥಿವೇತನವನ್ನು ನೇರವಾಗಿ ಅವರ ಖಾತೆಗೆ ಜಮ ಮಾಡಬೇಕು ಎಂದು ಶಿಫಾರಸು ಮಾಡಲಾಗಿದೆ.

ಬಿಸಿಯೂಟ ಸಿಬ್ಬಂದಿಗೆ ಕನಿಷ್ಠ ವೇತನಕ್ಕೆ ಆಗ್ರಹ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಸಿಬ್ಬಂದಿಗೆ ಕನಿಷ್ಠ ವೇತನ ನೀಡುವಂತೆ ಶಾಸಕರು ವಿಧಾನಸಭೆಯಲ್ಲಿ ಗುರುವಾರ ಸರ್ಕಾರವನ್ನು ಆಗ್ರಹಿಸಿದರು.

ಜೆಡಿಎಸ್‌ನ ಸಾ.ರಾ. ಮಹೇಶ್ ಪ್ರಶ್ನೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಪ್ರಶ್ನೆಗೆ ಉತ್ತರಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್, ‘ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 97,371 ಅಡುಗೆ ಸಿಬ್ಬಂದಿ ಗೌರವಧನದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದರು.

ಜೆಡಿಎಸ್ ಸಭಾತ್ಯಾಗದ ಮಧ್ಯೆ ‘ಬಿಎಂಎಸ್ ವಿವಿ’ ಮಸೂದೆ ಅನುಮೋದನೆ

ಕನ್ನಡಕ್ಕೆ ಅಗ್ರಸ್ಥಾನ: ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ವಿಧಾನ ಮಂಡಲದಲ್ಲಿ

ಬೆಂಗಳೂರು: ರಾಜ್ಯದಲ್ಲಿ ಕನ್ನಡಕ್ಕೆ ಅಗ್ರಸ್ಥಾನ, ಕನ್ನಡಿಗರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಉತ್ತಮ ಅವಕಾಶ ಕಲ್ಪಿಸಲು ‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ–2022’ ರೂಪಿಸುವ ಉದ್ದೇಶದಿಂದ ಸರ್ಕಾರ ಮಂಡಿಸಿದ ಮಸೂದೆ ವಿಧಾನಸಭೆಯಲ್ಲಿ ಗುರುವಾರ ಅಂಗೀಕಾರಗೊಂಡಿತು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಮಸೂದೆಯನ್ನು ಮಂಡಿಸಿದರು. ಸೆಪ್ಟೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಇದೇ ಮಸೂದೆಯನ್ನು ಮಂಡಿಸಲಾಗಿತ್ತು. ಆಗ ಸಾರ್ವಜನಿಕ ವಲಯದಿಂದ ಕೆಲವು ಆಕ್ಷೇಪಣೆಗಳು, ಸಲಹೆಗಳು ಬಂದ ಕಾರಣ, ಅದರಲ್ಲಿನ ಕೆಲವು ಅಂಶಗಳನ್ನು ತಿದ್ದುಪಡಿ ಮಾಡಿ ಮತ್ತೆ ಮಂಡಿಸಲಾಯಿತು.

ಕರ್ನಾಟಕದಲ್ಲಿ ಅಥವಾ ಇತರ ಯಾವುದೇ ರಾಜ್ಯದಲ್ಲಿ ಕನ್ನಡ ಮಾಧ್ಯಮದಲ್ಲಿ 1ನೇ ತರಗತಿಯಿಂದ 10ನೇ ತರಗತಿವರೆಗೆ ಓದಿದ ವಿದ್ಯಾರ್ಥಿಗಳಿಗೆ ಉನ್ನತ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣದಲ್ಲಿ ರಾಜ್ಯ ಸರ್ಕಾರ ಮೀಸಲಾತಿ ನೀಡಲು ಮಸೂದೆ ಅವಕಾಶ ಕಲ್ಪಿಸಲಿದೆ. ಅಲ್ಲದೆ, ರಾಜ್ಯ ಸರ್ಕಾರ ಅಥವಾ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಕನ್ನಡ ಭಾಷಾ ಜ್ಞಾನ ಕಡ್ಡಾಯಗೊಳಿಸಲಿದೆ. ಕನ್ನಡವನ್ನು ಅಧಿಕೃತ ರಾಜ್ಯ ಭಾಷೆ ಎಂದು ತೀರ್ಮಾನಿಸುವ, ಸರ್ಕಾರದ ಎಲ್ಲ ವ್ಯವಹಾರಗಳಲ್ಲಿ, ನ್ಯಾಯಾಲಯಗಳಲ್ಲಿ ಕನ್ನಡ ಬಳಕೆ ಕಡ್ಡಾಯಗೊಳಿಸುವ ಪ್ರಸ್ತಾವ ಮಸೂದೆಯಲ್ಲಿದೆ.

ಮಸೂದೆಯಲ್ಲಿರುವ ಅಂಶಗಳನ್ನು ಜಾರಿಗೊಳಿಸಲು ರಾಜ್ಯಮಟ್ಟದ ಸಮಿತಿ ರಚನೆಯಾಗಲಿದೆ. ಸಮಿತಿಯಲ್ಲಿ ಅಧಿಕಾರಿಗಳು ಮತ್ತು ಸಚಿವರು ಇರಲಿದ್ದಾರೆ. ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಈ ಸಮಿತಿಗೆ ಅಧಿಕಾರ ನೀಡಲಾಗಿದೆ. ಈ ಸಮಿತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳು ಆಹ್ವಾನಿತ ಸದಸ್ಯರಾಗಿರುತ್ತಾರೆ.

‘ಬಿಎಂಎಸ್ ವಿ.ವಿ’ ಮಸೂದೆಗೆ ಜೆಡಿಎಸ್ ವಿರೋಧ: ಬಿಎಂಎಸ್ ಎಜುಕೇಷನಲ್ ಟ್ರಸ್ಟ್‌ನ ಅಡಿಯಲ್ಲಿ ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಅವಕಾಶ ಕಲ್ಪಿಸಲು ‘ಬಿಎಂಎಸ್ ವಿಶ್ವವಿದ್ಯಾಲಯ ಕಾಯ್ದೆ –2023’ ರೂಪಿಸುವ ಉದ್ದೇಶದಿಂದ ಮಂಡಿಸಿದ ಮಸೂದೆ ಜೆಡಿಎಸ್ ಸದಸ್ಯರ ಸಭಾತ್ಯಾಗದ ಮಧ್ಯೆಯೇ ಅಂಗೀಕಾರಗೊಂಡಿತು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಮಸೂದೆ ಮಂಡಿಸುತ್ತಿದ್ದಂತೆ ತೀವ್ರ ವಿರೋಧ ವ್ಯಕ್ತಪಡಿಸಿದ ಜೆಡಿಎಸ್ ಸದಸ್ಯರು, ‘ಟ್ರಸ್ಟಿಗಳ ನೇಮಕ, ಜಮೀನು ವ್ಯವಹಾರದಲ್ಲಿ ಭಾರಿ ಅಕ್ರಮ ನಡೆದಿದ್ದು, ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಅವಕಾಶ ನೀಡಬಾರದು’ ಎಂದು ಪಟ್ಟು ಹಿಡಿದರು. ಆಗ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಟ್ರಸ್ಟ್‌ನ ಭೂ ವಿವಾದಕ್ಕೂ ವಿಶ್ವವಿದ್ಯಾಲಯ ಸ್ಥಾಪನೆಗೂ ಯಾವುದೇ ಸಂಬಂಧ ಇಲ್ಲ’ ಎಂದು ಸಮರ್ಥಿಸಿದರು. ಸರ್ಕಾರದ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ವೃತ್ತಿಪರ ತೆರಿಗೆ ಕಾಯ್ದೆ ತಿದ್ದುಪಡಿಗೆ ಮಸೂದೆ: 2023–24ನೇ ಬಜೆಟ್‌ನಲ್ಲಿ ಘೋಷಿಸಿದಂತೆ ಕಡಿಮೆ ವರಮಾನದ ವರ್ಗಕ್ಕೆ ಪರಿಹಾರ ನೀಡಲು ಸಂಬಳ ಅಥವಾ ಮಜೂರಿಯನ್ನು ಪಡೆಯುವ ನೌಕರರಿಗೆ ತೆರಿಗೆ ವಿನಾಯಿತಿಯನ್ನು ₹ 15 ಸಾವಿರದಿಂದ ₹ 25 ಸಾವಿರಕ್ಕೆ ಏರಿಸುವ ಉದ್ದೇಶದಿಂದ ವೃತ್ತಿಪರ ತೆರಿಗೆ ಕಾಯ್ದೆ ತಿದ್ದುಪಡಿಗೆ ಮಂಡಿಸಿದ ‘ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ)–2023’ ಮಸೂದೆಗೂ ವಿಧಾನಸಭೆ ಅಂಗೀಕಾರ ನೀಡಿತು.

ವಕೀಲರ ರಕ್ಷಣಾ ಮಸೂದೆಗೆ ಒಪ್ಪಿಗೆ

ವಕೀಲರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಡೆಯುವ ಉದ್ದೇಶದಿಂದ ರಾಜ್ಯ ಸರ್ಕಾರ ಮಂಡಿಸಿರುವ ‘ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಮಸೂದೆ–2023’ಕ್ಕೆ ವಿಧಾನಸಭೆ ಅಂಗೀಕಾರ ನೀಡಿದೆ ಅಂಗೀಕಾರ ನೀಡಿದೆ.

ವಕೀಲರ ರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸುವಂತೆ ರಾಜ್ಯದಾದ್ಯಂತ ವಕೀಲರ ಸಂಘ ಮತ್ತು ಪರಿಷತ್ ಸರ್ಕಾರವನ್ನು ಪದೇ ಪದೇ ಆಗ್ರಹಿಸಿದ್ದವು.

ಮರು ನೇಮಕವಾದ ನೌಕರರಿಗೂ ಹಳೇ ಪಿಂಚಣಿ: ಸಿ.ಎಂ

ಬೆಂಗಳೂರು: ಏಪ್ರಿಲ್ 2006ಕ್ಕೂ ಮೊದಲು ಸರ್ಕಾರಿ ಸೇವೆಗೆ ಸೇರಿ ನಂತರ ಇತರೆ ಇಲಾಖೆಗಳಲ್ಲಿನ ಬೇರೆ ಹುದ್ದೆಗಳಿಗೆ ಮರು ನೇಮಕವಾದವರಿಗೂ (ಇನ್ ಸರ್ವಿಸ್) ಹಳೇ ಪಿಂಚಣಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿಯ ಆಯನೂರು ಮಂಜುನಾಥ್ ಪ್ರಶ್ನೆಗೆ ಉತ್ತರಿಸಿ, ಒಂದು ಅಧಿಸೂಚನೆ ಅಡಿ ಸೇವಾ ಸಕ್ರಮಾತಿ ಹೊಂದಿದ ಅನುದಾನಿತ ಕಾಲೇಜುಗಳ ಉಪನ್ಯಾಸಕರಿಗೆ ಒಂದೇ ಪಿಂಚಣಿ ನಿಯಮ ಅನ್ವಯಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಅನುದಾನಕ್ಕೆ ಒಳಪಟ್ಟ ಸಮಯದಲ್ಲಿ ನೇಮಕವಾಗಿ 2006ರ ನಂತರ ಆದೇಶ ಪಡೆದ ಉಪನ್ಯಾಸಕರನ್ನು ಹಳೆಯ ಪಿಂಚಣಿ ಯೋಜನೆಗೆ ಒಳಪಡಿಸುವ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಅಲ್ಪಸಂಖ್ಯಾತರು ಸಂಪಾದಕರಾಗಿರುವ ಪತ್ರಿಕೆಗಳಿಗೂ ಪ್ರೋತ್ಸಾಹಕ ಜಾಹೀರಾತು ನೀಡುವ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಕಾಂಗ್ರೆಸ್‌ನ ಕೆ.ಅಬ್ದುಲ್ ಜಬ್ಬಾರ್ ಅವರಿಗೆ ಭರವಸೆ ನೀಡಿದರು.

ಸೇವೆ ಕಾಯಂ ಅಸಾಧ್ಯ: ಸಚಿವ ಸುಧಾಕರ್

‘ಎನ್‌ಎಚ್‌ಎಂ: ವೇತನ ಹೆಚ್ಚಳಕ್ಕೆ ಪ್ರಸ್ತಾವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ (ಎನ್‌ಎಚ್‌ಎಂ) ಗುತ್ತಿಗೆ ಮತ್ತು ಹೊರ ಗುತ್ತಿಗೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ವೇತನವನ್ನು ಶೇಕಡ 15ರಷ್ಟು ಹೆಚ್ಚಿಸುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಬಿಜೆಪಿಯ ಪೂರ್ಣಿಮಾ ಕೆ. ಅವರ ಪ್ರಶ್ನೆಗೆ ವಿಧಾನಸಭೆಯಲ್ಲಿ ಗುರುವಾರ ಉತ್ತರಿಸಿದ ಅವರು, ‘ಎನ್‌ಎಚ್‌ಎಂನಲ್ಲಿ 21,542 ಸಿಬ್ಬಂದಿ ನೇರವಾಗಿ ಸರ್ಕಾರದ ಅಡಿ ಗುತ್ತಿಗೆಯಲ್ಲಿ ಮತ್ತು 3,494 ಸಿಬ್ಬಂದಿ ಹೊರ ಗುತ್ತಿಗೆಯಡಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಹಲವು ಬೇಡಿಕೆಗಳನ್ನು ಈಗಾಗಲೇ ಈಡೇರಿಸಲಾಗಿದೆ. ಈಗ ವೇತನ ಹೆಚ್ಚಳಕ್ಕೆ ಪ್ರಕ್ರಿಯೆ ಆರಂಭಿಸಲಾಗಿದೆ’ ಎಂದರು.

ಪೂರ್ಣಿಮಾ ಮಾತನಾಡಿ, ‘ಎನ್‌ಎಚ್‌ಎಂ ಸಿಬ್ಬಂದಿಗೆ ವೇತನ ಪಾವತಿಯಲ್ಲಿ ವಂಚನೆಯಾಗುತ್ತಿದೆ. ಭವಿಷ್ಯನಿಧಿ ಮತ್ತು ಕಾರ್ಮಿಕ ವಿಮಾ ನಿಗಮದ ಕಂತು ಪಾವತಿಸುತ್ತಿಲ್ಲ. ಈ ಸಿಬ್ಬಂದಿಯ ಮೇಲೆ ದೌರ್ಜನ್ಯ ನಡೆಯುತ್ತಿದೆ. ಹಲವು ದಿನಗಳಿಂದ ಮುಷ್ಕರ ನಡೆಸುತ್ತಿರುವ ಅವರ ಬೇಡಿಕೆಗಳನ್ನು ಈಡೇರಿಸಬೇಕು’ ಎಂದರು.

ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಮಾತನಾಡಿ, ‘ಒಡಿಶಾ, ಪಂಜಾಬ್, ರಾಜಸ್ಥಾನ, ಹಿಮಾಚಲ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಎನ್‌ಎಚ್‌ಎಂ ಸಿಬ್ಬಂದಿಯ ಸೇವೆ ಕಾಯಂಗೊಳಿಸಲಾಗಿದೆ. ನಮ್ಮ ರಾಜ್ಯದಲ್ಲೂ ಅವರ ಸೇವೆ ಕಾಯಂ ಮಾಡಬೇಕು’ ಎಂದು ಆಗ್ರಹಿಸಿದರು.

ಪ್ರತಿಕ್ರಿಯಿಸಿದ ಸುಧಾಕರ್, ‘ಎನ್‌ಎಚ್‌ಎಂ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸೀಮಿತವಾಗಿ ಈ ಸಿಬ್ಬಂದಿ ನೇಮಿಸಲಾಗಿದೆ. ಹೊರ ಗುತ್ತಿಗೆಯಲ್ಲಿರುವ 3,494 ಸಿಬ್ಬಂದಿಯನ್ನೂ ನೇರ ಗುತ್ತಿಗೆ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳಲಾಗುವುದು. ಸೇವೆ ಕಾಯಂ ಮಾಡುವುದು ಅಸಾಧ್ಯ’ ಎಂದರು.

ಸದನದಲ್ಲಿ ಪ್ರತಿಧ್ವನಿಸಿದ ವೈದ್ಯರ ಕೊರತೆ

ಬೆಂಗಳೂರು: ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವ ವಿಷಯ ಗುರುವಾರ ವಿಧಾನಸಭೆಯಲ್ಲಿ ಪ್ರತಿಧ್ವನಿಸಿತು.

ಕಾಂಗ್ರೆಸ್‌ನ ಯಶವಂತರಾಯಗೌಡ ಪರವಾಗಿ ವಿರೋಧ ಪಕ್ಷದ ಮುಖ್ಯ ಸಚೇತಕ ಡಾ. ಅಜಯ್ ಸಿಂಗ್ ಮತ್ತು ಬಿಜೆಪಿಯ ಹರತಾಳು ಹಾಲಪ್ಪ ಪ್ರತ್ಯೇಕವಾಗಿ ಆರೋಗ್ಯ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದರು. ಎರಡೂ ಸಂದರ್ಭಗಳಲ್ಲಿ ವೈದ್ಯರ ಕೊರತೆ ಕುರಿತು ಚರ್ಚೆ ನಡೆಯಿತು.

‘ಕಲ್ಯಾಣ ಕರ್ನಾಟಕ ಭಾಗದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರು ಸೇವೆ ಸಲ್ಲಿಸಲು ಹಿಂದೇಟು ಹಾಕುತ್ತಾರೆ’ ಎಂದರು. ‘ವೈದ್ಯರು ನಗರ ಪ್ರದೇಶದಲ್ಲಿ ಇರಲು ಬಯಸುತ್ತಾರೆ. ಹೀಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಕೊರತೆ ಇದೆ’ ಎಂದು ಸುಧಾಕರ್ ಉತ್ತರಿಸಿದರು.

ಸಾಗರ ಉಪ ವಿಭಾಗೀಯ ಆಸ್ಪತ್ರೆಗೆ ಸಂಬಂಧಿಸಿದ ಪ್ರಶ್ನೆ ವೇಳೆಯೂ ವೈದ್ಯರ ಕೊರತೆ ಪ್ರಸ್ತಾಪಿಸಿದ ಹಾಲಪ್ಪ, ‘ವೈದ್ಯರಿಗೆ ವೇತನ ಕಡಿಮೆ ಇದೆ. ಪ್ರಾಧ್ಯಾಪಕರು, ಐಎಎಸ್ ಅಧಿಕಾರಿಗಳಿಗೆ ಲಕ್ಷಗಟ್ಟಲೆ ಸಂಬಳ ನೀಡಲಾಗುತ್ತಿದೆ. ವೈದ್ಯರಿಗೆ ₹ 40,000ದಿಂದ ₹ 90,000 ಮಾತ್ರ ಇದೆ. ವೈದ್ಯರಿಗೂ ಹೆಚ್ಚಿನ ವೇತನ ನೀಡಬೇಕು’ ಎಂದು ಆಗ್ರಹಿಸಿದರು.

ಬಿಜೆಪಿಯ ಕಳಕಪ್ಪ ಬಂಡಿ ಕೂಡ ಈ ಬೇಡಿಕೆ ಬೆಂಬಲಿಸಿದರು.

ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಮಾತನಾಡಿ, ‘ವೈದ್ಯರ ವೇತನ ಈಗ ಹಿಂದಿಗಿಂತ ಹೆಚ್ಚಾಗಿದೆ. ವೇತನಕ್ಕಿಂತಲೂ ಅವರಿಗೆ ಸರಿಯಾದ ಗೌರವ ನೀಡಬೇಕು. ದೌರ್ಜನ್ಯ ತಡೆಯಬೇಕು. ಆಗ ಹೆಚ್ಚಿನ ವೈದ್ಯರು ಸರ್ಕಾರಿ ಸೇವೆಗೆ ಬರುತ್ತಾರೆ’ ಎಂದರು.

‘ತಾಲ್ಲೂಕಿಗೊಬ್ಬ ವಿಧಿವಿಜ್ಞಾನ ಅಧಿಕಾರಿ’

ಬೆಂಗಳೂರು: ವಿಧಿ ವಿಜ್ಞಾನ ತಜ್ಞರಾಗಿರುವ 206 ‘ಸೀನ್ ಆಫ್ ಕ್ರೈಮ್ ಅಧಿಕಾರಿ’ಗಳನ್ನು ನೇಮಕ ಮಾಡಿಕೊಂಡಿದ್ದು, ಪ್ರತಿ ತಾಲ್ಲೂಕಿಗೆ ಒಬ್ಬರನ್ನು ನಿಯೋಜಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಕಾಂಗ್ರೆಸ್‌ನ ಸಿ. ಪುಟ್ಟರಂಗ ಶೆಟ್ಟಿ ಅವರ ಪರವಾಗಿ ಆರ್. ನರೇಂದ್ರ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದ ಹಲವು ಜಿಲ್ಲೆಗಳಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯ ಸ್ಥಾಪಿಸುವ ಯೋಜನೆ ಇದೆ. ಅಪರಾಧ ಕೃತ್ಯ ನಡೆದ ಸ್ಥಳದಲ್ಲಿ ವೈಜ್ಞಾನಿಕವಾಗಿ ಸಾಕ್ಷ್ಯ ಸಂಗ್ರಹಿಸಲು ವಿಧಿ ವಿಜ್ಞಾನ ಅಧಿಕಾರಿಗಳನ್ನು ನೇಮಿಸಲಾಗುವುದು’ ಎಂದರು. ಸ್ವಾತಂತ್ರ್ಯ ನಂತರದಲ್ಲಿ ಹಿಂದೆಂದೂ ಆಗದಷ್ಟು ಠಾಣೆಗಳ ಕಟ್ಟಡ ನಿರ್ಮಾಣ, ಪೊಲೀಸ್ ವಸತಿ ಗೃಹಗಳ ನಿರ್ಮಾಣ ಈ ಅವಧಿಯಲ್ಲಿ ಆಗಿದೆ ಎಂದರು.

ಅರ್ಕಾವತಿ ರೀಡೂ: ತಪ್ಪಿತಸ್ಥರನ್ನು ಜೈಲಿಗೆ ಅಟ್ಟುತ್ತೇವೆ– ಬೊಮ್ಮಾಯಿ

ಒಂದನೇ ಪುಟದಿಂದ...

‘ಅರ್ಕಾವತಿ ರೀಡೂದಲ್ಲಿ ರಾಜಕಾರಣಿಗಳು, ಭೂಮಾಫಿಯಾ, ಅಧಿಕಾರಿಗಳು ಸೇರಿ ಮಾಡಿದ್ದಾರೆ. ಇದೊಂದು ಮಾಯಾಜಾಲ ಎಂದು ವರದಿ ಸ್ಪಷ್ಟವಾಗಿ ಉಲ್ಲೇಖಿಸಿದೆ. ಹೀಗಾಗಿ ಇದೊಂದು ಸ್ಕೀಮ್ ಅಲ್ಲ ಸ್ಕ್ಯಾಮ್’ ಎಂದು ಬೊಮ್ಮಾಯಿ ಹೇಳಿದಾಗ ಬಿಜೆಪಿ ಸದಸ್ಯರು ‘ಶೇಮ್ ಶೇಮ್’ ಎಂದು ಘೋಷಣೆ ಕೂಗಿದರು. ಈ ವೇಳೆ ಸದನದಲ್ಲಿದ್ದ ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್, ಕೆ.ಜೆ. ಜಾರ್ಜ್ ಮತ್ತು ಅಜಯ್ ಸಿಂಗ್ ಅವರು ಮುಖ್ಯಮಂತ್ರಿಯವರ ಮಾತುಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ‘ನೀವು ಕೆಂಪಣ್ಣ ವರದಿಯನ್ನು ಸದನದಲ್ಲಿ ಮಂಡಿಸಿ ಮಾತನಾಡಬೇಕೇ ಹೊರತು, ಬಜೆಟ್ ಉತ್ತರದ ಸಂದರ್ಭದಲ್ಲಿ ಪ್ರಸ್ತಾಪಿಸಿರುವುದು ಸರಿಯಲ್ಲ’ ಎಂದು ತಿರುಗೇಟು ನೀಡಿದರು.

‘ನಿಮ್ಮ ನಾಯಕರು(ಸಿದ್ದರಾಮಯ್ಯ) ಪ್ರಸ್ತಾಪಿಸಿದ್ದಕ್ಕೇ, ನಾನೂ ಈ ವಿಷಯ ಪ್ರಸ್ತಾಪಿಸಿದ್ದೇನೆ. ಅವರು ಇವತ್ತು ಇಲ್ಲಿರಬೇಕಿತ್ತು. ಸಿದ್ದರಾಮಯ್ಯ ಅವರು ಸಂಪುಟಕ್ಕೆ ತಂದು ಬಳಿಕ ವರದಿಯನ್ನು ಮುಚ್ಚಿಟ್ಟಿದ್ದೇಕೆ? ಈ ಹಗರಣ ಬಡ ರೈತರ ಕಣ್ಣಲ್ಲಿ ನೀರು ತರಿಸಿದರೆ, ಭೂಮಾಫಿಯಾದ ಮುಖದಲ್ಲಿ ನಗು ತರಿಸಿದೆ. ಆ ಸಂದರ್ಭದಲ್ಲಿ ಅರ್ಕಾವತಿ ಬಡಾವಣೆ ಪ್ರದೇಶದಲ್ಲಿ ಒಂದು ಎಕರೆಗೆ ₹10 ಕೋಟಿ ಇತ್ತು. 868 ಎಕರೆ ಎಂದರೆ ಸುಮಾರು ₹8000 ಕೋಟಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ಇದು ಯಾರ ಖಜಾನೆ ಮತ್ತು ಜೇಬಿಗೆ ಹೋಗಿದೆ’ ಎಂದು ಕಾಂಗ್ರೆಸ್ ಸದಸ್ಯರನ್ನು ಪ್ರಶ್ನಿಸಿದರು.



ಸದನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು

‘ಕೆಂಪಣ್ಣ ಅವರ ವರದಿಯಲ್ಲಿರುವುದನ್ನು ಉಲ್ಲೇಖಿಸಿ ದಾಖಲೆಗಳ ಸಮೇತ ಹೇಳುತ್ತಿದ್ದೇನೆ. ಆದರೆ, ನೀವು ಆಧಾರ ರಹಿತ ಕೆಂಪಣ್ಣ ಎಂಬ ಗುತ್ತಿಗೆದಾರನ ಒಂದು ಪತ್ರವನ್ನು ಇಟ್ಟುಕೊಂಡು ಶೇ 40 ಲಂಚದ ಸುಳ್ಳು ಆರೋಪಗಳನ್ನು ಮಾತನಾಡುತ್ತಿದ್ದೀರಿ. ಈವರೆಗೂ ಒಂದು ತುಂಡು ಸಾಕ್ಷ್ಯ ನೀಡಲು ಸಾಧ್ಯವಾಗಿಲ್ಲ. ನಾನು ಜಸ್ಟಿಸ್ ಕೆಂಪಣ್ಣ ಆಯೋಗದ ವರದಿಯನ್ನು ಉಲ್ಲೇಖಿಸಿ ಮಾತನಾಡುತ್ತಿದ್ದೇನೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ. ಸತ್ಯ ಬಯಲಿಗೆ ಬಂದಿದೆ. ಇದು ನಮಗೆ ಮತ್ತು ನಿಮಗೆ ಇರುವ ವ್ಯತ್ಯಾಸ’ ಎಂದರು.

ಬೊಮ್ಮಾಯಿ ಅವರ ಹೇಳಿಕೆಯನ್ನು ಆಕ್ಷೇಪಿಸಿ ಜಾರ್ಜ್ ಏರಿದ ಧ್ವನಿಯಲ್ಲಿ ಮಾತನಾಡಿದಾಗ, ‘ಏಕೆ ಕುಣಿಯುತ್ತೀರಿ, ಕಾಲಿಗೆ ಸ್ಪ್ರಿಂಗ್ ಕಟ್ಟಿಕೊಂಡಿದ್ದೀರಾ? ಸತ್ಯವನ್ನು ಎದುರಿಸುವ ಧೈರ್ಯ ಇರಬೇಕು’ ಎಂದು ಬೊಮ್ಮಾಯಿ ನಗುತ್ತಲೇ ಲೇವಡಿ ಮಾಡಿದರು.

ಜೆಡಿಎಸ್‌ನ ಸಾ.ರಾ.ಮಹೇಶ್ ಮಧ್ಯ ಪ್ರವೇಶಿಸಿ, ‘ರೀಡೂ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು’ ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಮುಂದಿನ ದಿನಗಳಲ್ಲಿ ಸದನದಲ್ಲಿ ಈ ವರದಿಯನ್ನು ಮಂಡಿಸಬೇಕು ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಭ್ರಷ್ಟಾಚಾರ ಪರ: ಸಿದ್ದರಾಮಯ್ಯ ಸರ್ಕಾರ ಲೋಕಾಯುಕ್ತವನ್ನು ರದ್ದು ಮಾಡಿ ಎಸಿಬಿ ರಚನೆ ಮಾಡಿರುವ ಬಗ್ಗೆ ಹೈಕೋರ್ಟ್ ಛೀಮಾರಿ ಹಾಕಿದೆ. ಈಗಲೂ ನಿಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುತ್ತೀರಿ ಎಂದರೆ, ನೀವು ಭ್ರಷ್ಟಚಾರದ ಪರ ಇದ್ದೀರಿ ಎಂದು ಬೊಮ್ಮಾಯಿ ಅವರು ಜಾರ್ಜ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಿಮಗೆ ನೆರವಾಗುವವರನ್ನು ಮರೆಯದಿರಿ. ನಿಮ್ಮನ್ನು ಪ್ರೀತಿಸುವವರನ್ನು ದ್ವೇಷಿಸದಿರಿ. ನಿಮ್ಮನ್ನು ನಂಬಿದವರನ್ನು ಮೋಸಗೊಳಿಸದಿರಿ. - ಸ್ವಾಮಿ ವಿವೇಕಾನಂದ

ಅಣ್ವಸ್ತ್ರ ನಿಯಂತ್ರಣ ಕರಾರು ಅಮೆರಿಕ– ರಷ್ಯಾ ಕೈಬಿಡಬಾರದು

'ನ್ಯೂ ಸ್ಟಾರ್ಟ್' ಎಂದು ಕರೆಯಲಾಗುವ ನ್ಯೂ ಸ್ಟ್ರಾಟೆಜಿಕ್ ಆರ್ಮ್ಸ್ ರಿಡಕ್ಷನ್ ಟ್ರೀಟಿಯನ್ನು (ಸಮರ ಶಸ್ತ್ರಾಸ್ತ್ರ ಕಡಿತ ಹೊಸ ಕರಾರು) ಅಮಾನತಿನಲ್ಲಿ ಇರಿಸುವುದಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಘೋಷಿಸಿದ್ದಾರೆ. ಇದರೊಂದಿಗೆ ಅಮೆರಿಕ-ರಷ್ಯಾ ನಡುವೆ ಆಗಿದ್ದ ಅಣ್ವಸ್ತ್ರ ಕಡಿತದ ಕೊನೆಯ ಒಪ್ಪಂದ ಕೂಡ ಗಂಡಾಂತರಕ್ಕೆ ಸಿಲುಕಿದೆ. ಶೀತಲ ಸಮರ ಕಾಲದಲ್ಲಿ ಅಣು ಯುದ್ಧದ ಭೀತಿಯಲ್ಲಿದ್ದ ಜಗತ್ತಿಗೆ ಇಂತಹ ಒಪ್ಪಂದಗಳು ಚಿತ್ತಸ್ವಾಸ್ಥ್ಯ ಮತ್ತು ಸ್ಥಿರತೆ ತಂದಿದ್ದವು; ಪಾರದರ್ಶಕತೆ ಮತ್ತು ಪರಸ್ಪರ ವಿಶ್ವಾಸವನ್ನೂ ಮೂಡಿಸಿದ್ದವು. ಎರಡೂ ದೇಶಗಳು ಒಂದರ ನಂತರ ಒಂದರಂತೆ ಒಪ್ಪಂದಗಳಿಂದ ಹಿಂದೆ ಸರಿಯುವ ಮೂಲಕ ಈ ಮೊದಲೇ ಅತ್ಯಂತ ನಾಜೂಕು ಸ್ಥಿತಿಯಲ್ಲಿದ್ದ ಸ್ಥಿರತೆಯನ್ನು ವ್ಯವಸ್ಥಿತವಾಗಿ ಹಾಳು ಮಾಡಿವೆ. ಡೊನಾಲ್ಡ್ ಟ್ರಂಪ್ ಅವರು ಅಧ್ಯಕ್ಷರಾಗಿದ್ದಾಗ ಮಧ್ಯಂತರ ಅಣ್ವಸ್ತ್ರ ಬಳಕೆ ನಿಷೇಧ ಒಪ್ಪಂದದಿಂದ ಅಮೆರಿಕ ಹಿಂದಕ್ಕೆ ಸರಿಯಿತು. ಜೋ ಬೈಡನ್ ಅವರು ಅಮೆರಿಕದ ಅಧ್ಯಕ್ಷರಾದ ಬಳಿಕ ಓಪನ್ ಸ್ಕೈಸ್ ಟ್ರೀಟಿಯನ್ನು (ಸದಸ್ಯ ರಾಷ್ಟ್ರಗಳು ಪರಸ್ಪರರ ವಾಯು ಪ್ರದೇಶದಲ್ಲಿ ಶಸ್ತ್ರಾಸ್ತ್ರ ರಹಿತ ವಿಮಾನಗಳ ಮೂಲಕ ಪರಿಶೀಲನೆ ನಡೆಸುವ ಅವಕಾಶ) ನವೀಕರಿಸಲು ನಿರಾಕರಿಸಿದರು. ಈಗ, ಪುಟಿನ್ ಅವರು ನ್ಯೂ ಸ್ಟಾರ್ಟ್ ಕರಾರನ್ನು ಅಮಾನತಿನಲ್ಲಿ ಇರಿಸಿದ್ದಾರೆ.

ಅಣ್ವಸ್ತ್ರ ನಿಯಂತ್ರಣ ಕರಾರುಗಳನ್ನು ಸ್ಥಗಿತಗೊಳಿಸುವುದು ಹೊಣೆಗಾರಿಕೆಯ ನಡೆ ಅಲ್ಲ

1991ರಲ್ಲಿ ಸಹಿ ಮಾಡಲಾಗಿದ್ದ 'ಸ್ಟಾರ್ಟ್' ಒಪ್ಪಂದದ ಬದಲಿಗೆ ನ್ಯೂ ಸ್ಟಾರ್ಟ್ ಒಪ್ಪಂದಕ್ಕೆ ಅಮೆರಿಕ ಮತ್ತು ರಷ್ಯಾ 2010ರಲ್ಲಿ ಸಹಿ ಹಾಕಿದ್ದವು. ಅದರ ಮರು ವರ್ಷ ಅದು ಜಾರಿಗೆ ಬಂದಿತ್ತು. ಅಣ್ವಸ್ತ್ರಗಳು ಮತ್ತು ಉಡ್ಡಯನ ವೇದಿಕೆಗಳ ಸಂಖ್ಯೆಯನ್ನು ಎರಡೂ ದೇಶಗಳು ಕ್ರಮವಾಗಿ 1,550 ಮತ್ತು 700ಕ್ಕೆ ಸೀಮಿತಗೊಳಿಸಿಕೊಳ್ಳಬೇಕು ಎಂಬುದು ಈ ಒಪ್ಪಂದದ ಗುರಿಯಾಗಿದೆ. ಈ ಒಪ್ಪಂದವನ್ನು ಐದು ವರ್ಷಗಳ ಅವಧಿಗೆ 2021ರಲ್ಲಿ ವಿಸ್ತರಿಸಲಾಗಿತ್ತು. ಹಾಗಿದ್ದರೂ ಈ ಕರಾರು ಉಳಿಯುವ ವಿಚಾರವು ಅನಿಶ್ಚಿತವೇ ಆಗಿತ್ತು. ಈ ಒಪ್ಪಂದವು ಯುದ್ಧರಂಗವಲ್ಲದ ಕಡೆಯೂ ದಾಳಿ ನಡೆಸಲು ಬಳಸುವ ಅಣ್ವಸ್ತ್ರಗಳಿಗೆ ಅನ್ವಯವಾಗುತ್ತದೆಯೇ ಹೊರತು ಯುದ್ಧರಂಗದಲ್ಲಿ ಬಳಸುವ ಅಣ್ವಸ್ತ್ರಗಳಿಗೆ ಅಲ್ಲ. ಈ ಕಾರಣಕ್ಕಾಗಿಯೇ ಒಪ್ಪಂದವನ್ನು ಮರುರೂಪಿಸಬೇಕು ಎಂದು ಟ್ರಂಪ್ ಬಯಸಿದ್ದರು. ಉಕ್ರೇನ್ ಮೇಲೆ ಯುದ್ಧ ಆರಂಭಿಸಿದ ಬಳಿಕ, ತನ್ನ ನೆಲೆಗಳ ಪರಿಶೀಲನೆಗೆ ಅಮೆರಿಕಕ್ಕೆ ಅವಕಾಶ ಕೊಡಲು ರಷ್ಯಾ ಹಿಂದೇಟು ಹಾಕುತ್ತಿದೆ.

ನ್ಯೂ ಸ್ಟಾರ್ಟ್ ಕರಾರು ಯಶಸ್ವಿ ಆಗಿತ್ತು. ಕರಾರಿನಲ್ಲಿ ನಿಗದಿ ಮಾಡಲಾಗಿದ್ದ 2018ರ ಗಡುವಿನ ಹೊತ್ತಿಗೆ ಎರಡೂ ದೇಶಗಳು ನಿಯೋಜಿಸಿದ್ದ ಅಣ್ವಸ್ತ್ರಗಳು ಮತ್ತು ಕ್ಷಿಪಣಿಗಳನ್ನು ಒಪ್ಪಿತ ಸಂಖ್ಯೆಗೆ ಇಳಿಸಿದ್ದವು. ಹಾಗಾಗಿಯೇ ಈ ಕರಾರು ಸ್ಥಗಿತಗೊಂಡಿರುವುದು ದುರದೃಷ್ಟಕರ ಎನಿಸುತ್ತದೆ. ಹಾಗಿದ್ದರೂ ಸನ್ನಿವೇಶವು ನಿರಾಶಾದಾಯಕವೇನೂ ಅಲ್ಲ. ರಷ್ಯಾವು ಕರಾರನ್ನು ಅಮಾನತಿನಲ್ಲಿ ಇರಿಸಿದೆಯೇ ಹೊರತು ಅದರಿಂದ ಹೊರಗೆ ಬಂದಿಲ್ಲ. ಕರಾರನ್ನು ಅಮಾನತಿನಲ್ಲಿ ಇರಿಸಿದ ನಿರ್ಧಾರದಿಂದ ಹಿಂದಕ್ಕೆ ಸರಿಯುವ ಅವಕಾಶ ಇದೆ ಎಂಬುದನ್ನೂ ರಷ್ಯಾ ಸ್ಪಷ್ಟಪಡಿಸಿದೆ. ಅಂದರೆ, ಕರಾರನ್ನು ಮರಳಿ ಜಾರಿಗೆ ತರುವುದಕ್ಕಾಗಿ ಸಂಧಾನ ನಡೆಸಲು ಅವಕಾಶ ಇದೆ ಎಂದು ಅರ್ಥ. ಉಕ್ರೇನ್ ಜೊತೆಗೆ ತಾವು ನಡೆಸುತ್ತಿರುವ ಯುದ್ಧವನ್ನು ತಮಗೆ ಬೇಕಿರುವ ರೀತಿಯಲ್ಲಿ ಕೊನೆಗೊಳಿಸಲು ಸಹಾಯಕವಾಗುವಂತೆ ಸಂಧಾನ ನಡೆಸಲು ಅಮೆರಿಕದ ಮೇಲೆ ಒತ್ತಡ ಹೇರುವುದು ಪುಟಿನ್ ಅವರ ತಂತ್ರ ಎಂಬಂತೆ ಕಾಣಿಸುತ್ತಿದೆ. ರಷ್ಯಾ ಈಗ ಕರಾರನ್ನು ಸ್ಥಗಿತ ಮಾಡಿರುವ ಕಾರಣ ನ್ಯೂ ಸ್ಟಾರ್ಟ್ ಕರಾರಿನ ಮರುಸಂಧಾನವನ್ನು ಅಮೆರಿಕ ಆರಂಭಿಸಲು ಅವಕಾಶ ಇದೆ. ಅಣ್ವಸ್ತ್ರ ಸಂಗ್ರಹವನ್ನು ಹೆಚ್ಚಿಸುತ್ತಲೇ ಇರುವ ಚೀನಾ ಕೂಡ ಅಣು ಒಪ್ಪಂದಗಳ ಭಾಗವಾಗಬೇಕು ಎಂಬ ಇಚ್ಛೆಯನ್ನು ಅಮೆರಿಕ ಹೊಂದಿದೆ. ಅಮೆರಿಕ ಮತ್ತು ರಷ್ಯಾಕ್ಕೆ ಪರಿಹರಿಸಿಕೊಳ್ಳಲೇಬೇಕಾದ ಹಲವು ಕಳವಳಗಳು ಇವೆ. ಒಂದು ಕರಾರು ರದ್ದಾದರೆ ಮತ್ತೊಂದನ್ನು ರೂಪಿಸಿಕೊಳ್ಳುವುದು ಸುಲಭವೇನೂ ಅಲ್ಲ. ಹಾಗಾಗಿಯೇ ಕರಾರನ್ನು ಅಮಾನತುಗೊಳಿಸುವುದು ಅಥವಾ ಕೈಬಿಡುವುದು ಮುಂದಕ್ಕೆ ಸಾಗುವುದಕ್ಕೆ ಇರುವ ಸರಿಯಾದ ದಾರಿ ಅಲ್ಲ. ಅಣ್ವಸ್ತ್ರ ನಿಯಂತ್ರಣ ಕರಾರುಗಳನ್ನು ಸ್ಥಗಿತಗೊಳಿಸುವುದು ಹೊಣೆಗಾರಿಕೆಯ ನಡೆಯೇ ಅಲ್ಲ. ಅದರಲ್ಲೂ ಅಮೆರಿಕ ಮತ್ತು ರಷ್ಯಾ ಸಂಬಂಧವು ಅತ್ಯಂತ ಬಿಗುವಿನಿಂದ ಕೂಡಿರುವ ಈ ಹೊತ್ತಿನಲ್ಲಂತೂ ಹೀಗೆ ಮಾಡಲೇಬಾರದು. ನ್ಯೂ ಸ್ಟಾರ್ಟ್ ಕರಾರಿನ ಸ್ಥಿತಿಯು ಡೋಲಾಯಮಾನವಾದರೆ, ಅದರ ಪರಿಣಾಮವು ಜಾಗತಿಕವಾಗಿರುತ್ತದೆ. ಅಮೆರಿಕ ಮತ್ತು ರಷ್ಯಾವು ಶೀತಲ ಸಮರ ಕಾಲದ ಅಣ್ವಸ್ತ್ರ ಪೈಪೋಟಿಗೆ ದೌಡಾಯಿಸಲೇಬಾರದು.

ದಿನದ ಟ್ವೀಟ್

ಕಾನೂನಿಗೆ ಅನುಗುಣವಾಗಿದೆಯೇ?

ಪವನ್ ಖೇರಾ ಅವರು ಎಸಗಿದ ಅಪರಾಧವಾದರೂ ಏನು? ಮೋದಿಯವರನ್ನು ಅಣಕಿಸಬಾರದು ಎಂದು ಭಾರತೀಯ ದಂಡ ಸಂಹಿತೆಯ ಯಾವ ಭಾಗದಲ್ಲಿ ಇದೆ? ಮುಂದೇನು? ವಿರೋಧ ಪಕ್ಷಗಳ ನಾಯಕರ ಎನ್‌ಕೌಂಟರ್ ಅಥವಾ ಹತ್ಯೆಯೇ? ಇದು, ನೆಲದ ಕಾನೂನಿಗೆ ಅನುಗುಣವಾದ ಆಡಳಿತವೇ? ನನ್ನ ಪ್ರೀತಿಯ ಪ್ರಜಾಪ್ರಭುತ್ವವೇ ಅತ್ತುಬಿಡು.

ಸ್ವಾತಿ ಚತುರ್ವೇದಿ, ಪತ್ರಕರ್ತೆ

ಕಿಡಿನುಡಿ

ಕಾಂಗ್ರೆಸ್ ಮತ್ತು ಜೆಡಿಎಸ್ ಕುಟುಂಬ ರಾಜಕಾರಣ ಮಾಡುತ್ತಿವೆ. ಪ್ರಜಾಪ್ರಭುತ್ವದಲ್ಲಿ ಕುಟುಂಬ ರಾಜಕಾರಣ ಮಾಡುವ ಪಕ್ಷಗಳಿಂದ ಜನಕಲ್ಯಾಣ ಅಸಾಧ್ಯ.

ಅಮಿತ್ ಶಾ, ಕೇಂದ್ರ ಗೃಹ ಸಚಿವ



25 ವರ್ಷಗಳ ಹಿಂದೆ

ಮಂಗಳವಾರ, 24-2-1998

- **ವಜಾ ಆದೇಶಕ್ಕೆ ಕೋರ್ಟ್ ತಡೆ: ಕಲ್ಯಾಣ್ ಮತ್ತೆ ಮುಖ್ಯಮಂತ್ರಿ**

ಅಲಹಾಬಾದ್, ಫೆ. 23 (ಯುಎನ್ಐ, ಪಿಟಿಐ)– ಕಲ್ಯಾಣ್‌ಸಿಂಗ್ ನೇತೃತ್ವದ ಉತ್ತರಪ್ರದೇಶ ಸರ್ಕಾರವನ್ನು ವಜಾ ಮಾಡಿದ್ದ ರಾಜ್ಯಪಾಲ ರೊಮೇಶ್ ಭಂಡಾರಿ ಅವರ ಕ್ರಮವನ್ನು ಅನೂರ್ಜಿತಗೊಳಿಸಿ ಅಲಹಾಬಾದ್ ಹೈಕೋರ್ಟಿನ ವಿಭಾಗೀಯ ಪೀಠವು ಇಂದು ಮಹತ್ವದ ಮಧ್ಯಂತರ ತೀರ್ಪು ನೀಡಿತು. ಈ ಹಿನ್ನೆಲೆಯಲ್ಲಿ ಕಲ್ಯಾಣ್‌ಸಿಂಗ್ ಮತ್ತೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ನ್ಯಾಯಾಲಯದ ತೀರ್ಪಿಗೆ ಮನ್ನಣೆ ನೀಡಿ ರಾಜ್ಯಪಾಲರು ಕಲ್ಯಾಣ್‌ಸಿಂಗ್ ಅವರನ್ನು ಮತ್ತೆ ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಲು ರಾತ್ರಿ ಅಧಿಸೂಚನೆ ಹೊರಡಿಸಿದ್ದಾರೆ.

- **ಶಾಂತಿ ಒಪ್ಪಂದಕ್ಕೆ ವಿಶ್ವಸಂಸ್ಥೆ – ಇರಾಕ್ ಸಹಿ**

ಬಾಗ್ದಾದ್, ಫೆ. 23 (ಎಎಫ್‌ಪಿ)– ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯಗಳ ಸಂಪೂರ್ಣ ಜಾರಿಗೆ ಅನುವು ಮಾಡಿಕೊಡುವ ಸಲುವಾಗಿ ವಿಶ್ವಸಂಸ್ಥೆ ಹಾಗೂ ಇರಾಕ್ ಐತಿಹಾಸಿಕ ಶಾಂತಿ ಒಪ್ಪಂದಕ್ಕೆ ಇಂದು ಸಹಿ ಹಾಕಿವೆ.

ಶಸ್ತ್ರಾಸ್ತ್ರ ತಪಾಸಣೆ ಸಂಬಂಧ ಉಂಟಾಗಿದ್ದ ಬಿಕ್ಕಟ್ಟನ್ನು ಕೊನೆಗೊಳಿಸಲು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್ ಹಾಗೂ ಇರಾಕ್ ಉಪ ಪ್ರಧಾನ ಮಂತ್ರಿ ತಾರೀಖ್ ಅಜೀಜ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು. ಇದರಿಂದಾಗಿ, ಬಾಗ್ದಾದ್ ವಿರುದ್ಧ ಅಮೆರಿಕ ನಡೆಸಲು ಉದ್ದೇಶಿಸಿದ್ದ ಸಂಭವನೀಯ ಸೇನಾ ಕಾರ್ಯಾಚರಣೆ ಸ್ಥಗಿತಗೊಂಡಂತೆ ಆಗಿದೆ.

50 ವರ್ಷಗಳ ಹಿಂದೆ

ಶನಿವಾರ, 24-2-1973

- **ಮುಖ್ಯಮಂತ್ರಿ ಭರ್ತ್ಸನೆ: ಘಟಪ್ರಭಾ, ಮಲಪ್ರಭಾ ಇನ್ನೊಂದು 'ಕರ್ಮಕಾಂಡ'**

ಬೆಂಗಳೂರು, ಫೆ. 23– ಉತ್ತರದ ಜಿಲ್ಲೆಗಳ ಘಟಪ್ರಭಾ, ಮಲಪ್ರಭಾ ಮತ್ತು ಆಲಮಟ್ಟಿ ಯೋಜನೆಗಳ ಕಳೆದ ದಶಕದ 'ದೋಷಪೂರ್ಣ ಅನುಷ್ಠಾನ'ದ ಪ್ರಶ್ನೆಯನ್ನೆತ್ತಿ, ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ವಿರೋಧ ಪಕ್ಷದ ನಾಯಕರನ್ನು ಹೆಜ್ಜೆ ಹೆಜ್ಜೆಗೆ ತರಾಟೆಗೆ ತೆಗೆದುಕೊಂಡಾಗ, ಅದು ಇಂದು ವಿಧಾನ ಸಭೆಯಲ್ಲಿ 'ಇನ್ನೊಂದು ಕರ್ಮಕಾಂಡ'ದ ಪ್ರತಿಧ್ವನಿಗೆ ಎಡೆಗೊಟ್ಟಿತು.

ಕೊಟ್ಟವರು ವಾಪಸು ಪಡೆಯಲೇಬೇಕೆಂದು ಮುಂಚಿತವಾಗಿಯೇ ಎಚ್ಚರಿಕೆ ನೀಡಿ, ಪರೋಕ್ಷವಾಗಿಯೂ ಪ್ರತ್ಯಕ್ಷವಾಗಿಯೂ ಮಾತುಮಾತಿನಲ್ಲಿ ಹಿಂದಿನ ಸರ್ಕಾರ ನಡೆಸಿದ ಸಂಸ್ಥಾ ಕಾಂಗ್ರೆಸ್ಸಿಗರನ್ನು ತಿವಿದು, ಅಂಕೆ ಸಂಖ್ಯೆಗಳನ್ನುದ್ಧರಿಸಿ ವಾಪಸು ಕೊಟ್ಟಾಗ, ಮುಖ್ಯಮಂತ್ರಿಯವರ ದಾಳಿಯ ಧಾಟಿಯನ್ನು ಮೆಚ್ಚಿದ ಆಡಳಿತ ಕಾಂಗ್ರೆಸ್ಸಿಗರಿಗೆ ಬಾರಿ ಬಾರಿಗೆ ಚಪ್ಪಾಳೆ ತಟ್ಟುವುದೇ ಕೆಲಸವಾಯಿತು.

- **ಡಾಲರ್ ಜತೆ ಭಾರತದ ರೂ. ಮೌಲ್ಯಭೇದ ಆಗಿಲ್ಲ: ಚವಾಣ್ ಸ್ಪಷ್ಟನೆ**

ನವದೆಹಲಿ, ಫೆ. 23– ಡಾಲರ್ ಮೌಲ್ಯಭೇದನದ ದೆಸೆಯಿಂದ ಭಾರತೀಯ ರೂಪಾಯಿಯ ಮೌಲ್ಯ ಶೇ ಹತ್ತರಷ್ಟೂ ಕಡಿಮೆ ಆಗಲಿಲ್ಲವೆಂದು ಹಣಕಾಸು ಖಾತೆ ಸಚಿವ ವೈ.ಬಿ.ಚವಾಣ್ ಅವರು ಇಂದು ಲೋಕಸಭೆಯಲ್ಲಿ ಸ್ಪಷ್ಟಪಡಿಸಿದರು.

- **ಗಡಿ ಪ್ರಶ್ನೆ ಇತ್ಯರ್ಥ ಸಂಸತ್ತಿಗೇ ಸೇರಿದ್ದು**

ಬೆಂಗಳೂರು, ಫೆ. 23 – ಮೈಸೂರು- ಮಹಾರಾಷ್ಟ್ರ ಗಡಿವಿವಾದದ ಪ್ರಶ್ನೆ ಸಂವಿಧಾನದ ಪ್ರಕಾರ, ಪರಮಾಧಿಕಾರ ಪಡೆದ ಸಂಸತ್ತಿನ ಮುಂದೆ ಇರುವುದರಿಂದ ಅಂತಿಮ ತೀರ್ಮಾನ ಅದರದ್ದೇ ಆಗಿದೆ ಎಂದು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಹೇಳಿದರು.

ಅಬ್ಬರದ ಕಟ್ಟುಕತೆಗಳ ಎದುರು ಪ್ರಾಮಾಣಿಕರ ಪುಟ್ಟ ದನಿಗಳು ಜನಾಭಿಪ್ರಾಯ ರೂಪಿಸಬಲ್ಲವು

ಚಿಲ್ಲರೆ 'ಕಥನ' ಮತ್ತು ಅಂತರಂಗದ ಪಿಸುದನಿ!

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಈಚೆಗೆ ಪ್ರಕಟವಾದ ಲೇಖಕ ಸಲ್ಮಾನ್ ರಶ್ದಿ ಅವರ 'ವಿಕ್ಟರಿ ಸಿಟಿ' ಕಾದಂಬರಿಯಲ್ಲಿ ಪಂಪ ಕಂಪನಾ ಎಂಬ ಕಥನಕಾರ್ತಿ ಆದರ್ಶ ಸಾಮ್ರಾಜ್ಯವೊಂದನ್ನು ತನ್ನ ಅಪೂರ್ವ ಬೀಜಗಳಿಂದ ಸೃಷ್ಟಿಸುತ್ತಾಳೆ. ಈ ವಿಶಿಷ್ಟ ಕಾದಂಬರಿಯ ಘಟನಾವಳಿಗಳು ನಡೆಯುವ 'ಬಿಸ್ನಾಗ' ಸಾಮ್ರಾಜ್ಯ ಹಳೆಯ ಸಿದ್ಧ ಜಾಡಿನಿಂದ ತಪ್ಪಿಸಿಕೊಂಡು ಹೊಸ ಹಾದಿ ತೆರೆಯುವ ರಾಜ್ಯವಾಗಲೆತ್ನಿಸುತ್ತದೆ. ಈ ಸಾಮ್ರಾಜ್ಯ ಸೃಷ್ಟಿಸಿ ನೂರಾರು ವರ್ಷ ಬದುಕುವ ಪಂಪ ಕಂಪನಾ ಮುಂದೊಮ್ಮೆ ಕಲೆ, ಸಂಗೀತ, ಸ್ವಾತಂತ್ರ್ಯ, ಸರ್ವಧರ್ಮ ಸ್ವೀಕಾರದಂತಹ ಉದಾರ ಚಿಂತನೆಗಳು ರಾಜ ಕೃಷ್ಣದೇವರಾಯನ ಅಂತರಂಗದಲ್ಲಿ ಉಕ್ಕುವಂತೆ ಉಸುರುತ್ತಾಳೆ. ಈ ಚಿಂತನೆಗಳನ್ನು ಜನರ ಕಿವಿಯಲ್ಲೂ ಉಸುರಿ ನಾಡಿನುದ್ದಕ್ಕೂ ಹಬ್ಬಿಸುತ್ತಾಳೆ.

ಇದು, ಸಾಂಪ್ರದಾಯಿಕ ಸಾಮ್ರಾಜ್ಯವೊಂದು ಉದಾರವಾದಿಯಾದ ಸುಂದರ ವಿದ್ಯಮಾನವನ್ನು ವಿವರಿಸಲು ಕಾದಂಬರಿಕಾರ ಬಳಸಿರುವ ಮಾಂತ್ರಿಕ ವಾಸ್ತವತಾವಾದಿ ಕಥಾತಂತ್ರವೆನ್ನುವುದು ನಿಜ. ಆದರೇನಂತೆ! ವೈವಿಧ್ಯಮಯ ಜಾತಿ, ಧರ್ಮ, ಜನಾಂಗಗಳನ್ನು ಒಳಗೊಂಡ ಹೊಸ ರೀತಿಯ ಆಳ್ವಿಕೆ, ಹೊಸ ಸಮಾಜಗಳು ಜನರ ಅಂತರಂಗದ ಪಿಸುಮಾತಿನಿಂದಲೂ ಸೃಷ್ಟಿಯಾಗುತ್ತವೆ ಎಂಬ ಸಮಕಾಲೀನ ಸತ್ಯವನ್ನು ಕಾದಂಬರಿ ಅದ್ಭುತವಾಗಿ ಹೇಳುತ್ತದೆ.

ರಶ್ದಿ ಅವರ ಕಾದಂಬರಿಯ ಕಥನಕಾರ್ತಿಯ ಅಂತರಂಗದ ಮೃದಂಗದ ದನಿ ಹಬ್ಬಿಸಿದ ಉದಾರವಾದಿ ಸಾಮ್ರಾಜ್ಯ ಕಂಡು ಪುಳಕಗೊಳ್ಳುವ ನಮ್ಮ ಕಾಲದ ಓದುಗರೆದುರು, ಇದಕ್ಕೆ ಪೂರಾ ವಿರುದ್ಧವಾದ ಈ ಕಾಲದ ಸೈತಾನ ಕಾರ್ಖಾನೆಗಳ ಗಟ್ಟಿ ಗಂಟಲಿನ, ಜೋರು ದನಿಗಳ ಅಬ್ಬರ ಮೂಡತೊಡಗಿದರೆ ಅಚ್ಚರಿಯಿಲ್ಲ. ಏಕಕಾಲಕ್ಕೆ ಕೆಟ್ಟ ಪಿಸುಮಾತನ್ನೂ ಲಜ್ಜೆಗೇಡಿ ಗಂಟಲನ್ನೂ ಬಳಸಿ ಲಾಭ ಮಾಡಿಕೊಳ್ಳುವವರ ಚಿತ್ರಗಳು ನಿತ್ಯ ನಮ್ಮ ಕಣ್ಣಿಗೆ ರಾಚುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಮೂವರು ನಾಯಕರ ಚುನಾವಣಾ ತುರ್ತಿನ 'ಅಧಿಕೃತ' ಹೇಳಿಕೆಗಳ ಸ್ಯಾಂಪಲ್ಸ್ ನೋಡಿ:

ಚಿತ್ರ 1: ಬಿಜೆಪಿಯ ಅಶ್ವತ್ಥನಾರಾಯಣ ಎಂಬ ನಾಯಕರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಹೊರಡಿಸಿದ ಫತ್ವಾ ಮಾದರಿಯ ಆದೇಶ ಮತ್ತು ಅನಂತರ ವ್ಯಕ್ತಪಡಿಸಿದ ಅರೆ ಮನಸ್ಸಿನ ವಿಷಾದ.

ಚಿತ್ರ 2: ಇಂಥ ಮಾತುಗಳನ್ನು ಕೇಳಿ ಜನ ರೇಗುತ್ತಿರುವ ಕಾಲದಲ್ಲೇ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಬಿಟ್ಟಿರುವ 'ನಾನು ಒಕ್ಕಲಿಗರ ಮನೆಯ ಮಗ' ಎಂಬ ವಿಶೇಷ ಫೀಲರ್-ಟ್ರೈಲರ್!

ಚಿತ್ರ 3: ಈ ಎರಡು 'ಅಪೂರ್ವ' ಹೇಳಿಕೆಗಳು ಎರಗುವ ಮೊದಲು ಜನತಾದಳದ ನಾಯಕರಾದ ಎಚ್.ಡಿ.ಕುಮಾರಸ್ವಾಮಿ ಮಂಡಿಸಿದ ಪ್ರಲ್ಹಾದ ಜೋಶಿ ಮತ್ತು ಪೇಶ್ವೆ ವಂಶ ಕುರಿತ ಸಂಶೋಧನೆ...

ಇಂಥ ಹೇಳಿಕೆಗಳನ್ನು ಈ ಮಹನೀಯರೇ ಸೃಷ್ಟಿಸುತ್ತಾರೋ ಇವರಿಗೆ ಉಚಿತಾನುಚಿತ ಸಲಹೆಗಳನ್ನು ಕೊಡುವ 'ಸಂಶೋಧಕ'ರು ಸೃಷ್ಟಿಸುತ್ತಾರೋ, ತಿಳಿಯದು! ಈ ಥರದ ಮಾತುಗಳನ್ನು ಈ ಕಾಲದ ಇಂಗ್ಲಿಷ್ ಪತ್ರಿಕೋದ್ಯಮ 'ನೆರೇಟಿವ್' ಎನ್ನುತ್ತಿದೆ. 'ನೆರೇಟಿವ್' (Narrative) ಎಂಬ ಪದ ಮೂವತ್ತು ವರ್ಷಗಳ ಕೆಳಗೆ ಜಗತ್ತಿನ ಗಂಭೀರ ಅಕಡೆಮಿಕ್ ವಲಯದಲ್ಲಿ ಹೆಚ್ಚು ಚಾಲ್ತಿಗೆ ಬಂದಾಗ, ಸಂಸ್ಕೃತಿ ಚಿಂತಕ ಡಿ.ಆರ್.ನಾಗರಾಜ್ ಈ ಪರಿಕಲ್ಪನೆಯನ್ನು 'ಕಥನ' ಎಂದು ಕರೆದರು, ತಮ್ಮ ಪುಸ್ತಕಕ್ಕೆ 'ಸಾಹಿತ್ಯ ಕಥನ' ಎಂದು ಹೆಸರಿಟ್ಟರು. ಅದಕ್ಕೂ ಮೊದಲು ಯು.ಆರ್.ಅನಂತಮೂರ್ತಿ ತಮ್ಮ 'ಪೂರ್ವಾಪರ' ಪುಸ್ತಕದ 'ನೆರೇಟಿವ್'ಗಳನ್ನು 'ಆಖ್ಯಾನ' ಎಂದು ಕರೆದರು. ಕನ್ನಡದ ಈ ಎರಡು ಶ್ರೇಷ್ಠ ಪುಸ್ತಕಗಳ ಗಂಭೀರ ಕಥನಗಳನ್ನು ಓದಿ ಬಲ್ಲವರಿಗೆ 'ನೆರೇಟಿವ್' ಪದವನ್ನು ಈಗ ಎಷ್ಟು ಅಗ್ಗವಾಗಿ ಬಳಸಲಾಗುತ್ತಿದೆ ಎಂಬುದರ ಅರಿವಾಗಬಲ್ಲದು.

ಗಂಭೀರ ಅರ್ಥಗಳ ಪದಗಳನ್ನು ದುರ್ಬಳಕೆ ಮಾಡಿಕೊಂಡು, ಅವುಗಳ ಅರ್ಥಗಳನ್ನು ಅಗ್ಗವಾಗಿಸುವುದು ಇಂದಿನ ರಾಜಕೀಯ, ಮಾಧ್ಯಮ, ಶೈಕ್ಷಣಿಕ ಹಾಗೂ ಸಮಾಜ ವಿಭಜಕ ವಲಯಗಳ ಕಾಯಿಲೆಯಾಗಿಬಿಟ್ಟಿದೆ. ವ್ಯಾಪಕವಾದ ಸಾಂಸ್ಕೃತಿಕ ಸಾಧ್ಯತೆಯುಳ್ಳ 'ನೆರೇಟಿವ್' ಪದವನ್ನು ಅತಿ ವಾಚ್ಯಗೊಳಿಸಿ, ಇದೀಗ 'ಕಟ್ಟುಕತೆ' ಎಂಬ ಅರ್ಥಕ್ಕೆ ಇಳಿಸಲಾಗಿದೆ.

ರಾಜಕೀಯ ಪಕ್ಷವೊಂದು ಹರಿಯಬಿಡುವ ಸುಳ್ಳುಗಳನ್ನೇ 'ನೆರೇಟಿವ್' ಎಂದು ಕರೆಯುವವರಿದ್ದಾರೆ. 'ಆ ಪಕ್ಷಕ್ಕೆ ಒಂದು 'ನೆರೇಟಿವ್' ಇದೆ, ಈ ಪಕ್ಷಕ್ಕಿಲ್ಲ' ಎಂದು ಏನನ್ನು ಬೇಕಾದರೂ ಥಿಯರೈಸ್ ಮಾಡುವವರಿದ್ದಾರೆ. ದಶಕಗಳ ಕೆಳಗೆ ಫುಕೋನ 'ಡಿಸ್ಕೋರ್ಸ್' ಪರಿಕಲ್ಪನೆಯನ್ನು 'ಸಂಕಥನ' ಎಂದು ಕನ್ನಡ ವಿದ್ವಾಂಸರು ಅನುವಾದ ಮಾಡಿಕೊಂಡ ಮೇಲೆ, ಆರಾಮಜೀವಿಗಳು ಬೇಕಾದದ್ದಕ್ಕೆಲ್ಲ 'ಸಂಕಥನ' ಎಂಬ ಪದ ಜೋಡಿಸಿ, ಅದರ ಆಳವಾದ ಅರ್ಥವನ್ನೇ ನಗೆಪಾಟಲಾಗಿಸಿದ್ದು ನೆನಪಾಗುತ್ತದೆ!

ಮೇಲೆ ಪ್ರಸ್ತಾಪಿಸಿದ ಮೂರು ಸ್ಯಾಂಪಲ್ ಹೇಳಿಕೆಗಳ ಹಿಂದಿರುವ ಅಸಲಿ ಕಾರಣಗಳೇನು ಎಂಬುದು ಜನಸಾಮಾನ್ಯರಿಗೂ ಗೊತ್ತಾಗುತ್ತಿದೆ. ಈ ನಾಯಕರ 'ನಿತ್ಯ ಪುರಾಣ ಸೃಷ್ಟಿ'ಗೆ ಜನ ಹಾದಿಬೀದಿಗಳಲ್ಲಿ ಕೊಡುವ ಒರಿಜಿನಲ್ ವ್ಯಾಖ್ಯಾನಗಳ ಅದ್ಭುತ ಮಾದರಿಗಳನ್ನೂ ನೋಡಿ:

ಜನಾಭಿಪ್ರಾಯ 1: ಬಿಜೆಪಿಗೆ ಪ್ರಬಲ ಸವಾಲಾಗಿರುವ ನಾಯಕರಾದ ಸಿದ್ದರಾಮಯ್ಯನವರನ್ನು ಪ್ರತಿದಿನ ಯಾರು ಹೆಚ್ಚೆಚ್ಚು ವಿಕಾರವಾಗಿ ಹೀಗಳೆಯುತ್ತಾರೋ ಅವರಿಗೆ ಪಾರ್ಟಿಯಲ್ಲಿ ಹೆಚ್ಚು ಅಂಕ ಕೊಡುವುದರಿಂದ ಅಶ್ವತ್ಥನಾರಾಯಣ ಕೂಡ ರೇಸಿಗಿಳಿದಿದ್ದಾರೆ. ಆದರೆ ಇದಕ್ಕಿಂತ 'ಉತ್ತಮ'ವಾದ ಕೆಟ್ಟ ಭಾಷೆ ಬಳಸುವವರು ಬಂದ ತಕ್ಷಣ ಅವರ ಸ್ಥಾನ ಪಲ್ಲಟವಾಗುತ್ತದೆ. ಚುನಾವಣೆ ಮುಗಿಯುವವರೆಗೂ ಪ್ರತಿದಿನ ಒಬ್ಬ 'ಸುಪಾರಿ ಸ್ಪೀಕರ್' ಈ ರಿಲೇ ರೇಸ್ ಮುಂದುವರಿಸಲಿದ್ದಾರೆ; ಬೆಳಿಗ್ಗೆ ಒಬ್ಬರು, ಸಂಜೆ ಒಬ್ಬರು ಸಿದ್ದರಾಮಯ್ಯನವರ ವಿರುದ್ಧ ಇಂಥ ಹೇಳಿಕೆಗಳನ್ನು ಕೊಡಲಿದ್ದಾರೆ. ತಪ್ಪದೆ ವಾಚ್ ಮಾಡಿ.



ಜನಾಭಿಪ್ರಾಯ 2: ಕಾಂಗ್ರೆಸ್ಸಿನ ನಿಷ್ಠಾವಂತ ಕಟ್ಟಾಳುವಾಗಿ ಪಕ್ಷಕ್ಕೆ ತಮ್ಮ ತನು ಮನ ಧನಗಳನ್ನು ಧಾರೆಯೆರೆದಿರುವ ಡಿ.ಕೆ.ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗುವ ಕನಸು ಒಕ್ಕಲಿಗರ ಭಾವನಾತ್ಮಕ ಲಾಬಿಯಿಂದಲಾದರೂ ಸಾಧ್ಯವಾಗಬಹುದೇನೋ ಎಂಬ ಆಸೆಯಿಂದ ಈ ಒಕ್ಕಲಿಗ ರಾಗ ಮತ್ತೆ ಹುಟ್ಟಿದೆ. ಚುನಾವಣೆ ಹತ್ತಿರವಾಗುತ್ತಿದ್ದಂತೆ ಈ ಫೀಲರ್-ಟ್ರೈಲರ್ ಮತ್ತೆ ಮತ್ತೆ ಕೇಳಿಬರಲಿದೆ. ಕಾದು ನೋಡಿ.

ಜನಾಭಿಪ್ರಾಯ 3: ಎರಡು ಸಲ ಮುಖ್ಯಮಂತ್ರಿಯಾಗಿರುವ ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿ ಆಗಬೇಕೆಂದರೆ, ಇನ್ನಿತರ ಮುಖ್ಯಮಂತ್ರಿ ಆಕಾಂಕ್ಷಿಗಳತ್ತ ಬಾಣ ಹೂಡಲೇಬೇಕಾಗುತ್ತದೆ. ಗುರಿ ಯಶಸ್ವಿಯಾದರೆ, 'ಶತ್ರುವಿನ ಶತ್ರು ನನ್ನ ಮಿತ್ರ' ಎಂಬಂತೆ ಬಿಜೆಪಿಯ ಇನ್ನಿತರ ಮುಖ್ಯಮಂತ್ರಿ ಆಕಾಂಕ್ಷಿಗಳಲ್ಲಿ ಕೆಲವರಾದರೂ ಅವರಿಗೆ ಹತ್ತಿರವಾಗಬಹುದು. ಮುಂದೆ ಅವರ ಬಾಣಗಳು ಯಾರ್‍ಯಾರ ವಿರುದ್ಧ ಹೊರಡುತ್ತವೆ ಎಂಬುದನ್ನು ಕುತೂಹಲದಿಂದ ಗಮನಿಸಿ.

ರಶ್ದಿ ಅವರ ಕಾದಂಬರಿಯ ಪಿಸುಮಾತುಗಳಂತಿರುವ ಈ ಪ್ರತಿಕ್ರಿಯೆಗಳು, ಚುನಾವಣಾ ಕಟ್ಟುಕತೆಗಾರರು ಹೇಳಿದ್ದನ್ನೆಲ್ಲ ನಂಬುವ ದಡ್ಡರಲ್ಲ ನಮ್ಮ ಜನರು ಎಂಬುದನ್ನು ಸಾರುತ್ತವೆ. ಜನರೂ ತಮ್ಮ ಕತೆ ಕಟ್ಟುತ್ತಿರುತ್ತಾರೆ. ಅವರು ನೀವು ಹೇಳುವ ಕತೆಗಳನ್ನು ನುಂಗುವುದಿಲ್ಲ ಎಂಬುದಕ್ಕೆ ದೊಡ್ಡ ಪುರಾವೆ ದೇಶದ ಈಗಿನ ಷೇರು ಮಾರುಕಟ್ಟೆಯ ಪ್ರತಿಕ್ರಿಯೆಯಲ್ಲಿದೆ. ತನ್ನ ವಿರುದ್ಧ ಹಿಂಡನ್‌ಬರ್ಗ್ ವರದಿ ಬಂದ ನಂತರ ಅದಾನಿ ಸಮೂಹ ಜಾಹೀರಾತು ಕೊಟ್ಟು ತನ್ನದೇ ಆದ 'ನೆರೇಟಿವ್' ಸೃಷ್ಟಿಸಲು ಯತ್ನಿಸಿತು. ತನ್ನ ವಿರುದ್ಧದ ವರದಿ ದೇಶದ ಮೇಲಿನ ದಾಳಿ ಎಂದು ಬಣ್ಣಿಸಿತು. ಆದರೆ ಷೇರು ಮಾರುಕಟ್ಟೆಯ ಸಹಭಾಗಿಗಳು ತಮ್ಮದೇ ಆದ 'ನೆರೇಟಿವ್' ಸೃಷ್ಟಿಸುತ್ತಿದ್ದಾರೆ! ಹಿಂಡನ್‌ಬರ್ಗ್ ವರದಿಯು ದೇಶದ ಮೇಲಿನ ದಾಳಿ ಎಂಬ ಕತೆ, ಅನಂತರ ಷೇರು ಮೌಲ್ಯದ ನಿರಂತರ ಕುಸಿತ... ಇವೆಲ್ಲ ಒಂದು ಇನ್ನೊಂದನ್ನು ಮುಗಿಸುವ ನೆರೇಟಿವ್‌ಗಳೋ ಅಥವಾ ಗಟ್ಟಿ ಸಂಶೋಧನೆಯೊಂದು ದೇಶದ ಬೃಹತ್ ವ್ಯಾಪಾರೋದ್ಯಮವನ್ನೇ ಉರುಳಿಸಬಹುದು ಎಂಬ ಹೊಸ ಕಥನದ ಉದಯವನ್ನು ಇದು ಹೇಳುತ್ತಿದೆಯೋ?

ಇಂಥ ಬೆಳವಣಿಗೆಗಳ ನಡುವೆ, 'ವಿಕ್ಟರಿ ಸಿಟಿ' ಕಾದಂಬರಿ ಹೇಳುತ್ತಿರುವಂತೆ, ಒಳಿತನ್ನು ಬಿತ್ತಿ ಬೆಳೆಯ ಬಯಸುವವರ ಅಂತರಂಗದ ಪಿಸುದನಿಗಳು ಕೂಡ ಜನರ ಅಂತರಂಗದ ಒಳಿತಿನ ಪಿಸುದನಿಗಳಾಗಿ ಬೆಳೆಯಬಹುದು. ಜೋರುಗಂಟಲ ಚೀರುದನಿಯ ಕಟ್ಟುಕತೆಗಳಿಗೆ ಜನರ ಪಿಸುಮಾತುಗಳು ಗಟ್ಟಿ ಉತ್ತರವಾಗಬಲ್ಲವು ಎಂಬ ನಂಬಿಕೆಯನ್ನಂತೂ ನಾವು ಎಂದೂ ಕಳೆದುಕೊಳ್ಳಬಾರದು.

ಚುರುಮುರಿ

ಬಿಸಿ ಬಿಸಿ ಸುದ್ದಿ !

• ಬಿ.ಎನ್.ಮಲ್ಲೇಶ್

'ಈ ಸಲದ ಬ್ಯಾಸಗಿ ಟೆಂಪರೇಚರು ಹೋದ ವರ್ಷಕ್ಕಿಂತ ಜಾಸ್ತಿ ಆಗ್ತತಂತಪ... ಯಾಕೆ?' ಹರಟೆಕಟ್ಟೇಲಿ ದುಬ್ಬೀರ ನ್ಯೂಸ್ ಪೇಪರಲ್ಲಿ ಗಾಳಿ ಹೊಡೆದುಕೊಳ್ಳುತ್ತ ಕೇಳಿದ.

'ಅಲೆ ಇವ್ನ, ಕಾರಣ ಮ್ಯಾಗೇ ಐತಲ್ಲೋ... ಎಲೆಕ್ಷನ್ ವರ್ಷಲ್ಲೇನು ಇದು? ಮತ್ತೆ ಟೆಂಪರೇಚರ್ ಜಾಸ್ತಿ ಆಗ್ಲೇಬೇಕು' ಗುಡ್ಡೆ ನಕ್ಕ.

'ನಿನ್ನೆಲಿ, ಯಾವ್ಯಾವುದನ್ನೋ ಎಲ್ಲೆಲ್ಲಿಗೋ ಜೋಡಿಸ್ತಿಯಲ್ಲಲೆ, ಅದ್ಕೂ ಇದ್ಕೂ ಏನ್ ಸಂಬಂಧ?' ದುಬ್ಬೀರನಿಗೆ ಕೋಪ.

'ಸಂಬಂಧ ಐತಪಾ ಶಾಣ್ಯಾ, ಈಗ ರಾಜಕಾರಣಿಗಳು ಎಲೆಕ್ಷನ್ ಪ್ರಚಾರಕ್ಕೆ ರೋಡ್ ಷೋ ನಡೆಸಿ ದೂಳೆಬ್ಬಿಸ್ತಾರೆ, ಮೈಕ್ ಹಚ್ಚಿ ಗದ್ದ ಮಾಡ್ತಾರೆ, ಒಬ್ರಿಗೊಬ್ರು ಬೈದಾಡ್ತಾರೆ, ಸವಾಲ್ ಹಾಕ್ತಾರೆ, ಹೊಡೆದಾಕಿ ಅಂತಾರೆ... ಇದೆಲ್ಲ ಕೇಳಿ ಕೇಳಿ ಜನರ ಬಿ.ಪಿ. ಏರಲ್ಲೇನು? ತಲಿ ಬಿಸಿಯಾಗಲ್ಲೇನು? ಮತ್ತೆ ಟೆಂಪರೇಚರ್ ಏರೇ ಏರ್ತತಿ' ಗುಡ್ಡೆ ವಾದಿಸಿದ.

'ನೀ ಹೇಳೋದ್ರಲ್ಲೂ ಪಾಯಿಂಟ್ ಐತಿ, ಅದರ ಜತಿಗೆ ಮಕ್ಕಳ ಪರೀಕ್ಷೆ ಬೇರೆ ಬಂದಾವು, ಅವರಿಗೂ ತಲಿ ಬಿಸಿ, ನಾವು ಮನ್ಯಾಗೆ ಟಿ.ವಿ ಹಚ್ಚಂಗಿಲ್ಲ, ಪಿಟಿಕ್ಕನ್ನಂಗಿಲ್ಲ, ನಮಗೂ ತಲಿ ಬಿಸಿ' ತೆಪರೇಸಿ ತಲೆ ಕೊಡವಿದ.

'ಅಷ್ಟೇ ಅಲ್ಲ, ಈ ಹೆಂಡ್ತೀರ ಕಿಟಿಕಿಟಿ ಬೇರೆ. ಹಬ್ಬ ಹುಣಿವಿ ಬಂದಾವು, ಸೀರಿ ತರ್‍ರಿ, ಮಕ್ಕಳಿಗೆ ಬಟ್ಟ ತರ್‍ರಿ ಅಂತ ಶುರು. ನಂಗಂತೂ ಮೈಯಾಗೆ ಬೆಂಕಿ ಆಗ್ತತಿ ನೋಡ್ರಲೆ' ಕೊಟ್ರೇಶಿ ಕಿಡಿಕಿಡಿಯಾದ.

'ಶಾಂತಿ ಶಾಂತಿ, ಅಟಾಕಂದು ಟೆಂಪರೇಚರ್ ಏರಿಸ್ಕಾಬ್ಯಾಡಲೆ ಕೊಟ್ರ' ಎನ್ನುತ್ತ ಹರಟೆಕಟ್ಟೆಗೆ ಬಂದ ಪರ್ಮೇಶಿ 'ಈಗಿನ್ನೂ ಮನಿಮನಿಗೆ ಸೀರಿ, ಸ್ವೀಟ್ ಬಾಕ್ಸು ಕೊಟ್ಟು ಬಂದೇನಿ. ನಿಮ್ಮನಿಗೂ ಹೋಗಿದ್ದೆ, ನಮ್ ರಾಜಾಹುಲಿ ಬರ್ತ್‌ಡೇ ಗಿಫ್ಟು...' ಎಂದ.

'ಹೌದಾ? ಛಲೋ ಆತಲ್ಲಲೆ, ಅದ್ರಿಂದ ಹೆಂಡ್ತೀರ ಟೆಂಪರೇಚರೇನೋ ಇಳೀತು, ಮತ್ತೆ ನಮ್ದು?' ಗುಡ್ಡೆ ಕೇಳಿದ.

'ರಾತ್ರಿ ಸಿಗ್ರಲೆ, ನಿಮ್ ಟೆಂಪರೇಚರ್‌ನೂ ಇಳಿಸೋಣಂತೆ...' ಪರ್ಮೇಶಿ ಕಣ್ಣು ಮಿಟುಕಿಸಿದ. ಆ ಮಾತಿಗೆ ಅಲ್ಲೇ ಎಲ್ಲರ ಟೆಂಪರೇಚರು ಅರ್ಧ ಕಡಿಮೆಯಾಯಿತು!

ಸಂಗತ

ರಾಜಕಾರಣಕ್ಕೆ ಓದಿನ ದೀಕ್ಷೆಯಾಗಲಿ

ಭಾಷೆ ಸುಧಾರಿಸಲು ಸಾಹಿತ್ಯದ ಓದು ಒಂದು ಪರ್ಯಾಯ ಮಾರ್ಗ

• ರಾಜಕುಮಾರ ಕುಲಕರ್ಣಿ

ರಾಜಕಾರಣಿಗಳಿಗೆ ಘನತೆಯಿಂದ ಮಾತನಾಡಲು ಗೊತ್ತಿಲ್ಲ ಎಂದು ಕೆಲವರು ಆಗಾಗ ಆತಂಕ ವ್ಯಕ್ತಪಡಿಸುತ್ತಾರೆ. ರಾಜಕಾರಣದಲ್ಲಿ ಭಾಷೆಯನ್ನು ದ್ವೇಷದ ನುಡಿಗಟ್ಟಾಗಿ ಪರಿವರ್ತಿಸಿರುವುದಕ್ಕೆ, ನಮ್ಮ ಬಹಳಷ್ಟು ರಾಜಕಾರಣಿಗಳಿಗೆ ಪುಸ್ತಕ ಪ್ರೀತಿ ಇಲ್ಲದಿರುವುದೇ ಕಾರಣ. ಸೃಜನಶೀಲತೆಗೂ ರಾಜಕಾರಣಕ್ಕೂ ಎಣ್ಣೆ-ಸೀಗೆಕಾಯಿ ಸಂಬಂಧ. ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೇಲೂ ನಮ್ಮ ರಾಜಕಾರಣಿಗಳು ಸಾಹಿತ್ಯವನ್ನು ಬದಿಗೆ ಸರಿಸಿ ರಾಜಕೀಯದ ಮಾತುಗಳನ್ನಾಡುತ್ತಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡಪರ ಸಂಸ್ಥೆಗಳ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿಯಲ್ಲೂ ರಾಜಕಾರಣಿಗಳ ಶಿಫಾರಸು ಮಹತ್ವದ ಪಾತ್ರ ವಹಿಸುತ್ತದೆ.

ಪುಸ್ತಕ ಪ್ರೀತಿಯನ್ನು ಮೈಗೂಡಿಸಿಕೊಂಡಿದ್ದ ರಾಜಕಾರಣದ ಪರಂಪರೆ ನಮ್ಮ ಕಣ್ಣೆದುರಿಗಿದೆ. ಜವಾಹರಲಾಲ್ ನೆಹರೂ 'ಡಿಸ್ಕವರಿ ಆಫ್ ಇಂಡಿಯಾ' ಕೃತಿ ರಚಿಸಲು ಅವರಿಗಿದ್ದ ಓದಿನ ಅಪಾರ ಅನುಭವವೇ ಕಾರಣವಾಯಿತು. ಪಿ.ವಿ. ನರಸಿಂಹ ರಾವ್ ತಮ್ಮ ಓದಿನ ಬಲದಿಂದ ಭಾರತದ ಅನೇಕ ಭಾಷೆಗಳನ್ನು ಒಳಗೊಂಡಂತೆ ವಿದೇಶಿ ಭಾಷೆಗಳಲ್ಲೂ ವ್ಯವಹರಿಸಬಲ್ಲವರಾಗಿದ್ದರು. ಪುಸ್ತಕಗಳ ಓದಿನ ಜ್ಞಾನವು ರಾಜಕೀಯದಲ್ಲಿದ್ದೂ ಅಟಲ್ ಬಿಹಾರಿ ವಾಜಪೇಯಿ ಅವರನ್ನು ವಾಗ್ಮಿ ಮತ್ತು ಸೂಕ್ಷ್ಮ ಸಂವೇದನೆಯ ಕವಿಯನ್ನಾಗಿ ರೂಪಿಸಿತು. ಸೋಮನಾಥ ಚಟರ್ಜಿ, ಪ್ರಣವ್ ಮುಖರ್ಜಿ, ಕರಣ್ ಸಿಂಗ್, ಎಲ್.ಕೆ.ಅಡ್ವಾಣಿ ತಮ್ಮ ಓದಿನ ವಿದ್ವತ್ತಿನಿಂದ ಅತ್ಯುತ್ತಮ ಸಂಸದೀಯಪಟುಗಳೆಂಬ ಗೌರವಕ್ಕೆ ಪಾತ್ರರಾದರು.

ಕರ್ನಾಟಕದ ರಾಜಕಾರಣದಲ್ಲಿ ಕಡಿದಾಳು ಮಂಜಪ್ಪ, ಶಾಂತವೇರಿ ಗೋಪಾಲಗೌಡ, ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್, ಎಂ.ಪಿ.ಪ್ರಕಾಶ್ ಅವರಂತಹ ಅನೇಕ ರಾಜಕಾರಣಿಗಳು ತಮ್ಮ ಬಿಡುವಿಲ್ಲದ ರಾಜಕಾರಣದ ನಡುವೆಯೂ ಪುಸ್ತಕ ಪ್ರೀತಿಯನ್ನು ಕಾಪಿಟ್ಟುಕೊಂಡಿದ್ದರು. ಎಂ.ಪಿ.ಪ್ರಕಾಶ್ ಓದಿನ ಪ್ರೀತಿಯೊಂದಿಗೆ ಕಲಾವಿದರಾಗಿಯೂ ಈ ನೆಲದ ಸಾಂಸ್ಕೃತಿಕ ಹಿರಿಮೆಯನ್ನು ಎತ್ತರಕ್ಕೆ ಕೊಂಡೊಯ್ದರು. ವೀರಪ್ಪ ಮೊಯಿಲಿ ಬರಹಗಾರರಾಗಿ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿರುವರು.

ಭಾಷೆ ಸುಧಾರಿಸಲು ಸಾಹಿತ್ಯದ ಓದು ಒಂದು ಪರ್ಯಾಯ ಮಾರ್ಗ. ಜೊತೆಗೆ ಓದು ಮನುಷ್ಯನ ಹೃದಯಾಂತರಾಳದಲ್ಲಿ ಪ್ರೀತಿ, ಅನುಕಂಪ ಮತ್ತು ಕರುಣೆಯನ್ನು ಹುಟ್ಟಿಸುವ ಕೆಲಸ ಮಾಡುತ್ತದೆ. ಲೋಕಾಂತದಲ್ಲೂ ಏಕಾಂತವನ್ನು ಒದಗಿಸುವ ಶಕ್ತಿ ಓದಿಗಿದೆ. ಆದರೆ ಸದಾ ಲೋಕಾಂತದ ಬದುಕಿನಲ್ಲೇ ಧನ್ಯತೆ ಅನುಭವಿಸುವ ರಾಜಕಾರಣಿಗಳಿಗೆ ಮೌನದ ಸುಖ ಅರ್ಥವಾಗುವುದಾದರೂ ಹೇಗೆ? ಗ್ರಂಥಾಲಯ ಇಲಾಖೆ ಎನ್ನುವ ಒಂದು ಸಾಂಸ್ಕೃತಿಕ ಇಲಾಖೆ ಇಂದು ರಾಜಕಾರಣದ ಅವಕೃಪೆಗೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿರುವ ದೃಷ್ಟಾಂತ ನಮ್ಮ ಕಣ್ಣೆದುರಿಗಿದೆ.

'ರಾಜಕಾರಣದಲ್ಲಿ ಸದ್ದನ್ನೇ ತುಂಬ ನೆಚ್ಚಿಕೊಂಡ ಭಾಷೆಗೆ ಮೌನದ ಪರಿಚಯವಿಲ್ಲ. ಶಬ್ದ ಮತ್ತು ಆವೇಶವು ರಾಜಕಾರಣದ ಪ್ರಧಾನ ಮೆಚ್ಚುಗೆಗಳಾಗಿವೆ. ಮೌನ ಅರ್ಥವಾಗಲು ರಾಜಕಾರಣಿಗಳಿಗೆ ಓದಿನಲ್ಲಿ ಆಸಕ್ತಿ ಹುಟ್ಟುವಂತಾಗಬೇಕು, ರಾಜಕಾರಣಕ್ಕೆ ಸಾಹಿತ್ಯದ ದೀಕ್ಷೆಯಾಗಬೇಕು' ಎಂದು ಯಶವಂತ ಚಿತ್ತಾಲರು 'ಸಾಹಿತ್ಯದ ಸಪ್ತಧಾತುಗಳು' ಪುಸ್ತಕದಲ್ಲಿ ಹೇಳಿದ್ದಾರೆ. ನೊಬೆಲ್ ಪ್ರಶಸ್ತಿ ಸ್ವೀಕರಿಸುವಾಗ ಕವಿ ಬ್ರಾಡ್‌ಸ್ಕೀ ತಮ್ಮ ಭಾಷಣದಲ್ಲಿ ಹೀಗೆ ಹೇಳುತ್ತಾರೆ, 'ನಾವು ನಮ್ಮ ನಾಯಕರನ್ನು ಅವರ ರಾಜಕೀಯ ಕಾರ್ಯಸೂಚಿಗಿಂತ ಅವರ ಓದಿನ ಅನುಭವವನ್ನು ಆಧರಿಸಿ ಆಯ್ಕೆ ಮಾಡಿದ್ದಲ್ಲಿ ಭೂಮಿಯ ಮೇಲೆ ಅತ್ಯಂತ ಕಡಿಮೆ ದುಃಖವಿರುತ್ತಿತ್ತು'.

ಓದಿನ ಅನುಭವದ ಕೊರತೆಯಿಂದ ಸಭೆ ಸಮಾರಂಭಗಳಲ್ಲಿ, ಶಾಸನಸಭೆಗಳಲ್ಲಿ, ಚುನಾವಣೆ ಪ್ರಚಾರದ ಸಂದರ್ಭದಲ್ಲಿ ನಮ್ಮ ರಾಜಕಾರಣಿಗಳು ಭಾಷೆಯನ್ನು ಕೀಳುಮಟ್ಟಕ್ಕಿಳಿಸಿ ಮಾತನಾಡುವುದು ಸಾಮಾನ್ಯವಾಗಿದೆ. ರಾಜಕಾರಣವೇ ಸಾರ್ವಜನಿಕರ ನಡೆ ನುಡಿಯನ್ನು ನಿರ್ಧರಿಸುತ್ತಿರುವ ಇಂಥ ಹೊತ್ತಿನಲ್ಲಿ ಸಹಜವಾಗಿಯೇ ರಾಜಕಾರಣಿಗಳು ಯುವಪೀಳಿಗೆಗೆ ಐಕಾನ್‌ಗಳಾಗಿ ಕಾಣಿಸುತ್ತಾರೆ. ಹೀಗಾಗಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಕಾರಿಡಾರ್‌ಗಳಲ್ಲಿ ರಾಜಕಾರಣದ ಭಾಷೆಯೇ ಹೆಚ್ಚು ಹೆಚ್ಚು ಬಳಕೆಯಾಗುತ್ತಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕೂಡಿಯೇ ಶಿಕ್ಷಣಕ್ಕೆ ರಾಜಕಾರಣದ ವೇಷ ತೊಡಿಸುತ್ತಿರುವುದು ಇಂದಿನ ಶಿಕ್ಷಣ ವ್ಯವಸ್ಥೆಯ ದುರಂತ.

ಹಿರಿಯರ ಸದನವೆಂದೇ ಪರಿಗಣಿತವಾಗಿರುವ ವಿಧಾನ ಪರಿಷತ್ತಿಗೆ ಒಂದುಕಾಲದಲ್ಲಿ ಸಾಹಿತಿಗಳು, ಕಲಾವಿದರು, ಚಿಂತಕರು ನೇಮಕಗೊಳ್ಳುತ್ತಿದ್ದರು. ಇಂತಹವರಿಂದ ತುಂಬಿರುತ್ತಿದ್ದ ಪರಿಷತ್ ಒಂದರ್ಥದಲ್ಲಿ ವಿಧಾನಸಭೆಯಲ್ಲಿನ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡುವ ಹಿರಿಯಣ್ಣನಂತೆ ಕೆಲಸ ಮಾಡುತ್ತಿತ್ತು. ಶಾಸನ ಸಭೆಯಲ್ಲಿನ ಭಾಷಣಗಳು ಐತಿಹಾಸಿಕ ದಾಖಲೆಗಳಾಗಿ ಉಳಿದುಕೊಂಡಿರುವುದರ ಹಿಂದೆ ಅಂದಿನ ರಾಜಕಾರಣಿಗಳ ಓದಿನ ವಿಸ್ತಾರವಾದ ಅನುಭವವೇ ಕಾರಣ. ಇಂದು ವಿಧಾನ ಪರಿಷತ್ತಿಗೂ ಪೂರ್ಣಾವಧಿಯ ರಾಜಕಾರಣಿಗಳೇ ಸಾಹಿತ್ಯ, ಕಲೆ, ಸಮಾಜಸೇವೆಯ ಕೋಟಾದಡಿ ಪ್ರವೇಶ ಪಡೆಯುತ್ತಿದ್ದಾರೆ. ಹೀಗಾಗಿ, ಶಾಸನ ಸಭೆಯ ಮಾತುಗಳು ವಿದ್ವತ್ತನ್ನು ಕಳೆದುಕೊಂಡು ಅಲ್ಲಿ ವಾಚಾಳಿತನ ಗೋಚರಿಸುತ್ತಿದೆ.

ಅಮೆರಿಕ, ಇಂಗ್ಲೆಂಡ್‌ನಂತಹ ದೇಶಗಳಲ್ಲಿ ರಾಜಕಾರಣಿಗಳು ನಿವೃತ್ತಿಯ ನಂತರ ಪುಸ್ತಕಗಳ ಓದಿನಲ್ಲಿ ಮತ್ತು ಬರವಣಿಗೆಯಲ್ಲಿ ತೊಡಗಿಕೊಳ್ಳುತ್ತಾರೆ. ತಮ್ಮ ರಾಜಕೀಯದ ಅನುಭವವನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸುತ್ತಾರೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತ ತಮ್ಮ ಅನುಭವ ಮತ್ತು ಓದಿನ ಜ್ಞಾನವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುತ್ತಾರೆ. ಸದ್ಯದ ರಾಜಕಾರಣವನ್ನು ನೋಡಿದಾಗ, ಭಾರತದ ರಾಜಕಾರಣದಲ್ಲಿ ಇಂಥದ್ದೊಂದು ಪ್ರಬುದ್ಧ ಮತ್ತು ವಿದ್ವತ್ತಿನ ನಡೆಯನ್ನು ನಿರೀಕ್ಷಿಸಲು ಸಾಧ್ಯವೇ?

ವಾಚಕರ ವಾಣಿ

ಸರ್ಕಾರ ತನ್ನದೇ ಜಮೀನು ಖರೀದಿಸಬೇಕಾದೀತು!

ಬೆಂಗಳೂರಿನ ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ಸೇರಿದ ಐದು ಎಕರೆ ಜಾಗವು ಖಾಸಗಿಯವರಿಗೆ ಪರಭಾರೆಯಾಗಲು ಸಹಕರಿಸಿದ್ದ ಭೂಮಾಪನಾ ಇಲಾಖೆ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವುದು ವರದಿಯಾಗಿದೆ (ಪ್ರ.ವಾ., ಫೆ. 22). ಕಂದಾಯ ಇಲಾಖೆಯ ಕಾರ್ಯದರ್ಶಿ, '... ಸದ್ಯ ಹೆಚ್ಚಿನ ಮಾಹಿತಿ ಇಲ್ಲ. ಅಗತ್ಯ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು' ಎಂದಿದ್ದಾರೆ. ಇದು, ಅಚ್ಚರಿ ಮೂಡಿಸುವ ಸಂಗತಿ. ರಾಮನಗರ ಜಿಲ್ಲೆಯಲ್ಲಿನ ಸರ್ಕಾರಿ ಜಮೀನಿನ ಕಬಳಿಕೆ ಕುರಿತ ಮತ್ತೊಂದು ಪ್ರಕರಣದಲ್ಲಿ, ಒತ್ತುವರಿಯಾಗಿದ್ದ 14.4 ಎಕರೆ ಜಮೀನು 8.30 ಎಕರೆಗೆ ಇಳಿದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪ್ರಮಾಣಪತ್ರದಲ್ಲಿ ಉಲ್ಲೇಖಿಸಿಲ್ಲದಿರುವುದರ ಕುರಿತು ಹೈಕೋರ್ಟ್ ಇತ್ತೀಚೆಗೆ ತಾನೇ ಅಸಮಾಧಾನ ವ್ಯಕ್ತಪಡಿಸಿದೆ.

ಈ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಧಿಕಾರಿಗಳು ಕಾನೂನು ರೀತಿ ನಡೆದುಕೊಳ್ಳದೆ, 'ಮೇಲಿನವರ' ಒತ್ತಡಕ್ಕೆ ಅಥವಾ ಅವರ ಮರ್ಜಿಗೊಳಗಾಗಿ ತಪ್ಪಿತಸ್ಥರ ರಕ್ಷಣೆಗೆ ಶ್ರಮಿಸುತ್ತಿರುವಂತಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ, ತನ್ನ ಅನೇಕ ಯೋಜನೆಗಳಿಗೆ, ತನಗೆ ಸೇರಿದ ಜಮೀನನ್ನೇ ಮುಂದಿನ ದಿನಗಳಲ್ಲಿ ಸರ್ಕಾರವು ಖಾಸಗಿಯವರಿಂದ ಖರೀದಿಸಬೇಕಾಗಬಹುದು!

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಕೈ ಸೇರದ ನೇಮಕಾತಿ ಆದೇಶ

ಎಸ್‌ಡಿಎ ಹುದ್ದೆಗಳಿಗೆ ಸಂಬಂಧಿಸಿದ ಕಡತವನ್ನು ಮೂರು ವರ್ಷಗಳಿಂದ ತನ್ನ ಬಳಿಯೇ ಉಳಿಸಿಕೊಂಡಿದ್ದ ಕರ್ನಾಟಕ ಲೋಕಸೇವಾ ಆಯೋಗವು ಈ ವರ್ಷದ ಜನವರಿಯಲ್ಲಿ ಅಂತಿಮಪಟ್ಟಿ ಬಿಡುಗಡೆ ಮಾಡಿತು. ಸಂಬಂಧಿಸಿದ ಇಲಾಖೆಗಳಿಗೆ ಅಭ್ಯರ್ಥಿಗಳನ್ನು ಹಂಚಿಕೆ ಮಾಡಿ ತನ್ನ ಜವಾಬ್ದಾರಿಯಿಂದ ಕೈತೊಳೆದುಕೊಂಡಿತು. ಆದರೆ ವಿವಿಧ ಇಲಾಖೆಗಳು ಈ ಸಂಬಂಧ ತಮಗೆ ಹಂಚಿಕೆಯಾಗಿರುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ ಇಪ್ಪತ್ತು ದಿನಗಳು ಕಳೆದರೂ ಸಿಂಧುತ್ವ ತಯಾರಿ ನಡೆಸುವ ಬಗ್ಗೆ ಅಭ್ಯರ್ಥಿಗಳಿಗೆ ಯಾವುದೇ ಮುನ್ಸೂಚನೆ ನೀಡಿಲ್ಲ. ದೂರವಾಣಿ ಮೂಲಕ ಸಂಪರ್ಕಿಸಿದರೂ ಪ್ರತಿಕ್ರಿಯೆ ನೀಡದಿರುವುದು ಆಯೋಗಕ್ಕೆ ಕರ್ತವ್ಯದಲ್ಲಿನ ಇಚ್ಛಾಶಕ್ತಿ ಕೊರತೆಯನ್ನು ತೋರಿಸುತ್ತದೆ.

ಎರಡು ತಿಂಗಳಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಾಗಲಿದೆ. ನೇಮಕಾತಿ ಪ್ರಕ್ರಿಯೆಯನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿರುವ ಇಲಾಖೆಗಳು, ವಯೋಮಿತಿ ಅಂಚಿನಲ್ಲಿರುವ ಅಭ್ಯರ್ಥಿಗಳ ಸೇವಾ ಅವಧಿಯನ್ನು ಮೊಟಕುಗೊಳಿಸುವಲ್ಲಿ ನೇರವಾಗಿ ಪಾತ್ರ ವಹಿಸುತ್ತಿರುವುದು ದುರದೃಷ್ಟಕರ. ಒಂದು ಕಡೆ ಪರೀಕ್ಷೆ ನಡೆಸುವ ಪ್ರಾಧಿಕಾರದಿಂದ ವ್ಯಾಪಕ ವಿಳಂಬ, ಮತ್ತೊಂದು ಕಡೆ ಇಲಾಖೆಗಳಿಂದ ಮತ್ತಷ್ಟು ವಿಳಂಬ. ಅಂತಿಮಪಟ್ಟಿ ಸಿದ್ಧಗೊಂಡ ನಂತರವೂ ನಿಗದಿತ ದಿನಾಂಕದೊಳಗೆ ನೇಮಕಾತಿ ಆದೇಶ ನೀಡದೆ ತಮಗೆ ಇಷ್ಟಬಂದಾಗ ಆದೇಶ ನೀಡುವ ಇಲಾಖೆಗಳ ಸರ್ವಾಧಿಕಾರಿ ನಡೆಗೆ ಕೊನೆ ಎಂಬುದಿಲ್ಲವೇ? ಇದೇ ಅವಧಿಯಲ್ಲಿ ಪರೀಕ್ಷೆ ನಡೆಸಿದ ಪೊಲೀಸ್ ಇಲಾಖೆಗೆ ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳಿಂದ ಸಂಬಳ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಆದರೆ ಎಸ್‌ಡಿಎ ನೇಮಕಾತಿಗೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಇದಕ್ಕೆಲ್ಲಾ ಹೊಣೆ ಯಾರು?

ಸುಜ್ಜಲೂರು ವಿಜಿ, ಟಿ.ನರಸೀಪುರ

ಕಂಡ ಕಂಡಲ್ಲಿ ಭಿತ್ತಿಪತ್ರ: ಯಾರು ಕೊಟ್ಟರು ಅನುಮತಿ?

ಬೆಂಗಳೂರಿನಲ್ಲಿ ಫ್ಲೆಕ್ಸ್ ತೆರವಿಗೆ ಸಂಬಂಧಿಸಿದಂತೆ ಕೊನೆಗೂ ಎಚ್ಚೆತ್ತ ಬಿಬಿಎಂಪಿ ಆಯುಕ್ತರು, ವಲಯದ ಜಂಟಿ ಆಯುಕ್ತರಿಗೆ ಸೂಚನೆ ನೀಡಿರುವುದು ಸಂತಸದ ವಿಷಯ. ಆದರೆ ಕೆಲವು ಪ್ರಕರಣಗಳಲ್ಲಿ ಫ್ಲೆಕ್ಸ್ ಯಾರು ಹಾಕಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ, ಹೀಗಾಗಿ ಪ್ರಕರಣ ದಾಖಲಿಸಲಾಗುತ್ತಿಲ್ಲ ಎಂಬ ಆಯುಕ್ತರ ಮಾತು ವಿಚಿತ್ರವಾಗಿ ಕಾಣುತ್ತಿದೆ. ರಾಜಕಾರಣಿಗಳಿಗೆ ಹೆದರಿ ಕ್ರಮ ಕೈಗೊಳ್ಳಲು ಸಾಧ್ಯವಾಗದ ಇವರ ಅಸಹಾಯಕ ಸ್ಥಿತಿ ಕಂಡು ಮರುಕವಾಗುತ್ತಿದೆ. ಬೆಂಗಳೂರು ನಗರದಲ್ಲಿ ರಾಜಕೀಯ ಪಕ್ಷಗಳಿಂದ ಫ್ಲೆಕ್ಸ್ ಭರಾಟೆ ಒಂದೆಡೆಯಾದರೆ, ಇತ್ತೀಚೆಗೆ ಪೇಯಿಂಗ್ ಗೆಸ್ಟ್, ಇಂಟರ್ನೆಟ್ ಸೇವೆ ಒದಗಿಸುವಂತಹ ಕಂಪನಿಗಳ ಪ್ರತಿನಿಧಿಗಳು ಪ್ರತೀ ರಸ್ತೆಯಲ್ಲಿ ಗೋಡೆ, ವಿದ್ಯುತ್ ಕಂಬ, ಮನೆಯ ಕಾಂಪೌಂಡ್ ಹಾಗೂ ಗೇಟುಗಳನ್ನೂ ಬಿಡದೆ, ಮಾಲೀಕರ ಅನುಮತಿಯನ್ನೂ ಪಡೆಯದೆ ಜಾಹೀರಾತು, ಭಿತ್ತಿಪತ್ರಗಳನ್ನು ಅಂಟಿಸುತ್ತಿದ್ದಾರೆ. ಇದು ಜಂಟಿ ವಲಯ ಆಯುಕ್ತರಿಗೆ ಕಂಡಿಲ್ಲವೇ?

ನಗರದ ಅಂದ ಕೆಡಿಸುತ್ತಿರುವ ವಿಚಾರದಲ್ಲಿ ನ್ಯಾಯಾಲಯವು ಸ್ವತಃ ಆಯುಕ್ತರನ್ನೇ ಕಟಕಟೆಗೆ ಕರೆಸಿ ಛೀಮಾರಿ ಹಾಕಿದೆ. ಪಾಲಿಕೆ ಅಧಿಕಾರಿಗಳು ಸಂಸ್ಥೆಗಳ ಮೇಲೆ ಸಾರ್ವಜನಿಕ ಸ್ಥಳ ಕುರೂಪಗೊಳಿಸಿದ ಪ್ರಕರಣ ದಾಖಲಿಸಿ, ಇದಕ್ಕೆ ಅವಕಾಶ ನೀಡುತ್ತಿರುವ ಕ್ಷೇತ್ರಾಧಿಕಾರಿಗಳ ಮೇಲೂ ಕ್ರಮ ಕೈಗೊಂಡು, ನಗರದ ಸೌಂದರ್ಯವನ್ನು ಕಾಪಾಡಲಿ.

ಟಿ.ಉಮಾ ಶಂಕರ್, ಬೆಂಗಳೂರು

ರಾಸಾಯನಿಕ ಬಳಕೆ: ಇರಲಿ ಜನಜಾಗೃತಿ

ಬೆಳೆಗಳಿಗೆ ಕೀಟನಾಶಕಗಳನ್ನು ಬಳಸುವ ಕೃಷಿಕರು, ಕೃಷಿ ಕಾರ್ಮಿಕರು ಹಾಗೂ ಇಂಥ ಆಹಾರವನ್ನು ಸೇವಿಸುವ ಗ್ರಾಹಕರನ್ನು ಕೀಟನಾಶಕಗಳಿಂದ ರಕ್ಷಿಸಬೇಕಾಗಿದೆ ಎಂಬ ವಿಶ್ವ ಆರೋಗ್ಯ ಸಂಸ್ಥೆಯ ಕಳವಳದ ವರದಿಯು (ಪ್ರ.ವಾ., ಫೆ. 23) ಜನಜಾಗೃತಿಗೆ ನಾಂದಿಯಾಗಬೇಕು. ನಮ್ಮ ನಿತ್ಯದ ಬದುಕಿನಲ್ಲಿ ರಾಸಾಯನಿಕಗಳ ಬಳಕೆಯಿಲ್ಲದ ಜೀವನ ಊಹಿಸಲು ಅಸಾಧ್ಯವಾದರೂ ಇದರಿಂದ ಪಾರಾಗುವ ಮಾರ್ಗವಿದೆ. ರಾಸಾಯನಿಕಗಳ ಮಿತಬಳಕೆ, ಮರುಬಳಕೆ ಹಾಗೂ ವೈಜ್ಞಾನಿಕ ವಿಲೇವಾರಿಯಂಥ ವಿಧಾನಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ಮತ್ತು ಜಾಗೃತಿ ಮೂಡಿಸಿದರೆ ರಾಸಾಯನಿಕಗಳ ಬಳಕೆಯಿಂದಾಗುವ ಪ್ರಯೋಜನ ಹಾಗೂ ಅವುಗಳ ನಿರ್ವಹಣೆ ಕೂಡ ಸುಲಭವಾಗುತ್ತದೆ.

ಕೃಷಿ ಭೂಮಿಯಲ್ಲಿ ರಾಸಾಯನಿಕಗಳ ಬಳಕೆಯ ಜೊತೆಗೆ ಪ್ಲಾಸ್ಟಿಕ್ ಸುಡುವುದನ್ನು ಕಾಣುತ್ತೇವೆ. ಪ್ಲಾಸ್ಟಿಕ್ ಸುಡುವಾಗ ಉತ್ಪಾದನೆಯಾಗುವ ಅಪಾಯಕಾರಿ ರಾಸಾಯನಿಕಗಳು ಪರಿಸರವನ್ನು ಸೇರಿ ವಾತಾವರಣ ಹದಗೆಡುತ್ತದೆ. ಇದರಿಂದ ಅನೇಕ ಕಾಯಿಲೆಗಳು, ಅವಕ್ಕೆ ತಕ್ಕಂತೆ ಆಸ್ಪತ್ರೆಗಳ ಸಂಖ್ಯೆ ಕೂಡ ಹೆಚ್ಚುತ್ತದೆ ಅಲ್ಲವೇ? ಆದ್ದರಿಂದ ರಾಸಾಯನಿಕಗಳ ಬಳಕೆ, ಸಂಗ್ರಹ, ವಿಲೇವಾರಿಯ ಬಗ್ಗೆ ಮೊದಲು ಎಲ್ಲಾ ಹಂತದ ಜನಪ್ರತಿನಿಧಿಗಳಿಗೆ ಅರಿವು ಮೂಡಿಸುವಂತಾಗಲು ಸರ್ಕಾರ ಮುಂದಾಗಬೇಕಾಗಿದೆ.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಲ್ಲೆ ಮೀರಿದ ...ಮಾತು

ಕಾಂಗ್ರೆಸ್‌ನ ವಕ್ತಾರ ಪವನ್ ಖೇರಾ ಮಾಧ್ಯಮಗೋಷ್ಠಿಯಲ್ಲಿ ಮಾತನಾಡುತ್ತಾ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರನ್ನು 'ನರೇಂದ್ರ ಗೌತಮ್‌ದಾಸ್ ಮೋದಿ' ಎಂದು ಹೇಳಿದ್ದರು. ಮೋದಿ ಅವರ ಹೆಸರನ್ನು ತಪ್ಪಾಗಿ ಹೇಳಿದ ಕಾರಣಕ್ಕೆ ಖೇರಾ ವಿರುದ್ಧ ದೇಶದ ಹಲವೆಡೆ ಪ್ರಕರಣ ದಾಖಲಾಗಿದೆ. ಕ್ರಿಮಿನಲ್ ಸಂಚು, ವೈಯಕ್ತಿಕ ನಿಂದನೆ, ಧರ್ಮಗಳ ಮಧ್ಯೆ ದ್ವೇಷ ಹರಡುವ ಉದ್ದೇಶ, ಶಾಂತಿ ಕದಡಲು ಯತ್ನಿಸಿದ ಸೆಕ್ಷನ್‌ಗಳ ಅಡಿಯಲ್ಲಿ ಖೇರಾ ವಿರುದ್ಧ ಪ್ರಕರಣ ದಾಖಲಾಗಿದೆ. ದೇಶದಲ್ಲಿ ಈ ಹಿಂದೆಯೂ ರಾಜಕಾರಣಿಗಳು ಪರಸ್ಪರ ವೈಯಕ್ತಿಕ ನಿಂದನೆ ಮಾಡಿದ ನಿದರ್ಶನಗಳು ಸಾಕಷ್ಟಿವೆ. ರಾಹುಲ್ ಗಾಂಧಿ ಅವರನ್ನು 'ಪಪ್ಪು' ಎಂದು, ನರೇಂದ್ರ ಮೋದಿ ಅವರನ್ನು 'ಚಾಯ್‌ವಾಲಾ' ಎಂದು, ಸಿದ್ದರಾಮಯ್ಯ ಅವರನ್ನು 'ಸಿದ್ರಾಮುಲ್ಲಾ ಖಾನ್' ಎಂಬುದಾಗಿ ಕರೆದು ಮೂದಲಿಸಿದ್ದ ಉದಾಹರಣೆಗಳು ಇವೆ

ರಾಷ್ಟ್ರಪತಿಗೆ 'ಅಗೌರವ'

2022ರ ಜುಲೈನಲ್ಲಿ, ಕಾಂಗ್ರೆಸ್ ಮುಖಂಡ ಅಧಿರ್ ರಂಜನ್ ಚೌಧರಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಹುದ್ದೆಗೆ ಅಗೌರವ ಸೂಚಕವಾಗಿ ಮಾತನಾಡಿದ್ದಾರೆ ಎಂಬ ವಿಚಾರ ಲೋಕಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಗಿತ್ತು. 'ರಾಷ್ಟ್ರಪತಿ' ಪದದ ಬದಲು 'ರಾಷ್ಟ್ರಪತ್ನಿ' ಎಂದು ಚೌಧರಿ ಕರೆದಿದ್ದಾರೆ ಎಂದು ಆರೋಪಿಸಿದ್ದ ಬಿಜೆಪಿ ಸಂಸದರು ಗದ್ದಲ ಎಬ್ಬಿಸಿದ್ದರು. ಬುಡಕಟ್ಟು ಸಮುದಾಯಕ್ಕೆ ಸೇರಿದ ರಾಷ್ಟ್ರಪತಿಯನ್ನು ಕಾಂಗ್ರೆಸ್ ನಡೆಸಿಕೊಳ್ಳುತ್ತಿರುವ ರೀತಿ ಸರಿಯಿಲ್ಲ ಎಂದು ಆರೋಪಿಸಿ, ಕೇಂದ್ರ ಸಚಿವೆ ಸ್ಮೃತಿ ಇರಾನಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಹಾಗೂ ಬಿಜೆಪಿಯ ಮಹಿಳಾ ಸಂಸದರು ಪ್ರತಿಭಟನೆ ನಡೆಸಿದ್ದರು. ಸದನಕ್ಕೆ ಬಂದಿದ್ದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ತಡೆದು ಎಳೆದಾಡಿದ್ದರು ಎಂದು ಕಾಂಗ್ರೆಸ್ ಸಂಸದರು ಆರೋಪಿಸಿದ್ದರು. ಈ ಘಟನೆಯು ಸಂಸತ್ತಿನಲ್ಲಿ ಜಟಾಪಟಿಗೆ ಕಾರಣವಾಗಿತ್ತು. ಚೌಧರಿ ಅವರು ತಾವು ಬಾಯಿತಪ್ಪಿ ಆಡಿದ್ದ ಮಾತಿಗೆ ಕ್ಷಮೆ ಕೋರಿದ್ದರು.

'₹50 ಕೋಟಿ ಗರ್ಲ್‌ಫ್ರೆಂಡ್'

ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರು 2012ರ ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಅಂದಿನ ಕೇಂದ್ರ ಸಚಿವ ಹಾಗೂ ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರ ವೈಯಕ್ತಿಕ ಜೀವನದ ಬಗ್ಗೆ ಟೀಕೆ ಮಾಡಿದ್ದರು. ತರೂರ್ ಅವರ ಪತ್ನಿ ಸುನಂದಾ ಪುಷ್ಕರ್ ಅವರನ್ನು ಕುರಿತು '50 ಕೋಟಿ ರೂಪಾಯಿಯ ಗರ್ಲ್‌ಫ್ರೆಂಡ್' ಎಂದು ಮೋದಿ ಹೇಳಿದ್ದರು 2010ರಲ್ಲಿ ಐಪಿಎಲ್ ಕೊಚ್ಚಿ ತಂಡದ ವ್ಯವಹಾರದ ವಿಚಾರವಾಗಿ ಉಂಟಾಗಿದ್ದ ವಿವಾದವನ್ನು ಟೀಕಿಸಲು ಮೋದಿ ಅವರು ಈ ರೀತಿ ಹೇಳಿದ್ದರು. ಇದಕ್ಕೆ ತಿರುಗೇಟು ನೀಡಿದ್ದ ತರೂರ್, 'ನನ್ನ ಪತ್ನಿ ಬೆಲೆಕಟ್ಟಲಾಗದವಳು' ಎಂದಿದ್ದರು. 'ನಿಮ್ಮ ಕಲ್ಪನೆಯ ₹50 ಕೋಟಿಗಿಂತಲೂ ಆಕೆ ಹೆಚ್ಚು ಮೌಲ್ಯದವಳು' ಎಂದು ಹೇಳಿದ್ದರು.

'ಸಾವಿನ ವ್ಯಾಪಾರಿ'

ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿ ಆಗಿದ್ದಾಗ ಕಾಂಗ್ರೆಸ್‌ನ ನಾಯಕರು ಅವರನ್ನು, 'ಸಾವಿನ ವ್ಯಾಪಾರಿ' ಎಂದು ಕರೆದಿದ್ದರು. 2002ರ ಗೋಧ್ರಾ ಮತ್ತು ಗೋಧ್ರೋತ್ತರ ಹತ್ಯಾಕಾಂಡದಲ್ಲಿ ಮೋದಿ ಅವರ ಕೈವಾಡ ಇದೆ ಎಂದು ಆರೋಪಿಸುವುದಕ್ಕಾಗಿ ಕಾಂಗ್ರೆಸ್ ನಾಯಕರು 'ಸಾವಿನ ವ್ಯಾಪಾರಿ' ಎಂಬುದನ್ನು ಬಳಸಿದ್ದರು. ಮೊದಲ ಬಾರಿ ಇದನ್ನು ಬಳಸಿದ್ದು ಸೋನಿಯಾ ಗಾಂಧಿ. 2007ರ ಗುಜರಾತ್ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸೋನಿಯಾ ಅವರು ಮೋದಿ ಅವರನ್ನು 'ಸಾವಿನ ವ್ಯಾಪಾರಿ' ಎಂದು ಕರೆದಿದ್ದರು. ಈ ಟೀಕೆಗೆ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. ಆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿತ್ತು. ಆದರೆ, 2014ರ ಲೋಕಸಭಾ ಚುನಾವಣೆಗೆ ಮೋದಿ ಅವರನ್ನು ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿದಾಗಲೂ ಕಾಂಗ್ರೆಸ್ ನಾಯಕರು ಈ ಟೀಕೆ ಬಳಸಿದ್ದರು. 2014ರ ಮಾರ್ಚ್‌ನಲ್ಲಿ ಕಾಂಗ್ರೆಸ್ ವಕ್ತಾರ ಶಕ್ತಿಸಿನ್ಹ ಗೋಹಿಲ್ ಮೋದಿ ಅವರನ್ನು ಮತ್ತೆ 'ಸಾವಿನ ವ್ಯಾಪಾರಿ' ಎಂದು ಕರೆದಿದ್ದರು. ಇದಕ್ಕೂ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.



ಸೋನಿಯಾ ಮೈಬಣ್ಣದ ಟೀಕೆ

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ವಿರುದ್ಧ ಬಿಜೆಪಿಯ ಹಲವು ನಾಯಕರು ವೈಯಕ್ತಿಕ ಜೀವನ ಕುರಿತ ಹಲವು ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದಾರೆ. ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು, 'ಒಂದು ವೇಳೆ, ರಾಜೀವ್ ಗಾಂಧಿ ಅವರು ನೈಜೀರಿಯಾದ ಮಹಿಳೆಯನ್ನು ವಿವಾಹವಾಗಿದ್ದರೆ ಅಥವಾ ಸೋನಿಯಾ ಅವರು ಶ್ವೇತವರ್ಣದವರು ಆಗಿಲ್ಲದಿದ್ದರೆ, ಅವರನ್ನು ಕಾಂಗ್ರೆಸ್ ಒಪ್ಪಿಕೊಳ್ಳುತ್ತಿತ್ತೇ' ಎಂದು ಪ್ರಶ್ನಿಸಿದ್ದರು. ಇದು ಸೋನಿಯಾ ಅವರ ಮೈಬಣ್ಣದ ಕುರಿತು ಮಾಡಿದ ಟೀಕೆಯಾಗಿತ್ತು.



ಸೋನಿಯಾ ಅವರು ವಿದೇಶಿ ಮೂಲದವರು ಎಂಬ ವಿಚಾರವನ್ನು ಬಿಜೆಪಿ ಸಾಕಷ್ಟು ಬಾರಿ ಟೀಕೆಗೆ ಬಳಸಿಕೊಂಡಿದೆ. ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸೋನಿಯಾ ಅವರನ್ನು 'ಜರ್ಸಿ ಹಸು' ಎಂದು ಜರೆದಿದ್ದರು. 'ಸೋನಿಯಾ ಅವರನ್ನು 'ಮೇಡಂ' ಎಂದು ಸಂಬೋಧಿಸುತ್ತಿದ್ದುದು ಅವರ ಮೇಲಿನ ಗೌರವಕ್ಕಾಗಿ ಅಲ್ಲ, ಬದಲಾಗಿ ಅವರ ಇಟಲಿ ಮೂಲವನ್ನು ಕೆಣಕುವುದಕ್ಕಾಗಿ' ಎಂಬ ಮಾತುಗಳಿದ್ದವು. ಸೋನಿಯಾ ಅವರನ್ನು 'ಬಾರ್ ಪರಿಚಾರಕಿ' ಎಂದು ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಹೀಗಳೆದಿದ್ದರು.

'ರಾಹುಲ್ ತಂದೆ ಯಾರು'

ರಾಹುಲ್ ಗಾಂಧಿ ಅವರನ್ನು 'ಪಪ್ಪು' ಎಂದೂ, 'ಯುವರಾಜ' ಎಂಬುದಾಗಿಯೂ ಬಿಜೆಪಿಯ ಹಲವು ನಾಯಕರು ಟೀಕಿಸಿದ್ದಾರೆ. ಪಕ್ಷದ ಮುಖಂಡ ಹಾಗೂ ಫತೇಪುರ್ ಸಿಕ್ರಿಯ ಸಂಸದ ಚೌಧರಿ ಬಾಬುಲಾಲ್ ಅವರು ರಾಹುಲ್ ಅವರ ತಂದೆ ಯಾರು ಎಂಬುದಕ್ಕೆ ಪುರಾವೆ ಕೇಳಿದ್ದರು. 'ಮೋದಿ ಸರ್ಕಾರ ನಡೆಸಿದ ನಿರ್ದಿಷ್ಟ ದಾಳಿಗೆ ಸಾಕ್ಷ್ಯ ನೀಡುವಂತೆ ರಾಹುಲ್ ಅವರು ಕೇಳಿದ್ದಾರೆ. ಆದರೆ ತಮ್ಮ ಪೋಷಕರು ಯಾರು ಎಂಬ ದಾಖಲೆಯನ್ನು ನೀಡಲು ರಾಹುಲ್ ಅವರಿಗೆ ಸಾಧ್ಯವೇ' ಎಂದು ಬಾಬುಲಾಲ್ ಪ್ರಶ್ನಿಸಿದ್ದರು. ವೈಯಕ್ತಿಕ ಮಟ್ಟದಲ್ಲಿ ಮಾಡಲಾದ ಈ ಟೀಕೆಗೆ ಕಾಂಗ್ರೆಸ್‌ನಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

'ಚಾಯ್‌ವಾಲಾ, ನೀಚ್ ಆದ್ಮಿ'

ಪ್ರಧಾನಿ ನರೇಂದ್ರ ಮೋದಿ ಅವರ ಕೆಲಸವನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಅವರು 'ಚಾಯ್‌ವಾಲಾ' ಎಂಬ ಪದವನ್ನು ಬಳಸಿದ್ದರು. ಮೋದಿ ಅವರು ಆರಂಭದಲ್ಲಿ ಚಹಾ ಮಾರುತ್ತಿದ್ದ ವಿಚಾರವನ್ನು ಟೀಕೆಗೆ ಬಳಸಿಕೊಂಡಿದ್ದರು. ಅವರ ಮೇಲೆ ಜಾತಿ ಆಧರಿಸಿದ ಟೀಕೆಗಳೂ ಕೇಳಿಬಂದಿದ್ದವು. 2017ರಲ್ಲಿ ಮೋದಿ ಅವರನ್ನು 'ನೀಚ್ ಆದ್ಮಿ' ಎಂದು ಕರೆದಿದ್ದೂ ಭಾರಿ ಕೋಲಾಹಲಕ್ಕೆ ಕಾರಣವಾಗಿತ್ತು. 'ಮೋದಿ ಅವರು ಬ್ರಾಹ್ಮಣರಲ್ಲದ ಕಾರಣ, ಅವರಿಗೆ ಹಿಂದುತ್ವದ ಬಗ್ಗೆ ಮಾತನಾಡಲು ಯಾವುದೇ ಹಕ್ಕಿಲ್ಲ' ಎಂದು ಕಾಂಗ್ರೆಸ್ ಮುಖಂಡ ಸಿ.ಪಿ. ಜೋಷಿ ಅರೋಪಿಸಿದ್ದರು.

'ಮೋದಿ ಅವರ ತಂದೆ ಯಾರೆಂದು ಯಾರಿಗೂ ಗೊತ್ತಿಲ್ಲ' ಎಂದು ವಿಲಾಸರಾವ್ ಮತ್ತೇಂವಾರ್ ಅವರು ಆರೋಪಿಸಿದ್ದರು. 2018ರ ರಾಜಸ್ಥಾನ ವಿಧಾನಸಭಾ ಚುನಾವಣೆಯ ವೇಳೆ ಕೇಂದ್ರ ಸಚಿವ ವಿಲಾಸರಾವ್ ಮಾಡಿದ್ದ ಭಾಷಣದ ವಿಡಿಯೊವನ್ನು ಬಿಜೆಪಿ ಟ್ವಿಟರ್‌ನಲ್ಲಿ ಹಂಚಿಕೊಂಡಿತ್ತು. ರಾಹುಲ್ ಅವರು ಐದು ತಲೆಮಾರಿನ ಹಿನ್ನೆಲೆ ಹೊಂದಿದ್ದಾರೆ ಎಂಬುದನ್ನು ಹೋಲಿಸಲು ವಿಲಾಸರಾವ್ ಅವರು ಹೀಗೆ ಹೇಳಿದ್ದರು ಎನ್ನಲಾಗಿದೆ. ಇದಕ್ಕೆ ವ್ಯಾಪಕ ಪ್ರತಿರೋಧ ವ್ಯಕ್ತವಾಗಿತ್ತು.

ರಾಜ್ ಬಬ್ಬರ್ ಅವರು, ಮೋದಿ ಸರ್ಕಾರದ ಅವಧಿಯಲ್ಲಿ ರೂಪಾಯಿ ಮೌಲ್ಯ ಕುಸಿಯುತ್ತಿದೆ ಎಂದು ಆರೋಪಿಸುವ ಭರದಲ್ಲಿ, ಮೋದಿ ಅವರ ತಾಯಿಯ ವಯಸ್ಸಿನೊಂದಿಗೆ ರೂಪಾಯಿ ಮೌಲ್ಯವನ್ನು ಹೋಲಿಕೆ ಮಾಡಿದ್ದ ಘಟನೆ 2018ರಲ್ಲಿ ನಡೆದಿತ್ತು. ಇದೊಂದು ಕೆಟ್ಟ ಮಾನಸಿಕ ಸ್ಥಿತಿ ಎಂದು ಬಿಜೆಪಿ ಮುಖಂಡ ವಿಜಯ್ ರೂಪಾಣಿ ಅವರು ರಾಜ್ ಬಬ್ಬರ್ ಮಾತನ್ನು ಛೇಡಿಸಿದ್ದರು.

ರಾಜ್ಯದಲ್ಲಿಯೂ ಕಡಿಮೆ ಇಲ್ಲ

ರಾಜ್ಯದಲ್ಲೂ ರಾಜಕೀಯ ನಾಯಕರು ವೈಯಕ್ತಿಕ ಟೀಕೆಗಿಳಿದಿದ್ದಾರೆ. ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರನ್ನು 'ಸಿದ್ರಾಮುಲ್ಲಾ ಖಾನ್' ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ಕರೆದಿದ್ದರು. ಈ ಟೀಕೆಗೆ ಸಿದ್ದರಾಮಯ್ಯ, 'ನಾನು ಸಿದ್ರಾಮುಲ್ಲಾ ಖಾನ್ ಹೌದು' ಎಂದು ತಿರುಗೇಟು ನೀಡಿದ್ದರು. ಸಚಿವ ಅಶ್ವತ್ಥ ನಾರಾಯಣ ಅವರು 'ಸಿದ್ದರಾಮಯ್ಯ ಅವರನ್ನು ಹೊಡೆದುಹಾಕಬೇಕು' ಎಂಬುದಾಗಿ ಬಹಿರಂಗ ಸಭೆಯೊಂದರಲ್ಲಿ ಹೇಳಿದ್ದರು. 'ಉರಿಗೌಡ, ನಂಜೇಗೌಡರು ಟಿಪ್ಪುವನ್ನು ಹೊಡೆದ ಹಾಗೆ, ಸಿದ್ದರಾಮಯ್ಯ ಅವರನ್ನೂ ಹೊಡೆದುಹಾಕಬೇಕು' ಎಂದು ಹೇಳಿದ್ದರು. ಸಚಿವರ ಹೇಳಿಕೆಗೆ ಭಾರಿ ವಿರೋಧ ವ್ಯಕ್ತವಾಗಿತ್ತು. ನಂತರ, ತಾವು ಆ ಅರ್ಥದಲ್ಲಿ ಹೇಳಿಲ್ಲ ಎಂದು ಸಚಿವರು ಸ್ಪಷ್ಟನೆ ನೀಡಿದ್ದರು.

ಕಾನೂನು ಹೇಳುವುದೇನು?

ದ್ವೇಷ ಭಾಷಣ ಮತ್ತು ವೈಯಕ್ತಿಕ ನಿಂದನೆ ಪ್ರಕರಣಗಳನ್ನು ಸಾಮಾನ್ಯವಾಗಿ ಭಾರತೀಯ ದಂಡ ಸಂಹಿತೆಯ 153ಎ, 153ಬಿ, 295ಬಿ, 298, 501, 504 ಮತ್ತು 506ನೇ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಿಸಲಾಗುತ್ತದೆ. ಈ ಎಲ್ಲಾ ಸೆಕ್ಷನ್‌ಗಳ ಅಡಿಯಲ್ಲಿ ತಪ್ಪಿತಸ್ಥ ಎಂದು ಸಾಬೀತಾದರೆ, ಗರಿಷ್ಠ 7 ವರ್ಷದವರೆಗೆ ಜೈಲುಶಿಕ್ಷೆ ವಿಧಿಸಲು ಅವಕಾಶವಾಗುತ್ತದೆ. ಈ ಸೆಕ್ಷನ್‌ಗಳು ಶಿಕ್ಷೆಯ ಪ್ರಮಾಣವನ್ನು ಮಾತ್ರ ಸೂಚಿಸಿವುದಿಲ್ಲ, ಬದಲಿಗೆ ದ್ವೇಷ ಭಾಷಣ ಮತ್ತು ವೈಯಕ್ತಿಕ ನಿಂದನೆಯ ಸ್ವರೂಪಗಳನ್ನು ವ್ಯಾಖ್ಯಾನಿಸುತ್ತವೆ.

ಸೆಕ್ಷನ್ 153ಎ ಮತ್ತು ಸೆಕ್ಷನ್ 153ಬಿ: ಧರ್ಮ, ಜನಾಂಗ, ಜಾತಿ, ಜನ್ಮದ ಸ್ಥಳ, ವಾಸ, ಭಾಷೆಯ ಆಧಾರದಲ್ಲಿ ಎರಡು ಗುಂಪುಗಳ ಮಧ್ಯೆ ದ್ವೇಷ ಹರಡುವ ಕೃತ್ಯಗಳು ಈ ಸೆಕ್ಷನ್ ಅಡಿಯಲ್ಲಿ ಬರುತ್ತವೆ. ಇಂತಹ ಕೃತ್ಯಗಳು ಮೌಖಿಕ, ಲಿಖಿತ, ಸನ್ನೆ, ಪ್ರದರ್ಶನದ ರೂಪದಲ್ಲಿ ಇರಬಹುದು. ಸಾಮಾಜಿಕ ಸಾಮರಸ್ಯವನ್ನು ಹಾಳು ಮಾಡುವ ಉದ್ದೇಶದಿಂದ ಇಂತಹ ಕೃತ್ಯಗಳನ್ನು ನಡೆಸುವುದೂ ಈ ಸೆಕ್ಷನ್‌ನ ಅಡಿಯಲ್ಲೇ ಬರುತ್ತದೆ. ಯಾವುದೇ ಸಮುದಾಯದ ವಿರುದ್ಧ ಹಿಂಸೆ ಮತ್ತು ವಿಧ್ವಂಸಕಾರಿ ಕೃತ್ಯವನ್ನು ನಡೆಸುವಂತೆ ಪ್ರಚೋದಿಸಲು ಆಯೋಜಿಸುವ ಕಾರ್ಯಕ್ರಮಗಳೂ ಇದೇ ಸೆಕ್ಷನ್ ಅಡಿಯಲ್ಲಿ ಬರುತ್ತವೆ. ಇಂತಹ ಕೃತ್ಯಗಳಿಗೆ ಗರಿಷ್ಠ ಮೂರು ವರ್ಷದವರೆಗೆ ಜೈಲುಶಿಕ್ಷೆ ವಿಧಿಸಲು ಅವಕಾಶವಿದೆ. ಪ್ರಾರ್ಥನೆ ಮತ್ತು ಆರಾಧನೆಯ ಸ್ಥಳಗಳಲ್ಲಿ ಎಸಗುವ ಇಂತಹ ಕೃತ್ಯಗಳಲ್ಲಿ ಗರಿಷ್ಠ 5 ವರ್ಷದವರೆಗೆ ಜೈಲುಶಿಕ್ಷೆ ವಿಧಿಸಲು ಅವಕಾಶವಿದೆ.

ಸೆಕ್ಷನ್ 295ಬಿ: ಯಾವುದೇ ಧರ್ಮ ಅಥವಾ ಸಮುದಾಯದ ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕೃತ್ಯಗಳು ಈ ಸೆಕ್ಷನ್‌ನ ಅಡಿಯಲ್ಲಿ ಬರುತ್ತವೆ. ಇಂತಹ ಕೃತ್ಯಗಳು ಮೌಖಿಕ, ಲಿಖಿತ, ಸನ್ನೆ, ಪ್ರದರ್ಶನದ ರೂಪದಲ್ಲಿ ಇರಬಹುದು. ಈ ಸೆಕ್ಷನ್‌ನ ಅಡಿಯಲ್ಲಿ ಸಾಬೀತಾಗುವ ಕೃತ್ಯಗಳಿಗೆ ಗರಿಷ್ಠ ಮೂರು ವರ್ಷಗಳವರೆಗೆ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ.

ಸೆಕ್ಷನ್ 298: ಯಾವುದೇ ವ್ಯಕ್ತಿಯ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಉದ್ದೇಶದಿಂದ ಮಾತನಾಡುವುದು ಅಥವಾ ಸನ್ನೆ ಮಾಡುವುದು ಅಥವಾ ಶಬ್ದ ಮಾಡುವುದು ಅಥವಾ ಪ್ರಾರ್ಥನೆಯ ಸ್ಥಳದಲ್ಲಿ ವಸ್ತುಗಳನ್ನು ಇರಿಸುವಂತಹ ಕೃತ್ಯಗಳನ್ನು ಈ ಸೆಕ್ಷನ್‌ನ ಅಡಿ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಈ ಸೆಕ್ಷನ್ ಅಡಿ ಸಾಬೀತಾದ ಕೃತ್ಯಕ್ಕೆ ಗರಿಷ್ಠ ಒಂದು ವರ್ಷದವರೆಗೆ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ.

ಸೆಕ್ಷನ್ 501: ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಗಳ ರಾಜ್ಯಪಾಲರು ಮತ್ತು ಸಚಿವರಿಗೆ ಅವಮಾನ ಮಾಡುವಂತಹ ಮಾತು, ಸನ್ನೆ, ಕ್ರಿಯೆಗಳನ್ನು ಈ ಸೆಕ್ಷನ್‌ನ ಅಡಿಯಲ್ಲಿ ಅಪರಾಧ ಕೃತ್ಯ ಎಂದು ಪರಿಗಣಿಸಲಾಗುತ್ತದೆ. ಈ ಸೆಕ್ಷನ್ ಅಡಿ ಸಾಬೀತಾದ ಅಪರಾಧ ಕೃತ್ಯಗಳಿಗೆ ಗರಿಷ್ಠ ಎರಡು ವರ್ಷದವರೆಗೆ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ.

ಸೆಕ್ಷನ್ 504: ಯಾವುದೇ ವ್ಯಕ್ತಿಯನ್ನು ಅವಮಾನಿಸುವುದರಿಂದ ಅಥವಾ ಪ್ರಚೋದಿಸುವುದರಿಂದ ಆತ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವಂತಹ ಕೃತ್ಯಗಳನ್ನು ಎಸಗುತ್ತಾನೆ ಎಂದು ಗೊತ್ತಿದ್ದೂ, ಮಾಡುವ ಕ್ರಿಯೆಯನ್ನು ಈ ಸೆಕ್ಷನ್‌ನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಈ ಸೆಕ್ಷನ್ ಅಡಿ ಸಾಬೀತಾದ ಅಪರಾಧ ಕೃತ್ಯಗಳಿಗೆ ಗರಿಷ್ಠ ಎರಡು ವರ್ಷದವರೆಗೆ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ.

ಸೆಕ್ಷನ್ 506: ಯಾವುದೇ ವ್ಯಕ್ತಿ ಅಥವಾ ಸ್ವತ್ತಿಗೆ ಹಾನಿಯಾಗುವಂತಹ ಕೃತ್ಯಗಳನ್ನು ನಡೆಸುವುದಾಗಿ ಬೆದರಿಕೆ ಹಾಕುವುದನ್ನು ಈ ಸೆಕ್ಷನ್ ಅಡಿ ಅಪರಾಧ ಕೃತ್ಯ ಎಂದು ಪರಿಗಣಿಸಲಾಗುತ್ತದೆ. ಈ ಸೆಕ್ಷನ್ ಅಡಿ ಸಾಬೀತಾದ ಕೃತ್ಯಗಳಿಗೆ ಗರಿಷ್ಠ ಎರಡು ವರ್ಷಗಳವರೆಗೆ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ. ಇಂತಹ ಬೆದರಿಕೆಯ ಕಾರಣದಿಂದ ಸಾವು ಉಂಟಾದರೆ ಅಥವಾ ಸ್ವತ್ತಿಗೆ ಹಾನಿಯಾದರೆ ಅಂತಹ ಪ್ರಕರಣಗಳಲ್ಲಿ, ಅಪರಾಧಿಗೆ ಗರಿಷ್ಠ ಏಳು ವರ್ಷಗಳವರೆಗೆ ಜೈಲುಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ.

ಆಧಾರ: ಭಾರತೀಯ ದಂಡ ಸಂಹಿತೆ, ಪಿಟಿಐ

ಶಿವಸೇನಾ ಭವನದಿಂದ ದೂರ ನಡೆದ ಶಿವಸೇನಾ

ಮುಂಬೈನ ದಾದರ್‌ನಲ್ಲಿರುವ ಶಿವಸೇನಾ ಭವನ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಠಾಣೆ/ಮುಂಬೈ: ಮುಂಬೈನ ಬಾಂದ್ರಾದಲ್ಲಿನ ಮಾತೋಶ್ರೀ ಮತ್ತು ದಾದರ್‌ನಲ್ಲಿನ ಶಿವಸೇನಾ ಭವನ ಈವರೆಗೆ ಶಿವಸೇನಾದ ಶಕ್ತಿಕೇಂದ್ರಗಳಾಗಿದ್ದವು. ಪಕ್ಷದ ಸಂಸ್ಥಾಪಕ ಬಾಳಾ ಠಾಕ್ರೆ ಅವರ ನಿವಾಸವಾದ ಮಾತೋಶ್ರೀಯಲ್ಲಿ ಪಕ್ಷದ ಎಲ್ಲಾ ಕಾರ್ಯಚಟುವಟಿಕೆಗಳು ನಿರ್ಧಾರವಾಗುತ್ತಿದ್ದವು. ಅಂತದ್ದೇ ಮತ್ತೊಂದು ಸ್ಥಳ ಪಕ್ಷದ ಕೇಂದ್ರ ಕಚೇರಿಯಾಗಿದ್ದ 'ಶಿವಸೇನಾ ಭವನ'. ಬಾಳಾ ಠಾಕ್ರೆ ನಿಧನದ ನಂತರ ಮಾತೋಶ್ರೀಯ ಮಹತ್ವ ಸ್ವಲ್ಪ ಕಡಿಮೆಯಾಗಿತ್ತು. ಆದರೆ, ಶಿವಸೇನಾ ಭವನವು ರಾಜ್ಯ ರಾಜಕಾರಣದಲ್ಲಿ ಪ್ರಬಲ ಶಕ್ತಿಕೇಂದ್ರವಾಗಿಯೇ ಉಳಿದಿತ್ತು. ಆದರೆ, ಈಗ ಆ ಭವನದಿಂದಲೇ ಶಿವಸೇನಾ ದೂರ ಸರಿದಿದೆ.

ಪಕ್ಷ ಇಬ್ಭಾಗವಾದುದನ್ನು ಎತ್ತಿಹಿಡಿದಿದ್ದ ಚುನಾವಣಾ ಆಯೋಗ ಏಕನಾಥ ಶಿಂದೆ ಬಣವೇ ಅಧಿಕೃತ ಶಿವಸೇನಾ ಎಂದು ಆದೇಶ ನೀಡಿತ್ತು. ಅಲ್ಲಿಂದ ಎಲ್ಲದರ ಬದಲಾವಣೆ ಆರಂಭವಾಗಿದೆ. ಏಕನಾಥ ಶಿಂದೆ ಬಣವೇ ಅಧಿಕೃತ ಶಿವಸೇನಾ ಎಂದು ಆಯೋಗ ತೀರ್ಪು ನೀಡಿದ್ದರೂ, ಶಿವಸೇನಾ ಭವನದ ಮೇಲೆ ಅದು ಹಕ್ಕು ಚಲಾಯಿಸುತ್ತಿಲ್ಲ. ಬದಲಿಗೆ ಮುಂಬೈನ ಪಕ್ಕದ ಠಾಣೆಯಲ್ಲಿ ಹೊಸ ಕಚೇರಿಯನ್ನು ಆರಂಭಿಸಿದೆ. ಅದನ್ನೇ ಪಕ್ಷದ ಕೇಂದ್ರ ಕಚೇರಿ ಎಂದೂ ಘೋಷಿಸಿದೆ.

ಮುಂಬೈನ ದಾದರ್‌ನ ಐತಿಹಾಸಿಕ ಶಿವಾಜಿ ಪಾರ್ಕ್‌ನಿಂದ ಕೂಗಳತೆ ದೂರದಲ್ಲಿರುವ ಶಿವಸೇನಾ ಭವನದಲ್ಲಿ ಪಕ್ಷದ ಕಟ್ಟಾಳುಗಳು ಮತ್ತು ಬಾಳಾ ಠಾಕ್ರೆ ಮಧ್ಯೆ ಮಹತ್ವದ ಸಭೆಗಳು ನಡೆಯುತ್ತಿದ್ದವು. ಪಕ್ಷದ ಸಿದ್ಧಾಂತಗಳು, ನಿಲುವುಗಳು, ಹೋರಾಟಗಳು ರೂಪುಗೊಂಡಿದ್ದರಲ್ಲಿ ಮಾತೋಶ್ರೀಯ ಪಾಲು ಎಷ್ಟಿದೆಯೋ ಅಷ್ಟೇ ಪಾಲು ಶಿವಸೇನಾ ಭವನಕ್ಕೂ ಇದೆ. ಅಂತಹ ಮಹತ್ವದ ಭವನದ ಮೇಲೆ ಶಿಂದೆ ಅವರು ಹಕ್ಕು ಚಲಾಯಿಸದೇ ಇರಲು ಕಾರಣಗಳಿವೆ.

ಶಿವಸೇನಾ ಭವನದ ಒಡೆತನವು 'ಶ್ರೀ ಶಿವಾಯಿ ಸೇವಾ ಟ್ರಸ್ಟ್'ಗೆ ಸೇರಿದೆ. ಈ ಟ್ರಸ್ಟ್ ಠಾಕ್ರೆ ಕುಟುಂಬದ್ದು. ಹೀಗಾಗಿ ಟ್ರಸ್ಟ್ ಮತ್ತು ಶಿವಸೇನಾ ಭವನದ ಮೇಲೆ ಠಾಕ್ರೆ ಕುಟುಂಬಕ್ಕೆ ಬಿಗಿಹಿಡಿತವಿದೆ. ಶಿವಸೇನಾದ ಮುಖವಾಣಿಯಾದ 'ಸಾಮ್ನಾ', 'ದೋಪಹರ್ ಕಾ ಸಾಮ್ನಾ' ಮತ್ತು ವಾರಪತ್ರಿಕೆ 'ಮಾರ್ಮಿಕ್' ಅನ್ನು ಪ್ರಕಟಿಸುವ ಪ್ರಬೋಧನ್ ಪ್ರಕಾಶನ ಸಂಸ್ಥೆಯ ಒಡೆತನವೂ ಈ ಟ್ರಸ್ಟ್‌ನದ್ದೇ. ಈ ಎಲ್ಲಾ ಪತ್ರಿಕೆಗಳೂ ಠಾಕ್ರೆ ಕುಟುಂಬದ ಬಿಗಿಹಿಡಿತದಲ್ಲೇ ಇವೆ. ಹೀಗಾಗಿಯೇ ಶಿಂದೆ ಅವರು, ಈ ಭವನದ ಮೇಲೆ ಹಕ್ಕು ಚಲಾಯಿಸಿಲ್ಲ. ಬದಲಿಗೆ ಹೊಸ ಕೇಂದ್ರ ಕಚೇರಿಯನ್ನೇ ಆರಂಭಿಸಿದ್ದಾರೆ.

ಆನಂದ ಆಶ್ರಮದಲ್ಲಿ ಹೊಸ ಕಚೇರಿ

ಚುನಾವಣಾ ಆಯೋಗವು ತೀರ್ಪು ನೀಡುವುದಕ್ಕೂ ಮುನ್ನ, ಶಿಂದೆ ಬಣವು ಆನಂದ ಆಶ್ರಮದಲ್ಲೇ ಕಚೇರಿಯನ್ನು ಆರಂಭಿಸಿತ್ತು. ಈಗ ಅದೇ ಕಚೇರಿಯನ್ನು ಪಕ್ಷದ ಕೇಂದ್ರ ಕಚೇರಿ ಎಂದು ಘೋಷಿಸಲಾಗಿದೆ.

ಶಿವಸೇನಾದ ಇತಿಹಾಸದಲ್ಲಿ ಆನಂದ ಆಶ್ರಮಕ್ಕೂ ಮಹತ್ವದ ಸ್ಥಾನವಿದೆ. ಆನಂದ ಆಶ್ರಮವು, ಬಾಳಾ ಠಾಕ್ರೆ ಅವರ ಅತ್ಯಾಪ್ತರಲ್ಲಿ ಒಬ್ಬರಾಗಿದ್ದ ಆನಂದ್ ದಿಘೆ ಅವರ ಕೇಂದ್ರ ಕಚೇರಿಯಾಗಿತ್ತು ಮತ್ತು ಪ್ರಮುಖ ಕಾರ್ಯಸ್ಥಾನವಾಗಿತ್ತು. ಅವಿವಾಹಿತರಾಗಿಯೇ ಉಳಿದಿದ್ದ ದಿಘೆ ಅವರು ಸರಳತೆ, ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದರು. ದಿಘೆ ಅವರ ಗರಡಿಯಲ್ಲಿಯೇ ಏಕನಾಥ ಶಿಂದೆ ರಾಜಕೀಯ ನಾಯಕನಾಗಿ ರೂಪುಗೊಂಡಿದ್ದು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ನಟರಾಜ ಹಾಗೂ ಅಪ್ಸರ ಬ್ರ್ಯಾಂಡ್‌ನ ಪೆನ್ಸಿಲ್ ಪ್ಯಾಕೇಜಿಂಗ್ ಉದ್ಯೋಗಕ್ಕೆ ಸಂಬಂಧಪಟ್ಟ ಸಂದೇಶವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ನಟರಾಜ ಪೆನ್ಸಿಲ್ ಪ್ಯಾಕಿಂಗ್ ಕೆಲಸವನ್ನು ಮನೆಯಲ್ಲೇ ಕುಳಿತು ಮಾಡಬಹುದು. ತಿಂಗಳಿಗೆ ₹35,000 ವೇತನ ಸಿಗುತ್ತದೆ' ಎಂಬುದಾಗಿ ಜಾಹೀರಾತು ತರಹದ ಪೋಸ್ಟ್‌ಗಳಲ್ಲಿ ಹೇಳಲಾಗಿದೆ. ಪೆನ್ಸಿಲ್‌ಗಳನ್ನು ಪ್ರತ್ಯೇಕ ಪೊಟ್ಟಣಗಳಲ್ಲಿ ಇರಿಸಿ ಪ್ಯಾಕ್ ಮಾಡಿ, ಮಾರಾಟಕ್ಕೆ ಸಜ್ಜುಗೊಳಿಸಬೇಕು. ಈ ಕೆಲಸ ಮಾಡುವುದು ಸುಲಭ ಎಂಬುದಾಗಿ ಕೆಲಸದ ಸ್ವರೂಪವನ್ನು ವಿವರಿಸಲಾಗಿದೆ. ಈ ಕೆಲಸ ಪಡೆಯಬೇಕಾದರೆ, ಮುಂಗಡವಾಗಿ ₹10,000 ಪಾವತಿಸಬೇಕು ಎಂದು ಸೂಚಿಸಲಾಗಿದೆ. ಆದರೆ ಇದೊಂದು ಮೋಸದ ಜಾಲ.

✓ ನಟರಾಜ ಹಾಗೂ ಅಪ್ಸರ ಪೆನ್ಸಿಲ್ ಬ್ರ್ಯಾಂಡ್‌ಗಳ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸಂದೇಶ ವಂಚನೆಯ ಉದ್ದೇಶದಿಂದ ಕೂಡಿದೆ ಎಂದು ಕಂಪನಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಹೇಳಲಾಗಿದೆ. ಕೆಲಸದ ಆಮಿಷ ತೋರಿಸಿ, ಹಣ ವಸೂಲಿ ಮಾಡುವ ಇಂತಹ ಮೋಸದ ಜಾಲಗಳನ್ನು ನಂಬಬೇಡಿ ಎಂದು ಎಚ್ಚರಿಕೆ ನೀಡಲಾಗಿದೆ. 'ಪೆನ್ಸಿಲ್ ಪ್ಯಾಕೇಜಿಂಗ್ ಕೆಲಸವು ಯಂತ್ರಗಳ ಮೂಲಕ ಸ್ವಯಂಚಾಲಿತವಾಗಿ ಆಗುತ್ತದೆ. ಇದನ್ನು ಕೈಯಿಂದ ಮಾಡಲಾಗುವುದಿಲ್ಲ. ಮನೆಯಲ್ಲಿ ಕುಳಿತು ಮಾಡುವಂತಹದ್ದೂ ಅಲ್ಲ' ಎಂದು ತಿಳಿಸಿರುವ ಸಂಸ್ಥೆಯು, ಇದಕ್ಕೆ ಸಂಬಂಧಿಸಿದ ವಿಡಿಯೊವೊಂದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮನದ ಕೊಳ

ಕೊಳದ ಜಲ ನಿನ್ನ ಮನ; ಲೋಗರದರೊಳಗಿಳಿಯೆ
ತಳದ ಕಸ ತೇಲುತ್ತ ಬಗ್ಗಡವದಹುದು ||
ಕಲಕದದ್ದದೆ ಕೊಂಚ ಬಿಟ್ಟಿದ್ದೊಡದು ಮರಳಿ |
ತಿಳಿಯಹುದು ಶಾಂತಿಯಲಿ - ಮಂಕುತಿಮ್ಮ ||
829||

ಪದ-ಅರ್ಥ: ಲೋಗರದರೊಳಗಿಳಿಯೆ = ಲೋಗರು(ಜನರು) + ಅದರೊಳ + ಇಳಿಯೆ, ಬಗ್ಗಡವದಹುದು = ಬಗ್ಗಡವದು(ಕೊಳಕು) + ಅಹುದು, ಕಲಕದದ್ದದೆ = ಕಲಕದೆ + ಅದ್ದದೆ, ಬಿಟ್ಟದ್ದೊಡದು- = ಬಿಟ್ಟು + ಇದ್ದೊಡೆ + ಅದು.

ವಾಚ್ಯಾರ್ಥ: ನಿನ್ನ ಮನಸ್ಸು ಕೊಳದ ನೀರಿದ್ದಂತೆ. ಜನರು ಅದರೊಳಗೆ ಇಳಿದಾಗ ತಳದ ಕಸ ತೇಲುತ್ತ ಮೇಲೆ ಬಂದು ಕೊಳಕಾಗುತ್ತದೆ. ಅದನ್ನು ಕಲಕದೆ, ಅದ್ದದೆ ಸ್ವಲ್ಪ ಹೊತ್ತು ಬಿಟ್ಟಿದ್ದರೆ ಶಾಂತಿಯಲ್ಲಿ ತಿಳಿಯಾಗುತ್ತದೆ.

ವಿವರಣೆ: ಅವನೊಬ್ಬ ಚಕ್ರವರ್ತಿ. ಅವನ ರಾಜ್ಯದ ಗಾತ್ರ ತುಂಬ ದೊಡ್ಡದು. ಅವನ ಪರಾಕ್ರಮಕ್ಕೆ, ಶ್ರೀಮಂತಿಕೆಗೆ ಸಾಟಿ ಇರಲಿಲ್ಲ.
ಅವನಿಗೂ ತನ್ನ ಸರಿಸಮಾನರಾದವರು ಯಾರೂ ಇಲ್ಲ ಎಂಬ ನಂಬಿಕೆ ಬಂದಿತ್ತು. ಇಷ್ಟಾದರೂ ಆತನ ಮನಸ್ಸಿಗೆ ನೆಮ್ಮದಿ ಇಲ್ಲ. ಯಾವುದೋ ತಳಮಳ, ಸಂಕಟ ಕಾಡುತ್ತಿತ್ತು. ಯಾವಾಗ, ಎಲ್ಲಿಂದ ಆಪತ್ತು ಬಂದೀತೋ ಎಂದು ಕೊರಗುತ್ತಿದ್ದ. ಮಂತ್ರಿಗಳು ಅವನಿಗೆ ಯಾವ ಭರವಸೆ ಕೊಟ್ಟರೂ ಸಮಾಧಾನವಾಗಲಿಲ್ಲ. ಒಂದು ದಿನ ಅರಮನೆಗೆ ಸೂಫಿ ಸಂತನೊಬ್ಬ ಬಂದ. ರಾಜನೊಂದಿಗೆ ಮಾತನಾಡಿದ. ರಾಜನ ಕಷ್ಟ ಅವನಿಗೆ ಅರ್ಥವಾಯಿತು.
ರಾಜ ಕೇಳಿದ "ಸಂತರೇ, ನನ್ನ ಹತ್ತಿರ ಎಲ್ಲವೂ ಇದೆ. ರಾಜ್ಯ, ಧನ, ಅಧಿಕಾರ, ಜನಮನ್ನಣೆ ಇವೆಲ್ಲ ಇದ್ದರೂ ನಾನು ಅಭದ್ರತೆಯಿಂದ ನರಳುತ್ತಿದ್ದೇನೆ. ತಮ್ಮ ಬಳಿ ಏನೂ ಇಲ್ಲ. ಆದರೆ ತುಂಬ ನಿರಾಳವಾಗಿದ್ದೀರಿ. ಏನಿದರ ಗುಟ್ಟು? ನನಗೆ ತಮಗೆ ಇರುವಂಥ ಮನಶ್ಶಾಂತಿ ಸಿಗುವುದು ಸಾಧ್ಯವೇ?" ಸಂತ ನಕ್ಕ. ಒಂದು ದೊಡ್ಡ ಗಾಜಿನ ಪಾತ್ರೆಯನ್ನು ತರಿಸಿದ. ಅದರಲ್ಲಿ ನೀರನ್ನು ಹಾಕಿದ. ಅದಕ್ಕೊಂದು ಮುಷ್ಟಿಯಷ್ಟು ಪುಡಿಮಣ್ಣನ್ನು ಹಾಕಿ, ಚೆನ್ನಾಗಿ ಕಲಕಿ ರಾಜನ ಮುಂದಿಟ್ಟು ಅವನ ಮುಖ ನೋಡಿಕೊಳ್ಳಲು ಹೇಳಿದ. ರಾಜನಿಗೆ ಏನೂ ಕಾಣಲಿಲ್ಲ. "ಸಂತರೇ ನೀರು ತುಂಬ ರಾಡಿಯಾಗಿದೆ,ಮುಖ ಕಾಣದು" ಎಂದ. ಸರಿ, ಎಂದ ಸಂತ ಮತ್ತೊಂದು ಗಾಜಿನ ಪಾತ್ರೆಯಲ್ಲಿ ತಿಳಿನೀರನ್ನು ಹಾಕಿ ಅದರಲ್ಲಿ ಒಂದು ಚೂರು ಬೂದಿಯನ್ನು ಬೆರೆಸಿ, ಕಲಕಿ ಕೊಟ್ಟ. ಆಗಲೂ ಮುಖ ಕಾಣಲಿಲ್ಲ. ಈಗ ಸಂತ ಗಾಜಿನ ಪಾತ್ರೆಯಲ್ಲಿ ತಿಳಿನೀರನ್ನು ಹಾಕಿ ಅವನ ಮುಂದಿಟ್ಟು ಚೆನ್ನಾಗಿ ಕಲಕಿದ. ಆಗಲೂ ಮುಖ ಸ್ಪಷ್ಟವಾಗಿ ತೋರಲಿಲ್ಲ. "ಹಾಗೆಯೇ ನೋಡುತ್ತಿರು" ಎಂದ ಸಂತ. ಸ್ವಲ್ಪ ಹೊತ್ತಿನ ನಂತರ ನೀರು ಶಾಂತವಾಯಿತು. ಮುಖ ಸ್ಪಷ್ಟವಾಗಿ ಕಂಡಿತು. ಸಂತ ಹೇಳಿದ, "ಮುಖ ಕಾಣದಿರುವುದಕ್ಕೆ ನೀರಿನ ರಾಡಿ ಮತ್ತು ಚಂಚಲತೆಯೇ ಕಾರಣ, ಅದು ಶಾಂತವಾಗಲಿಕ್ಕೆ ಬಿಡು, ಮನದಲ್ಲಿ ಶಾಂತಿ ಇಳಿಯುತ್ತದೆ". ಇದೇ ಕಗ್ಗದ ಮಾತು. ನಮ್ಮ ಮನಸ್ಸು ನೀರಿನ ಕೊಳವಿದ್ದಂತೆ. ಅದರಲ್ಲಿ ನೂರಾರು ಚಿಂತೆಗಳು, ಆತಂಕಗಳು ಎಂಬ ಜನ ಇಳಿದು ತುಳಿದಾಡಿದರೆ ತಳದಲ್ಲಿದ್ದ ಕಸ ಮೇಲೆದ್ದು ಬಂದು ರಾಡಿಯಾಗುತ್ತದೆ. ನೀರನ್ನು ಕಲಕದೆ ಇದ್ದರೆ ಅದು ತನ್ನಷ್ಟಕ್ಕೆ ತಾನೇ ತಿಳಿಯಾಗಿ ನಿಲ್ಲುತ್ತದೆ. ಅತಿಯಾದ ಲೋಕಸಂಪರ್ಕದಿಂದ ರಾಡಿಯಾದ ಮನಸ್ಸು ಏಕಾಂತದಲ್ಲಿ ತಿಳಿಯಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 24, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುದ್ಧ ಪಂಚಮಿ ಗಂ. 24-32 ನಕ್ಷತ್ರ:
ಅಶ್ವಿನಿ ಗಂ. 27-27 ಯೋಗ: ಶುಕ್ಲ ಗಂ. 18-47, ಕರಣ: ಬವ ಗಂ. 12-57, ಕುಂಭ ಮಾಸದ 11 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 -12-00
ಸೂರ್ಯೋದಯ : 06-53 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 03 ಶಬನ್
ಅದೃಷ್ಟ ಸಂಖ್ಯೆ : 8, 11

ಮೇಷ: ಬದುಕಿನ ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದುಡಿದು ಯಶಸ್ಸನ್ನು ಹೊಂದುವಿರಿ. ಕೌಟುಂಬಿಕವಾಗಿ ಅಚ್ಚರಿಯ ಸಂಗತಿಗಳನ್ನು ಕೇಳುವಂತಾಗುವುದು. ಸರಕು ಸಾಗಾಟದಿಂದ ಉತ್ತಮ ಲಾಭ ಪಡೆಯುವಿರಿ.

ವೃಷಭ: ಪದವಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ಒಳ್ಳೆಯದಲ್ಲ, ಧೈರ್ಯವಿರಲಿ. ಯಾವುದೇ ಕೆಲಸದಲ್ಲಿ ಆದರೂ ಯಶಸ್ಸನ್ನು ಪಡೆಯಲು ಕಠಿಣವಾದ ಪರಿಶ್ರಮ ಅತ್ಯಗತ್ಯ. ಖರ್ಚು ವೆಚ್ಚಗಳ ಮೇಲೆ ಗಮನವಿದ್ದರೆ ಒಳ್ಳೆಯದು.

ಮಿಥುನ: ಕೆಲಸದ ನಿಮಿತ್ತವಾಗಿ ಅನಿರೀಕ್ಷಿತ ದೂರ ಪ್ರಯಾಣಮಾಡುವ ಸಾಧ್ಯತೆಗಳಿವೆ. ಕೌಟುಂಬಿಕ ಸಮಸ್ಯೆಗಳಿಗೆ ಸಂಗಾತಿಯೊಂದಿಗೆಸಮಾಧಾನದಿಂದ ಸಮಾಲೋಚನೆ ಮಾಡಿದಲ್ಲಿ ಉತ್ತಮ ಪರಿಹಾರ ದೊರೆಯುವುದು.

ಕರ್ಕಾಟಕ: ಧನಾತ್ಮಕ ಚಿಂತನೆಯಿಂದ ಮನಸ್ಸು ಆಹ್ಲಾದಕರವಾಗಿರುತ್ತದೆ. ರಾಜಕೀಯ ವ್ಯಕ್ತಿಗಳಿಗೆ ಅನೇಕ ಜನರ ಜೊತೆ ಸಮಾಲೋಚನೆ ನಡೆಸಬೇಕಾಗುವುದು. ಮನೆಗಾಗಿ ಅಲಂಕಾರಿಕ ವಸ್ತುಗಳ ಖರೀದಿ ಮಾಡುವಿರಿ.

ಸಿಂಹ: ಭೌತವಿಜ್ಞಾನದ ಸಂಶೋಧನೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಫಲಿತಾಂಶದ ಕಡೆಗೆ ಹೊಸ ಹೊಸ ಮಾರ್ಗಗಳು ಗೋಚರಿಸುವುದು. ಅವಿವಾಹಿತ ಯೋಗ್ಯವಯಸ್ಕರಿಗೆ ಹೊಸ ಸಂಬಂಧಗಳು ಹುಡುಕಿ ಬರುವ ಸಾಧ್ಯತೆಗಳಿವೆ.

ಕನ್ಯಾ: ಪೊಲೀಸ್ ಅಧಿಕಾರಿಗಳಿಗೆ ತುರ್ತು ಕೆಲಸ ಒದಗುವ ಸಂದರ್ಭ ಬರುವುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅವಕಾಶಗಳು ಒದಗಿ ಬರುತ್ತದೆ. ಈ ದಿನ ಮಿಶ್ರಫಲ ಅನುಭವಕ್ಕೆ ಬರಲಿದೆ.

ತುಲಾ: ದಾಯಾದಿಗಳು ಅಥವಾ ಅಕ್ಕ-ಪಕ್ಕದವರು ಭೂ ಸಂಬಂಧದ ಕಲಹಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುವ ಮನೋಭಾವಕ್ಕೆ ಬಂದಾರು, ಅದರಂತೆ ನಡೆಯುವುದೇ ಉತ್ತಮ. ಶ್ರೀ ಶನೈಶ್ಚರನ ಆರಾಧನೆ ಮಾಡಿ.

ವೃಶ್ಚಿಕ: ಈ ದಿನ ಸರ್ಕಾರಿ ಮೂರನೇ ದರ್ಜೆಯ ನೌಕರರಿಗೆ ಆರ್ಥಿಕವಾಗಿ ಅನುಕೂಲವಾಗುವುದು. ಆರೋಗ್ಯದಲ್ಲಿ ರಕ್ತದೊತ್ತಡಕ್ಕೆ ಸಂಬಂಧಿಸಿದಂತೆ ಏರುಪೇರಾಗುವ ಲಕ್ಷಣ ಇರುವುದು, ಆತಂಕಕ್ಕೆ ಒಳಗಾಗಬೇಡಿ.

ಧನು: ಮಾತುಗಾರಿಕೆಯ ಸಾಮರ್ಥ್ಯದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಅದನ್ನು ನೀವು ಬಳಸಿಕೊಳ್ಳಬಹುದು. ಜೀವನ ಶೈಲಿಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದುಕೊಳ್ಳುವ ಸನ್ನಿವೇಶ ಬರಲಿದೆ.

ಮಕರ: ಲಾಭ ತರುವಂತಹ ಮತ್ತು ಅನಿವಾರ್ಯದ ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಸಾಂಸಾರಿಕ ವಿಚಾರಕ್ಕೆ ಸಂಬಂಧಿಸದಂತೆ ಆತುರದಿಂದ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ.

ಕುಂಭ: ಕೆಲಸದಲ್ಲಿ ಈ ದಿನ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿದ್ದೀರಿ. ಇತರರನ್ನು ನಂಬದಿರುವ ಪರಿಸ್ಥಿತಿ ಬರುವುದು

ಮೀನ: ಗುರಿ ಸಾಧಿಸಲು ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿದೆ. ಹಣಕಾಸಿನ ಸಂಸ್ಥೆಗೆ ಪಾಲುದಾರರಾಗುವ ಸಾಧ್ಯತೆ ಇದೆ. ರಫ್ತು ವ್ಯಾಪಾರಿಗಳು ಲಾಭ ಹೊಂದುವರು.

ಪದಬಂಧ 5240

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರು ಧುಮುಕುವ ಸ್ಥಳ (4)
3.ಸಂದರ್ಭ ಅಥವಾ ಘಟನೆ (3)
5.ಅದೇ ತಾನೆ ಮದುವೆಯಾದ ಗಂಡ ಹೆಂಡಿರು (5)
7.ಈ ರೀತಿ ರೇಗು (3)
9.ಕತ್ತು ಕೊನೆಗಿಟ್ಟು ತೋರಿದ ಬಲ (3)
11.ಗುರುವಿನ ನಖ (3)
13.ಕಳೆಯುವ ಲೆಕ್ಕವಿದು (5)
15.ಹೆಂಗಸು ಇಲ್ಲಿದ್ದಾಳೆ (3)
16.ಮಧ್ಯವಯಸ್ಸಿದು (4)

ಮೇಲಿಂದ ಕೆಳಕ್ಕೆ

1.ವನಿತೆ ಎಳೆದ ತೆರೆ (4)
2.ಒಂದೇ ವಿಷಯದಲ್ಲಿ ಮಗ್ನನಾಗಿರುವವನು (3)
4.ಸದ್ಯದ ಪರಿಸ್ಥಿತಿ (3)
6.ಸೈನ್ಯ ಸಮೇತ ಯುದ್ಧಕ್ಕೆ ಹೋಗು (3)
8. ನೆತ್ತರು ಇಲ್ಲಿದೆ (2)
9.ಉಚ್ಚ ದನಿಯನ್ನು ಹೀಗೂ ಹೇಳುವರು (3)
10.ಋಣ ಅಥವಾ ದಾಕ್ಷಿಣ್ಯ (2)
12.ಅಸ್ತ್ರೆಯನ್ನು ಹೀಗೂ ಹೇಳುವರು (4)
13.ಈತ ಕಟ್ಟಚಟವುಳ್ಳವನು (3)
14.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)



5239ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾಪೂರ
3.ಅನುಭವಿ 5.ಸದರ
6.ಜರಾಯು 8.ಸುಸಂಗ
10.ಆಸಕ್ತಿ 11.ವಾಯಸ
13.ಅಳುಕು 15.ಯಥಾಸ್ಥಿತಿ
16.ರಣಭೇರಿ

ಮೇಲಿಂದ ಕೆಳಕ್ಕೆ:
1.ಮಹಾರಾಜ 2.ರಭಸ
3.ಅಸುರ 4.ವಿನಿಯೋಗ
7.ರಾಜಸ 9.ಸಂದಾಯ
10.ಆಯವ್ಯಯ 12.ಸದಾಚಾರಿ
13.ಅದಿತಿ 14.ಕುಬೇರ

ಸುಡೊಕು 5626

						8	2	
8		9						5
	6	5				3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	8

5625ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು ▼ 139



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,554
ಇಂದಿನ ಅಂತ್ಯ	17,511
▼	43
ದಿನದ ಕನಿಷ್ಠ	17,455

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

ಶೇಂಗಾ (ರಿಫೈನ್ಡ್)	₹1690 (1700)
ಸೋಯಾ (ರಿಫೈನ್ಡ್)	₹1130 (1135)
ಸೂರ್ಯಕಾಂತಿ (ರಿಫೈನ್ಡ್)	₹1160 (1160)
ಪಾಮೋಲಿನ್	₹972 (965)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹5000-9000
ತುಮಕೂರು	₹4050-5100
ತುರುವೇಕೆರೆ	₹9600-9700

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140
ಆರ್‌ಎಸ್‌ಎಸ್-5	₹134.50
ಗುಡ್ ಲಾಟ್	₹129.50

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-800
ಸಣ್ಣ	₹200-500

ಒಲೆಕ್ಟ್ರಾದಿಂದ ಹೈಡ್ರೋಜನ್ ಬಸ್

ನವದೆಹಲಿ (ಪಿಟಿಐ): ಒಲೆಕ್ಟ್ರಾ ಗ್ರೀನ್‌ಟೆಕ್ ಕಂಪನಿಯು ಗುರುವಾರ ಹೈಡ್ರೋಜನ್ ಬಸ್ ಅನಾವರಣ ಮಾಡಿದೆ. ಇದಕ್ಕಾಗಿ ರಿಲಯನ್ಸ್ ಜೊತೆ ತಾಂತ್ರಿಕ ಪಾಲುದಾರಿಕೆಯನ್ನು ಅದು ಮಾಡಿಕೊಂಡಿದೆ.

ಈ ಬಸ್ ಉದ್ದ 12 ಮೀಟರ್ ಇದೆ. ಬಸ್‌ನ ಮೇಲ್ಭಾಗದಲ್ಲಿ ಸಿಲಿಂಡರ್‌ಗಳನ್ನು ಅಳವಡಿಸಲಾಗಿದೆ. ಒಮ್ಮೆ ಭರ್ತಿ ಮಾಡಿದರೆ 400 ಕಿಲೋ ಮೀಟರ್ ಚಲಾಯಿಸಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

‘ಸೋಷಿಯಲ್ ಸ್ಟಾಕ್ ಎಕ್ಸ್‌ಚೇಂಜ್ ಆರಂಭಕ್ಕೆ ಸೆಬಿ ಅಂತಿಮ ಒಪ್ಪಿಗೆ’

ನವದೆಹಲಿ (ಪಿಟಿಐ): ಸಾಮಾಜಿಕ ಅಭಿವೃದ್ಧಿ ಉದ್ದೇಶದ ಉದ್ದಿಮೆಗಳಿಗೆ ಬಂಡವಾಳ ಸಂಗ್ರಹಿಸಲು ಅವಕಾಶ ಕಲ್ಪಿಸುವ ‘ಸೋಷಿಯಲ್ ಸ್ಟಾಕ್ ಎಕ್ಸ್‌ಚೇಂಜ್’ (ಎಸ್‌ಎಸ್‌ಇ) ಆರಂಭಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅಂತಿಮ ಒಪ್ಪಿಗೆ ನೀಡಿದೆ ಎಂದು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ (ಎನ್‌ಎಸ್‌ಇ) ತಿಳಿಸಿದೆ.

ಬುಧವಾರ ಅಂತಿಮ ಒಪ್ಪಿಗೆಯನ್ನು ಪಡೆದುಕೊಳ್ಳಲಾಗಿದೆ ಎಂದು ಎನ್‌ಎಸ್‌ಇ ಪ್ರಕಟಣೆಯಲ್ಲಿ ತಿಳಿಸಿದೆ.

ಈಗಿರುವ ಷೇರು ಮಾರುಕಟ್ಟೆಗಳ ಪ್ರತ್ಯೇಕ ಭಾಗವಾಗಿ ಎಸ್‌ಎಸ್‌ಇ ಕೆಲಸ ಮಾಡಲಿದೆ. ಲಾಭದ ಉದ್ದೇಶವಿಲ್ಲದ ಸಂಸ್ಥೆಗಳು (ಎನ್‌ಪಿಒ) ಹಾಗೂ ಲಾಭದ ಉದ್ದೇಶವಿದ್ದರೂ ಸಾಮಾಜಿಕ ಪರಿಣಾಮ ಬೀರುವಂತಹ ಕೆಲಸ ಮಾಡುವ ಉದ್ದಿಮೆಗಳು ಎಸ್‌ಎಸ್‌ಇ ಮೂಲಕ ಬಂಡವಾಳ ಸಂಗ್ರಹಿಸಬಹುದು.

ಜೀರೊ ಕೂಪನ್ ಜಿರೊ ಪ್ರಿನ್ಸಿಪಲ್ (ಜೆಡ್‌ಸಿಜೆಡ್‌ಪಿ) ತರಹದ ಬಾಂಡ್‌ಗಳನ್ನು ವಿತರಿಸುವ ಮೂಲಕ ಬಂಡವಾಳ ಎನ್‌ಪಿಒಗಳು ಸಂಗ್ರಹಿಸಬಹುದಾಗಿದೆ.

‘ಎಸ್‌ಎಸ್‌ಇ ಕುರಿತು ಉದ್ದಿಮೆಗಳಲ್ಲಿ ಜಾಗೃತಿ ಮೂಡಿಸಲು ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ಎನ್‌ಎಸ್‌ಇ ಸಿಇಒ ಆಶಿಶ್‌ಕುಮಾರ್ ಚೌಹಾಣ್ ಹೇಳಿದ್ದಾರೆ.

ಎಸ್‌ಎಸ್‌ಇ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು, ನೋಂದಣಿ ಆಗುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ತಿಳಿದುಕೊಳ್ಳಲು ಎನ್‌ಎಸ್‌ಇ ಜೊತೆ ಸಂಪರ್ಕದಲ್ಲಿ ಇರುವಂತೆ ಉದ್ದಿಮೆಗಳಿಗೆ ಅವರು ಮನವಿ ಮಾಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿನ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸದಾ ಪ್ರೀತಿಯ ನೆನಪುಗಳೊಂದಿಗೆ!

ಶ್ರೀಮತಿ ವಿಜಯಲಕ್ಷ್ಮಿ (ವಿಜು)
24-02-2013
ಎಸ್. ಪ್ರೇಮನಾಥ್
ಮತ್ತು ಕುಟುಂಬ ವರ್ಗ

ಆರ್‌ಬಿಐ ಮಾಜಿ ಗವರ್ನರ್ ಸುಬ್ಬರಾವ್ ಅಸಮಾಧಾನ

ಬಜೆಟ್: ಉದ್ಯೋಗ ಸೃಷ್ಟಿಗಿಲ್ಲ ಒತ್ತು

ನವದೆಹಲಿ (ಪಿಟಿಐ): 2023–24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಸುವ ಕುರಿತು ಹೆಚ್ಚಿನ ಒತ್ತು ನೀಡಿಲ್ಲ. ನಿರುದ್ಯೋಗ ಸಮಸ್ಯೆ ನಿವಾರಿಸುವಲ್ಲಿ ಬಜೆಟ್ ವಿಫಲವಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಜಿ ಗವರ್ನರ್ ಡಿ. ಸುಬ್ಬರಾವ್ ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕಕ್ಕೂ ಮೊದಲು ನಿರುದ್ಯೋಗ ಸಮಸ್ಯೆ ಇತ್ತು. ಆದರೆ, ಕೋವಿಡ್ ಬಳಿಕ ಸಮಸ್ಯೆ ಹೆಚ್ಚಾಗಿದೆ. ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಗೆ ಸಾಕಷ್ಟು ಒತ್ತು ನೀಡಿದೇ ಇರುವುದು ನಿರಾಸೆ ಮೂಡಿಸಿದೆ. ಉದ್ಯೋಗ ಸೃಷ್ಟಿಯಾಗದೆ ಆರ್ಥಿಕ ಬೆಳವಣಿಗೆ ಆಗಲಾರದು. ಹೀಗಾಗಿ ಉದ್ಯೋಗ ಆಧಾರಿತ ಬೆಳವಣಿಗೆಯ ಅಗತ್ಯ ಇದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ನಿರುದ್ಯೋಗ ಸಮಸ್ಯೆ ಬಗೆಹರಿಸುವ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಬಜೆಟ್ ವಿಫಲವಾಗಿದೆ. ನಿರುದ್ಯೋಗದಂತಹ ದೊಡ್ಡ ಮತ್ತು ಸಂಕೀರ್ಣ ಸಮಸ್ಯೆಗೆ ಸರಳ ಅಥವಾ ಏಕಮಾತ್ರ ಪರಿಹಾರ ಎನ್ನುವುದು ಇಲ್ಲ.

ಸುಬ್ಬರಾವ್

ದೇಶದಲ್ಲಿ ನಿರುದ್ಯೋಗ ಸಮಸ್ಯೆಯು ಹೆಚ್ಚಾಗುತ್ತಿರುವುದಷ್ಟೇ ಅಲ್ಲದೆ ಒಂದು ಬಿಕ್ಕಟ್ಟಾಗಿಯೂ ಪರಿಣಮಿಸುತ್ತಿದೆ ಎಂದು ಸುಬ್ಬರಾವ್ ಹೇಳಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಹಣಕಾಸು ಸಚಿವಾಲಯವು ಜನಪರವಾದ ಕ್ರಮಗಳನ್ನು ಘೋಷಿಸುವ ನಿರೀಕ್ಷೆ ಮಾಡಲಾಗಿತ್ತು. ಆದರೆ, ಕೇಂದ್ರ ಸರ್ಕಾರವು ಈ ಬಜೆಟ್‌ನಲ್ಲಿ ಆರ್ಥಿಕ ಬೆಳವಣಿಗೆ ಮತ್ತು ವಿತ್ತೀಯ ಹೊಣೆಗಾರಿಕೆ ನಿಭಾಯಿಸುವುದರತ್ತ ಹೆಚ್ಚು ಒತ್ತು ನೀಡಿದೆ ಎಂದಿದ್ದಾರೆ.

ಉದ್ಯೋಗ ಸೃಷ್ಟಿ, ಬೆಳವಣಿಗೆಗೆ ಉತ್ತೇಜನ: ಹಣಕಾಸು ಸಚಿವಾಲಯ

ಕೇಂದ್ರ ಬಜೆಟ್‌ನಲ್ಲಿ ಘೋಷಿಸಿರುವ ಕ್ರಮಗಳಿಂದಾಗಿ ದೇಶದಲ್ಲಿ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಗೆ ಉತ್ತೇಜನ ಸಿಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಗುರುವಾರ ಹೇಳಿದೆ.

ಬಂಡವಾಳ ವೆಚ್ಚ ಹೆಚ್ಚಳ, ಮೂಲಸೌಕರ್ಯ ಅಭಿವೃದ್ಧಿಗೆ ಗಮನ, ಹಣಕಾಸು ಮಾರುಕಟ್ಟೆ ಬಲಪಡಿಸುವುದು ಒಳಗೊಂಡು ಇನ್ನೂ ಹಲವು ಕ್ರಮಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದು ಸಚಿವಾಲಯವು ತನ್ನ ಆರ್ಥಿಕ ಪರಿಶೀಲನಾ ವರದಿಯಲ್ಲಿ ಹೇಳಿದೆ.

2022ರ ಡಿಸೆಂಬರ್ ತ್ರೈಮಾಸಿಕದಲ್ಲಿ ಹಲವು ಅಂಶಗಳು ಆರ್ಥಿಕ ಬೆಳವಣಿಗೆಯು ಮಂದಗತಿಯಲ್ಲಿ ಸಾಗುವ ಸೂಚನೆ ನೀಡಿವೆ. ಹಣದುಬ್ಬರ ನಿಯಂತ್ರಿಸಲು ಕೇಂದ್ರೀಯ ಬ್ಯಾಂಕ್‌ಗಳು ಹಣಕಾಸು ನೀತಿಯನ್ನು ಬಿಗಿಗೊಳಿಸಿರುವುದರಿಂದ ಜಾಗತಿಕ ಮಟ್ಟದಲ್ಲಿ ಬೇಡಿಕೆಯು ದುರ್ಬಲಗೊಂಡಂತೆ ಕಾಣುತ್ತಿದೆ. 2023ರಲ್ಲಿಯೂ ಇದೇ ಪರಿಸ್ಥಿತಿ ಮುಂದುವರಿಯಲಿದೆ ಎನ್ನುವುದು ಹಲವು ಸಂಸ್ಥೆಗಳ ಅಭಿಪ್ರಾಯ ಆಗಿದೆ. ಕೋವಿಡ್ ಸಾಂಕ್ರಾಮಿಕದ ಎದುರಾಗಿರುವ ಅನಿಶ್ಚಿತ ಸ್ಥಿತಿ ಮತ್ತು ಯುರೋಪ್‌ನಲ್ಲಿ ನಡೆಯುತ್ತಿರುವ ಸಂಘರ್ಷವು ಜಾಗತಿಕ ಆರ್ಥಿಕ ಬೆವಳಣಿಗೆಯನ್ನು ಮತ್ತಷ್ಟು ಕಡಿಮೆ ಆಗುವಂತೆ ಮಾಡುವ ಸಾಧ್ಯತೆ ಇದೆ.

ಐದನೇ ದಿನವೂ ವಹಿವಾಟು ಇಳಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಐದನೇ ದಿನವೂ ನಕಾರಾತ್ಮಕ ವಹಿವಾಟು ನಡೆಯಿತು.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಳ ಮಾಡುವ ಆತಂಕದಿಂದಾಗಿ ಹೂಡಿಕೆ ಚಟುವಟಿಕೆ ತಗ್ಗಿತು.

ಏಷ್ಯಾದ ಷೇರುಪೇಟೆಗಳಲ್ಲಿಯೂ ವಹಿವಾಟು ಇಳಿಕೆ ಕಂಡಿತು. ಈ ಬೆಳವಣಿಗೆಗಳು ಭಾರತದ ಮಾರುಕಟ್ಟೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದವು.

ಐದು ದಿನಗಳ ವಹಿವಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 1,713 ಅಂಶಗಳಷ್ಟು ಇಳಿಕೆ ಕಂಡಿದೆ. ಇದರಿಂದಾಗಿ ಷೇರುಪೇಟೆಯ ಬಂಡವಾಳ ಮೌಲ್ಯದಲ್ಲಿ ₹ 7.48 ಲಕ್ಷ ಕೋಟಿ ಕಡಿಮೆ ಆಗಿದ್ದು, ಒಟ್ಟಾರೆ ಮೌಲ್ಯವು ₹260 ಲಕ್ಷ ಕೋಟಿಗೆ ತಲುಪಿತು.

ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಗುರುವಾರದ ವಹಿವಾಟಿನಲ್ಲಿ ₹ 1,417 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಗುರುವಾರ ಒಂದು ಬ್ಯಾರಲ್‌ಗೆ ಶೇ 0.32ರಷ್ಟು ಹೆಚ್ಚಾಗಿ 80.86 ಡಾಲರ್‌ಗೆ ತಲುಪಿತು.

‘ಗೋಧಿ ಮೇಲೆ ಉಷ್ಣಾಂಶ ಹೆಚ್ಚಳದ ಪರಿಣಾಮ ಇಲ್ಲ’

ನವದೆಹಲಿ (ಪಿಟಿಐ): ಉಷ್ಣಾಂಶ ಹೆಚ್ಚಳವು ಗೋಧಿ ಬೆಳೆಯ ಮೇಲೆ ಯಾವುದೇ ಪರಿಣಾಮ ಬೀರುವ ಸಾಧ್ಯತೆ ಇಲ್ಲ. ಅಲ್ಪಾವಧಿಯ ಬೆಳೆಗೆ ಹಾನಿಯಾಗುವುದಿಲ್ಲ ಎಂದು ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಅಧ್ಯಕ್ಷ ಅಶೋಕ್ ಕೆ. ಮೀನಾ ಗುರುವಾರ ಹೇಳಿದ್ದಾರೆ.

ಭಾರತೀಯ ಹವಾಮಾನ ಇಲಾಖೆಯು ಅಂದಾಜು ಮಾಡಿರುವಂತೆ ಉಷ್ಣಾಂಶ ಏರಿಕೆಯಾಗುವುದರಿಂದ ಗೋಧಿ ಬೆಳೆಯ ಮೇಲೆ ಪರಿಣಾಮ ಆಗುವ ಸಾಧ್ಯತೆ ಇದೆಯೇ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ್ದಾರೆ.

ಈ ಬಾರಿ, ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಪ್ರದೇಶದಲ್ಲಿ ಗೋಧಿ ಬಿತ್ತನೆ ಆಗಿದೆ. ಸದ್ಯ, ಗೋಧಿ ಬೆಳೆಯು ಚೆನ್ನಾಗಿದೆ. ಹೀಗಾಗಿ 2023–24ನೇ ಮಾರುಕಟ್ಟೆ ವರ್ಷದಲ್ಲಿ ಗೋಧಿ ಸಂಗ್ರಹವು 300 ಲಕ್ಷ ಟನ್‌ಗಳಿಂದ 400 ಲಕ್ಷ ಟನ್‌ನಷ್ಟು ಸಹಜವಾದ ಪ್ರಮಾಣದಲ್ಲಿಯೇ ಇರಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದ್ದಾರೆ.

ಕಳೆದ ವರ್ಷ ದೇಶಿ ಉತ್ಪಾದನೆ ಇಳಿಕೆ ಮತ್ತು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಿದ್ದರಿಂದ ಗೋಧಿ ಸಂಗ್ರಹ ಕಡಿಮೆ ಆಗಿತ್ತು ಎಂದು ಅವರು ತಿಳಿಸಿದ್ದಾರೆ.

2023-24ನೇ ಬೆಳೆ ವರ್ಷದಲ್ಲಿ 11.21 ಕೋಟಿ ಟನ್‌ಗಳಷ್ಟು ದಾಖಲೆಯ ಉತ್ಪಾದನೆ ಆಗುವ ಅಂದಾಜನ್ನು ಸರ್ಕಾರ ಮಾಡಿದೆ.

ಚಿಲ್ಲರೆ ಮಾರಾಟ ದರ ತಗ್ಗಲಿದೆ: ಮುಕ್ತ ಮಾರುಕಟ್ಟೆಯ ಮೂಲಕ ಗೋಧಿಯನ್ನು ಮಾರಾಟ ಮಾಡುತ್ತಿರುವುದರಿಂದ ಸಗಟು ಮಾರುಕಟ್ಟೆಯಲ್ಲಿ ದರ ಇಳಿಕೆ ಕಂಡಿದೆ. ವಾರದೊಳಗೆ ಚಿಲ್ಲರೆ ಮಾರುಕಟ್ಟೆಯಲ್ಲಿಯೂ ದರ ಕಡಿಮೆ ಆಗುವ ವಿಶ್ವಾಸ ಇದೆ ಎಂದು ಅವರು ಹೇಳಿದ್ದಾರೆ.

ನಾಲ್ಕಂಕಿಗೆ ಇಳಿದ ಕೊಬ್ಬರಿ ಬೆಲೆ

ಪ್ರಜಾವಾಣಿ ವಾರ್ತೆ

ಹುಳಿಯಾರು: ಐದು ವರ್ಷದಿಂದ ಐದಂಕಿ ದರದಲ್ಲಿ ಸ್ಥಿರತೆ ಕಾಯ್ದುಕೊಂಡಿದ್ದ ಕೊಬ್ಬರಿ ಬೆಲೆ ಗುರುವಾರ ಪಟ್ಟಣದ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ₹9,666ಕ್ಕೆ ಕುಸಿಯುವ ಮೂಲಕ ನಾಲ್ಕಂಕಿಗೆ ಇಳಿದಿದೆ.

ಆರು ವರ್ಷದ ಹಿಂದೆ ಕೊಬ್ಬರಿ ಬೆಲೆ ಕ್ವಿಂಟಲ್‌ಗೆ ₹7 ಸಾವಿರಕ್ಕೆ ಕುಸಿದಿತ್ತು. ಅದಾದ ನಂತರ ₹18 ಸಾವಿರದವರೆಗೂ ಏರಿಕೆಯಾಗಿ ತೆಂಗು ಬೆಳೆಗಾರರಲ್ಲಿ ಮಂದಹಾಸ ಮೂಡಿಸಿತ್ತು. ಕಳೆದ ವರ್ಷದಿಂದ ಬೆಲೆ ಕುಸಿಯುತ್ತಾ ₹11 ಸಾವಿರದಿಂದ ₹12 ಸಾವಿರ ಅಸುಪಾಸಿನಲ್ಲಿ ಸ್ಥಿರವಾಗಿತ್ತು. ಸದ್ಯ ₹10 ಸಾವಿರಕ್ಕಿಂತ ಕಡಿಮೆಯಾಗಿರುವುದು ತೆಂಗು ಬೆಳೆಗಾರರನ್ನು ಆತಂಕಕ್ಕೆ ದೂಡಿದೆ.

ಮುಂಬೈ ಧಾರಣೆ

ಶೇಂಗಾ

23–02-2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1710)
ಒಂದು ವಾರದ ಡೆಲಿವರಿ	1695 (1705)
ಸೋಯಾ ಕಚ್ಚಾ	1045 (1050)
ಪಾಮ್ ವಾರದ ಡೆಲಿವರಿ	975 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	1040 (1040)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
55,800 (56,200)
ಬೆಳ್ಳಿ ಕೆ.ಜಿ 65,150 (65,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ
ಕೂಳೆ 400-450
ನಡುಗೋಲು 550-600
ರಾಶಿ 650-700
ರಾಶಿ ಉತ್ತಮ 650-700
ಜರಡಿ 800 - 900
ಹೆರಕಿದ್ದು 1250-1300
ಹಸಿರು ಸಾಧಾರಣ 900-1,000
ಹಸಿರು ಉತ್ತಮ 1300-1400
ಹಸಿರು ಅತಿ ಉತ್ತಮ 1500-1550
ಕಾಳು ಮೆಣಸು 480

ಬಂಟ್ವಾಳ
ಕೋಕ 12500-25000
ಹೊಸತು 22500-40000
ಹಳತು 48000-54500

ಕುಮಟ
ಚಿಪ್ಪು 25269-33949
ಕೋಕ 16060-29399
ಹಳೆಚಾಲಿ 37029-39079
ಹೊಸಚಾಲಿ 33999-36519

ಪುತ್ತೂರು
ಕೋಕ 11000-26000
ಹೊಸತು 32000-38000

ಸಾಗರ
ಬಿಳಿಗೋಟು 20199-31099
ಚಾಲಿ 27711-36839
ಕೋಕ 21219-32799
ಕೆಂಪುಗೋಟು 22869-36489
ರಾಶಿ 38199-46099
ಸಿಪ್ಪೆಗೋಟು 5786-19333

ಶಿವಮೊಗ್ಗ
ಬೆಟ್ಟೆ 40509-52469
ಗೊರಬಲು 17050-34009
ರಾಶಿ 37009-46009
ಸರಕು 46219-82270

ಸಿದ್ದಾಪುರ
ಬಿಳಿಗೋಟು 27699-32399
ಚಾಲಿ 35399-37499
ಕೋಕ 26319-29119
ಹೊಸಚಾಲಿ 30109-35599
ಕೆಂಪುಗೋಟು 30190-32399
ರಾಶಿ 42309-45599
ತಟ್ಟಿಬೆಟ್ಟೆ 37219-42009

ಶಿರಸಿ
ಬೆಟ್ಟೆ 28099-42611
ಬಿಳಿಗೋಟು 23899-35519
ಚಾಲಿ 30799-40101
ಕೆಂಪುಗೋಟು 25109-33900
ರಾಶಿ 36899-44999

ಯಲ್ಲಾಪುರ
ಬಿಳಿಗೋಟು 24212-33889
ಚಾಲಿ 16912-29218
ಕೋಕ 16912-29218
ಹೊಸಚಾಲಿ 37511-40499
ಕೆಂಪುಗೋಟು 26899-34812
ರಾಶಿ 42499-50369

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16000	15850	193.35 ಸೆಂಟ್ಸ್
ಎಸಿ	7900	7700	7000	
ಆರ್‌ಪಿ	11500	11300	10900	ಲಂಡನ್
ಆರ್‌ಸಿ	5430	208 on OT	5225	2205 ಡಾಲರ್ಸ್

2 ಸಾವಿರ ನೇಮಕ: ಮೆಟ್ರೊ ಬ್ರ್ಯಾಂಡ್ಸ್

ಚೆನ್ನೈ (ರಾಯಿಟರ್ಸ್): ಪಾದರಕ್ಷೆಗಳನ್ನು ಮಾರಾಟ ಮಾಡುವ ಮೆಟ್ರೊ ಬ್ರ್ಯಾಂಡ್ಸ್ ಲಿಮಿಟೆಡ್, 2025ರ ಅಂತ್ಯದ ವೇಳೆಗೆ 260 ಹೊಸ ಮಳಿಗೆಗಳನ್ನು ತೆರೆಯಲು ಉದ್ದೇಶಿಸಿದ್ದು, ಇದಕ್ಕಾಗಿ 1,500 ರಿಂದ 2 ಸಾವಿರ ಜನರನ್ನು ನೇಮಿಸಿಕೊಳ್ಳಲಿದೆ ಎಂದು ಕಂಪನಿಯ ಸಿಇಒ ನಿಸಾನ್ ಜೋಸೆಫ್ ತಿಳಿಸಿದ್ದಾರೆ.

ಕಂಪನಿಯು 2022ರ ಅಂತ್ಯದ ವೇಳೆಗೆ ಒಟ್ಟು 720 ಮಳಿಗೆಗಳನ್ನು ಹೊಂದಿದ್ದು, 4 ಸಾವಿರ ನೌಕರರು ಕೆಲಸ ಮಾಡುತ್ತಿದ್ದಾರೆ. ಮೋಚಿ, ವಾಕ್‌ವೇ ಮತ್ತು ಮೆಟ್ರೊ ಬ್ರ್ಯಾಂಡ್‌ಗಳ ಉತ್ಪನ್ನಗಳನ್ನು ಮಾರಾಟ ಮಾಡಲು 260 ಹೊಸ ಮಳಿಗೆಗಳನ್ನು ತೆರೆಯುವುದಾಗಿ ಕಳೆದ ಮಾರ್ಚ್‌ನಲ್ಲಿ ಹೇಳಿತ್ತು.

ಡಿಸೆಂಬರ್ 31ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಅವಧಿಯಲ್ಲಿ ಕಂಪನಿಯ ವರಮಾನ ಶೇ 68ರಷ್ಟು ಹೆಚ್ಚಾಗಿದೆ ಎಂದು ಅವರು ತಿಳಿಸಿದ್ದಾರೆ.

ಅದಾನಿ ಸಮೂಹಕ್ಕೆ 2 ಪವನ ವಿದ್ಯುತ್ ಯೋಜನೆ: ಲಂಕಾ

ಕೊಲಂಬೊ (ಎಎಫ್‌ಪಿ): ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಿದ್ಯುತ್ ಉತ್ಪಾದಿಸಲು ಹೆಣಗಾಡುತ್ತಿರುವ ಶ್ರೀಲಂಕಾವು ‘ಅದಾನಿ ಸಮೂಹ’ದ ಎರಡು ಪವನ ವಿದ್ಯುತ್ ಸ್ಥಾವರಗಳಿಗೆ ಅನುಮತಿ ನೀಡಿದೆ. ಈ ಎರಡು ಸ್ಥಾವರಗಳಿಗಾಗಿ ಭಾರತ ಮೂಲದ ಉದ್ಯಮವು ₹3,656 ಕೋಟಿ (442 ಮಿಲಿಯನ್ ಡಾಲರ್) ಹೂಡಿಕೆ ಮಾಡಲಿದೆ.

ಉತ್ತರ ಶ್ರೀಲಂಕಾದ ಹಿಂದಿನ ಯುದ್ಧ ಪೀಡಿತ ಪ್ರದೇಶಗಳಾದ ಮನ್ನಾರ್ ಮತ್ತು ಪೂನೆರಿನ್‌ನಲ್ಲಿ 2 ಪವನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಅದಾನಿ ಗ್ರೀನ್ ಎನರ್ಜಿ ಲಿ.ಗೆ ಶ್ರೀಲಂಕಾ ಹೂಡಿಕೆ ಮಂಡಳಿ (ಬಿಒಐ) ಅನುಮೋದನೆ ನೀಡಿದೆ. 350 ಮೆಗಾವಾಟ್ ಸಾಮರ್ಥ್ಯದ ಎರಡು ಪವನ ವಿದ್ಯುತ್ ಸ್ಥಾವರಗಳು ಎರಡು ವರ್ಷಗಳಲ್ಲಿ ಕಾರ್ಯಾರಂಭ ಮಾಡಲಿದ್ದು, 2025ರ ವೇಳೆಗೆ ವಿದ್ಯುತ್ ರಾಷ್ಟ್ರೀಯ ಗ್ರಿಡ್‌ಗೆ ಪೂರೈಕೆಯಾಗಲಿದೆ ಎಂದು ಬಿಒಐ ತಿಳಿಸಿದೆ.

ಹೊಸ ಯೋಜನೆಗಳಿಂದ ಸುಮಾರು 1,500-2,000 ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಹೇಳಲಾಗಿದೆ. ಅದಾನಿ ಸಮೂಹದ ಅಧಿಕಾರಿಗಳ ಗುಂಪು ಶ್ರೀಲಂಕಾ ವಿದ್ಯುತ್ ಮತ್ತು ಇಂಧನ ಸಚಿವ ಕಾಂಚನಾ ವಿಜೆಸೇಕರ ಅವರನ್ನು ಬುಧವಾರ ಭೇಟಿ ಮಾಡಿತ್ತು.

ವಿಶ್ವ ಬ್ಯಾಂಕ್ ಅಧ್ಯಕ್ಷ: ಅಜಯ್ ಬಾಂಗಾ ನಾಮನಿರ್ದೇಶನ

ವಾಷಿಂಗ್ಟನ್ (ಪಿಟಿಐ): ‘ಭಾರತ ಮೂಲದ ಉದ್ಯಮಿ ಅಜಯ್ ಬಾಂಗಾ ಅವರನ್ನು ವಿಶ್ವ ಬ್ಯಾಂಕ್‌ನ ಅಧ್ಯಕ್ಷ ಸ್ಥಾನಕ್ಕೆ ಅಮೆರಿಕವು ನಾಮನಿರ್ದೇಶನ ಮಾಡುತ್ತಿದೆ’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಗುರುವಾರ ಹೇಳಿದ್ದಾರೆ.

‘ಈ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಶ್ವ ಬ್ಯಾಂಕ್ ಅನ್ನು ಮುನ್ನಡೆಸಲು ಅಜಯ್ ಅವರು ಸಮರ್ಥರಾಗಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ದೇಶಕರು ಒಂದೊಮ್ಮೆ ಬಾಂಗಾ ಅವರ ನೇಮಕಕ್ಕೆ ಒಪ್ಪಿಗೆ ಸೂಚಿಸಿದರೆ ಅವರು ಈ ಹುದ್ದೆಗೇರಿದ ಭಾರತ ಮೂಲದ ಮೊದಲ ವ್ಯಕ್ತಿ ಎಂಬ ಹಿರಿಮೆಗೆ ಪಾತ್ರರಾಗಲಿದ್ದಾರೆ. ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್ ಅಥವಾ ವಿಶ್ವ ಬ್ಯಾಂಕ್‌ನ ಅಧ್ಯಕ್ಷ ಗಾದಿ ಅಲಂಕರಿಸಿದ ಅಮೆರಿಕದಲ್ಲಿನ ಮೊದಲ ಸಿಖ್ ಸಮುದಾಯದ ವ್ಯಕ್ತಿ ಎಂಬ ಶ್ರೇಯವೂ ಅವರದ್ದಾಗಲಿದೆ.

63 ವರ್ಷದ ಅಜಯ್ ಅವರು ಈ ಹಿಂದೆ ಮಾಸ್ಟರ್‌ಕಾರ್ಡ್‌ನ ಅಧ್ಯಕ್ಷ ಹಾಗೂ ಸಿಇಒ ಆಗಿ ಕೆಲಸ ಮಾಡಿದ್ದರು. ಸದ್ಯ ಅವರು ಜನರಲ್ ಅಟ್ಲಾಂಟಿಕ್‌ನ ಉಪಾಧ್ಯಕ್ಷರಾಗಿದ್ದಾರೆ. 2016ರಲ್ಲಿ ಅವರಿಗೆ ಪದ್ಮಶ್ರೀ ಗೌರವ ಒಲಿದಿತ್ತು.

ಸಂಕ್ಷಿಪ್ತ ಸುದ್ದಿ

ಐರೋಪ್ಯ ಒಕ್ಕೂಟದಿಂದ ಟಿಕ್‌ಟಾಕ್ ಸ್ಥಗಿತ

ಲಂಡನ್ (ಎಪಿ): ಸೈಬರ್ ಸುರಕ್ಷತಾ ಕ್ರಮವಾಗಿ ಉದ್ಯೋಗಿಗಳು ಬಳಸುವ ಫೋನ್‌ಗಳಿಂದ ಟಿಕ್‌ಟಾಕ್ ಅನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ ಎಂದು ಐರೋಪ್ಯ ಒಕ್ಕೂಟದ ಕಾರ್ಯನಿರ್ವಾಹಕ ಶಾಖೆ ಗುರುವಾರ ತಿಳಿಸಿದೆ. ಇದು ಚೀನಾದ ಒಡೆತನದ ಅಪ್ಲಿಕೇಶನ್ ಬಗ್ಗೆ ಅಧಿಕಾರಿಗಳು ಎಚ್ಚರ ವಹಿಸಿದ್ದಾರೆ.

ಯುರೋಪಿಯನ್ ಕಮಿಷನ್ ಮೊದಲ ಬಾರಿಗೆ ಅದರ ಕಾರ್ಪೊರೇಟ್ ಮ್ಯಾನೇಜ್‌ಮೆಂಟ್ ಬೋರ್ಡ್ ಸಿಬ್ಬಂದಿಗೆ ನೀಡಲಾದ ಸಾಧನಗಳಲ್ಲಿ ಅಥವಾ ಸಿಬ್ಬಂದಿ ಕೆಲಸಕ್ಕಾಗಿ ಬಳಸುವ ವೈಯಕ್ತಿಕ ಸಾಧನಗಳಲ್ಲಿ ಟಿಕ್‌ಟಾಕ್ ಬಳಕೆಯನ್ನು ಸ್ಥಗಿತಗೊಳಿಸಿದೆ.

ಗಣಿಯಲ್ಲಿ ಭೂ ಕುಸಿತ, 48 ಮಂದಿ ನಾಪತ್ತೆ

ಬೀಜಿಂಗ್ (ಎಪಿ): ಉತ್ತರ ಚೀನಾದ ಮಂಗೋಲಿಯಾ ಪ್ರದೇಶದ ಕಲ್ಲಿದ್ದಲು ಗಣಿಯಲ್ಲಿ ಸಂಭವಿಸಿದ ಭೂ ಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 5ಕ್ಕೆ ಏರಿದ್ದು, 48 ಮಂದಿ ನಾಪತ್ತೆಯಾಗಿದ್ದಾರೆ ಎಂದು ಸರ್ಕಾರದ ಅಧಿಕೃತ ವಾಹಿನಿ ಸಿಸಿಟಿವಿ ಗುರುವಾರ ವರದಿ ಮಾಡಿದೆ. ಬುಧವಾರ ಸಂಜೆ 6 ಗಂಟೆ ಸುಮಾರಿಗೆ ಇಲ್ಲಿ ಕುಸಿತ ಸಂಭವಿಸಿತ್ತು.

‘ಅಮೆರಿಕ: ಜಾತಿ ಪದ್ಧತಿ ನಿರ್ಮೂಲನೆ ಕಾನೂನು ಹಿಂದೂ ಭೀತಿಯ ಸಂಕೇತ’

ವಾಷಿಂಗ್ಟನ್: ಜಾತಿ ಪದ್ಧತಿಯನ್ನು ತೊಡೆದು ಹಾಕುವ ಕಾನೂನು ಜಾರಿಗೆ ತಂದ ಸಿಯಾಟಲ್‌ನ ನಗರಸಭೆಯ ತೀರ್ಮಾನವನ್ನು ಖಂಡಿಸಿರುವ ಭಾರತ ಸಂಜಾತ ಸೆನೆಟರ್ ನೀರಜ್ ಆ್ಯಂಟನಿ, ‘ಇದು ಅಮೆರಿಕದಲ್ಲಿ ಹೆಚ್ಚುತ್ತಿರುವ ಹಿಂದೂ ಭೀತಿಯ ನಿದರ್ಶನ’ ಎಂದು ಟೀಕಿಸಿದ್ದಾರೆ.

‘ಸಿಯಾಟಲ್ ನಗರಸಭೆ ಜಾರಿಗೆ ತಂದ ಕಾನೂನನ್ನು ನಾನು ಬಲವಾಗಿ ವಿರೋಧಿಸುತ್ತೇನೆ. ಜಾತಿ ಪದ್ಧತಿ ಈಗ ಆಚರಣೆಯಲ್ಲಿ ಇಲ್ಲ’ ಎಂದು ಒಹಿಯೋದ ಮೊದಲ ಹಿಂದೂ ಸೆನೆಟರ್ ನೀರಜ್ ಆ್ಯಂಟನಿ ಹೇಳಿದ್ದಾರೆ.

‘ನಗರಸಭೆಯ ಹಿಂದೂಫೋಬಿಯಾದಿಂದ ಈ ನಿಯಮ ತಂದಿದೆ. ಅಮೆರಿಕ, ಭಾರತ ಹಾಗೂ ಇನ್ನಿತರ ಕಡೆಗಳಲ್ಲಿ ಹಿಂದೂಗಳಲ್ಲಿ ತಾರತಮ್ಯ ಉಂಟು ಮಾಡಲು ಜಾರಿಗೆ ತಂದ ಅಸ್ತ್ರ ಇದಾಗಿದೆ’ ಎಂದು ದೂರಿದ್ದಾರೆ. ‘ಈ ನಿಯಮದ ಬದಲು, ಹಿಂದೂಗಳನ್ನು ತಾರತಮ್ಯದಿಂದ ಪಾರು ಮಾಡುವ ಕಾನೂನನ್ನು ಸಿಯಾಟಲ್ ಜಾರಿಗೆ ತರಬೇಕಿತ್ತು’ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 080-47106868

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

✓ ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100-56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858 .

ರಾವ್ ಸಂಸ್ಥೆಗೆ ವಯಸ್ಸಾದವರನ್ನು ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ . ಊಟವಸತಿಯಿದೆ. 10,000 - 15,000. 8951315839, 9880120052

Marketing & Sales

REQUIRED EXPERIENCED /Fresher Sales Executives for Construction Machinery for Tumkur, Hassan Bangalore and Shimoga. Send your Resume to sales.hq@asrial.com. Call 9019783290.

Wanted

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 17,800-68,000/-. 9035022290/ 9844503222

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

EDUCATION CORNER

ಪ್ಯೂಟಿನ್ ಅಧಿಕಾರಿವರ್ಗ
ರಷ್ಯನ್ ಭಾಷಾ ತರಬೇತಿ ಹಾಗೂ ಕಾರ್ಯವೈಖರಿಗಳ ವಿನಿಮಯ ಕೇಂದ್ರ
PUTIN ADHIKARIVARGA
RUSSIAN LANGUAGE TRAINING AND KNOWLEDGE TRANSFERRING CENTER
https://puav8mile.wordpress.com/

ಕೋರ್ಸ್	ಮೌಲ್ಯ	
CERTIFICATE IN RUSSIAN (SOCIAL).	LEVEL 1.1	₹ 10,000
	LEVEL 1.2	₹ 10,000
	LEVEL 2.0	₹ 10,000
CERTIFICATE IN RUSSIAN (BUSINESS).	-	₹ 10,000

ಮೇಲ್ಕಂಡ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ. ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿಗೆ 9343482975 / 9643109295 ಸಂಪರ್ಕಿಸತಕ್ಕದ್ದು.

✓ ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611225344

ಪ್ರವಾಸ

Travel

★11.04.2023 9ದಿನಗಳು★ ಕಾಶಿ,ಗಯಾ ಪ್ರಯಾಗಾ ಪ್ರವಾಸ., 27.04.2023 16/13ದಿನಗಳು ಕಾಶಿ,ನೇಪಾಳ,ಮುಕ್ತಿನಾಥ, ಗಜೇಂದ್ರಮೋಕ್ಷಾ,ಜನಕಪುರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ 03.05.2023 08.05.2023 12.05.2023 24.05.2023 ರಿಂದ 14/18 ದಿನಗಳು. ಉಜ್ಜಯಿನಿ, ಓಂಕಾರೇಶ್ವರ ಮಾತೃಗಯಾ ಸೋಮನಾಥ್ ದ್ವಾರಕ 12.04.2023 ರಿಂದ 10 ದಿನಗಳು ಕಾಶಿ,ಗಯಾ,ನೈಮಿಶಾರಣ್ಯಪುರಿ, ಭುವನೇಶ್ವರ್ 03.04.2023 12.04.2023 22.04.2023 ರಿಂದ 10 ದಿನಗಳು. ಕಾಶ್ಮೀರ್,ಗುಲ್‌ಮಾರ್ಗ್ ಸೆಲ್ ಗಾಂವ್ ವೈಷ್ಣೋದೇವಿ 12.04.2023 17.04.2023 ರಿಂದ 9 ದಿನಗಳು. ನೇಪಾಳ ಮುಕ್ತಿನಾಥ್ ಕಾಶಿ,ಗೋರಕ್‌ಪುರ್ 15.05.2023 ರಿಂದ 10 ದಿನಗಳು ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಮಾರುತಿ ಟ್ರಾವೆಲ್ಸ್ ಆಂಧ್ರ ತೆಲಂಗಾಣ-4ದಿನ-25.03.23 ತಮಿಳುನಾಡು -ರಾಮೇಶ್ವರಂ- ಕೇರಳ-5ದಿನ-02.04.23 ಗುಜರಾತ್-ಮಹಾರಾಷ್ಟ್ರ-7ದಿನ 09.04.23 ಕಾಶಿ ಯಾತ್ರಾ- ನೇಪಾಳ-16ದಿನ-01.05.23 ವೈಷ್ಣೋದೇವಿ ಪ್ರವಾಸ 15ದಿನ -21.05.23 ಸಂಪರ್ಕಿಸಿ: 9916688569, 9019744707

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ AC ಬಸ್ಸು AC ರೂಮ್‌ನಲ್ಲಿ 26.02.2023 15.03.2023 8 ದಿನಗಳ ಕಾಶಿ,ಅಲಹಾಬಾದ್ ಬುದ್ಧಗಯಾ. 23.04.2023 05.05.2023 ಚಾರ್‌ಧಾಮ್ ಸಮೇತ. 24.04.2023 ಸಿಮ್ಲಾ,ಕುಲುಮನಾಲಿ ವೈಷ್ಣೋದೇವಿ 14.04.2023 ಪೂರಿಜಗನ್ನಾಥ್ ಕಲ್ಕತ್ತಾ ಗ್ಯಾಂಗ್‌ಟಾಕ್ ಡಾರ್ಜಿಲಿಂಗ್. 26.04.2023 31/27 ದಿನಗಳ ದೆಹಲಿ,ಜೈಪುರ್,ಅಯೋಧ್ಯ, ನೇಪಾಳ ಚಾರ್‌ಧಾಮ್ ದಕ್ಷಿಣ ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ: ವಿಷ್ಣು ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 9448508708 9686708171

★ಶ್ರೇಯಸ್ ಟೂರ್ಸ್★ 06.03.2023,08.04.2023 11ದಿನಗಳು ಕಾಶಿನೇಪಾಳ ರಾಷ್ಟ್ರ (ಮುಕ್ತಿನಾಥಸಹಿತ)ಪ್ರವಾಸ, 14.03.2023,05.05.2023 08ದಿನಗಳು ಕಾಶಿ,ನೈಮಿಷಾರಣ್ಯ ಅಯೋದ್ಯಾ,ಪ್ರಯಾಗ,ಗಯಾ. 25.03.2023,05.04.2023, 06.05.2023, 21/16/13ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್‌ಸಿಸ್ಟರ್ಸ ಪ್ರವಾಸ)ಅಸ್ಸಾಂ ಅರುಣಾಚಲ,ಮೇಘಾಲಯ ಮಣಿಪುರ,ತ್ರಿಪುರ,ನಾಗಲ್ಯಾಂಡ್. ಮಿಝೋರಾಂ,21.04.2023 11ದಿನಗಳು ಉಜ್ಜಯಿನಿ. ಓಂಕಾರ್ ಗುಜರಾತ್ ರಾಜ್ಯಪ್ರವಾಸ. 8073824856, 6366322639, 9538676065

ರಾಮಕಮಲ್ ಟೂರ್ಸ್ 27-02-2023 ಉಜ್ಜಯಿನಿ,ಓಂಕಾರೇಶ್ವರ,ಮಹಾಕಾಳೇಶ್ವರ 27-03-2023 ಕಾಶಿ,ಗಯಾ, ಅಯೋಧ್ಯೆ,ಪ್ರಯಾಗ್ 21-04-2023 ಗೋವ ಪ್ರವಾಸ 9481226296

11/3/23ರಿಂದ ಅಸ್ಸಾಂ ಮೇಘಾಲಯ 38500/– 30/04/23ರಿಂದ ಪುರಿ ಜಗನ್ನಾಥ್ ಜಾರ್ಖಂಡ್ ವೈದ್ಯನಾಥ ನೇಪಾಳ ಮುಕ್ತಿನಾಥ ಜನಕಪುರ. ಶ್ರೀರಾಮ್ ಟೂರ್ ಬೆಂಗಳೂರು.9108933383

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್27/3 ಕಾಶಿ,ಗಯಾ, ಅಯೋಧ್ಯೆ.25/3 ಗುಜರಾತ್, ನಾಗನಾಥ್, ಸೋಮನಾಥ.6/4 ನೇಪಾಳ ಮುಕ್ತಿನಾಥ್.9591017782,9964527782

DH ಪ್ರಜಾವಾಣಿ

BOOK YOUR REAL ESTATE
AD IN DECCAN HERALD ALL KARNATAKA + PRAJAVANI BENGALURU
ON FRIDAY + SATURDAY + SUNDAY
@ 2400/-* FOR 15 WORDS
conditions apply*
For More Details Contact:
9731810277 | 9901641752 | 9886213331 | 9845114560
080- 45557163 | 45557164
dhclassifieds@deccanherald.co.in www.dhclassifieds.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್: ಫೈನಲ್‌ಗೆ ಆಸ್ಟ್ರೇಲಿಯಾ ಲಗ್ಗೆ

ಸೆಮಿಯಲ್ಲಿ ಭಾರತಕ್ಕೆ ನಿರಾಸೆ

ಕೇಪ್‌ಟೌನ್ (ಎಎಫ್‌ಪಿ/ಪಿಟಿಐ): ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ಹರ್ಮನ್‌ಪ್ರೀತ್ ಕೌರ್ ಅವರು ರನೌಟ್ ಆಗುವ ಮೂಲಕ ಭಾರತ ತಂಡವು ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ತಲುಪುವ ಕನಸು ಕಮರಿತು. ಆಸ್ಟ್ರೇಲಿಯಾ ಐದು ರನ್‌ಗಳಿಂದ ಗೆದ್ದು ಪ್ರಶಸ್ತಿ ಸುತ್ತು ಪ್ರವೇಶಿಸಿತು.

ಗುರುವಾರ ಇಲ್ಲಿ ನಡೆದ ಸೆಮಿಫೈನಲ್‌ನಲ್ಲಿ 173 ರನ್‌ಗಳ ಗುರಿ ಬೆನ್ನಟ್ಟಿದ್ದ ಭಾರತ ತಂಡವು ಗೆಲುವಿನಂಚಿನಲ್ಲಿ ಮುಗ್ಗರಿಸಿತು. ಅಗ್ರ ಮೂವರು ಬ್ಯಾಟರ್‌ಗಳು ಒಂದಂಕಿ ಗಳಿಸಿ ಔಟಾದರೂ ಹರ್ಮನ್‌ಪ್ರೀತ್ (52; 34ಎ) ತಂಡಕ್ಕೆ ಆಸರೆಯಾದರು. ಗೆಲುವಿನ ಆಸೆ ಚಿಗುರಿಸಿದ್ದರು. ಅವರು ಜೆಮಿಮಾ ರಾಡ್ರಿಗಸ್ (43; 24ಎ) ಅವರೊಡಗೂಡಿ ನಾಲ್ಕನೇ ವಿಕೆಟ್ ಜತೆಯಾಟದಲ್ಲಿ 69 ರನ್ ಸೇರಿಸಿದರು. ಐದನೇ ವಿಕೆಟ್ ಜೊತೆಯಾಟದಲ್ಲಿಯೂ ಹರ್ಮನ್ ಅವರು ರಿಚಾ ಘೋಷ್ ಜೊತೆಗೆ 36 ರನ್ ಸೇರಿಸಿದರು. ಇದರಿಂದಾಗಿ ಭಾರತ ತಂಡದ ಗೆಲುವು ಸುಲಭ ಎನಿಸತೊಡಗಿತ್ತು.

ಇಡೀ ಟೂರ್ನಿಯಲ್ಲಿ ಲಯ ಕಂಡುಕೊಳ್ಳಲು ಹೆಣಗಾಡಿದ್ದ ಹರ್ಮನ್ ಅಮೋಘವಾಗಿ ಆಡುತ್ತಿದ್ದರು. ಆದರೆ 15ನೇ ಓವರ್‌ನಲ್ಲಿ ಅವರಿಗೆ ಅದೃಷ್ಟ ಕೈಕೊಟ್ಟಿತು. ರನ್ ತೆಗೆದುಕೊಳ್ಳುವಾಗ ಕ್ರೀಸ್‌ನಿಂದ ಒಂದು ಗೇಣಿನಷ್ಟು ಮೊದಲು ಹರ್ಮನ್ ಅವರ ಬ್ಯಾಟ್ ಹುಲ್ಲಿನ ಎಸಳಿದ್ದ ಮಣ್ಣಿನಲ್ಲಿ ಸಿಕ್ಕಿಕೊಂಡಿತು. ಅವರು ಕ್ರೀಸ್‌ನೊಳಗೆ ಕಾಲಿಡುವಷ್ಟರಲ್ಲಿ ಫೀಲ್ಡರ್ ಗಾರ್ಡನರ್ ಥ್ರೋ ಮಾಡಿದ ಚೆಂಡನ್ನು ಸಂಗ್ರಹಿಸಿದ ವಿಕೆಟ್‌ಕೀಪರ್ ಅಲಿಸಾ ಹೀಲಿ ಬೇಲ್ಸ್ ಎಗರಿಸಿದರು. ಟಿ.ವಿ. ಅಂಪೈರ್ ರನೌಟ್ ಖಚಿತಪಡಿಸಿದರು. ಡಗೌಟ್‌ಗೆ ಮರಳುವ ಹಾದಿಯಲ್ಲಿ ಹರ್ಮನ್ ಹತಾಶೆಯಿಂದ ಬ್ಯಾಟ್ ಬಿಸಾಕಿದ್ದೂ ಆಯಿತು.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ರಿಚಾ ಘೋಷ್ ಜೊತೆಗೂಡಿದ ದೀಪ್ತಿ ಶರ್ಮಾ ತಂಡವನ್ನು ಗೆಲುವಿನ ಗೆರೆ ದಾಟಿಸುವ ಭರವಸೆ ಮೂಡಿಸಿದ್ದರು. ಡಾರ್ಸಿ ಬ್ರೌನ್ ಬೌಲಿಂಗ್‌ನಲ್ಲಿ ರಿಚಾ ಔಟಾದರು. ಉಳಿದ ಬ್ಯಾಟರ್‌ಗಳ ಪ್ರಯತ್ನ ಸಾಕಾಗಲಿಲ್ಲ. ಭಾರತದ ಗೆಲುವಿಗೆ ಇನಿಂಗ್ಸ್‌ನ ಕೊನೆಯ ಮೂರು ಓವರ್‌ಗಳಲ್ಲಿ 31 ರನ್‌ಗಳ ಅಗತ್ಯವಿತ್ತು.

ಆದರೆ, ಆಸ್ಟ್ರೇಲಿಯಾದ ಬೌಲರ್‌ಗಳಾದ ಮೇಘನ್ ಶುಟ್, ಜೆಸ್ ಜಾನ್ಸನ್ ಹಾಗೂ ಗಾರ್ಡನರ್ ಅವರು ತಲಾ ಒಂದು ಓವರ್ ಬೌಲಿಂಗ್ ಮಾಡಿದರು. ಈ ಮೂರು ಓವರ್‌ಗಳಲ್ಲಿ ಭಾರತಕ್ಕೆ ಲಭಿಸಿದ್ದು 26 ರನ್‌ಗಳು ಮಾತ್ರ. 20 ಓವರ್‌ಗಳಲ್ಲಿ 8 ವಿಕೆಟ್‌ಗಳ ನಷ್ಟಕ್ಕೆ 167 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಮೂನಿ ಅರ್ಧಶತಕ: ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ಬ್ಯಾಟರ್‌ಗಳು ಭಾರತದ ಬೌಲರ್‌ಗಳನ್ನು ದಂಡಿಸಿದರು. ಅದರಲ್ಲೂ ಬೆಥ್ ಮೂನಿ (54 ರನ್) ಚೆಂದದ ಅರ್ಧಶತಕ ದಾಖಲಿಸುವ ಮೂಲಕ ಆಸ್ಟ್ರೇಲಿಯಾ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 172 ರನ್ ಗಳಿಸಲು ಸಾಧ್ಯವಾಯಿತು. ಅವರಿಗೆ ಮೆಗ್ ಲ್ಯಾನಿಂಗ್ ಹಾಗೂ ಗಾರ್ಡನರ್ ಉತ್ತಮ ಜೊತೆ ನೀಡಿದರು.

ಈ ಹಂತದಲ್ಲಿ ಭಾರತದ ಬೌಲರ್‌ಗಳು ಬಿಗಿ ದಾಳಿ ನಡೆಸಲಿಲ್ಲ. ಫೀಲ್ಡಿಂಗ್ ಕೂಡ ಚುರುಕಾಗಿರಲಿಲ್ಲ. ಕೆಲವು ಕ್ಯಾಚ್‌ಗಳನ್ನು ಕೈಚೆಲ್ಲಿದ್ದರಿಂದ ಆಸ್ಟ್ರೇಲಿಯಾ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 172 (ಅಲೀಸಾ ಹೀಲಿ 25, ಬೆಥ್ ಮೂನಿ 54, ಮೆಗ್ ಲ್ಯಾನಿಂಗ್ ಔಟಾಗದೆ 49, ಆ್ಯಷ್ಲೆ ಗಾರ್ಡನರ್ 31, ಶಿಖಾ ಪಾಂಡೆ 32ಕ್ಕೆ2, ರಾಧಾ ಯಾದವ್ 35ಕ್ಕೆ1, ದೀಪ್ತಿ ಶರ್ಮಾ 30ಕ್ಕೆ1)

ಭಾರತ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 167 (ಜೆಮಿಮಾ ರಾಡ್ರಿಗಸ್ 43, ಹರ್ಮನ್‌ಪ್ರೀತ್ ಕೌರ್ 52, ದೀಪ್ತಿ ಶರ್ಮಾ ಔಟಾಗದೆ 20, ಆ್ಯಷ್ಲೆ ಗಾರ್ಡನರ್ 37ಕ್ಕೆ2, ಡಾರ್ಸಿ ಬ್ರೌನ್ 18ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 5 ರನ್‌ಗಳ ಜಯ

ಆಸ್ಟ್ರೇಲಿಯಾ ತಂಡದ ಆಷ್ಲೇ ಗಾರ್ಡನರ್ (ಮಧ್ಯದಲ್ಲಿ) ಅವರನ್ನು ಅಭಿನಂದಿಸಿದ ಸಹ ಆಟಗಾರ್ತಿಯರು–ಎಎಫ್‌ಪಿ ಚಿತ್ರ

ಸುಮಿತ್ ನಗಾಲ್ ಸವಾಲು ಅಂತ್ಯ

ಬೆಂಗಳೂರು ಓಪನ್ ಟೆನಿಸ್ ಟೂರ್ನಿ: ಡಬಲ್ಸ್ ಸೆಮಿಗೆ ಅನಿರುದ್ಧ್–ವಿಜಯ್

• ಮಹಮ್ಮದ್ ನೂಮಾನ್

ಬೆಂಗಳೂರು: ರ‍್ಯಾಂಕಿಂಗ್‌ನಲ್ಲಿ ತನಗಿಂತ ಮೇಲಿನ ಸ್ಥಾನದಲ್ಲಿರುವ ಆಟಗಾರನಿಗೆ ತಕ್ಕ ಪೈಪೋಟಿ ಒಡ್ಡಿದರೂ ಸುಮಿತ್ ನಗಾಲ್‌ಗೆ ಗೆಲುವು ದಕ್ಕಲಿಲ್ಲ.

ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ 4–6, 6–3, 6–3 ರಲ್ಲಿ ನಗಾಲ್ ವಿರುದ್ಧ ಗೆದ್ದು ಎಂಟರಘಟ್ಟ ಪ್ರವೇಶಿಸಿದರು. ಇದರೊಂದಿಗೆ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲಿಗೆ ತೆರೆಬಿತ್ತು.

ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ಗುರುವಾರ ನಡೆದ ಪಂದ್ಯ ರೋಚಕತೆಯಿಂದ ಕೂಡಿತ್ತು. ಮೊದಲ ಸೆಟ್ ಸೋತರೂ, 155 ರ‍್ಯಾಂಕ್‌ನ ಆಟಗಾರ ಪರ್ಸೆಲ್ ಅಮೋಘ ಆಟವಾಡಿ ಪುಟಿದೆದ್ದು ನಿಂತರು. ಈ ಹೋರಾಟ ಎರಡು ಗಂಟೆ ಐದು ನಿಮಿಷ ನಡೆಯಿತು.

ಮೊದಲ ಸೆಟ್‌ನ ಏಳನೇ ಗೇಮ್‌ನಲ್ಲಿ ನಗಾಲ್, ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಮುನ್ನಡೆ ಪಡೆದರು. ಎಟಿಪಿ ರ‍್ಯಾಂಕಿಂಗ್‌ನಲ್ಲಿ 409ನೇ ಸ್ಥಾನದಲ್ಲಿರುವ ಭಾರತದ ಆಟಗಾರ ಆ ಬಳಿಕ ಮುಂದಿನ ಎರಡೂ ಸರ್ವ್‌ಗಳಲ್ಲಿ ಪಾಯಿಂಟ್ಸ್ ಗಳಿಸಿ ಸೆಟ್ ಗೆದ್ದರು.

ಎರಡನೇ ಸೆಟ್‌ನಲ್ಲಿ ಮೊದಲ ಏಳು ಗೇಮ್‌ಗಳವರೆಗೆ ಯಾವುದೇ ಸರ್ವಿಸ್ ಬ್ರೇಕ್ ಆಗಲಿಲ್ಲ. ಆದರೆ ಎಂಟನೇ ಗೇಮ್‌ನಲ್ಲಿ ನಗಾಲ್ ಸರ್ವ್ ಬ್ರೇಕ್ ಮಾಡಿದ ಪರ್ಸೆಲ್, 5-3 ರಲ್ಲಿ ಮುನ್ನಡೆ ಗಳಿಸಿದರು. ಆ ಬಳಿಕ ತಮ್ಮ ಸರ್ವ್ ಕಾಪಾಡಿಕೊಂಡು ಸೆಟ್ ಗೆದ್ದು ಪಂದ್ಯವನ್ನು ಸಮಸ್ಥಿತಿಗೆ ತಂದರು.

ನಿರ್ಣಾಯಕ ಸೆಟ್‌ನಲ್ಲಿ 3-3ರ ಸಮಬಲ ಕಂಡುಬಂತು. ಆಸ್ಟ್ರೇಲಿಯಾದ ಆಟಗಾರ ಏಳನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ನಿರ್ಣಾಯಕ ಮುನ್ನಡೆ ಸಾಧಿಸಿದರು. ಒಂದು ಡಬಲ್ ಫಾಲ್ಟ್ ಮಾಡಿದ್ದು ನಗಾಲ್‌ಗೆ ಮುಳುವಾಗಿ ಪರಿಣಮಿಸಿತು. ಆ ಬಳಿಕ ಪರ್ಸೆಲ್ ಗೆಲುವಿನತ್ತ ಹೆಜ್ಜೆಯಿಟ್ಟರು.

ಪಂದ್ಯದುದ್ದಕ್ಕೂ ಅವರ ಸರ್ವ್‌ಗಳು ಅತ್ಯುತ್ತಮವಾಗಿದ್ದವು. ಒಟ್ಟು 13 ಏಸ್‌ಗಳನ್ನು ಹೊಡೆದು ಎದುರಾಳಿಯನ್ನು ಕಂಗೆಡಿಸಿದರು. ನಗಾಲ್ ರ‍್ಯಾಕೆಟ್‌ನಿಂದ ಸಿಡಿದದ್ದು ಮೂರು ಏಸ್‌ಗಳು ಮಾತ್ರ.

ದಿನದ ಇತರ 16ರ ಘಟ್ಟದ ಪಂದ್ಯಗಳಲ್ಲಿ ಆಸ್ಟ್ರೇಲಿಯಾದ ಜೇಮ್ಸ್ ಡಕ್ವರ್ಥ್ 6–1, 6–2 ರಲ್ಲಿ ಫ್ರಾನ್ಸ್‌ನ ಗಿಯೊವಾನಿ ಪೆರಿಕಾರ್ಡ್ ವಿರುದ್ಧ; ಬಲ್ಗೇರಿಯದ ದಿಮಿತರ್ ಕುಜ್ಮನೊವ್ 6–3, 6–4 ರಲ್ಲಿ ತಮ್ಮದೇ ದೇಶದ ಅಲಿಬೆಕ್ ಕಚಮಜೊವ್ ವಿರುದ್ಧ; ಇಟಲಿಯ ಲುಕಾ ನಾರ್ಡಿ 7–5, 5–7, 6–2 ರಲ್ಲಿ ಚೀನಾ ತೈಪೆಯ ಜೇಸನ್ ಜಂಗ್ ವಿರುದ್ಧ ಗೆದ್ದರು.

ಡಬಲ್ಸ್ ಸೆಮಿಗೆ ಅನಿರುದ್ಧ್–ವಿಜಯ್: ಭಾರತದ ಅನಿರುದ್ಧ್ ಚಂದ್ರಶೇಖರ್ ಮತ್ತು ಎನ್. ವಿಜಯ್‌ಸುಂದರ್ ಪ್ರಶಾಂತ್ ಅವರು ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಎಂಟರಘಟ್ಟದ ಪಂದ್ಯದಲ್ಲಿ ಅವರು 3–6, 6–4, 12–10 ರಲ್ಲಿ ಬೆಂಜಮಿನ್ ಲಾಕ್–ಅಕಿರಾ ಸಂಟಿಲಾನ್ ವಿರುದ್ಧ ಗೆದ್ದರು.

ಇನ್ನೊಂದು ಪಂದ್ಯದಲ್ಲಿ ಭಾರತದ ಅರ್ಜುನ್ ಖಾಡೆ ಮತ್ತು ಆಸ್ಟ್ರಿಯದ ಮ್ಯಾಕ್ಸಿಮಿಲಿಯನ್ ಜೋಡಿ 7–5, 6–3 ರಲ್ಲಿ ಫ್ರೆಡೆರಿಕೊ ಫೆರೆರಾ ಸಿಲ್ವಾ–ದಿಮಿತರ್ ಕುಜ್ಮನೊವ್ ಅವರನ್ನು ಮಣಿಸಿತು.

ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಚೆಂಡನ್ನು ಹಿಂದಿರುಗಿಸಿದ ಕ್ಷಣ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ಮುಖ್ಯಾಂಶಗಳು

- ಸಿಂಗಲ್ಸ್ ವಿಭಾಗದಲ್ಲಿ ಭಾರತಕ್ಕೆ ನಿರಾಸೆ
- ಮ್ಯಾಕ್ಸ್ ಪರ್ಸೆಲ್ ಎದುರು ಸೋಲು
- ಮೊದಲ ಸೆಟ್ ಸೋತರೂ ಮರುಹೋರಾಟ ನಡೆಸಿದ ಪರ್ಸೆಲ್

ಡ್ರ್ಯಾಗನ್ ಬೋಟ್

ಭಾರತೀಯ ಕಯಾಕಿಂಗ್ ಹಾಗೂ ಕೆನೊಯಿಂಗ್ ಅಸೋಸಿಯೇಷನ್ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ 11ನೇ ರಾಷ್ಟ್ರೀಯ ಡ್ರ್ಯಾಗನ್ ಬೋಟ್ ಚಾಂಪಿಯನ್‌ಶಿಪ್ ಉಡುಪಿ ಜಿಲ್ಲೆ ಬ್ರಹ್ಮಾವರದ ಹೇರೂರು ಬಳಿ ಇರುವ ಸುವರ್ಣ ನದಿಯಲ್ಲಿ ಗುರುವಾರ ಪ್ರಾರಂಭವಾಯಿತು. ವಿವಿಧ ರಾಜ್ಯಗಳ 600ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್.

ಫುಟ್‌ಬಾಲ್: ಡೆಂಪೊ– ಎಂಇಜಿ ಪಂದ್ಯವೂ ಸಮಬಲ

ಗೋಕುಲಂ ಕಟ್ಟಿಹಾಕಿದ ರೂಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿಟ್ಟ ಆಟವಾಡಿದ ರೂಟ್ಸ್ ಎಫ್‌ಸಿ ಬೆಂಗಳೂರು ತಂಡದವರು ಇಲ್ಲಿ ಗುರುವಾರ ಆರಂಭವಾದ ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗೋಕುಲಂ ಕೇರಳ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ 'ಬಿ' ಗುಂಪಿನ ಪಂದ್ಯ 1–1ರಿಂದ ಸಮಬಲವಾಯಿತು.

ನಿಧಾನಗತಿಯ ಆರಂಭ ಮಾಡಿದ ಉಭಯ ತಂಡಗಳು ಹಂತಹಂತವಾಗಿ ಆಟದ ವೇಗವನ್ನು ಹೆಚ್ಚಿಸಿದವು. ಆದರೆ ಮೊದಲಾರ್ಧದಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ. ಚೆಂಡು ಹೆಚ್ಚು ಹೊತ್ತು ತವರಿನ ತಂಡ ರೂಟ್ಸ್ ಆಟಗಾರರ ಬಳಿಯೇ ಇತ್ತು. ಹಲವು ಬಾರಿ ಗೋಲು ದಾಖಲಿಸುವ ತಂಡದ ಪ್ರಯತ್ನ ವಿಫಲವಾಯಿತು.

ದ್ವಿತೀಯಾರ್ಧದಲ್ಲಿ ಆಟ ಇನ್ನಷ್ಟು ರಂಗೇರಿತು. ಯೋಹಾನ್ ವಿಕ್ಟರ್ ಬ್ರಿಟ್ಟೊ ಅವರು 64ನೇ ಚಾಣಾಕ್ಷತನದಿಂದ ಚೆಂಡನ್ನು ಗುರಿ ಸೇರಿಸಿ ರೂಟ್ಸ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಆ ಬಳಿಕವೂ ತಂಡವು ಅದೇ ಲಯ ಕಾಯ್ದುಕೊಂಡಿತ್ತು. ಆದರೆ 87ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶದಲ್ಲಿ ಗೋಲು ದಾಖಲಿಸಿದ ಗೋಕುಲಂನ ಸ್ಯಾಮ್ಯುಯೆಲ್ ಮೆನ್ಸಾ ಕೊನೆ ರೂಟ್ಸ್ ಜಯದ ಆಸೆಗೆ ತಣ್ಣೀರೆರಚಿದರು. ರೂಟ್ಸ್ ಆಟಗಾರರ ನಿಖರ ಪಾಸ್‌ಗಳು ಪಂದ್ಯದಲ್ಲಿ ಗಮನಸೆಳೆದವು.

ಡೆಂಪೊ– ಎಂಇಜಿ ಸಮಬಲ: ಡೆಂಪೊ ಎಫ್‌ಸಿ ಮತ್ತು ಎಂಇಜಿ ಸೆಂಟರ್ ಎಫ್‌ಸಿ ನಡುವಣ 'ಎ' ಗುಂಪಿನ ಪಂದ್ಯವೂ ಡ್ರಾನಲ್ಲಿ ಅಂತ್ಯವಾಯಿತು. ಎಂಇಜಿ ತಂಡಕ್ಕಾಗಿ ಆಯುಷ್ 16ನೇ ನಿಮಿಷದಲ್ಲೇ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟಿದ್ದರು. ಡೆಂಪೊ ಎಫ್‌ಸಿಯ ಶ್ರೇಯಸ್ ಗಜಾನನ ನಾಯ್ಕ 82ನೇ ನಿಮಿಷದಲ್ಲಿ ದಾಖಲಿಸಿದ ಗೋಲು ಸಮಬಲಕ್ಕೆ ಕಾರಣವಾಯಿತು.

ಇಂದಿನ ಪಂದ್ಯಗಳು

'ಸಿ' ಗುಂಪು: ಬೆಂಗಳೂರು ಎಫ್‌ಸಿ–ಶ್ರೀನಿಧಿ ಡೆಕ್ಕನ್ (ಬೆಳಿಗ್ಗೆ 8.15ರಿಂದ)

'ಡಿ' ಗುಂಪು: ಚೆನ್ನೈಯಿನ್ ಎಫ್‌ಸಿ– ಎಎಆರ್‌ಸಿ ಎಫ್‌ಸಿ (ಬೆಳಿಗ್ಗೆ 10.45ರಿಂದ)

ಕಿಕ್‌ಸ್ಟಾರ್ಟ್ ಎಫ್‌ಸಿ–ಕೇರಳ ಯುನೈಟೆಡ್ ಎಫ್‌ಸಿ (ಮ.1.30ರಿಂದ)

'ಸಿ' ಗುಂಪು: ಕೆಂಕ್ರೆ ಎಫ್‌ಸಿ– ಡೆಲ್ಲಿ ಎಫ್‌ಸಿ (ಸಂಜೆ 4ರಿಂದ)

ರೂಟ್ಸ್ ಎಫ್‌ಸಿ ಬೆಂಗಳೂರು (ನೀಲಿ ಪೋಷಾಕು) ಹಾಗೂ ಗೋಕುಲಂ ಕೇರಳ ಆಟಗಾರರ ಪೈಪೋಟಿ

ಮ್ಯಾಕ್ಸ್‌ವೆಲ್, ಮಾರ್ಷ್‌ಗೆ ಸ್ಥಾನ

ಮೆಲ್ಬರ್ನ್ (ಪಿಟಿಐ): ಆಲ್‌ರೌಂಡರ್‌ಗಳಾದ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಮಿಚೆಲ್ ಮಾರ್ಷ್ ಅವರು ಭಾರತದ ಎದುರಿನ ಏಕದಿನ ಸರಣಿಗೆ ಆಸ್ಟ್ರೇಲಿಯಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಮುಂದಿನ ತಿಂಗಳು ನಿಗದಿಯಾಗಿರುವ ಸರಣಿಗೆ 16 ಆಟಗಾರರ ತಂಡವನ್ನು ಆಸ್ಟ್ರೇಲಿಯಾ ಗುರುವಾರ ಪ್ರಕಟಿಸಿದೆ. ಡೇವಿಡ್ ವಾರ್ನರ್, ಪ್ಯಾಟ್ ಕಮಿನ್ಸ್, ಆ್ಯಷ್ಟನ್ ಅಗರ್ ಹಾಗೂ ಜಾಯ್ ರಿಚರ್ಡ್ಸನ್ ಕೂಡ ತಂಡದಲ್ಲಿದ್ದಾರೆ.

ಸರಣಿಯ ಪಂದ್ಯಗಳು ಕ್ರಮವಾಗಿ ಮಾರ್ಚ್ 17ರಂದು ಮುಂಬೈ, 19ರಂದು ವಿಶಾಖಪಟ್ಟಣ ಮತ್ತು 22ರಂದು ಚೆನ್ನೈನಲ್ಲಿ ನಡೆಯಲಿವೆ.

ಕುಟುಂಬ ಸದಸ್ಯರೊಬ್ಬರ ಅನಾರೋಗ್ಯದ ಕಾರಣ ಪ್ಯಾಟ್ ಕಮಿನ್ಸ್ ಅವರು ಭಾರತದ ಎದುರಿನ ಎರಡನೇ ಟೆಸ್ಟ್ ಬಳಿಕ ತವರಿಗೆ ಮರಳಿದ್ದಾರೆ. ದೇಶಿ ಕ್ರಿಕೆಟ್ ಆಡಲು ಅಗರ್ ಅವರನ್ನು ರಾಷ್ಟ್ರೀಯ ತಂಡದಿಂದ ಬಿಡುಗಡೆಗೊಳಿಸಲಾಗಿದೆ.

ಆಸ್ಟ್ರೇಲಿಯಾ ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಸೀನ್ ಅಬಾಟ್, ಆ್ಯಷ್ಟನ್ ಅಗರ್, ಅಲೆಕ್ಸ್ ಕ್ಯಾರಿ, ಕ್ಯಾಮರಾನ್ ಗ್ರೀನ್, ಟ್ರಾವಿಸ್ ಹೆಡ್, ಜೋಷ್ ಇಂಗ್ಲಿಸ್, ಮಾರ್ನಸ್ ಲಾಬುಷೇನ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಜಾಯ್ ರಿಚರ್ಡ್ಸನ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೊಯಿನಿಸ್, ಡೇವಿಡ್ ವಾರ್ನರ್, ಆಡಂ ಜಂಪಾ.

ಸಂಕ್ಷಿಪ್ತ ಸುದ್ದಿ

ಮಾರ್ಚ್ 2ರಂದು ಬಿಟಿಸಿಯಲ್ಲಿ ಟಿ10 ಕ್ರಿಕೆಟ್ ಟೂರ್ನಿ

ಬೆಂಗಳೂರು: ಇಲ್ಲಿಯ ಬೆಂಗಳೂರು ಟರ್ಫ್ ಕ್ಲಬ್ ಆಶ್ರಯದಲ್ಲಿ ಮಾರ್ಚ್ 2ರಂದು ಟಿ10 ಆಹ್ವಾನಿತ ಕಪ್ ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿದೆ.

ಬಿಟಿಸಿಯಲ್ಲಿರುವ ಬರಿ ಮೈದಾನದಲ್ಲಿ ಟಿ10 ಟೂರ್ನಿ ನಡೆಯಲಿದೆ. ಬಿಟಿಸಿ ಕ್ಲಬ್ ಸದಸ್ಯರಿರುವ ವಾರಿಯರ್ಸ್, ಟ್ರೇನರ್ಸ್ ಎಲೆವನ್ ಹಾಗೂ ಜಾಕಿಸ್ ಎಲೆವನ್ ತಂಡಗಳು ಆಡಲಿವೆ. ಮಾ.2ರಂದು ಬೆಳಿಗ್ಗೆ 9.30ಕ್ಕೆ ಪಂದ್ಯ ಆರಂಭವಾಗಲಿದೆ ಎಂದು ಬಿಟಿಸಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತ– ಜೋರ್ಡಾನ್ ಪಂದ್ಯ ಇಂದು

ಬೆಂಗಳೂರು: ಭಾರತ ಪುರುಷರ ಬ್ಯಾಸ್ಕೆಟ್‌ಬಾಲ್ ತಂಡದವರು ಫಿಬಾ ವಿಶ್ವಕಪ್ ಟೂರ್ನಿಗಾಗಿ ಏಷ್ಯನ್ ಕ್ವಾಲಿಫೈಯರ್ಸ್ ಪಂದ್ಯದಲ್ಲಿ ಶುಕ್ರವಾರ ಜೋರ್ಡಾನ್ ತಂಡವನ್ನು ಎದುರಿಸಲಿದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿ ಈ ಪಂದ್ಯ ನಿಗದಿಯಾಗಿದೆ. ತವರಿನ ಚರಣದಲ್ಲಿ ಭಾರತಕ್ಕೆ ಇದು ಕೊನೆಯ ಪಂದ್ಯವಾಗಿದೆ

ಪಂದ್ಯ ಆರಂಭ: ಸಂಜೆ 6

ಕುಸ್ತಿ: ಏಷ್ಯನ್ ಚಾಂಪಿಯನ್‌ಷಿಪ್ ಸ್ಥಳಾಂತರ

ನವದೆಹಲಿ (ಪಿಟಿಐ): ಇಲ್ಲಿ ನಡೆಯಬೇಕಿದ್ದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ಅನ್ನು ಕಜಕಸ್ತಾನದ ಅಸ್ತಾನಾಗೆ ಸ್ಥಳಾಂತರ ಮಾಡಲಾಗಿದೆ. ಭಾರತದ ಕುಸ್ತಿ ಕ್ರೀಡೆಯಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆಗಳ ಕಾರಣ ಯುನೈಟೆಡ್ ವಿಶ್ವ ಕುಸ್ತಿ (ಯುಡಬ್ಲ್ಯುಡಬ್ಲ್ಯು) ಗುರುವಾರ ಈ ಕ್ರಮ ಕೈಗೊಂಡಿದೆ.

ಏಷ್ಯನ್ ಚಾಂಪಿಯನ್‌ಷಿಪ್ ನವದೆಹಲಿಯಲ್ಲಿ ಮಾರ್ಚ್ 28ರಿಂದ ಏಪ್ರಿಲ್ 2ರವರೆಗೆ ನಿಗದಿಯಾಗಿತ್ತು. ಈಗ ಅಸ್ತಾನಾದಲ್ಲಿ ಏಪ್ರಿಲ್ 7ರಿಂದ 15ರವರೆಗೆ ಟೂರ್ನಿ ನಡೆಸಲು ನಿರ್ಧರಿಸಲಾಗಿದೆ.

ಫೆರಾರಿ ಕಾರ್ಯತಂತ್ರ ವಿಭಾಗಕ್ಕೆ ರವಿನ್ ಜೈನ್ ಮುಖ್ಯಸ್ಥ

ಮಾರನೆಲ್ಲೊ, ಇಟಲಿ (ಪಿಟಿಐ): ಭಾರತದ ರವಿನ್ ಜೈನ್ ಅವರು ಫೆರಾರಿ ಫಾರ್ಮುಲಾ ಒನ್ ತಂಡದ ಕಾರ್ಯತಂತ್ರ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

ಫೆರಾರಿ ಕಾರು ತಯಾರಿಕಾ ಕಂಪನಿಯಲ್ಲಿ ದೀರ್ಘಕಾಲ ಅವರು ರೇಸ್ ಕಾರ್ಯತಂತ್ರದ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಸ್ಪೇನ್‌ನ ಇನಾಕಿ ರುಡಾ ಅವರ ಸ್ಥಾನಕ್ಕೆ ರವಿನ್ ನೇಮಕವಾಗಿದೆ.

ಸನ್‌ರೈಸರ್ಸ್‌ಗೆ ಮರ್ಕರಂ ನಾಯಕ

ಹೈದರಾಬಾದ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ಏಡನ್ ಮರ್ಕರಂ ಅವರು ನಾಯಕರಾಗಿ ನೇಮಕಗೊಂಡಿದ್ದಾರೆ.

'ಕಾಯುವಿಕೆ ಕೊನೆಗೊಂಡಿದೆ. ನಮ್ಮ ಹೊಸ ನಾಯಕ ಏಡನ್ ಮರ್ಕರಂ ಅವರನ್ನು ಸ್ವಾಗತಿಸಿ' ಎಂದು ಸನ್‌ರೈಸರ್ಸ್ ತಂಡದ ಟ್ವಿಟರ್ ಖಾತೆಯಲ್ಲಿ ತಿಳಿಸಲಾಗಿದೆ.

ಕಳೆದ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ಹೈದರಾಬಾದ್ ತಂಡವನ್ನು ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಮುನ್ನಡೆಸಿದ್ದರು. ಈ ವರ್ಷ ತಂಡವು ಅವರನ್ನು ಬಿಡುಗಡೆಗೊಳಿಸಿತ್ತು.

ಈ ವರ್ಷ ಗುಜರಾತ್ ಟೈಟನ್ಸ್ ತಂಡವು ಹರಾಜು ಪ್ರಕ್ರಿಯೆಯಲ್ಲಿ ವಿಲಿಯಮ್ಸನ್ ಅವರನ್ನು ತನ್ನತ್ತ ಸೆಳೆದಿದೆ.

ಕೇಜ್ರಿವಾಲ್ ಆಪ್ತ ಸಹಾಯಕನ ವಿಚಾರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಬವ್ ಕುಮಾರ್ ಅವರನ್ನು ಮಂಗಳವಾರ ವಿಚಾರಣೆಗೆ ಒಳಪಡಿಸಿದ್ದಾರೆ.

'ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಕುಮಾರ್ ಅವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಗರಣ ನಡೆಸಲು ಬಳಸಿದ್ದ 170 ಫೋನ್‌ಗಳನ್ನು ನಾಶ ಮಾಡುವ ಮೂಲಕ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ, ಬಿಬವ್ ಕುಮಾರ್ ಅವರು ಕೋಟ್ಯಂತರ ರೂಪಾಯಿ ಲಂಚ ಪಡೆದ ಕುರಿತ ಸಾಕ್ಷ್ಯಗಳನ್ನು ನಾಶ ಪಡಿಸಲು ಯತ್ನಿಸಿದ್ದಾರೆ ಎಂದು ಇ.ಡಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ. ಈ ಆರೋಪದ ಕುರಿತು ಕುಮಾರ್ ಅವರ ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಸುಕೇಶ್ ಬಳಿಯಿದ್ದ ₹1.5 ಲಕ್ಷ ಮೌಲ್ಯದ ಚಪ್ಪಲಿ ವಶ

ನವದೆಹಲಿ (ಪಿಟಿಐ): ಇಲ್ಲಿಯ ಮಂಡೋಲಿ ಜೈಲಿನಲ್ಲಿರುವ, ವಂಚನೆ ಪ್ರಕರಣದ ಆರೋಪಿ ಸುಕೇಶ್ ಚಂದ್ರಶೇಖರ್ ಅವರಿಂದ ಜೈಲು ಧಿಕಾರಿಗಳು ₹1.5 ಲಕ್ಷ ಮೊತ್ತದ ಗುಸ್ಸಿ ಚಪ್ಪಲಿ ಮತ್ತು ₹80 ಸಾವಿರ ಬೆಲೆಯ ಎರಡು ಜೀನ್ಸ್ ಪ್ಯಾಂಟ್‌ಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಕಾರಾಗೃಹ ಇಲಾಖೆ ಮತ್ತು ಭದ್ರತಾ ಸಿಬ್ಬಂದಿ ಜಂಟಿಯಾಗಿ ಜೈಲಿನೊಳಗೆ ದಾಳಿ ನಡೆಸಿತ್ತು ಎಂದಿದ್ದಾರೆ.

ಶೋಧ ಕಾರ್ಯಾಚರಣೆಯ ವೇಳೆ ಆರೋಪಿ ಚಂದ್ರಶೇಖರ್ ಜೈಲರ್ ದೀಪಕ್ ಶರ್ಮಾ ಎದುರು ಅಳುವ ಸಿಸಿಟಿವಿ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಎಐಎಡಿಎಂಕೆ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ಪಳನಿಸ್ವಾಮಿ

ಹೈಕೋರ್ಟ್ ಆದೇಶ ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ಎಐಎಡಿಎಂಕೆಯ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರಿಯಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಹಾಗೂ ಹೃಷಿಕೇಶ್ ರಾಯ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಈ ವಿಚಾರವಾಗಿ ಮಾಜಿ ಮುಖ್ಯಮಂತ್ರಿ ಒ.ಪನ್ನೀರಸೆಲ್ವಂ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದು, ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶವನ್ನು ಗುರುವಾರ ಎತ್ತಿಹಿಡಿದಿದೆ.

ಹೋದ ವರ್ಷದ ಜುಲೈ 11ರಂದು ಪಕ್ಷದ ಅತ್ಯಂತ ಪ್ರಭಾವಿ ಸಮಿತಿಯಾದ 'ಜನರಲ್ ಕೌನ್ಸಿಲ್' (ಜಿ.ಸಿ) ಪಳನಿಸ್ವಾಮಿ ಅವರನ್ನು ಎಐಎಡಿಎಂಕೆಯ ಪರಮೋಚ್ಚ ಮತ್ತು ಶಾಸಕಾಂಗ ಪಕ್ಷದ ನಾಯಕರನ್ನಾಗಿ ನೇಮಿಸಿತ್ತು. ಸೆಪ್ಟೆಂಬರ್ 2ರಂದು ಪ್ರಕರಣದ ವಿಚಾರಣೆ ನಡೆಸಿದ್ದ ಮದ್ರಾಸ್ ಹೈಕೋರ್ಟ್‌ನ ವಿಭಾಗೀಯ ಪೀಠವು ಪಳನಿಸ್ವಾಮಿ ನೇಮಕವನ್ನು ಸಿಂಧುಗೊಳಿಸಿತ್ತು. ಪಳನಿಸ್ವಾಮಿ ಅವರ ಏಕ ನಾಯಕತ್ವದ ಬೇಡಿಕೆಯನ್ನೂ ಮಾನ್ಯ ಮಾಡಿತ್ತು.

ವಿಭಾಗೀಯ ಪೀಠದ ತೀರ್ಪು ಪ್ರಶ್ನಿಸಿ ಪನ್ನೀರಸೆಲ್ವಂ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಜನವರಿ 12ರಂದು ಅರ್ಜಿಯ ವಿಚಾರಣೆ ನಡೆಸಿದ್ದ ದ್ವಿಸದಸ್ಯ ನ್ಯಾಯಪೀಠವು ತೀರ್ಪು ಕಾಯ್ದಿರಿಸಿತ್ತು.

'ನಾವು ವಿಭಾಗೀಯ ಪೀಠದ ತೀರ್ಪನ್ನು ಎತ್ತಿಹಿಡಿಯುತ್ತಿದ್ದೇವೆ. ಈ ವಿಚಾರವಾಗಿ ಹಿಂದೆ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಕಾಯಂಗೊಳಿಸುತ್ತಿದ್ದೇವೆ' ಎಂದು ನ್ಯಾಯಪೀಠ ಗುರುವಾರ ತಿಳಿಸಿದೆ.

ಸುಪ್ರೀಂ ಕೋರ್ಟ್ ತೀರ್ಪು ಹೊರಬೀಳುತ್ತಿದ್ದಂತೆ ಎಐಎಡಿಎಂಕೆ ಕೇಂದ್ರ ಕಚೇರಿ ಬಳಿ ಪಳನಿಸ್ವಾಮಿ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ. ಸಿಹಿ ವಿತರಿಸಿ ಖುಷಿಪಟ್ಟಿದ್ದಾರೆ. ಪಳನಿಸ್ವಾಮಿ ಕಟೌಟ್‌ಗೆ ಹಾಲಿನ ಅಭಿಷೇಕವನ್ನೂ ಮಾಡಿದ್ದಾರೆ.

ಪಳನಿಸ್ವಾಮಿ ಅವರ ಕಟೌಟ್‌ಗೆ ಬೆಂಬಲಿಗರು ಗುರುವಾರ ಹಾಲಿನ ಅಭಿಷೇಕ ಮಾಡಿದರು –ಪಿಟಿಐ ಚಿತ್ರ

'ದ್ರೋಹಿಗಳ ಮುಖವಾಡ ಕಳಚಿದೆ'

ಮಧುರೈ (ಪಿಟಿಐ): 'ಸುಪ್ರೀಂ ಕೋರ್ಟ್ ತೀರ್ಪು ದ್ರೋಹಿಗಳು ಹಾಗೂ ಎಐಎಡಿಎಂಕೆಯನ್ನು ಮುಗಿಸಲು ಹುನ್ನಾರ ನಡೆಸಿದ್ದ ಡಿಎಂಕೆಯ 'ಬಿ–ಟೀಂ'ನ ಮುಖವಾಡವನ್ನು ಕಳಚಿದೆ' ಎಂದು ಪಳನಿಸ್ವಾಮಿ ಅವರು ಪ್ರತಿಕ್ರಿಯಿಸಿದ್ದಾರೆ.

ಪನ್ನೀರಸೆಲ್ವಂ ಬಣದ ವಿರುದ್ಧ ಹರಿಹಾಯ್ದಿರುವ ಅವರು, 'ವಿಧಾನಸಭೆ ಚುನಾವಣೆಯಲ್ಲಿ ಸೋತಾಗ ಪಕ್ಷದ ಕಥೆ ಮುಗಿದೇ ಹೋಯಿತು ಎಂದು ಕೆಲವರು ಬಣ್ಣಿಸಿದ್ದರು. ಎಐಎಡಿಎಂಕೆಗೆ ಭವಿಷ್ಯವೇ ಇಲ್ಲ ಎಂದೂ ಹೇಳಿದ್ದರು. ಸುಪ್ರೀಂ ಕೋರ್ಟ್ ತೀರ್ಪು ಟೀಕಾಕಾರರು ಹಾಗೂ ವಿರೋಧಿಗಳ ಬಾಯಿ ಮುಚ್ಚಿಸಿದೆ' ಎಂದು ಅವರು ತಿಳಿಸಿದ್ದಾರೆ.

'ಎಐಎಡಿಎಂಕೆಯು ಸಂಘಟಿತ ಪಕ್ಷ. ಇದೇ 27ರಂದು ನಡೆಯುವ ಈರೋಡ್ ಪೂರ್ವ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಉಕ್ರೇನ್ ಯುದ್ಧ: ಭಾರತದ ವಿದ್ಯಾರ್ಥಿಗಳು ರಷ್ಯಾಗೆ ವಾಪಸು

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿ ಕಳೆದ ವರ್ಷ ಪ್ರಾರಂಭವಾದ ಯುದ್ಧದ ಕಾರಣದಿಂದಾಗಿ ಉಕ್ರೇನ್‌ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಭಾರತದ ಸಾವಿರಾರು ವಿದ್ಯಾರ್ಥಿಗಳನ್ನು ವಾಪಸು ಭಾರತಕ್ಕೆ ಕರೆತರಲಾಗಿತ್ತು. ಇವರಲ್ಲಿ ಹಲವು ವಿದ್ಯಾರ್ಥಿಗಳಲ್ಲಿ ತಮ್ಮ ವ್ಯಾಸಂಗ ಮುಂದುವರೆಸಲು, ಮರಳಿ ಉಕ್ರೇನ್‌ಗೆ ತೆರಳಿದ್ದರೆ, ಇನ್ನೂ ಹಲವರು ರಷ್ಯಾ, ಸೆರ್ಬಿಯಾ, ಉಜ್ಬೇಕಿಸ್ತಾನ ಹಾಗೂ ಇನ್ನಿತರ ಐರೋಪ್ಯ ರಾಷ್ಟ್ರಗಳಿಗೆ ತೆರಳಿದ್ದಾರೆ.

'ರಷ್ಯಾ ನಮ್ಮನ್ನು ಗೌರಯುತವಾಗಿ ಸ್ವಾಗತಿಸಿದೆ. ನಮ್ಮಿಂದ ಹೆಚ್ಚುವರಿ ಶುಲ್ಕವನ್ನೂ ಪಡೆದುಕೊಂಡಿಲ್ಲ' ಎಂದು ಕೊನೇ ವರ್ಷದ ಎಂಬಿಬಿಎಸ್ ಓದುತ್ತಿರುವ ಜಿಸ್ನಾ ಜಿಜಿ ಪಿಟಿಐ ಸುದ್ದಿ ಸಂಸ್ಥೆಗೆ ಹೇಳಿದರು.

'2,500 ವಿದ್ಯಾರ್ಥಿಗಳು ವಾಪಸು ಉಕ್ರೇನ್‌ಗೆ ತೆರಳಿದ್ದಾರೆ. ಸುಮಾರು 4 ಸಾವಿರ ವಿದ್ಯಾರ್ಥಿಗಳು ರಷ್ಯಾ, ಸೆರ್ಬಿಯಾ ಹಾಗೂ ಉಜ್ಬೇಕಿಸ್ತಾನಕ್ಕೆ ತೆರಳಿದ್ದಾರೆ' ಎಂದು ಉಕ್ರೇನ್ ಎಂಬಿಬಿಎಸ್ ವಿದ್ಯಾರ್ಥಿಗಳ ಪೋಷಕರ ಸಂಘದ (ಪಿಎಯುಎಂಎಸ್) ಅಧ್ಯಕ್ಷ ಆರ್.ಬಿ. ಗುಪ್ತಾ ಅವರು ಮಾಹಿತಿ ನೀಡಿದರು. 'ಬೇರೆ ಬೇರೆ ದೇಶಗಳಿಗೆ ಹೋದವರಲ್ಲಿ ಹಲವರು ಐದನೇ ಹಾಗೂ ಆರನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು. ಸುಮಾರು 3 ಸಾವಿರ ವಿದ್ಯಾರ್ಥಿಗಳು ಇನ್ನೂ ಭಾರತದಲ್ಲೇ ಆನ್‌ಲೈನ್ ತರಗತಿಗಳ ಮೂಲಕ ವ್ಯಾಸಂಗ ಮಾಡುತ್ತಿದ್ದಾರೆ. 500 ವಿದ್ಯಾರ್ಥಿಗಳು ಎಂಬಿಬಿಎಸ್ ತೊರೆದು ಬೇರೆ ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ್ದಾರೆ' ಎಂದರು.

'ಜಿ–20 ಪ್ರಕ್ರಿಯೆ ಮೇಲೆ ಪರಿಣಾಮ'

ನವದೆಹಲಿ (ಪಿಟಿಐ): 'ಉಕ್ರೇನ್ ಬಿಕ್ಕಟ್ಟಿನಿಂದಾಗಿ ಜಿ–20 ಗುಂಪಿನ ಪ್ರಕ್ರಿಯೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಆದರೆ ಭಾರತದ ಅಧ್ಯಕ್ಷತೆಯಲ್ಲಿ ನಮಗೆ ನಂಬಿಕೆ ಇದೆ. ಉಕ್ರೇನ್ ಬಿಕ್ಕಟ್ಟಿನ ವಿಚಾರದಲ್ಲಿ ಭಾರತವು ತಳೆದಂತಹ ಒಟ್ಟಾರೆ ನಿಲುವನ್ನು ನಾವು ಪ್ರಶಂಸಿಸುತ್ತೇವೆ' ಎಂದು ಯುರೋಪಿಯನ್ ಒಕ್ಕೂಟದ ರಾಯಭಾರಿ ಯುಗೊ ಆ್ಯಸ್ತುಟೊ ಹೇಳಿದ್ದಾರೆ.

ರಷ್ಯಾವು ನೆರೆಯ ಉಕ್ರೇನ್ ಮೇಲೆ ಯುದ್ಧ ಸಾರಿ ಇದೇ 24ಕ್ಕೆ ಒಂದು ವರ್ಷ ಪೂರ್ಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಗುರುವಾರ 'ಪಿಟಿಐ' ಸುದ್ದಿಸಂಸ್ಥೆಗೆ ವಿಶೇಷ ಸಂದರ್ಶನ ನೀಡಿರುವ ಯುಗೊ, 'ರಷ್ಯಾ–ಉಕ್ರೇನ್ ಬಿಕ್ಕಟ್ಟಿನ ಕುರಿತು ಪ್ರತಿಕ್ರಿಯಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು 'ಇದು ಯುದ್ಧದ ಸಮಯವಲ್ಲ' ಎಂದು ಸ್ಪಷ್ಟವಾಗಿಯೇ ತಿಳಿಸಿದ್ದರು. ಅವರ ಆ ಹೇಳಿಕೆ ಮೆಚ್ಚುಗೆಗೆ ಅರ್ಹವಾದುದು. ಭಾರತವು ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡಿದೆ. ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ' ಎಂದಿದ್ದಾರೆ.

'ಭಾರತವು ರಷ್ಯಾದಿಂದ ಕಚ್ಚಾತೈಲ ಆಮದು ಮಾಡಿಕೊಂಡು ಅದನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದೆ. ಅದರ ಪರಿಸ್ಥಿತಿ ನಮಗೆ ಅರ್ಥವಾಗುತ್ತದೆ. ಉಕ್ರೇನ್ ಬಿಕ್ಕಟ್ಟಿನಿಂದಾಗಿ ತೈಲ ಬೆಲೆ ಗಣನೀಯವಾಗಿ ಏರಿತ್ತು. ಆದರೆ ಈಗ ಬಿಕ್ಕಟ್ಟಿನ ಪೂರ್ವದಲ್ಲಿದ್ದ ದರಕ್ಕೆ ತೈಲ ಲಭ್ಯವಾಗುತ್ತಿದೆ. ಇದರಿಂದ ಎಲ್ಲಾ ರಾಷ್ಟ್ರಗಳಿಗೂ ಅನುಕೂಲವಾಗುತ್ತಿದೆ' ಎಂದು ತಿಳಿಸಿದ್ದಾರೆ.

ಪಾಕ್‌ಗೆ ಭಾರತದ ನೆರವಿಲ್ಲ: ಜೈಶಂಕರ್ ಸುಳಿವು

ಪುಣೆ (ಪಿಟಿಐ): 'ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಪಾಕಿಸ್ತಾನಕ್ಕೆ ಭಾರತವು ಯಾವುದೇ ರೀತಿಯ ನೆರವು ಒದಗಿಸುವುದಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಸೂಚ್ಯವಾಗಿ ತಿಳಿಸಿದ್ದಾರೆ.

ವಿದೇಶಾಂಗ ಸಚಿವಾಲಯ ಗುರುವಾರ ಹಮ್ಮಿಕೊಂಡಿದ್ದ ಏಷ್ಯಾ–ಎಕನಾಮಿಕ್ ಸಂವಾದದಲ್ಲಿ ಮಾತನಾಡಿದ ಅವರು, 'ಭಯೋತ್ಪಾದನೆಯನ್ನೇ ಮೂಲ ಉದ್ಯಮವನ್ನಾಗಿಸಿಕೊಂಡಿರುವ ರಾಷ್ಟ್ರವು ಕಠಿಣ ಪರಿಸ್ಥಿತಿಯಿಂದ ಹೊರಬರಲು ಸಾಧ್ಯವಿಲ್ಲ. ಯಾವುದೇ ಒಂದು ರಾಷ್ಟ್ರವು ತನ್ನ ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳುವ ಹಂತದಲ್ಲಿ ತನ್ನ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನೂ ಸರಿಪಡಿಸಿಕೊಳ್ಳಬೇಕಾಗುತ್ತದೆ' ಎಂದು ಪಾಕಿಸ್ತಾನದ ಹೆಸರು ಪ್ರಸ್ತಾಪಿಸದೆಯೇ ಹೇಳಿದ್ದಾರೆ.

'ಯಾವುದೇ ಒಂದು ರಾಷ್ಟ್ರವು ಗಂಭೀರವಾದ ಆರ್ಥಿಕ ಸಮಸ್ಯೆಯಿಂದ ಹೊರಬರಬೇಕಾದರೆ ಅದಕ್ಕಾಗಿ ಸೂಕ್ತ ನೀತಿಗಳನ್ನು ರೂಪಿಸಬೇಕಾಗುತ್ತದೆ. ಹೊರಗಿನವರು ಯಾರೂ ಆ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಒಂದು ರಾಷ್ಟ್ರ ಅದರಲ್ಲೂ ಮುಖ್ಯವಾಗಿ ನೆರೆಯ ದೇಶವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವುದನ್ನು ನೋಡಲು ಯಾರೂ ಬಯಸುವುದಿಲ್ಲ' ಎಂದಿದ್ದಾರೆ.

ಇದಕ್ಕೂ ಮುನ್ನ ಸಿಂಬಿಯೊಸಿಸ್ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ 'ಫೆಸ್ಟಿವಲ್ ಆಫ್ ಥಿಂಕರ್ಸ್' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ್ದ ಅವರು, 'ಡಿಜಿಟಲ್ ಜಗತ್ತಿನಲ್ಲಿ ವೈಯಕ್ತಿಕ ದತ್ತಾಂಶ ಹಾಗೂ ಅದರ ಭದ್ರತೆಯೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಜಿ–20 ಗುಂಪಿನ ಸಭೆಯಲ್ಲಿ ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಚರ್ಚೆ ನಡೆಸುವ ನಿರೀಕ್ಷೆ ಇದೆ' ಎಂದು ತಿಳಿಸಿದ್ದರು.

ಎಂಸಿಡಿ: ಸ್ಥಾಯಿ ಸಮಿತಿ ಚುನಾವಣೆ ವೇಳೆ ಗದ್ದಲ

ನವದೆಹಲಿ: ದೆಹಲಿ ಮಹಾನಗರ ಪಾಲಿಕೆಯಲ್ಲಿ(ಎಂ.ಸಿ.ಡಿ) ಆರು ಮಂದಿ ಸ್ಥಾಯಿ ಸಮಿತಿ ಸದಸ್ಯರ ಆಯ್ಕೆಗಾಗಿ ಗುರುವಾರ ನಡೆದ ಮತದಾನದ ವೇಳೆ ಗದ್ದಲ ಉಂಟಾದ ಕಾರಣ ಸಭೆಯನ್ನು ಒಂದು ದಿನದ ಮಟ್ಟಿಗೆ ಮುಂದೂಡಲಾಯಿತು.

ಬುಧವಾರ ರಾತ್ರಿ ನಡೆದ ಸಭೆಯಲ್ಲೂ ಎಎಪಿ ಮತ್ತು ಬಿಜೆಪಿ ಸದಸ್ಯರು ಗದ್ದಲ ನಡೆಸಿ ಪರಸ್ಪರ ಪ್ಲಾಸ್ಟಿಕ್ ಬಾಟಲಿಗಳನ್ನು ಎಸೆದಿದ್ದರು. ಇದರಿಂದ ಮತದಾನ ಮೊಟಕುಗೊಂಡಿತ್ತು. ಗುರುವಾರ ಬೆಳಿಗ್ಗೆ 8.30ಕ್ಕೆ ಸಭೆ ಆರಂಭವಾದಾಗಲೂ ಮತ್ತೆ ಗದ್ದಲ ಉಂಟಾದ ಕಾರಣ ಮೇಯರ್ ಶೆಲ್ಲಿ ಒಬೆರಾಯ್ ಅವರು ಶುಕ್ರವಾರ ಬೆಳಿಗ್ಗೆ 10 ಗಂಟೆಯವರೆಗೆ ಸಭೆಯನ್ನು ಮುಂದೂಡಿದರು.

ಮತದಾನ ನಡೆಯುವ ಸ್ಥಳಕ್ಕೆ ಮೊಬೈಲ್ ಕೊಂಡೊಯ್ಯಲು ಸದಸ್ಯರಿಗೆ ಮೇಯರ್ ಅನುಮತಿ ನೀಡಿರುವುನ್ನು ಖಂಡಿಸಿ ಬಿಜೆಪಿ ಸದಸ್ಯರು ಪ್ರತಿಭಟಿಸಿದರು. ಮೇಯರ್ ಚುನಾವಣೆಯ ಸೋಲು ಅರಗಿಸಿಕೊಳ್ಳಲಾಗದೆ ಬಿಜೆಪಿ ಸದಸ್ಯರು 'ಗೂಂಡಾಗಿರಿ' ಮಾಡುತ್ತಿದ್ದಾರೆ ಎಂದು ಎಎಪಿ ಆರೋಪಿಸಿದೆ.

ಚುನಾವಣೆ ವೇಳೆ ಬಿಜೆಪಿ ಸದಸ್ಯರು ಮತಪೆಟ್ಟಿಗೆಯನ್ನು ಎಸೆದು, ಮತಪತ್ರಗಳನ್ನು ಹರಿದಿದ್ದಾರೆ ಎಂದು ಶೆಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ. ಚುನಾವಣಾ ಪ್ರಕ್ರಿಯೆ ನಡೆಸುತ್ತಿದ್ದಾಗ ಬಿಜೆಪಿಯ ಕೆಲವು ಸದಸ್ಯರು ತಮ್ಮ ಮೇಲೆ ಹಲ್ಲೆ ನಡೆಸಲು ಯತ್ನಿಸಿದ್ದಾರೆ ಎಂದೂ ವಿವರಿಸಿದ್ದಾರೆ.

ಸಿಸೋಡಿಯಾ ವಜಾಕ್ಕೆ ಬಿಜೆಪಿ ಆಗ್ರಹ

'ಗೂಢಚರ್ಯೆ ಹಗರಣ'ಕ್ಕೆ ಸಂಬಂಧಿಸಿ ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ವಜಾಗೊಳಿಸಬೇಕೆಂದು ಆಗ್ರಹಿಸಿ ದೆಹಲಿಯ ಎಎಪಿ ಕಚೇರಿಯ ಬಳಿ ಗುರುವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬಿಜೆಪಿ ದೆಹಲಿ ಘಟಕದ ಕಾರ್ಯಾಧ್ಯಕ್ಷ ವೀರೇಂದ್ರ ಸಚ್‌ದೇವ, ಸಂಸದರಾದ ಮನೋಜ್ ತಿವಾರಿ ಮತ್ತು ಪರ್ವೇಶ್ ವರ್ಮಾ ಅವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಶಿವಶಕ್ತಿ ಮಿಂಚು: ಬಿಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಶಕ್ತಿ ನಾರಾಯಣನ್ ಅವರು ಗಳಿಸಿದ ಎರಡು ಸೊಗಸಾದ ಗೋಲುಗಳ ಬಲದಿಂದ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಲೀಗ್ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಬಿಎಫ್‌ಸಿ 3–1ರಿಂದ ಎಫ್‌ಸಿ ಗೋವಾ ತಂಡಕ್ಕೆ ಸೋಲುಣಿಸಿತು. ಇದರೊಂದಿಗೆ ಲೀಗ್ ಹಂತದಲ್ಲಿ ಮೂರನೇ ಸ್ಥಾನ ಗಳಿಸಿತು.

ತೀವ್ರ ಪೈಪೋಟಿ ನಡೆದ ಪಂದ್ಯದಲ್ಲಿ ಆರನೇ ನಿಮಿಷದಲ್ಲೇ ಬಿಎಫ್‌ಸಿಗೆ ಮುನ್ನಡೆ ಸಿಕ್ಕಿತು. ರೋಶನ್ ನೊರೆಮ್ ಅವರು ಎಡಭಾಗದಿಂದ ನೀಡಿದ ಪಾಸ್‌ನಲ್ಲಿ ಚೆಂಡನ್ನು ಗುರಿ ಸೇರಿಸಿದ ಶಿವಶಕ್ತಿ ತವರಿನ ಅಭಿಮಾನಿಗಳ ಸಂಭ್ರಮಕ್ಕೆ ಕಾರಣರಾದರು.

33ನೇ ನಿಮಿಷದಲ್ಲಿ ಐಕರ್ ಗೌರೊಕ್ಸೆನಾ ಅವರು, ನೋಹ್ ವೈಲ್ ಸದೊಯಿ ನೆರವಿನಲ್ಲಿ ಹೆಡರ್ ಮೂಲಕ ಗೋಲು ಗಳಿಸಿ ಗೋವಾ ತಂಡ ಸಮಬಲ ಸಾಧಿಸುವಂತೆ ಮಾಡಿದರು. ಬಳಿಕ ಉಭಯ ತಂಡಗಳು ತೀವ್ರ ಪೈಪೋಟಿ ನಡೆಸಿದರೂ ಮೊದಲಾರ್ಧದ ಮುಕ್ತಾಯದವರೆಗೆ ಯಶಸ್ಸು ಸಿಗಲಿಲ್ಲ.

76ನೇ ನಿಮಿಷದಲ್ಲಿ ಶಿವಶಕ್ತಿ ಮತ್ತೊಮ್ಮೆ ಮೋಡಿ ಮಾಡಿದರು. ರೋಶನ್, ಸುರೇಶ್ ವಾಂಗ್‌ಜಮ್ ಅವರು ಸೃಷ್ಟಿಸಿದ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದರು. ಇದು 'ಆಫ್‌ಸೈಡ್' ಆಗಿದೆ ಎಂದು ಗೋವಾ ಆಟಗಾರರು ಮಾಡಿದ ಆಕ್ಷೇಪವನ್ನು ರೆಫರಿಗಳು ತಿರಸ್ಕರಿಸಿದರು.

81ನೇ ನಿಮಿಷದಲ್ಲಿ ಪ್ಯಾಬ್ಲೊ ಪೆರೆಜ್ ಅವರು ಬೆಂಗಳೂರು ತಂಡದ ಮೂರನೇ ಗೋಲು ದಾಖಲಿಸಿದರು. ಬಿಎಫ್‌ಸಿಗೆ ಟೂರ್ನಿಯಲ್ಲಿ ಇದು ಸತತ ಎಂಟನೇ ಜಯವಾಗಿದೆ.

ಆರು ಹಳದಿ ಕಾರ್ಡ್: ಪಂದ್ಯದಲ್ಲಿ ಬಿಎಫ್‌ಸಿಯ ಪ್ರಬೀರ್ ದಾಸ್, ಜಯೇಶ್ ರಾಣೆ, ಸುನಿಲ್ ಚೆಟ್ರಿ, ಗೋವಾದ ಎಡು ಬೇಡಿಯಾ, ಮೊಹಮ್ಮದ್ ಫೆರಸ್, ಬ್ರೆಂಡನ್ ಫರ್ನಾಂಡಿಸ್ ಹಳದಿ ಕಾರ್ಡ್ ದರ್ಶನ ಮಾಡಿದರು.

ಗೋಲು ಗಳಿಸಿದ ಬೆಂಗಳೂರು ಎಫ್‌ಸಿ ತಂಡದ ಶಿವಶಕ್ತಿ ನಾರಾಯಣನ್ (ಎಡದಿಂದ ಎರಡನೆಯವರು) ಸಹ ಆಟಗಾರರೊಂದಿಗೆ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ತನಿಖಾ ವರದಿ ಸಲ್ಲಿಕೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷನ್ ಶರಣ್‌ಸಿಂಗ್ ಮೇಲಿನ ಲೈಂಗಿಕ ದೌರ್ಜನ್ಯ ಆರೋಪ ಕುರಿತು ತನಿಖೆ ನಡೆಸಲು ನೇಮಿಸಿರುವ ಮೇಲುಸ್ತುವಾರಿ ಸಮಿತಿಗೆ ವರದಿ ಸಲ್ಲಿಸಲು ಕೇಂದ್ರ ಕ್ರೀಡಾ ಸಚಿವಾಲಯ ಎರಡು ವಾರಗಳ ಹೆಚ್ಚುವರಿ ಅವಧಿಯನ್ನು ನೀಡಿದೆ.

ಮಹಿಳಾ ಕುಸ್ತಿಪಟುಗಳ ಮೇಲೆ ಶರಣ್‌ಸಿಂಗ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿ ದೇಶದ ಪ್ರಮುಖ ಕುಸ್ತಿಪಟುಗಳು ಪ್ರತಿಭಟನೆ ನಡೆಸಿದ್ದರು. ಪ್ರಕರಣದ ತನಿಖೆಗಾಗಿ ಬಾಕ್ಸರ್ ಮೇರಿ ಕೋಮ್ ನೇತೃತ್ವದಲ್ಲಿ ಜನವರಿ 23ರಂದು ಸಮಿತಿ ರಚಿಸಲಾಗಿತ್ತು. ಸದ್ಯ ಇದೇ ಸಮಿತಿಯು ಡಬ್ಲ್ಯುಎಫ್‌ಐನ ದೈನಂದಿನ ವ್ಯವಹಾರ ನೋಡಿಕೊಳ್ಳುತ್ತಿದೆ. ತನಿಖಾ ವರದಿ ಸಲ್ಲಿಸಲು ಈ ಮೊದಲು ಸಚಿವಾಲಯವು 4 ವಾರಗಳ ಗಡುವು ನೀಡಿತ್ತು.

ಎನ್‌ಎಸಿ: ತರಬೇತಿಗೆ ಪೇಯ್ನ್ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚಬಲ್ಲ ಈಜುಪಟುಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ನಗರದ ನೆಟ್ಟಕಲ್ಲಪ್ಪ ಈಜು ಕೇಂದ್ರವು (ಎನ್‌ಎಸಿ), ಇಂಗ್ಲೆಂಡ್‌ನ 'ಮಾಸ್ಟರ್ ಟ್ರೇನರ್' ಪ್ಯಾರಿಸ್ ಪೇಯ್ನ್ ಅವರನ್ನು ತರಬೇತಿಗೆ ನಿಯೋಜಿಸಿದೆ.

ಕ್ರೀಡಾಪಟುಗಳಿಗೆ ನವೀನ ರೀತಿಯ ತರಬೇತಿ ನೀಡುವಲ್ಲಿ ಅಪಾರ ಅನುಭವ ಹೊಂದಿರುವ ಪೇಯ್ನ್, ಇಂಗ್ಲೆಂಡ್‌ನ ಪ್ಲಿಮತ್‌ನಲ್ಲಿರುವ ಫಿಸಿಯೊ– ಕಂಡೀಷನಿಂಗ್ ಆ್ಯಂಡ್ ಸ್ಪೋರ್ಟ್ಸ್ ಪರ್ಫಾರ್ಮೆನ್ಸ್ ಕೇಂದ್ರದ ನಿರ್ದೇಶಕರಾಗಿದ್ದಾರೆ.

'ಪೇಯ್ನ್ ಅವರು ಎನ್‌ಎಸಿ ಕೋಚ್‌ಗಳ ನೆರವಿನೊಂದಿಗೆ ವಿಭಿನ್ನ ರೀತಿಯ ತರಬೇತಿ ಕಾರ್ಯಕ್ರಮ ಆಯೋಜಿಸಲಿದ್ದಾರೆ. ಈಜುಪಟುಗಳಿಗೆ ವಿವಿಧ ಹಂತಗಳಲ್ಲಿ ವೈಜ್ಞಾನಿಕ ಹಾಗೂ ವ್ಯವಸ್ಥಿತ ರೀತಿಯ ಸ್ಟ್ರೆಂತ್ ಮತ್ತು ಕಂಡೀಷನಿಂಗ್‌ನ ಶಿಬಿರ ಏರ್ಪಡಿಸಲಾಗುವುದು' ಎಂದು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜಾವನ್ ತಿಳಿಸಿದ್ದಾರೆ.

'ಒಲಿಂಪಿಕ್ಸ್ ಮತ್ತು ಕಾಮನ್‌ವೆಲ್ತ್ ಕೂಟಗಳಲ್ಲಿ ಪಾಲ್ಗೊಂಡಿರುವ ರುಟಾ ಮೆಲುಟಿಟ್, ಬೆನ್ ಪ್ರೌಡ್, ಸ್ಯಾಮ್ ಸಿಲ್ಸ್, ಬ್ರಿಯೊನಿ ಫ್ರಾಸ್ಟ್ ಮತ್ತು ಲಾರಾ ಸ್ಟೀಫನ್ಸ್ ಸೇರಿದಂತೆ ಹಲವು ಕ್ರೀಡಾಪಟುಗಳಿಗೆ ಪೇಯ್ನ್ ತರಬೇತಿ ನೀಡಿದ್ದಾರೆ.

ನೆಟ್ಟಕಲ್ಲಪ್ಪ ಈಜು ಕೇಂದ್ರದ ನೋಟ

ಪೇಯ್ನ್ ಅವರೊಂದಿಗಿನ ಸಹಭಾಗಿತ್ವವು ಎನ್‌ಎಸಿಯಲ್ಲಿರುವ ಉದಯೋನ್ಮುಖ ಈಜುಪಟುಗಳಿಗೆ ಉತ್ತೇಜನ ನೀಡಲಿದೆ' ಎಂದು ಹೇಳಿದರು.

'ಲಾಂಗ್ ಕೋರ್ಸ್, ಶಾರ್ಟ್ ಕೋರ್ಸ್ ಮತ್ತು ಬೇಬಿ ಪೂಲ್ ಒಳಗೊಂಡಿರುವ ಎನ್‌ಎಸಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ಈಜುಪಟುಗಳ ದೈಹಿಕ ಸಾಮರ್ಥ್ಯ ವೃದ್ಧಿಗೆ ಎಲ್ಲ ರೀತಿಯ ಆಧುನಿಕ ಸಲಕರಣೆಗಳು ಇರುವ ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಹಾಲ್ ಕೂಡಾ ಇದೆ' ಎಂದು ಮಾಹಿತಿ ನೀಡಿದರು.

ಅನೀಶ್ ಭನ್ವಾಲಾ

ಶೂಟಿಂಗ್ ಅನೀಶ್‌ಗೆ ಕಂಚು

ನವದೆಹಲಿ (ಪಿಟಿಐ): ಭಾರತದ ಅನೀಶ್ ಭನ್ವಾಲಾ ಅವರು ಕೈರೊದಲ್ಲಿ ಗುರುವಾರ ಕೊನೆಗೊಂಡ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚು ಗೆದ್ದುಕೊಂಡರು.

ಈ ಮೂಲಕ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ 12 ವರ್ಷಗಳ ಪದಕದ ಬರ ನೀಗಿಸಿದರು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ವಿಜಯ್ ಕುಮಾರ್ ಅವರು ಬೆಳ್ಳಿ ಜಯಿಸಿದ್ದ ಬಳಿಕ ಈ ವಿಭಾಗದಲ್ಲಿ ಭಾರತಕ್ಕೆ ಅಂತರರಾಷ್ಟ್ರೀಯ ಕೂಟದಲ್ಲಿ ಪದಕ ಲಭಿಸಿಯೇ ಇರಲಿಲ್ಲ.

ನಿಖರ ಪ್ರದರ್ಶನ ನೀಡಿದ ಇಟಲಿಯ ಮ್ಯಾಸಿಮೊ ಸ್ಪಿನೆಲಾ ಚಿನ್ನ ಗೆದ್ದುಕೊಂಡರೆ, ಫ್ರಾನ್ಸ್‌ನ ಕ್ಲೆಮೆಂಟ್ ಬೆಸಕ್ವೆಟ್ ಬೆಳ್ಳಿ ತಮ್ಮದಾಗಿಸಿಕೊಂಡರು.

ಭಾರತದ ಶೂಟರ್‌ಗಳು ಈ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಚಿನ್ನ ಒಳಗೊಂಡಂತೆ ಒಟ್ಟು ಏಳು ಪದಕಗಳನ್ನು ಜಯಿಸಿ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದರು.